ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಡಿಸೆಂಬರ್ 9, 2009 ರೂ. 12/-

ಹೊಳೆಗೆ ಹೊಸನೀರು
ದೇವು ಪತ್ತಾರ



ಕಳಚಿದ ಮುಖವಾಡ



ಹೇ ರಾಮ್ ಬಚಾವ್ರೋ

BBMP ವಾರ್ಡ್ ವಾರ್ ಶುರು

ಸಾಯಿಪ್ರಕಾಶ್ ಚೊಂಬು ಕೊಟ್ಟ ತಂಗಿ

ಮೋಹನ್ ಆಳ್ವನ ಬಂಡವಾಳ ಬಯಲು

MLC ಚುನಾವಣೆ
ಧಾರವಾಡ
ಚಿಕ್ಕಮಗಳೂರು
ಗುಲಬರ್ಗಾ
ಉತ್ತರ ಕನ್ನಡ



ಸುನೀಲನ ಪ್ರಾಣ ಯಾರ ಕೈಯಲ್ಲಿ?

ನೆರೆ ಪರಿಹಾರದಲ್ಲಿ ಕಾರ್ಪೊರೇಟ್ ಪ್ಯಾರಾಸೈಟುಗಳು!

ಇದು ನೆರೆ ಬಂದಾಗ ಸಿರಿ ಮಾಡಿಕೊಳ್ಳುವ ಒಂದು ವಿಧಾನ. ಅದಕ್ಕಿಂತ ಕ್ರೂರವಾದದ್ದು ನೆರೆ ಪರಿಹಾರಕ್ಕೆ ದಾನ-ದತ್ತಿಯ ಹೆಸರಲ್ಲಿ ಬಿಡಿಗಾಸನ್ನು ಕೊಟ್ಟು ಸರ್ಕಾರವನ್ನು ತಮ್ಮ ಮುಂದಿನ ಮತ್ತು ಹಾಲಿ ಉದ್ಯಮಗಳಿಗ ಬೇಕಾದ ರೀತಿಯಲ್ಲಿ ಬಳಸಿಕೊಳ್ಳುವಂತೆ ಮಾಡುವ ಶಾಸನಬದ್ಧ ಭ್ರಷ್ಟಾಚಾರಕ್ಕೆ ಮುಂದಾಗುವುದು ಎರಡನೆಯದು ಮತ್ತು ಪ್ರಧಾನವಾದದ್ದು. ಈ ಪರೋಕ್ಷ ಮತ್ತು ಅತ್ಯಧಿಕ ಲಾಭ ಮಾಡಿಕೊಳ್ಳುವ ಅವಕಾಶವನ್ನು ಸರ್ಕಾರ ಒದಗಿಸಿರುವುದರಿಂದಲೇ ಉದ್ಯಮಿಗಳು ಸರ್ಕಾರಕ್ಕೆ 'ಆಸರೆ'ಯಾಗಿರುವುದು. ಇದರ ಮುಖ್ಯಸ್ಥ ರಾಜೀವ್ ಚಂದ್ರಶೇಖರ್ ಎಂಬ ಆಧುನಿಕ ಚೆಡ್ಡಿ ಉದ್ಯಮಿಯೇ. ಸರ್ಕಾರವ ಪ್ರಕಾರ ಈಗಾಗಲೇ 29 ಹೆಚ್ಚು ಉದ್ಯಮಗಳು ಸರ್ಕಾರಕ್ಕೆ 'ಆಸರೆ'ಯಾಗಲು ಮುಂದ ಬಂದಿವೆ.

ಪ್ರಖ್ಯಾತ ಪತ್ರಕರ್ತ ಪಿ. ಸಾಯಿನಾಥ್‌ರವರು ಬರೆದಿರುವ 'Everybody Loves a Good Drought' ಎಂಬ ಪುಸ್ತಕದಲ್ಲಿ ಹೇಗೆ ಬರಗಾಲವೂ ರಾಜಕಾರಣಿಗಳಿಗೆ ಮತ್ತು ಅಧಿಕಾರಿಗಳಿಗೆ ಹಬ್ಬದಂತಹ ಸಂತೋಷ ಉಂಟುಮಾಡುತ್ತದೆ ಎಂದು ವಿವರಿಸಿದ್ದಾರೆ. ಕರ್ನಾಟಕದ ಇಂದಿನ ಸಂದರ್ಭದಲ್ಲಿ 'ಬರ'ವನ್ನೇ ನೆರೆ ಎಂದು ಬದಲಿಸಿಕೊಂಡರೆ ಸಾಕು. ಆದರೆ ಇಂದಿನ ನೆರೆ ಸಂದರ್ಭದಲ್ಲಿ ಅದರ ಜೊತೆಗೆ ಕರ್ನಾಟಕದ ಉದ್ಯಮಿಗಳನ್ನೂ ಈ ಪಟ್ಟಿಯಲ್ಲಿ ಸೇರಿಸಿಕೊಳ್ಳಬೇಕು! ಲಕ್ಷಾಂತರ ಜನರ ಬದುಕನ್ನೇ ನೆರೆ ಕೊಚ್ಚಿ ಹಾಕಿದ್ದರೆ ಈ ನೆರೆಯಲ್ಲೇ ಹಲವು ಬಗೆಯಲ್ಲಿ ಸಿರಿಯನ್ನು ದಕ್ಕಿಸಿಕೊಳ್ಳುತ್ತಿರುವ ಉದ್ಯಮಿಗಳು ಔದಾರ್ಯದ ಹೆಸರಲ್ಲಿ, ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯ ಹೆಸರಲ್ಲಿ ಪ್ಯಾರಾಸೈಟುಗಳಂತೆ ನೆರೆ ಸಂತ್ರಸ್ತರ ಬದುಕಿಗೆ ಹತ್ತಿಕೊಂಡಿದ್ದಾರೆ. ಪ್ಯಾರಾಸೈಟುಗಳು ತಾವು ನೆಲೆ ಕಂಡುಕೊಂಡ ಜೀವಿಗಳ ಪ್ರಾಣ ಮತ್ತು ಕಸುವನ್ನೇ ಹೀರಿ ಬದುಕುವಂತೆ ಈ ಕಾರ್ಪೊರೇಟ್ ಉದ್ಯಮಿಗಳು ನೆರೆ ಪರಿಹಾರವನ್ನೇ ಉದ್ಯಮವಾಗಿಸಿಕೊಂಡು ನೆರೆ ಸಂತ್ರಸ್ತರ ಪ್ರಾಣ ಮತ್ತು ಕಸುವನ್ನು ಹೀರಲಿದ್ದಾರೆ. ಅದರ ಜೊತೆಗೆ ತಾವು ಮಾಡುತ್ತಿರುವುದೇ ಪರೋಪಕಾರ ಎಂಬಂತೆ ತಮ್ಮ ಸುಲಿಗೆಗೆ ಔದಾರ್ಯದ ಮುಸುಕನ್ನೂ ಹಾಕುತ್ತಿದ್ದಾರೆ. ಆ ಮುಸುಕನ್ನು Public- Private Partnership –PPP ಎಂಬ ಹೆಸರಲ್ಲಿ ಸರ್ಕಾರವೇ ಒದಗಿಸುತ್ತದೆ ಮತ್ತು ಅದಕ್ಕೆ 'ಆಸರೆ' ಎಂಬ ಕಾರ್ಪೊರೇಟ್ ಔದಾರ್ಯವನ್ನೂ ಮತ್ತು ಜನರ ನಿಸ್ಸಹಾಯಕತೆಯನ್ನು ಪ್ರತಿಬಿಂಬಿಸುವ ಹೆಸರನ್ನು ನೀಡಲಾಗಿದೆ.



ಕರ್ನಾಟಕ ಸರ್ಕಾರದ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪ್ರಕಾರ ಒಟ್ಟಾರೆಯಾಗಿ ಕರ್ನಾಟಕದಲ್ಲಿ ನೆರೆ ಹಾವಳಿಯಿಂದ 3,58,755 ಮನೆಗಳು ಕುಸಿದಿವೆ ಅಥವಾ ಹಾಳಾಗಿವೆ. ಸರ್ಕಾರದ ಪ್ರಕಾರ ಇದರಲ್ಲಿ ಶೇ.50ರಷ್ಟು ಅಂದರೆ ಹೆಚ್ಚೂ ಕಡಿಮೆ 1.5 ಲಕ್ಷದಷ್ಟು ಮನೆಗಳನ್ನು ಖಾಸಗಿ ಸಹಯೋಗದೊಂದಿಗೆ ಅಂದರೆ ಪ್ರಧಾನವಾಗಿ ಉದ್ಯಮಿಗಳ ಮತ್ತು ಮಠ-ಮಾನ್ಯಗಳ ಸಹಕಾರದೊಂದಿಗೆ ಕಟ್ಟಿಸುವ ಇರಾದೆಯನ್ನು ಹೊಂದಿದೆ. ಸರ್ಕಾರ ನೀಡಿರುವ ಸೂಚನೆಯ ಪ್ರಕಾರ ಪ್ರತಿಯೊಂದು ಮನೆಯೂ ಆರ್.ಸಿ.ಸಿ ಚಾವಣಿ ಹೊಂದಿರಬೇಕು. ಸಿಮೆಂಟ್‌ನಿಂದ ಗೋಡೆ ಕಟ್ಟಿರಬೇಕು. ಹೀಗಾಗಿ ಪ್ರತಿ ಮನೆ ಕಟ್ಟೋದಕ್ಕೆ ಒಂದು ಲಕ್ಷ ರೂ. ಖರ್ಚಾಗಬಹುದು ಎಂದು ಅಂದಾಜು ಮಾಡಲಾಗಿದೆ.

ಉದ್ಯಮಿಗಳೊಂದಿಗೆ ಸರ್ಕಾರ ಮಾಡಿಕೊಂಡಿರುವ MoU ಗಳ ಪ್ರಕಾರ ಇದರಲ್ಲಿ ಕೈಜೋಡಿಸಲಿರುವ ಖಾಸಗಿ ಉದ್ಯಮಿಗಳಿಗೆ ಸರ್ಕಾರ ಭೂಮಿಯನ್ನು ಒದಗಿಸಲಿದೆ. ಅದೆ ರೀತಿ ಮನೆಗಳ ಆರ್ಕಿಟೆಕ್ಚರಲ್ ಡಿಸೈನ್ ಅನ್ನು ಒದಗಿಸುತ್ತದೆ. ಈ ಖಾಸಗಿ ಉದ್ಯಮಿಗಳು ಬಯಸಿದರೆ ಆ ಡಿಸೈನನ್ನು ಬಳಸಿಕೊಳ್ಳಬಹುದು ಅಥವಾ ಬೇರೆ ತಮ್ಮದೇ ಆದ ಡಿಸೈನ್ ಮೇರೆಗೂ ಮನೆ ಕಟ್ಟಬಹುದು. ನೆರೆ ಹಾವಳಿಯಾಗಿರುವ ಎಲ್ಲಿ ಬೇಕಾದರೂ ಅವರು ಮನೆ ಕಟ್ಟಲು ಮುಂದಾಗಬಹುದು. ಅಲ್ಲಿ ಜಮೀನು ಕೊಡಿಸುವ ಜವಾಬ್ದಾರಿ ಸರ್ಕಾರದ್ದು. ಅದಕ್ಕೆ ಬೇಕಾದ ಹಣವನ್ನು ಅವರು ಹೇಗಾದರೂ ರೂಢಿಸಿಕೊಳ್ಳಬಹುದು. ಅದಕ್ಕೆ ಸರ್ಕಾರ ತೆರಿಗೆ ವಿನಾಯಿತಿ ನೀಡುವುದಲ್ಲದೆ ಅದರ ನಿರ್ಮಾಣಕ್ಕೆ ಬೇಕಾದ ಸಾಮಾನು, ಯಂತ್ರಗಳ ಆಮದು ಇತ್ಯಾದಿಗಳ ಮೇಲೂ ತೆರಿಗೆ ವಿನಾಯಿತಿಯನ್ನು ನೀಡಲಿದೆ. ಅಷ್ಟು ಮಾತ್ರವಲ್ಲ, "ಇವೆಲ್ಲವೂ ಅತ್ಯಂತ ತ್ವರಿತವಾಗಿ ನಡೆಯಬೇಕಾಗಿರುವುದರಿಂದ ಕರ್ನಾಟಕ ಪಾರದರ್ಶಕತೆ ಕಾಯಿದೆ"ಯಿಂದಲೂ ವಿನಾಯಿತಿ ನೀಡಲಾಗಿದೆ. ಅಂದರೆ ಈ ಮನೆ ನಿರ್ಮಾಣದಲ್ಲಿ ತೊಡಗಿಕೊಳ್ಳುವ ಕಂಪನಿಗಳನ್ನು ಆಯ್ಕೆ ಮಾಡಲು ಸರ್ಕಾರ ಟೆಂಡರ್ ಕರೆಯಬೇಕಿಲ್ಲ, ಅವರ ಪರಿಣತಿ ಮತ್ತು ಹಣದ ಮೂಲಗಳ ಬಗ್ಗೆ ಖಾತರಿ ಪಡೆದುಕೊಳ್ಳಬೇಕಿಲ್ಲ. ಇವೆಲ್ಲವೂ ಒಪ್ಪಂದ ಪತ್ರದಲ್ಲಿ ಇರುವುದು. ಅದರಲ್ಲಿ ಇರದೇ ಇರುವುದು ಏನೆಂದರೆ ಯಾವ ಹಳ್ಳಿಗಳನ್ನು ಸಂಪೂರ್ಣ ಅಥವಾ ಪಾಕ್ಷಿಕವಾಗಿ ಪುನರ್ ನಿರ್ಮಾಣ ಮಾಡಲು ಯೋಜಿಸಲಾಗಿರುವುದೋ ಅಲ್ಲಿ ಮನೆ ಕುಸಿತದ ಪರಿಹಾರಕ್ಕೆ ಸರ್ಕಾರ ಕೊಡಬೇಕಾದ 10,000-37,000 ರೂ. ಪರಿಹಾರವನ್ನು ಸರ್ಕಾರ ನೇರವಾಗಿ ಆಯಾ ಉದ್ಯಮಿಗಳಿಗೆ ಪರಭಾರೆ ಮಾಡುತ್ತದೆ. ಅಂದರೆ ಲಕ್ಷದಲ್ಲಿ 37,000 ದಷ್ಟು ಹಣವನ್ನು ಸರ್ಕಾರವೇ ಭರಿಸುತ್ತದೆ ಎಂದಾಯ್ತಲ್ಲವೇ?!



ಸರ್ಕಾರದ ಪ್ರಕಾರ ಒಟ್ಟು ಮನೆ ನಿರ್ಮಾಣದ ವೆಚ್ಚ 2000-3000 ಕೋಟಿ ರೂ. ಮೊತ್ತದ ವ್ಯವಹಾರ. ಇಷ್ಟು ಮೊತ್ತದ ವ್ಯವಹಾರಕ್ಕೆ ಸರಕಾರದಿಂದ ಬೇಕುಬೇಕಾದ ಎಲ್ಲಾ ರಿಯಾಯತಿಗಳು. ಈ ಸುವರ್ಣಾವಕಾಶವನ್ನು ಉದ್ಯಮಿಗಳು ಎರಡು ರೀತಿಯಲ್ಲಿ ಬಳಸಿಕೊಳ್ಳುತ್ತಿದ್ದಾರೆ. ಮೊದಲನೆಯದಾಗಿ ಈ ಬಾಬತ್ತಿಗೆ ಹಲವು ಮೂಲದಿಂದ ಹಣ ಎತ್ತುವ ಅವಕಾಶ ಮತ್ತು ಅದಕ್ಕೆ ಸಿಗುವ ಹಲವು ರಿಯಾಯತಿಗಳ ಲಾಭ. ಈ Public-Private Partnership –PPP ಮಾದರಿಯಲ್ಲಿ ಸಾಮಾನ್ಯವಾಗಿ ಉದ್ಯಮಿಗಳು ತಮಗೆ ಸರ್ಕಾರ ಕೊಡುವ ಜಮೀನಿನಲ್ಲಿ ಅರ್ಧ ಭಾಗದಲ್ಲಿ ಮಾತ್ರ ಮನೆಮೇಲೆ ಮನೆಯನ್ನು ಕಟ್ಟಿ ಉಳಿದರ್ಧ ಭಾಗವನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಿಕೊಳ್ಳಬಹುದು. ಸರ್ಕಾರದ ಒಪ್ಪಂದದಲ್ಲಿ ಹೀಗೆ ಮಾಡಬಾರದು ಎಂಬ ಕಡ್ಡಾಯವೇನೂ ಇಲ್ಲ! ಇದಕ್ಕೂ ಸರ್ಕಾರವು ಪುಕ್ಕಟೆ ಒದಗಿಸುವ ಜಮೀನನ್ನೇ ಉದ್ಯಮಿಗಳು ಬಳಸಿಕೊಳ್ಳಬಹುದು! ಇದು ಉದ್ಯಮಿಗಳಿಗೆ ಸಿಗುವ ನೇರ ಲಾಭ. ಎರಡನೆಯದಾಗಿ ಸೇವಾಭಾರತಿಯಂಥ ಚೆಡ್ಡಿ ಸಂಸ್ಥೆಗಳು ತಮ್ಮ ಈ 'ಸೇವಾ' ಉದ್ದೇಶವನ್ನು ಜಗತ್ತಿನಾದ್ಯಂತ ಪ್ರಚಾರ ಮಾಡಿ ಒಂದು ಮನೆ ಘಟಕಕ್ಕೆ ಲಕ್ಷ ಖರ್ಚಾಗುವುದೆಂದಿಟ್ಟುಕೊಂಡರೂ ಕನಿಷ್ಠ ಎರಡು ಮೂರು ಪಟ್ಟು ಹಣ ಸಂಗ್ರಹ ಮಾಡಿಕೊಳ್ಳುತ್ತಾರೆ. ಮಧ್ಯಾಹ್ನದ ಬಿಸಿಯೂಟದ ಯೋಜನೆಯಲ್ಲೂ ಇಸ್ಕಾನ್, ಅಕ್ಷಯ ಸಂಸ್ಥೆಗಳು ಹಣ ಮಾಡಿದ್ದು ಹೀಗೇ. ಸರ್ಕಾರ ಉಳಿದವರಿಗೆ ಒಂದು ಊಟಕ್ಕೆ 2 ರೂ. ಕೊಟ್ಟರೆ ಈ ಸಂಸ್ಥೆಗಳಿಗೆ 4 ರೂ. ಕೊಡುತ್ತದೆ. ಇದರ ಜೊತೆಗೆ ಇವು ವಿದೇಶಿ ಸಂಸ್ಥೆಗಳಿಂದ ಒಂದು ಊಟಕ್ಕೆ ಏನಿಲ್ಲವೆಂದರೂ 8-10 ರೂ. ಎತ್ತುತ್ತಾರೆ. ಹೀಗೆ ಬೇಕಾಬಿಟ್ಟಿ ಹಣ ಸಂಗ್ರಹಿಸಿ ಅದನ್ನು ಕೋಮುವಾದಿ ಉದ್ದೇಶಕ್ಕೆ ಬಳಸಿಕೊಳ್ಳುತ್ತಾರೆ. ಈಗ ಹೆಚ್ಚೂಕಡಿಮೆ ಎಲ್ಲಾ ದೊಡ್ಡ ದೊಡ್ಡ ಕಾರ್ಪೊರೇಟ್ ಉದ್ಯಮಗಳಿಗೂ ಒಂದು ಎನ್.ಜಿ.ಒ ಇರುವುದರಿಂದ ಅವೂ ಇದೇ ಮಾರ್ಗವನ್ನು ಅನುಸರಿಸಬಹುದು.

ಇದು ನೆರೆ ಬಂದಾಗ ಸಿರಿ ಮಾಡಿಕೊಳ್ಳುವ ಒಂದು ವಿಧಾನ. ಅದಕ್ಕಿಂತ ಕ್ರೂರವಾದದ್ದು ನೆರೆ ಪರಿಹಾರಕ್ಕೆ ದಾನ-ದತ್ತಿಯ ಹೆಸರಲ್ಲಿ ಬಿಡಿಗಾಸನ್ನು ಕೊಟ್ಟು ಸರ್ಕಾರವನ್ನು ತಮ್ಮ ಮುಂದಿನ ಮತ್ತು ಹಾಲಿ ಉದ್ಯಮಗಳಿಗೆ ಬೇಕಾದ ರೀತಿಯಲ್ಲಿ ಬಳಸಿಕೊಳ್ಳುವಂತೆ ಮಾಡುವ ಶಾಸನಬದ್ಧ ಭ್ರಷ್ಟಾಚಾರಕ್ಕೆ ಮುಂದಾಗುವುದು ಎರಡನೆಯದು ಮತ್ತು ಪ್ರಧಾನವಾದದ್ದು.

ಈ ಪರೋಕ್ಷ ಮತ್ತು ಅತ್ಯಧಿಕ ಲಾಭ ಮಾಡಿಕೊಳ್ಳುವ ಅವಕಾಶವನ್ನು ಸರ್ಕಾರ ಒದಗಿಸಿರುವುದರಿಂದಲೇ ಉದ್ಯಮಿಗಳು ಸರ್ಕಾರಕ್ಕೆ 'ಆಸರೆ'ಯಾಗಿರುವುದು. ಇದರ ಮುಖ್ಯಸ್ಥ ರಾಜೀವ್ ಚಂದ್ರಶೇಖರ್ ಎಂಬ ಆಧುನಿಕ ಚೆಡ್ಡಿ ಉದ್ಯಮಿಯೇ. ಸರ್ಕಾರದ ಪ್ರಕಾರ ಈಗಾಗಲೇ 29ಕ್ಕೂ ಹೆಚ್ಚು ಉದ್ಯಮಗಳು ಸರ್ಕಾರಕ್ಕೆ 'ಆಸರೆ'ಯಾಗಲು ಮುಂದೆ ಬಂದಿವೆ. ಅವುಗಳಲ್ಲಿ ಇನ್ಫೋಸಿಸ್, ಮೈಕ್ರೊಸಾಫ್ಟ್, ಸಿಸ್ಕೊ, ಡೆಲ್‌ನಂಥ ಸಾಫ್ಟ್‌ವೇರ್ ಉದ್ಯಮಗಳೂ, ಎಸ್.ಎಂ. ಕೃಷ್ಣನ ಅಳಿಯ ಸಿದ್ಧಾರ್ಥನ ಕಾಫಿ ಡೇ, ಎಸ್ಸಾರ್ ಸ್ಟೀಲ್ಸ್, ದಾಲ್ಮಿಯಾ ಸಿಮೆಂಟ್, ಕುರ್ಲಾನ್ ಹಾಸಿಗೆಗಳನ್ನು ತಯಾರು ಮಾಡುವ ಸೆಂಚುರಿ ಗ್ರೂಪ್, ಬಯೋಕಾನ್ ಮತ್ತು ಕ್ಲೇರ್‌ಜೆನ್‌ನಂಥ ಉದ್ಯಮಿಗಳು ಸೇರಿಕೊಂಡಿದ್ದಾರೆ. ನೆರೆ ಸಂತ್ರಸ್ತರಿಗೆ ಮನೆ ನಿರ್ಮಾಣ ಮಾಡಿಕೊಡಲು ಮುಂದಾಗಿರುವ ಈ ಸಂಸ್ಥೆಗಳ ಔದಾರ್ಯವನ್ನು ಸರ್ಕಾರವೂ ಒಳಗೊಂಡಂತೆ ಎಲ್ಲರೂ ಕೊಂಡಾಡುತ್ತಿರುವ ಈ ಸಂದರ್ಭದಲ್ಲಿ ಈ ಔದಾರ್ಯದ ಬೆಲೆ – cost ಎಷ್ಟು ಎಂದು ಅರ್ಥಮಾಡಿಕೊಳ್ಳುವುದು ಅತಿ ಮುಖ್ಯ. ಉದಾಹರಣೆಗೆ ಬೆಂಗಳೂರಿನಲ್ಲಿರುವ ಈ ಪ್ರಮುಖ ಸಾಫ್ಟ್‌ವೇರ್ ಸಂಸ್ಥೆಗಳು ಒಟ್ಟಾರೆ ಭಾರತದ ಸಾಫ್ಟ್‌ವೇರ್ ರಫ್ತು ಉದ್ಯಮದಲ್ಲಿ ಶೇ.35ರಷ್ಟು ಪಾಲನ್ನು ಹೊಂದಿವೆ. ಅದು 50 ಬಿಲಿಯನ್ ಅಮೆರಿಕನ್ ಡಾಲರ್‌ಗಳಾಗುತ್ತವೆ. ಅಂದರೆ ಸುಮಾರು 2,50,000 ಕೋಟಿ ರೂಪಾಯಿಗಳು. ಈ ವಹಿವಾಟಿನಿಂದ ಅವರಿಗೆ ಏನಿಲ್ಲವೆಂದರೂ ಶೇ.25ರಷ್ಟು ಲಾಭವಿದೆ. ಅಂದರೆ 75,000 ಕೋಟಿ ರೂಪಾಯಿಗಳಷ್ಟಾಗುತ್ತದೆ.

ಯಾವುದೇ ಉದ್ಯಮದಲ್ಲಿ ಇರದಿರುವಷ್ಟು ಲಾಭ ಈ ಉದ್ಯಮಗಳು ಮಾಡಿಕೊಳ್ಳುತ್ತಿರಲು ಮುಖ್ಯ ಕಾರಣ ಸರ್ಕಾರದ ಉದ್ಯಮಪರ ಜನದ್ರೋಹಿ ನೀತಿಗಳು. ಉದಾಹರಣೆಗೆ ಸರ್ಕಾರ ಇವರುಗಳಿಗೆ ಪ್ರತಿ ವರ್ಷ ಕೊಡುತ್ತಿರುವ ತೆರಿಗೆ ವಿನಾಯತಿಯೇ ಏನಿಲ್ಲವೆಂದರೂ 1,75,000 ಕೋಟಿ ರೂಗಳಷ್ಟಾಗುತ್ತವೆ. ಇದಲ್ಲದೆ ಸರ್ಕಾರ ಇವರ ಕೈಗೆ ಕೊಡುವ ಪುಕ್ಕಟೆ ಜಮೀನು, ನೀರು, ವಿದ್ಯುತ್ ಇನ್ನಿತ್ಯಾದಿಗಳು ಏನಿಲ್ಲವೆಂದರೂ 50,000 ಕೋಟಿಗಳಿಗೂ ಹೆಚ್ಚು. ಆದರೆ ಇಂದು ಇಡೀ ನೆರೆ ಸಂತ್ರಸ್ತರ ಮನೆ ನಿರ್ಮಾಣಕ್ಕೆ ಸರ್ಕಾರ ಮಾಡಿರುವ



ಚಾರ್ವಾಕ

ಶಿವಸುಂದರ್

ಅಂದಾಜು ವೆಚ್ಚವೇ ಕೇವಲ 3000 ಕೋಟಿ. ಅಂದರೆ ಎಲ್ಲಾ ಸಂತ್ರಸ್ತರ ಮನೆ ನಿರ್ಮಾಣ ಮಾಡಲು ಸಾಫ್ಟ್‌ವೇರ್ ಕಂಪನಿಗಳ ಲಾಭದ 1/25 ಭಾಗದಷ್ಟು ಸಾಕು ಅಥವಾ ಅವರಿಗೆ ನೀಡುತ್ತಿರುವ ತೆರಿಗೆ ರಿಯಾಯತಿಯನ್ನು ಒಂದು ವರ್ಷದ ಮಟ್ಟಿಗೆ ಹಿಂತೆಗೆದುಕೊಂಡರೂ ಎಲ್ಲಾ ನೆರೆ ಸಂತ್ರಸ್ತರಿಗೆ ಅರಮನೆಯನ್ನು ಕಟ್ಟಿಕೊಡಬಹುದಲ್ಲವೇ?

ಆದರೆ ಜನರಿಗೆ ಮರೆಮಾಚಿ ಸರ್ಕಾರದಿಂದ ಪಡೆದುಕೊಳ್ಳುತ್ತಿರುವ ಇಷ್ಟೊಂದು ರಿಯಾಯತಿಯ ಬದಲಿಗೆ ಇವುಗಳು ಕೊಡುತ್ತಿರುವ ದೇಣಿಗೆಯೆಷ್ಟು? ವರ್ಷಕ್ಕೆ 10,000 ಕೋಟಿಯಷ್ಟು ಲಾಭ ಮಾಡುವ ಇನ್ಫೋಸಿಸ್ ಕೊಡುತ್ತಿರುವ ದೇಣಿಗೆ 30 ಕೋಟಿ. ಅಂದರೆ ತಮ್ಮ ಲಾಭದ 1/200 ರಷ್ಟು! ವರ್ಷಕ್ಕೆ 2000 ಕೋಟಿ ಲಾಭ ಇರುವ ದಾಲ್ಮಿಯಾ ನೀಡುತ್ತಿರುವ ದೇಣಿಗೆ ಕೇವಲ 10 ಕೋಟಿ! ಅಂದರೆ ಅವರ ಲಾಭದ 1/350 ನೇ ಭಾಗದಷ್ಟು. ಆದರೆ ನೆರೆ ಸಂತ್ರಸ್ತರ ಬವಣೆಗೆ ಮರುಗಿ ಬೀದಿಯಲ್ಲಿ ಕೂಲಿ ಮಾಡುವ ಜನರೂ ಸಹ 100 ರೂ. ಕೂಲಿಯಲ್ಲಿ 50 ರೂ. ಅಂದರೆ ತಮ್ಮ ಸಂಪಾದನೆಯ ಅರ್ಧ ಭಾಗದಷ್ಟನ್ನು ದೇಣಿಗೆಯನ್ನಾಗಿ ನೀಡುತ್ತಿದ್ದಾರೆ. ಆದರೆ ಇದು ಔದಾರ್ಯವೆಂದು ಪರಿಗಣನೆಯಾಗುವುದೇ ಇಲ್ಲ!

ಆದರೂ ಸರ್ಕಾರ ಅವರು ಕೊಡುವ ಭಿಕ್ಷೆಯನ್ನೇ ಮಹಾ ಔದಾರ್ಯವೆಂಬಂತೆ ಬಣ್ಣಿಸುತ್ತಿರಲು ಕಾರಣವೇನು? ಅದಕ್ಕೆ ಮೂರು ಕಾರಣಗಳಿವೆ. ಮೊದಲನೆಯದಾಗಿ ನೆರೆ ಪರಿಹಾರಕ್ಕೆ ಅಪಾರ ಪ್ರಮಾಣದ ಸಂಪನ್ಮೂಲ ಬೇಕು ಮತ್ತು ಅಷ್ಟು ಸಂಪನ್ಮೂಲ ಸರ್ಕಾರದ ಬಳಿ ಇಲ್ಲ. ಆದ್ದರಿಂದ ಖಾಸಗಿಯವರನ್ನು ಮನವೊಲಿಸಿ ಅವರ ದಾನ ಪಡೆದುಕೊಳ್ಳುವುದು ಬಿಟ್ಟರೆ ಬೇರೆ ದಾರಿಯಿಲ್ಲವೆಂದು ಹೇಳುತ್ತಾ ಸರ್ಕಾರವು ತನ್ನ ಸಂವಿಧಾನಾತ್ಮಕ ಜವಾಬ್ದಾರಿಯಿಂದ ನುಣುಚಿಕೊಂಡು ಆಡಳಿತದ ಖಾಸಗೀಕರಣ ಮಾಡುವ ನವ ಉದಾರವಾದಿ ಆರ್ಥಿಕ ಪ್ರಣಾಳಿಯನ್ನು ಅನಿವಾರ್ಯವೆಂಬಂತೆ ಬಿಂಬಿಸುವುದು. ಎರಡನೆಯದು ಈ ಸಹಾಯಕ್ಕಾಗಿ ಅವರಿಗೆ ನಾವು ಪ್ರತ್ಯುಪಕಾರ ಮಾಡುವುದು ಅನಿವಾರ್ಯ ಎಂಬ ಭಾವನೆಯನ್ನು ಸಮಾಜದಲ್ಲಿ ಬಿತ್ತುವುದು. ಮೂರನೆಯದಾಗಿ ಮತ್ತು ಅತಿ ಮುಖ್ಯವಾಗಿ ನೆರೆ ಪರಿಹಾರವೆನ್ನುವುದು ಪ್ರಜಾತಂತ್ರದಲ್ಲಿ ಜನರ ಹಕ್ಕು. ಆದರೆ ಒಮ್ಮೆ ಜನರಲ್ಲಿ ಈ ಹಕ್ಕಿನ ಪ್ರಜ್ಞೆ ಜಾಗೃತಗೊಂಡರೆ ಪಟ್ಟಭದ್ರ ಹಿತಾಸಕ್ತಿಗಳಿಗೆ ಅಭದ್ರತೆ ಕಾಡುವುದರಿಂದ ಖಾಸಗಿಯವರ ದಯಾಭಿಕ್ಷೆಯಿಲ್ಲದೆ ಇದು ಸಾಧ್ಯವಾಗುತ್ತಿರಲಿಲ್ಲ ಎಂಬ ಭಾವನೆ ಮೂಡಿಸಿ ಹಕ್ಕಿನ ಪ್ರಜ್ಞೆಯನ್ನು ಅಳಿಸಿ ಋಣೀ ಭಾವವನ್ನು ಹೆಚ್ಚಿಸುವುದು. ಇಂಥ ಸಾಮಾಜಿಕ ವ್ಯವಸ್ಥೆಯಿಂದಲೇ ಅಲ್ಲವೆ 60 ವರ್ಷಗಳಿಂದಲೂ ಬಡವರ ಹೆಸರಲ್ಲಿ ಉಳ್ಳವರೇ ಆಳುತ್ತಾ ಉಣ್ಣುತ್ತಾ ಬಂದಿರುವುದು. ಆದ್ದರಿಂದಲೇ ಸರ್ಕಾರ ಈ ಪಿಪಿಪಿ ಎಂಬ ಬಣ್ಣದ ವೇಷವನ್ನು ಕಟ್ಟುತ್ತಿದೆ.

ಉದಾಹರಣೆಗೆ ಕ್ಲೇರ್‌ಜೆನ್ ಎಂಬ ಬಹುರಾಷ್ಟ್ರೀಯ ಕಂಪನಿ ಸಹ ಈ ಮನೆ ನಿರ್ಮಾಣದಲ್ಲಿ ಸರ್ಕಾರಕ್ಕೆ 'ಆಸರೆ'ಯಾಗುತ್ತಿದೆ. ಈ ಕಂಪನಿ ಬಯೋಮಾಸ್ ಅಂದರೆ ಗಿಡಗಂಟೆಗಳಿಂದ ವಿದ್ಯುತ್ತನ್ನು ಉತ್ಪಾದಿಸುವ ಉದ್ಯಮದಲ್ಲಿ ತೊಡಗಿಕೊಂಡಿದೆ. ಕರ್ನಾಟಕ ಸರ್ಕಾರದೊಂದಿಗೆ 15 ವರ್ಷಗಳ ಕಾಲ ಲಾಭದಾಯಕ ದರದಲ್ಲಿ 74 ಮೆಗಾವ್ಯಾಟ್ ವಿದ್ಯುತ್ತನ್ನು ಸರಬರಾಜು ಮಾಡುವ ಒಪ್ಪಂದ ಮಾಡಿಕೊಂಡಿದೆ. ಈ ಒಪ್ಪಂದದಲ್ಲಿ ಅಧಿಕ ಲಾಭ ಬರುವಂತೆ ನೋಡಿಕೊಂಡಿರುವುದಲ್ಲದೆ ಸರ್ಕಾರ 15 ವರ್ಷಗಳ ಕಾಲ ಅದಕ್ಕೆ ಲಾಭದ ಮೇಲೆ ತೆರಿಗೆ ಹಾಕುವುದಿಲ್ಲ, ಅಲ್ಲದೆ ಅದಕ್ಕೆ ಬಯೋಮಾಸ್ ಉತ್ಪಾದನೆಗೆ 6000 ಎಕರೆ ಜಮೀನನ್ನು ಸರ್ಕಾರ ನೀಡಲಿದೆ. ಇವುಗಳ ಒಟ್ಟು ಮೊತ್ತವೇ ನೂರಾರು ಕೋಟಿಗಳಿಗಿಂತ ಹೆಚ್ಚಾಗಲಿದೆ. ಸರ್ಕಾರ 15 ವರ್ಷದ ತೆರಿಗೆ ವಿನಾಯಿತಿಯನ್ನು ಒಂದು ವರ್ಷದ ಮಟ್ಟಿಗೆ ರದ್ದು ಮಾಡಿದ್ದರೂ 50 ಕೋಟಿಗೂ ಹೆಚ್ಚು ಹಣ ಸಿಗುತ್ತಿತ್ತು. ಆದರೆ ಕ್ಲೇರ್‌ಕೆನ್ ಕಂಪನಿ 10 ಕೋಟಿ ಕೊಟ್ಟು ನೂರು ಕೋಟಿ ಗಳಿಸುತ್ತಿದೆ.

ಇದಕ್ಕಿಂತ ಒಳ್ಳೆಯ ಉದ್ಯಮ ಯಾವುದಿದೆ? ನೆರೆಯಲ್ಲೂ ಸಿರಿ ಮಾಡಿಕೊಳ್ಳುವ ಈ ಉದ್ಯಮಿಗಳಿಗೆ ನೆರೆ ಪರಿಹಾರ ಎಂಬುದು ಅತ್ಯಂತ ಲಾಭದಾಯಕ ಉದ್ಯಮವೇ ಆಗಿದೆ, ಅಲ್ಲವೇ?

ಮಹಿಳೆಯರ ಸಂಕಷ್ಟ ಮತ್ತು ಚೆಡ್ಡಿಗಳ ಅಟ್ಟಹಾಸ





ಕಂಡಹಾಗೆ

ಗೌರಿ ಲಂಕೇಶ್

ಹಂಪಿಯಲ್ಲಿರುವ ಕನ್ನಡ ವಿಶ್ವವಿದ್ಯಾಲಯದ ಮಹಿಳಾ ...ಯನ ಕೇಂದ್ರವು 'ನೆರೆ ಹಾವಳಿ: ಪರಿಣಾಮ ಮತ್ತು ...ಹಾರ' ಎಂಬ ಅಧ್ಯಯನ ವರದಿಯನ್ನು ಮೊನ್ನೆ ...ಗಡೆ ಮಾಡಿತು. ಆ ಅಧ್ಯಯನವನ್ನು ಮುಖ್ಯವಾಗಿ ...ಳೆಯರ ದೃಷ್ಟಿಕೋನದಿಂದ ಸಿದ್ಧಪಡಿಸಲಾಗಿದ್ದು ...ದಲ್ಲಿ ಮೊನ್ನೆಯ ನೆರೆಯಲ್ಲಿ ಮಹಿಳೆಯರು ಎದುರಿಸಿದ ...ಗಳನ್ನು ವಿವರಿಸಲಾಗಿದೆ. ಆದರೆ ಇದು ಕೇವಲ ...ಳೆಯರಿಗೆ ಮಾತ್ರ ಸಂಬಂಧಿಸಿದ ವರದಿಯಲ್ಲ, ...ಾಗಿ ಮಹಿಳಾ ದೃಷ್ಟಿಕೋನವನ್ನಿಟ್ಟುಕೊಂಡು ನೆರೆ ...ವಳಿ, ಅದರ ಪರಿಣಾಮ ಮತ್ತು ಪರಿಹಾರವನ್ನು ...ತಂತೆ ವಿಸ್ತೃತವಾದ ಚಿತ್ರನ ನೀಡುವ ವರದಿಯಾಗಿದೆ. ...ಮ್ಮ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರನ್ನು ...ಷ್ಟು ನಿರ್ಲಕ್ಷಿಸಲಾಗುತ್ತದೆ ಎಂಬುದಕ್ಕೆ ಒಂದು ...ದಾಹರಣೆಯನ್ನು ವರದಿಯ ಪ್ರಸ್ತಾವನೆಯಲ್ಲೇ ...ಲಾಗಿದೆ. ಅದು ಹೀಗಿದೆ:

"2007ರಲ್ಲಿ ಬಂದ ಜಲಪ್ರಳಯದ ಸಂದರ್ಭದಲ್ಲಿ ...ಳುಗಡೆಯಾಗಲಿರುವ ಕೆಲವು ಹಳ್ಳಿಗಳಿಗೆ ...ಬಧಿಸಿದಂತೆ ಸ್ಥಳಾಂತರಕ್ಕಾಗಿ ಸರ್ಕಾರ ವ್ಯವಸ್ಥೆ ಮಾಡಿದೆ. ...ಕ್ಕಾಗಿ ತಾತ್ಕಾಲಿಕವಾಗಿ ಶೆಡ್ಡುಗಳನ್ನು ಹಾಕಿ ಕೊಟ್ಟಿದೆ ...ವಾಳಕೊಪ್ಪ, ವರಗೋಡದಿನ್ನಿ, ಮೂಳವಾಡ). ಆದರೆ ...ತಾತ್ಕಾಲಿಕ ಶೆಡ್ಡುಗಳನ್ನು ನಿರ್ಮಿಸುವಾಗ ಮಹಿಳೆಯರನ್ನು ...ನದಲ್ಲಿಟ್ಟುಕೊಂಡು ಜಳಕ ಮಾಡಲು ಸ್ನಾನದ ...ಡಿಗಳನ್ನು ಮಾಡಿಕೊಟ್ಟಿಲ್ಲ. ಇದನ್ನು ಅಲ್ಲಿನ ...ಸೀಲ್ದಾರರ ಗಮನಕ್ಕೆ ತಂದಾಗ ಅವರು ಹೇಳಿದ್ದೇನೆಂದರೆ ...ು ಹಣದ ಕೊರತೆಯಿಂದ ಉಂಟಾದ ಲೋಪವಲ್ಲ, ... ಅವಶ್ಯಕವೆಂದು ಹೊಳೆಯಲಿಲ್ಲ. ಈಗ ನೀವು ...ದ ಮೇಲೆ ನಮಗನ್ನಿಸುತ್ತಿದೆ."

...ನ್ನು ಪ್ರವಾಹದ ಸಂದರ್ಭದಲ್ಲಿ ಮತ್ತು ಆನಂತರ ...ಳೆಯರು ಎದುರಿಸುತ್ತಿರುವ ಸಂಕಷ್ಟಗಳನ್ನು ವರದಿಯು ... ಕಟ್ಟುವಂತೆ ಬಿಂಬಿಸಿದೆ. ಆದ್ದರಿಂದ ವರದಿಯ ...ಆಯ್ದ ಭಾಗಗಳನ್ನು ನಮ್ಮ ಓದುಗರಿಗೆ ಇಲ್ಲಿ ...ತ್ತಿದ್ದೇನೆ.

...ಪ್ರವಾಹದಿಂದ ಎಲ್ಲ ಬಗೆಯ ಜನರು ಕಷ್ಟಕ್ಕೆ ...ದ್ದರೂ, ಮಹಿಳೆಯರ ಕಷ್ಟಗಳು ವಿಶೇಷವಾಗಿವೆ. ...ಗೆ ಸಾಮಾನ್ಯವಾಗಿ ಈಜು ಬರುವುದಿಲ್ಲ, ಅವರ ...ವ ಸೀರೆ ಕೂಡ ನೀರಿನಲ್ಲಿ ನಡೆದುಹೋಗುವುದ... ಓಡಿಹೋಗುವುದಕ್ಕಾಗಲಿ ಪೂರಕವಾಗಿರಲಿಲ್ಲ. ...ು ಸಣ್ಣಪುಟ್ಟ ಮಕ್ಕಳ ಜತೆ ಅವರಿಗೆ ಗಂಡಸರಿಗಿಂತ ಹೆಚ್ಚಿನ ಆಪ್ತಸಂಬಂಧ ಇರುವ ಕಾರಣ, ಅವನ್ನು ತೆಗೆದುಕೊಂಡು ಹೋಗಲು ಅವರು ಪರಿಪಾಟಲು ಪಟ್ಟಿದ್ದಾರೆ. ಒಯ್ಯಲು ಆಗದಾಗ ದುಗುಡಕ್ಕೆ ಒಳಗಾಗಿದ್ದಾರೆ. ಅದರಲ್ಲೂ ಗರ್ಭಿಣಿಯರು ಮತ್ತು ಬಾಣಂತಿಯರು ವಿಶೇಷವಾಗಿ ಕಷ್ಟಪಟ್ಟಿದ್ದಾರೆ. ಪ್ರವಾಹದ ಮುನ್ನದಿನ, ಪ್ರವಾಹದ ಅವಧಿ ಮತ್ತು ನಂತರದ ದಿನಗಳಲ್ಲಿ ಅಸುರಕ್ಷಿತ ಹೆರಿಗೆಗಳಾಗಿವೆ. ಸಂಚಾರಿ ಹೆರಿಗೆ ಆಸ್ಪತ್ರೆ ಇಲ್ಲದ ಕಾರಣ, ಅದರ ಸೌಲಭ್ಯ ಮಹಿಳೆಯರಿಗೆ ಲಭ್ಯವಾಗಿಲ್ಲ.


ಶಾಲೆ, ಸಮುದಾಯ ಭವನಗಳಿಗೆ ಅವು ಭರಿಸಲಾರದಷ್ಟು ಜನರನ್ನು ಸ್ಥಳಾಂತರಿಸಲಾಯಿತು. ಮೂರು ದಿನದಿಂದ ಒಂದು ವಾರದವರೆಗೂ ಜನರನ್ನು ಒಂದೆಡೆ ಹಾಕಲಾಗಿತ್ತು, ಊಟದ ವ್ಯವಸ್ಥೆಯೇನೊ ಮಾಡಲಾಗಿತ್ತು. ಆದರೆ ಮಹಿಳೆಯರು ಬಸುರಿ, ಬಾಣಂತಿಯರು ಮತ್ತು ಮಕ್ಕಳಿಗಾಗಿ ಪ್ರತ್ಯೇಕ ಸೌಲಭ್ಯ ನೀಡಲು ಸಾಧ್ಯವಾಗಿಲ್ಲ. ಈ ಅವಧಿಯಲ್ಲಿ ಸ್ನಾನ ಮತ್ತು ಶೌಚಕ್ಕಾಗಿ ಮಹಿಳೆಯರು, ಅದರಲ್ಲೂ ತರುಣಿಯರು ಬಹಳ ಕಷ್ಟ ಪಟ್ಟಿರುವರು. ಉದಾಹರಣೆಗೆ, ಚಿಕ್ಕಮಂಚಾಲಿ ಗ್ರಾಮದಲ್ಲಿ ಗುಡ್ಡದ ಮೇಲಿರುವ ಗಣಪತಿ ಗುಡಿಯ ಆವರಣದಲ್ಲಿ ಹೋಗಿ ಜನ ನೆಲೆ ನಿಂತಿದ್ದಾರೆ. ದೇವಸ್ಥಾನ ಕಮಿಟಿ ಜನರಿಗೆ ಊಟ ಹಾಕಿದೆ. ಆದರೆ ಹುಡುಗಿಯರು ಮಾತ್ರ ಹೊಟ್ಟೆ ತುಂಬ ಉಂಡಿಲ್ಲ, ಉಂಡರೆ ಶೌಚಕ್ಕೆ ಹೋಗಬೇಕು. ದೇವಸ್ಥಾನದ ಆವರಣದಲ್ಲಿ ಇದು ಸಾಧ್ಯವಿಲ್ಲ. ದೂರ ಹೋಗಲೇಬೇಕೆಂದರೆ ಕಣ್ಣು ಹರಿದಷ್ಟು ದೂರ ನೀರು. ಹೀಗಾಗಿ ರಾತ್ರಿ ಮಲಗಲು ಸಾಧ್ಯವಾಗಿಲ್ಲ, ಅವರ ಪಾಡಿನ ಬಗ್ಗೆ ಕೇಳಿದಾಗ, "ಅದನ್ನು ನೀವು ಕೇಳಬಾರದು. ನಾವು ಹೇಳಬಾರದು. ಹೆಣ್ಮಕ್ಕಳ ಮಾನ ಅಂದ್ರ ಎಷ್ಟಿರತದರಿ? ಇದ್ದಟ್ ಮಾನ ಗಂಗವ್ವನ ಸಂಗಾಳೇ ಹರಿದು ಹೋಗ್ಯಾದರಿ" ಎನ್ನುತ್ತ ಕಣ್ಣಲ್ಲಿ ನೀರುತೆಗೆದರು.

ಹೆಣ್ಣುಮಕ್ಕಳಿಗೆ ಮಲಮೂತ್ರ ವಿಸರ್ಜನೆಗೆ ಹೋಗಲು ಖಾಸಗಿಯೆನಿಸುವ ಸ್ಥಳಗಳೇ ದೊರೆಯದ್ದರಿಂದ ಹೊಳೆ, ಹಳ್ಳದಲ್ಲಿಯೇ ನಿಂತು ಮಲ ಮೂತ್ರ ವಿಸರ್ಜನೆ ಮಾಡಿದ್ದಾರೆ. ಇದರಿಂದಾಗಿ ದೈಹಿಕ ಹಿಂಸೆಯ ಜೊತೆಗೆ ಮಾನಸಿಕ ಹಿಂಸೆಯನ್ನು ಅನುಭವಿಸಿದ್ದಾರೆ. ರಾಡಿ ನೀರಿನ ಜೊತೆಯಲ್ಲಿ ಮಲ ಮೂತ್ರ ವಿಸರ್ಜನೆಯಂತಹ ಸಂಗತಿಗಳೂ ಸೇರಿಕೊಂಡಿದೆ. ಇಂತಹ ನೀರನ್ನು ಜನರು ಅನಿವಾರ್ಯವಾಗಿ ಕುಡಿದಿದ್ದಾರೆ. ಇಂತಹ ಕಲುಷಿತ ನೀರಿನಿಂದಾಗಿ ಅನೇಕ ಕಾಯಿಲೆಗಳನ್ನು ಜನ ಎದುರಿಸುವಂತಾಗಿದೆ.

ಮುಟ್ಟಾದ ಮಹಿಳೆಯರು, ಬಾಣಂತಿಯರು ಮುಟ್ಟಿನ ಬಟ್ಟೆ ಬದಲಿಸಲು, ಯಾವ ಒಣಗಿದ ಬಟ್ಟೆಗಳೂ ಇಲ್ಲದೆ, ತಲೆ ಮೇಲೆ ಹಾಕಿಕೊಂಡು ಬಂದ ಸೀರೆಯನ್ನೇ ಉಂಡೆ ಮಾಡಿಟ್ಟುಕೊಂಡು, ಅದರ ಮೇಲೆಯೇ ಕೂತಿದ್ದಾರೆ. ಮುಟ್ಟಿನ ಸ್ರಾವ ಬೇರೆಯವರಿಗೆ ಕಾಣುವುದು ಅಥವಾ ಗೊತ್ತಾಗುವುದು ಅಪಮಾನದ ಸಂಗತಿಯೆಂದೇ ಮಹಿಳೆಯರು ಪರಿಭಾವಿಸಿದ್ದಾರೆ. ಆದ್ದರಿಂದ ಇಡೀ ಬಟ್ಟೆಯೇ ರಕ್ತಸ್ರಾವದಿಂದ ತೊಯ್ದರೂ ಬದಲಿಸಲು ಬಟ್ಟೆಯಿಲ್ಲದೆ ಅನಿವಾರ್ಯವಾಗಿ ಅದೇ ಬಟ್ಟೆಯನ್ನು ಕೆಳಗಿಟ್ಟು ಕೂತಿದ್ದಾರೆ. ಇದೆಲ್ಲದರಿಂದ ಮಹಿಳೆಯರು ತಮ್ಮ ಜೈವಿಕ ಸಂರಚನೆಯನ್ನು ಕುರಿತೇ ನೇತ್ಯಾತ್ಮಕ ಭಾವನೆಗಳನ್ನು ಬೆಳೆಸಿಕೊಳ್ಳುತ್ತಿದ್ದಾರೆ.

ಈಗ ಮಹಿಳೆಯರು ಹೊಸಶೆಡ್ಡುಗಳಲ್ಲಿ ಗಂಡಸರಿಗಿಂತಲೂ ಬಹಳ ಸಮಯ ಅಡುಗೆ, ಮಕ್ಕಳ ಪೋಷಣೆ, ಹೆರಿಗೆ, ಗರ್ಭಿಣಿಯರಾಗಿ ಕಾಲ ಕಳೆಯಬೇಕಾಗಿದೆ. ಶೆಡ್ಡುಗಳಲ್ಲಿ ಕುಡಿಯುವ ನೀರಿಲ್ಲ; ಮಹಿಳೆಯರಿಗಾಗಿ ಸ್ನಾನದ ಮನೆಯಿಲ್ಲ, ಇದರಿಂದ, ಒಂದು ಬಗೆಯಲ್ಲಿ ಬಂಧನದಲ್ಲಿರುವ ಮಾನಸಿಕ ಅವಸ್ಥೆಯನ್ನು ಅವರು ಅನುಭವಿಸುತ್ತಿದ್ದಾರೆ. ಇದು ಎರಡು ವರ್ಷಗಳಿಂದ ಶೆಡ್ಡುಗಳಲ್ಲಿ ಇರುವವರಲ್ಲಿ ಇನ್ನೂ ಹೆಚ್ಚಾಗಿದೆ. ಜಾತ್ರೆ ಉತ್ಸವ ಇತ್ಯಾದಿ ಊರಿನಲ್ಲಿದ್ದ ಸಾಮುದಾಯಕ ಬದುಕು ಮತ್ತು ಮನರಂಜನೆ ಅವರಿಗೆ ಇಲ್ಲವಾಗಿದೆ. ಪಿಸುಗುಟ್ಟಿದರೂ ಪಕ್ಕದ ಶೆಡ್ಡಿನವರಿಗೆ ಕೇಳುವ ಸನ್ನಿವೇಶವಿದ್ದು, ಶೆಡ್ಡುಗಳಲ್ಲಿ ಖಾಸಗಿ ಬದುಕೇ ಇಲ್ಲದಂತಾಗಿದೆ.

ಹೊಲ, ಮನೆ, ಸಂಪತ್ತಿನ ನಾಶದಿಂದ ಆಗಿರುವ ದುಃಖವು ಸಮಾನವಾಗಿ ಪುರುಷರಿಗೂ ಮಹಿಳೆಯರಿಗೂ ಆಗಿದೆ. ಆದರೂ ಸಾರ್ವಜನಿಕ ಬದುಕಿನಲ್ಲಿ ಒಡನಾಟವುಳ್ಳ ಪುರುಷರಿಗಿಂತ ಮನೆಯನ್ನು ತನ್ನ ಬಾಳಿನ ಮುಖ್ಯ ಭಾಗ ಮತ್ತು ತನ್ನ ಐಡೆಂಟಿಟಿಯ ಕುರುಹನ್ನಾಗಿ ಮಾಡಿಕೊಂಡಿರುವ ಮಹಿಳೆಯರಿಗೆ, ಮನೆ ಬಿದ್ದಿರುವುದು ಮಾನಸಿಕವಾಗಿ ಹೆಚ್ಚು ವೇದನೆ ತಂದಿದೆ. ತಾತ್ಕಾಲಿಕ ಶೆಡ್ಡುಗಳಲ್ಲಿ ಅಥವಾ ಶಾಲೆಗಳಲ್ಲಿ ಅವರು ಇದ್ದಾರೆ. ಆದರೂ ತಮ್ಮ ಸ್ವಂತಮನೆಗೆ ಯಾವಾಗ ಹೋದೇವೊ, ಸಂಸಾರವನ್ನು ಹಿಂದಿನಂತೆ ಶುರುಮಾಡಿಯೇವೊ ಎಂಬ ತುಡಿತವು ಅವರಲ್ಲಿ ತೀವ್ರವಾಗಿದೆ. ಹೊಸಮನೆಗೆ ಹೋಗುವತನಕ ಅವರಲ್ಲಿ ಮಾನಸಿಕವಾಗಿ ಭಗ್ನತೆ ಮತ್ತು ಅಭದ್ರತೆಯ ಮನಸ್ಥಿತಿ ಮುಂದುವರೆಯುವಂತೆ ತೋರುತ್ತದೆ."



ಸುಮಾರು 8,000 ಪದಗಳಷ್ಟು ವಿವರವಾಗಿರುವ ವರದಿಯ ಹಲವು ಪ್ಯಾರಾಗಳನ್ನು ಮಾತ್ರ ಇಲ್ಲಿ ನೀಡಿದ್ದೇನೆ. ಈ ಅಧ್ಯಯನ ನಡೆದು ಹಲವಾರು ವಾರಗಳಾಗಿದ್ದರೂ ಇವತ್ತಿಗೂ ನೆರೆಪ್ರವಾಹ ಸಂಭವಿಸಿದ ಪ್ರದೇಶಗಳಲ್ಲಿನ ಜನರ ಬುದುಕು ಉತ್ತಮಗೊಂಡಿಲ್ಲ, ಅವರ ಬದುಕು ಇಂದಿಗೂ ನರಕ ಸದೃಶ್ಯವಾಗಿದೆ.

ಆದರೆ ಯಡಿಯೂರಪ್ಪನವರ ಸರ್ಕಾರ ಹೇಳುತ್ತಿರುವುದೇನು? ಈಗಾಗಲೇ ಎಲ್ಲರಿಗೂ ತುರ್ತು ಅವಶ್ಯ ಸಾಮಗ್ರಿಗಳನ್ನು ಕೊಡಲಾಗಿದೆ ಎಂದೂ, ಶೇ. 70 ರಷ್ಟು ಜನರಿಗೆ ಪರ್ಯಾಯ ವಸತಿ ಸೌಲಭ್ಯ ನೀಡಲಾಗಿದೆ ಎಂದೂ ಹೇಳುತ್ತಿದ್ದಾರಲ್ಲವೇ?


ಆದರೆ ಅದೆಲ್ಲ ಅಪ್ಪಟ ಸುಳ್ಳು. ಇವತ್ತಿಗೂ ಅದೆಷ್ಟೋ ಶಾಸಕರು ತಮ್ಮ ಕ್ಷೇತ್ರಗಳಿಗೆ ಹೋಗುವ ಧೈರ್ಯ ಮಾಡಿಲ್ಲ, ಪೊಲೀಸರು ಮತ್ತು ಅಧಿಕಾರಿಗಳು ತಮ್ಮ ಕೈಲಾದಷ್ಟು ಕೆಲಸ ಮಾಡಿದ್ದರೂ ರಾಜಕೀಯ ನಾಯಕರು ಇಚ್ಛಾಶಕ್ತಿ ತೋರದಿರುವುದರಿಂದ ಅದೆಲ್ಲ ಹೊಳೆಯಲ್ಲಿ ಹುಣಸೆ ಹಿಂಡಿದಂತಾಗಿದೆ.

ಮೊನ್ನೆ ಲೋಕಾಯುಕ್ತ ನ್ಯಾ. ಸಂತೋಷ್ ಹೆಗ್ಡೆ ಅವರು ಕೂಡ ರಾಜ್ಯ ಸರ್ಕಾರ ನೆರೆ ಪ್ರವಾಹದಲ್ಲಿ ತತ್ತರಿಸಿದ ಜನರಿಗೆ ನೆರವು ನೀಡುವಲ್ಲಿ ವಿಫಲವಾಗಿದೆ ಎಂದೇ ವರದಿ ಕೊಟ್ಟಿದ್ದಾರೆ. ಬಹುತೇಕ ಕಡೆ ಪ್ರವಾಹಪೀಡಿತ ಜನರಿಗೆ ನೆರವು ನೀಡುವಲ್ಲಿ ಆಡಳಿತ ಯಂತ್ರ ವಿಫಲವಾಗಿದೆ ಎಂದಿರುವ ಲೋಕಾಯುಕ್ತರು ಹಲವೆಡೆ ಕುಡಿಯುವ ನೀರಿನ ಪೂರೈಕೆಯನ್ನು ಮಾಡಿಲ್ಲ, ಹಾನಿಗೊಳಗಾಗಿರುವ ಮನೆ ಮತ್ತು ಬೆಳೆ ಹಾನಿ ಸಮೀಕ್ಷೆ ನಡೆದಿಲ್ಲ, ಅದೆಷ್ಟೋ ಕಡೆ ಸೂಕ್ತ ಪರಿಹಾರ ನೀಡಿಲ್ಲ ಅಥವಾ ಸಂತ್ರಸ್ತರಿಗೆ ನೀಡಿರುವ ಪರಿಹಾರದ ಚೆಕ್‌ಗಳನ್ನು ಬ್ಯಾಂಕ್‌ಗಳು ಮಾನ್ಯ ಮಾಡುತ್ತಿಲ್ಲ; ಅಂಗವಿಕಲರಿಗೆ ನಿರ್ಮಿಸಿರುವ ತಾತ್ಕಾಲಿಕ ಶೆಡ್‌ಗಳು ಮನುಷ್ಯರ ವಾಸಕ್ಕೆ ಯೋಗ್ಯವಾಗಿಲ್ಲ, ಪರಿಹಾರ ನೀಡುವಲ್ಲಿ ಸಾಕಷ್ಟು ತಾರತಮ್ಯ ನಡೆದಿದೆ ಮತ್ತು ಪರಿಹಾರದ ಚೆಕ್ ನೀಡುವುದಕ್ಕೆ ಲಂಚ ಪಡೆಯಲಾಗಿದೆ ಎಂದು ತಮ್ಮ ವರದಿಯಲ್ಲಿ ಹೇಳಿದ್ದಾರೆ.

ಇಷ್ಟೆಲ್ಲ ಆದರೂ ಯಡಿಯೂರಪ್ಪ ಮತ್ತವರ ಸರ್ಕಾರ ಮಾಡುತ್ತಿರುವುದೇನನ್ನು? ಒಂದೆಡೆ RSS ನಾಯಕ ಮೋಹನ್ ಭಾಗವತನ ಭೇಟಿಗೆಂದು ಚೆಡ್ಡಿ ಧರಿಸಿ ಹಾಜರಾಗುವ ಯಡ್ಡಿಯ ಪಟಾಲಂ ಇನ್ನೊಂದೆಡೆ ಉದ್ಯಮಿಗಳು ಮತ್ತು ಸೇವಾಭಾರತಿ ತರಹದ ಹಿಂದೂತ್ವವಾದಿ ಸಂಘಟನೆಗಳು ನೆರೆ ಪರಿಹಾರದ ಯೋಜನೆಯಾದ 'ಆಸರೆ' ಮೂಲಕ ಕೋಟ್ಯಂತರ ರೂಪಾಯಿಗಳ ಲಾಭ ಮಾಡಿಕೊಳ್ಳಲು ಸಹಕರಿಸುತ್ತಿದ್ದಾರೆ. (ವಿವರಗಳಿಗೆ ಶಿವಸುಂದರ್ ಅವರ ಈ ವಾರದ 'ಚಾರ್ವಾಕ' ಅಂಕಣ ನೋಡಿ).

ಜನರ ಸಂಕಷ್ಟದಿಂದಲೂ ಹಣವನ್ನು ಗಿಂಜಲು ಯತ್ನಿಸುವ ಇಂತಹ ಜನರಿಗೆ ಅದ್ಯಾವುದರಿಂದ ಹೊಡೆಯಬೇಕು? ●

...ಹತ್ತು ಕೋಟಿಗೆ ...ಗ್ಗದ ಹನುಮಂತಪ್ಪ!



...ಬಳ್ಳಾರಿ ಗಣಿಧಣಿಗಳಿಗೆ ಒಂದರ ಮೇಲೊಂದು ಹೊಡೆತ ಬೀಳಲಾರಂಭಿಸಿದೆ. ಅತ್ತ ...ಧ್ರ ಸರ್ಕಾರ ಅವರ ಕುತ್ತಿಗೆ ಹಿಚುಕಲಾರಂಭಿಸಿದ್ದರೆ, ಇತ್ತ ರಾಜ್ಯದ ಮುಖ್ಯಮಂತ್ರಿ ಯಡ್ಡಿ ...ದ ಸದ್ದಿಲ್ಲದೆ ಬಿದ್ದಾ ತೋಡುತ್ತಿದ್ದಾರೆ. ಈ ನಡುವೆ ಬಳ್ಳಾರಿ ಸಂಸದೆ, ಸಚಿವ ಶ್ರೀರಾಮುಲು ...ೋದರಿ ಜೆ.ಶಾಂತಾ ಆಯ್ಕೆ ಕೂಡ ರದ್ದಾಗುವ ಸೂಚನೆಗಳಿವೆ. ಇದರಿಂದ ಬೆಚ್ಚಿ ಬಿದ್ದ ...ಗಳು ದುಡ್ಡು ಕೊಟ್ಟಾದರೂ ತಮ್ಮ ಮಾನ ಉಳಿಸಿಕೊಳ್ಳಲು ಹೋಗಿ ಕಾಂಗ್ರೆಸ್ ನಾಯಕ ...ವೈ. ಹನುಮಂತಪ್ಪರಿಂದ ಉಗಿಸಿಕೊಂಡು ಬಂದಿದ್ದಾರೆ.

...ಏನಿದು ಪ್ರಕರಣ?

...ರಾಜ್ಯ ಹೈಕೋರ್ಟ್ ಬಳ್ಳಾರಿ ಮೀಸಲು ಕ್ಷೇತ್ರದ ಸಂಸದೆ ಜೆ. ಶಾಂತಾ ಆಯ್ಕೆ ಪ್ರಶ್ನಿಸಿದ್ದ ಚುನಾವಣಾ ತಕರಾರು ... ವಿಚಾರಣೆ ನಡೆಸುತ್ತಿದೆ. ಕಾಂಗ್ರೆಸ್ ಚುನಾವಣಾ ಏಜೆಂಟ್ ಎಂ.ಚಂದ್ರೇಗೌಡ ಈ ಅರ್ಜಿ ಸಲ್ಲಿಸಿದ್ದು, ಶಾಂತಾ ...ಮಪತ್ರ ಸಲ್ಲಿಸುವಾಗ ತಾವು ವಾಲ್ಮೀಕಿ (ಹಿಂದು) ಪಂಗಡಕ್ಕೆ ಸೇರಿದವರೆಂದು ಜಾತಿ ಪ್ರಮಾಣಪತ್ರ ಲಗತ್ತಿಸಿದ್ದಾರೆ. ...ಚ್2 ರಂದು ಈ ಜಾತಿ ಪ್ರಮಾಣ ಪತ್ರವನ್ನು ಸ್ಥಳೀಯ ತಹಸೀಲ್ದಾರ್ ನೀಡಿದ್ದಾರೆ. ಆದರೆ ಕೇವಲ ಆರು ...ಳ ನಂತರ ಅಂದರೆ ಏಪ್ರಿಲ್ 8ರಂದು ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ಗುಂತಕಲ್‌ನ ತಹಸೀಲ್ದಾರರಿಂದ ...ಯ್ಯಾ' ಸಮುದಾಯಕ್ಕೆ ಸೇರಿದವರೆಂದು ಮತ್ತೊಂದು ಜಾತಿ ಪ್ರಮಾಣಪತ್ರ ಪಡೆದುಕೊಂಡಿದ್ದಾರೆ. ಈ ...ದಾಯ ಎರಡೂ ರಾಜ್ಯಗಳಲ್ಲಿ ಒಬಿಸಿ ವರ್ಗಕ್ಕೆ ಸೇರಿದುದಾಗಿದೆ. ವಾಸ್ತವವಾಗಿ ಶಾಂತಾ ಕರ್ನಾಟಕದ ನಿವಾಸಿಯಲ್ಲ, ಜೊತೆಗೆ ಪರಿಶಿಷ್ಟ ಪಂಗಡಕ್ಕೆ ಸೇರಿದವರೂ ಅಲ್ಲ. ಆದ್ದರಿಂದ ಅವರ ನಾಮಪತ್ರ ಅಂಗೀಕಾರವೇ ಸರಿಯಲ್ಲ ಎಂದು ಚಂದ್ರೇಗೌಡ ದೂರಿದ್ದಾರೆ.

ಇದರ ಜೊತೆಗೆ, ಮೇ 16ರಂದು ಮತ ಎಣಿಕೆ ನಡೆದ ಸಂದರ್ಭದಲ್ಲಿ 15ನೇ ಸುತ್ತಿನ ಕೊನೆಗೆ ಕಾಂಗ್ರೆಸ್ ಅಭ್ಯರ್ಥಿ ಹನುಮಂತಪ್ಪ 6,500ಕ್ಕೂ ಹೆಚ್ಚು ಮತಗಳಿಂದ ಮುಂದಿದ್ದರು. ನಂತರ ಚುನಾವಣಾಧಿಕಾರಿಗೆ ಮೊಬೈಲ್ ಕರೆಗಳು ಬರತೊಡಗಿದವು. ತದನಂತರ ಅವರು ಮತ ಎಣಿಕೆ ವಿವರವನ್ನು ಪ್ರಕಟಿಸಲಿಲ್ಲ. ಚುನಾವಣೆಯಲ್ಲಿ ಬಳಸಿದ ವಿದ್ಯುನ್ಮಾನ ಮತಯಂತ್ರಗಳು ಹಾಗೂ ಎಣಿಕೆ ಸಂದರ್ಭದಲ್ಲಿ ಬಳಕೆ ಮಾಡಿದ ಮತಯಂತ್ರಗಳ ಗುರುತು ಸಂಖ್ಯೆಗಳು ಬೇರೆಬೇರೆ ಆಗಿದ್ದವು. ಮತ ಎಣಿಕೆ ಮೊದಲೇ ಬಿಜೆಪಿ ಕಾರ್ಯಕರ್ತರು ತಮ್ಮ ಪಕ್ಷದ ಉಮೇದುವಾರರು 2000 ಮತಗಳಿಂದ ಗೆದ್ದರು ಎಂದು ವಿಜಯೋತ್ಸವ ನಡೆಸಿದರು. ಒಟ್ಟಾರೆ ಈ ಮತ ಎಣಿಕೆ ಪ್ರಕ್ರಿಯೆಯಲ್ಲಿ ಚುನಾವಣಾಧಿಕಾರಿ ಶಾಮೀಲಾಗಿ ಅಕ್ರಮ ಎಸಗಿದ್ದಾರೆ ಎಂದೂ ದೂರಿದ್ದಾರೆ.

ಅರ್ಜಿದಾರರ ವಾದ ಆಲಿಸಿದ ನ್ಯಾಯಾಧೀಶರಾದ ಎಚ್.ಬಿಲ್ಲಪ್ಪ ಈ ಚುನಾವಣೆಯಲ್ಲಿ ಬಳಕೆಯಾದ ಎಲ್ಲ ವಿದ್ಯುನ್ಮಾನ ಮತಯಂತ್ರಗಳನ್ನು ಸಂರಕ್ಷಿಸುವಂತೆ ಕ್ಷೇತ್ರ ಚುನಾವಣಾಧಿಕಾರಿಗಳಿಗೆ ಸೂಚಿಸಿದ್ದಾರೆ. ಇದರರ್ಥ ಅಕ್ರಮ ನಡೆದಿರುವ ವಾಸನೆ ನ್ಯಾಯಾಧೀಶರ ಮೂಗಿಗೂ ಬಡಿದಿದೆ ಎಂದು. ಪ್ರಕರಣದ ವಿಚಾರಣೆಯನ್ನು ಡಿ.18ಕ್ಕೆ ಮುಂದೂಡಲಾಗಿದೆ.

ಈ ಬೆಳವಣಿಗೆ ಈಗಾಗಲೇ ನಿದ್ದೆಗೆಟ್ಟಿರುವ ರೆಡ್ಡಿ ಸಹೋದರರಿಗೆ ಬರಸಿಡಿಲಿನಂತೆ ಬಡಿದಿದೆ. ಕೂಡಲೇ 'ಡೀಲ್' ಕಾರ್ಯಾಚರಣೆ ಆರಂಭಿಸಿದ್ದಾರೆ. ಗಣಿಧಣಿಗಳ ಬಂಟರು ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಎನ್.ವೈ. ಹನುಮಂತಪ್ಪರನ್ನು ಅಪ್ರೋಚ್ ಮಾಡಿ 10 ಕೋಟಿಗೆ ಡೀಲ್ ಕುದುರಿಸಲು ಹೊರಟಿದ್ದಾರೆ. ದುಡ್ಡಿನ ಮುಖನೋಡದ ಹನುಮಂತಪ್ಪ ಇದಕ್ಕೆ ಬಗ್ಗಿಲ್ಲ. ಮುಂದೆ ರೆಡ್ಡಿಗಳು ನ್ಯಾಯಾಂಗವನ್ನೇ ಭ್ರಷ್ಟಗೊಳಿಸದಿದ್ದರೆ ಸಾಕು ಎಂದು ಬಳ್ಳಾರಿ ಜನ ಈಗ ಮಾತನಾಡುತ್ತಿದ್ದಾರೆ.

● ನೀರದ ಬೆಂಗಳೂರು

ಕೃಷ್ಣಾ ಚೌಲ್ಟ್ರಿಯ ಕೀಚಕ ಪಡೆ

ಕಾಮಾಕ್ಷಿಪಾಳ್ಯದ ಮಾಜಿ ಕೌನ್ಸಿಲರ್ ರಂಗಣ್ಣ ಮತ್ತು ಆತನ ಮಗ ಅನಿಲ್ ರಂಗಣ್ಣನ ಹಾವಳಿ ಈ ಸುತ್ತಮುತ್ತ ಯಾಪಾಟ ಹಚ್ಚಿದೆಯೆಂದರೆ ಕೆಲದಿನಗಳ ಹಿಂದೆ ತನ್ನ ಸ್ವಂತ ಅಣ್ಣ ಕೃಷ್ಣಪ್ಪನನ್ನೇ ರಂಗಣ್ಣ ಹಿಡಿದು ಬಡಿದ. ಆಗಲೂ ಪೊಲೀಸರು ಕೇಸು ಹಾಕಲಿಲ್ಲ. ಇದಾಗಿ ಕೆಲ ದಿನಕ್ಕೆ ಟೈಲ್ಸ್ ಫ್ಯಾಕ್ಟರಿ ನರಸಿಂಹಯ್ಯ ಎಂಬುವವರು ಕೃಷ್ಣಾ ಚೌಲ್ಟ್ರಿ ಮುಂದೆ ಬೇಕಾಬಟ್ಟೆ ಕಾರು ನಿಲ್ಲಿಸಿಕೊಂಡು ಪುಂಡಾಟಿಕೆಯಲ್ಲಿ ತೊಡಗಿದ್ದ ಅನಿಲ್ ರಂಗಣ್ಣನನ್ನು 'ಸೈಡು ಬಿಡು' ಎಂದು ರೇಗಿದ್ದಕ್ಕೆ, ಅನಿಲ್ ರಂಗಣ್ಣನ ಗ್ಯಾಂಗ್ ಅವರನ್ನು ನಡುರಸ್ತೆಯಲ್ಲೇ ಹಿಡಿದು ಬಡಿದಿದೆ.

ಇದರಿಂದ ರೊಚ್ಚಿಗೆದ್ದ ನರಸಿಂಹಯ್ಯನ ಮಕ್ಕಳು ಬಂದಿದ್ದೇ ಅನಿಲ್ ರಂಗಣ್ಣನನ್ನು ಹೊಡೆದಿದ್ದಾರೆ. ಅಷ್ಟರಲ್ಲಿ ಪೊಲೀಸ್ ಠಾಣೆಯಲ್ಲಿದ್ದ ನರಸಿಂಹಯ್ಯನನ್ನು ಠಾಣೆಗೇ ನುಗ್ಗಿ ಹಲ್ಲೆ ನಡೆಸಿದೆ ಅನಿಲ್ ರಂಗಣ್ಣನ ಗ್ಯಾಂಗ್.

ಅವತ್ತು ಠಾಣೆಯಲ್ಲಿದ್ದ ಎಸಿಪಿ ಕುಮಾರಸ್ವಾಮಿಯ ಮೇಲೆ ಅನಿಲ್ ಅಮ್ಮಾ ಅಕ್ಕಾ ಬೈದು ಹೊಡೆಯಲು ಹೋಗಿದ್ದ. ಸಣ್ಣಪುಟ್ಟ ಗಲಾಟೆಗೆ ಲಾಂಗ್ ಕೈಯಲ್ಲಿ ಹಿಡಿದು ನುಗ್ಗುವ ಅನಿಲ್ ರಂಗಣ್ಣ ಮೊನ್ನೆಯಷ್ಟೇ ಕರೇಕಲ್‌ನ ರಾಜು ಎಂಬಾತನನ್ನು ನಡುರಸ್ತೆಯಲ್ಲಿ ಅಟ್ಟಾಡಿಸಿದ್ದಾನೆ. ಕಾಮಾಕ್ಷಿಪಾಳ್ಯದ ಸುತ್ತಮುತ್ತ ಯಾರೇ ಕಾರ್ಯಕ್ರಮ ಮಾಡಿದರೂ ಅದಕ್ಕೆ ತನ್ನಪ್ಪ ರಂಗಣ್ಣನನ್ನು ಕರೆಸಲೇಬೇಕೆಂದು ಅನಿಲ್ ದಬಾಯಿಸುತ್ತಾನೆ. ರಂಗಣ್ಣನ ಫೋಟೋ ಹಾಕದೇ ಯಾರಾದರೂ ಬ್ಯಾನರ್ ಕಟ್ಟಿದರೆಂದರೆ ಅದನ್ನು ತಾನೇ ನಿಂತು ಕುಯ್ಯಿಸುತ್ತಾನೆ. ಬೇರೆ ಯಾವ ಪಕ್ಷಗಳವರೂ ರಸ್ತೆಯಲ್ಲಿ 'ಫ್ಲೆಕ್ಸ್' ಹಾಕುವಂತಿಲ್ಲ. ರಾಜಣ್ಣನ ಮಕ್ಕಳಾದ ಪಾಲೆನಾಗ, ಜಗ್ಗಿ ಮುಂತಾದ ಲೋಕಲ್ ರೌಡಿಗಳಲ್ಲದೇ ಕೆಎಲ್‌ಇ ಕಾಲೇಜಿನ ಕೆಲ ಪುಂಡರು ಸದಾ ಅನಿಲನ ಬೆನ್ನಿಗಿರುತ್ತಾರೆ.

ಇನ್ನು ಅಪ್ಪ ರಂಗಣ್ಣನ ಖದರ್ರೇ ಬೇರೆ. ಸಂಜೆಯಾದರೆ ಸಾಕು ಕುಡಿದು ರೋಡ್ ಸರ್ವೆ ನಡೆಸುವ ತಂದೆ ರಂಗಣ್ಣ ಪಾಲಿಕೆ ಇಂಜಿನಿಯರ್‌ಗಳನ್ನು ಇನ್ನಿಲ್ಲದಂತೆ ಪೀಡಿಸುತ್ತಾನೆಂದರೆ ಇನ್ನು ಸುರೇಶ್ ಕುಮಾರ್ ಯಾಕಿರಬೇಕು?

ಕಾಮಾಕ್ಷಿಪಾಳ್ಯದ ಬಿಜೆಪಿ ಗೂಂಡಾ ಅನಿಲ್ ರಂಗಣ್ಣ


ಅನಿಲ್ ರಂಗಣ್ಣ

ಮುಂಬರುವ ಪಾಲಿಕೆ ಚುನಾವಣೆಯಲ್ಲಿ ಬಿಜೆಪಿ ಯಾವ ಮಟ್ಟದಲ್ಲಿ ಗೂಂಡಾಪಡೆಗಳನ್ನು ಬಳಸಬಹುದೆಂಬುದಕ್ಕೆ ಇದು ಮುನ್ಸೂಚನೆಯಷ್ಟೇ.

ಚುನಾವಣೆಗೆ ಮೊದಲೇ ಲೋಕಲ್ ರೌಡಿ ಗ್ಯಾಂಗ್‌ಗಳನ್ನು ಬಿಟ್ಟು ಎದುರು ಪಕ್ಷದ ಕಾರ್ಯಕರ್ತರನ್ನು ಬಗ್ಗುಬಡಿಯುವ ಬಿಜೆಪಿ ದುರ್ಬುದ್ಧಿಗೆ ಹೇಗೆ ಆಯಾ ಪೊಲೀಸ್ ಠಾಣೆಗಳ ಇನ್ಸ್‌ಪೆಕ್ಟರ್‌ಗಳನ್ನು ಬಳಸಿಕೊಳ್ಳಲಾಗುತ್ತಿದೆ ಎಂಬುದಕ್ಕೂ ಈ ಘಟನೆಯೇ ಪುರಾವೆಯಂತಿದೆ.

ಮೊನ್ನೆ ಅಂದರೆ 2009 ರ ನವೆಂಬರ್ 12 ರ ರಾತ್ರಿ ಕಾಮಾಕ್ಷಿಪಾಳ್ಯದ ಸಮಾಜಸೇವಕ, ಪತ್ರಕರ್ತ ಮತ್ತು ಸ್ಥಳೀಯ ಜೆಡಿಎಸ್ ಕಾರ್ಯಕರ್ತ ಜೈಕುಮಾರ್ ಗೌಡರ ಮೇಲೆ ಬಿಜೆಪಿ ಪುಂಡ ಗುಂಪೊಂದು ಏಕಾಏಕಿ ದಾಳಿ ನಡೆಸಿದೆ. ಹೀಗೆ ಯಾವುದೇ ಕಾರಣವಿಲ್ಲದೇ ಜೈಕುಮಾರ್ ಗೌಡರ ಕಾರನ್ನು ಅಡ್ಡಗಟ್ಟಿ ಅಟ್ಯಾಕ್ ಮಾಡಿದ ಬಿಜೆಪಿ ಪುಂಡರ ಗ್ಯಾಂಗಿನ ನೇತೃತ್ವ ವಹಿಸಿದ್ದು ಇದೇ ಕಾಮಾಕ್ಷಿಪಾಳ್ಯದ ಮಾಜಿ ಬಿಜೆಪಿ ಕೌನ್ಸಿಲರ್ ರಂಗಣ್ಣನ ಮಗ ಅನಿಲ್ ರಂಗಣ್ಣ ಎಂಬ ಹಳೇ ರೌಡಿ.


ಜೈಕುಮಾರ್ ಗೌಡ

ಈತನ ವಿರುದ್ಧ ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣೆಯಲ್ಲಿ ಪತ್ರಕರ್ತರೊಬ್ಬರ ಹತ್ಯೆಗೆ ಯತ್ನಿಸಿದ ಕೇಸಿದೆ ಮಾಜಿ ಬಿಜೆಪಿ ಕೌನ್ಸಿಲರ್ ರಂಗಣ್ಣನ ಮಗನಾದರೂ ಈತ ಮಹಾಲಕ್ಷ್ಮಿ ಲೇಔಟನ ಬಿಜೆಪಿ ಕ್ರಿಮಿನಲ್ ನಾಯಿ ಹರೀಶ ಎಂಬಾತನ ಶಿಷ್ಯ. ಸುತ್ತಮುತ್ತಲ ಕುರುಬರಹಳ್ಳಿ, ಶಂಕರಮಠ, ಬಸವೇಶ್ವರನಗರ, ದಾಸರಹಳ್ಳಿ, ಹೌಸಿಂಗ್ ಬೋರ್ಡ್, ಮಾಗಡಿ ರಸ್ತೆ, ಕಮಲಾನಗರ ಏರಿಯಾಗಳಲ್ಲಿ ಬಿಜೆಪಿ ಸಂಬಂಧಿ ಏನೇ ಗಲಾಟೆಗಳಾದರೂ ಅಲ್ಲಿ ಅನಿಲ್ ರಂಗಣ್ಣನ ರೌಡಿ ಪಡೆಯೇ ಹೂಂಕರಿಸುತ್ತಿರುತ್ತದೆ. ಇಂಥಾ ಅನಿಲ್ ರಂಗಣ್ಣನ ರೌಡಿ ಪಡೆ ಏಕಾಏಕಿ, ಜೆಡಿಎಸ್ ನಾಯಕ ಮತ್ತು ಪತ್ರಕರ್ತ ಜೈಕುಮಾರ್ ಗೌಡರನ್ನು ನಡುರಸ್ತೆಯಲ್ಲಿ ಅಟ್ಯಾಕ್ ಮಾಡುವುದಕ್ಕೂ ಕಾರಣವಿದೆ.


ಅದು ಮುಂಬರುವ ಪಾಲಿಕೆ ಚುನಾವಣೆ. ರಾಜಾಜಿನಗರ ವಿಧಾನಸಭಾ ಕ್ಷೇತ್ರಕ್ಕೊಳಪಡುವ ಕಾಮಾಕ್ಷಿಪಾಳ್ಯ ವಾರ್ಡನ್ನು ಈತನಕ ಪ್ರತಿನಿಧಿಸುತ್ತಿದ್ದ ಮಾಜಿ ಬಿಜೆಪಿ ಕೌನ್ಸಿಲರ್ ರಂಗಣ್ಣನಿಗೆ ನಿನ್ನೆಮೊನ್ನೆಯ ತನಕ ಎದುರಾಳಿಗಳಿರಲಿಲ್ಲ. ಆದರೆ ಇತ್ತೀಚೆಗೆ ಜೈಕುಮಾರ್ ಗೌಡ ಅಖಾಡಕ್ಕಿಳಿದು ಏರಿಯಾದಲ್ಲಿ ದಿನಕ್ಕೊಂದು ಕಾರ್ಯಕ್ರಮ, ಪಾದಯಾತ್ರೆ, ಮತದಾರರ ನೋಂದಾವಣಿ ಇತ್ಯಾದಿಗೆ ಕೈಹಾಕಿದ್ದೇ ಬಿಜೆಪಿಗಳ ಕಣ್ಣು ಕೆಂಪಾಯಿತು.

ಜೈಕುಮಾರ್ ಗೌಡ ಸ್ಥಳೀಯ 'ವಾರ ಪತ್ರಿಕೆ' ಸಂಪಾದಕ. ಜೊತೆಗೆ ಕನ್ನಡ ಚಳವಳಿಯಲ್ಲೂ ಪಳಗಿದ ಕೈ. ಮಾಗಡಿ ಶಾಸಕ ಬಾಲಕೃಷ್ಣರ ಪರಮಾಪ್ತ ಕೂಡ. ಈ ಹೊತ್ತಿಗಾಗಲೇ ಬೇರೆ ಬೇರೆ ಏರಿಯಾದ ಪೋರ್ಕಿ ಹುಡುಗರನ್ನೆಲ್ಲ ಕಾಮಾಕ್ಷಿಪಾಳ್ಯಕ್ಕೆ ಕರೆಸಿ, ಅಂಥವರ ಫೋಟೋ ತೆಗೆಸಿ ಯಾರ್‍ಯಾರದೋ ಮನೆಯ ಅಡ್ರೆಸ್ ಕೊಟ್ಟು ಮತದಾರರ ಪಟ್ಟಿಗೆ ಸೇರಿಸುವ ಕಾರಸ್ತಾನ ನಡೆಸುತ್ತಿದ್ದ ರಂಗಣ್ಣನಿಗೆ ಜೈಕುಮಾರ್ ಗೌಡರ ಪಾದಯಾತ್ರೆಯಿಂದಾಗಿ ಇರುಸುಮುರುಸು ಶುರುವಾಗಿದೆ. ಸಾಲದ್ದಕ್ಕೆ ರಂಗಣ್ಣ ಸೃಷ್ಟಿಸಿದ ನಕಲಿ ಮತದಾರರನ್ನು ಪತ್ತೆಹಚ್ಚಿ ಅಂಥವರ ವಿರುದ್ಧ ಅಧಿಕಾರಿಗಳಿಗೆ ಅರ್ಜಿ ಕೊಡುವುದೇ ಜೈಕುಮಾರ್ ಗೌಡರ ಕೆಲಸವಾಯ್ತು.

ಹಕೀಕತ್ತೆಂದರೆ ರಂಗಣ್ಣನ ಮನೆ ಹಿಂದೆಯೇ ಗೌಡರ ಮನೆಯಿದೆ. ಪ್ರತಿನಿತ್ಯ ಜೈಕುಮಾರ್ ಗೌಡ ತಮ್ಮ ಮನೆಗೆ ಬರಬೇಕೆಂದರೆ ರಂಗಣ್ಣನ ಕೃಷ್ಣಾ ಕಲ್ಯಾಣ ಮಂಟಪದ ಎದುರೇ ಬರಬೇಕು. ಲೈಸೆನ್ಸು, ಪರವಾನಗಿ ಯಾವುದೂ ಇಲ್ಲದ ಕೃಷ್ಣಾ ಕಲ್ಯಾಣ ಮಂಟಪದಲ್ಲೇ ಮಗ ಅನಿಲ್ ರಂಗಣ್ಣನ ರೌಡಿ ಗ್ಯಾಂಗ್ ಅಡ್ಡೆ ಹಾಕುತ್ತದೆ. ಬೆಂಗಳೂರಿನ ಬೇರೆ ಬೇರೆ ಭಾಗದಿಂದ ಪ್ರತಿನಿತ್ಯ ಬಂದು ಕಾಮಾಕ್ಷಿಪಾಳ್ಯದಲ್ಲಿ ಅಡ್ಡೆ ಹಾಕುವ ಪುಡಿ ರೌಡಿಗಳೆಲ್ಲ ರಂಗಣ್ಣನ ಮನೆಗೇ ಹೊಂದಿಕೊಂಡಂತಿರುವ ಲೋಕಲ್ ಬಿಜೆಪಿ ಕಾರ್ಯಾಲಯದಲ್ಲಿ ಜಮಾಯಿಸುತ್ತಾರೆ.

ಹೆಸರಿಗಷ್ಟೇ ಅದು ಬಿಜೆಪಿ ಆಫೀಸಾದರೂ ಅದರೊಳಗೆ ನಡೆಯುವುದು ಮಗ ಅನಿಲ್ ರಂಗಣ್ಣನ ಮೀಟರ್ ಬಡ್ಡಿ ವಸೂಲಿ ದಂಧೆ. ಯಾರ್‍ಯಾರು ಬಡ್ಡಿ ಕಟ್ಟಿಲ್ಲವೋ ಅಂಥವರನ್ನು ಎಳೆತಂದು ಇದೇ ಬಿಜೆಪಿ ಆಫೀಸಿನಲ್ಲಿ ಹಾಕಿ ಬಡಿಯುತ್ತದೆ ಅನಿಲ್ ರಂಗಣ್ಣನ ಗ್ಯಾಂಗ್. ಬೆಳ್ಳಂಬೆಳಿಗ್ಗೆಯೇ ಕೇಸುಗಟ್ಟಲೇ ಬಿಯರ್, ವಿಸ್ಕಿ ತರಿಸಿ ಬಿಜೆಪಿ ಕಾರ್ಯಾಲಯದಲ್ಲೇ ಕೂತು ಕುಡಿಯುವ ಬಿಜೆಪಿ ಪುಂಡರಿಂದಾಗಿ ಕೃಷ್ಣಾ ಕಲ್ಯಾಣ ಮಂಟಪದ ಸುತ್ತ ಹೆಣ್ಣು ಮಕ್ಕಳ್ಯಾರೂ ಓಡಾಡುವಂತಿಲ್ಲ. ಇದನ್ನೆಲ್ಲ ಗಮನಿಸಿದ ಜೈಕುಮಾರ್ ಗೌಡ ಇಲ್ಲಿಗೆ ತಿಂಗಳ ಹಿಂದೆಯೇ ಕಾಮಾಕ್ಷಿಪಾಳ್ಯ ಪೊಲೀಸರಿಗೆ ದೂರು ಕೊಟ್ಟರು. ಪುಂಡರ ಹಾವಳಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸುತ್ತಲೇ ಬಂದರು.

ಆದರೆ ಪೊಲೀಸರು ಮಾತ್ರ ಕೃಷ್ಣಾ ಕಲ್ಯಾಣ ಮಂಟಪದತ್ತ ತಲೆ ಹಾಕಿಲ್ಲ. ಅದು ಕಾಮಾಕ್ಷಿಪಾಳ್ಯದ ಇನ್ಸ್‌ಪೆಕ್ಟರ್ ರಾಮಚಂದ್ರಪ್ಪನ ಬಿಜೆಪಿ ನಿಷ್ಠೆ. ಹೀಗೆ ಅನಿಲ್ ರಂಗಣ್ಣನ ಪುಂಡಾಟಿಕೆ ವಿರುದ್ಧ ದೂರು ಕೊಟ್ಟ ಒಂದೇ ವಾರಕ್ಕೆ ತಮ್ಮ ಮನೆ ಮುಂದೆ ನಿಲ್ಲಿಸಿದ್ದ ಜೈಕುಮಾರ್ ಗೌಡರ ಕಾರನ್ನು ಅನಿಲ್ ರಂಗಣ್ಣನ ಗ್ಯಾಂಗ್ ಚಿಂದಿಯೆಬ್ಬಿಸಿದೆ. ಆಗಲೂ ಅನಿಲ್ ರಂಗಣ್ಣನ ವಿರುದ್ಧ ಗೌಡ ದೂರು ಕೊಟ್ಟಿದ್ದಾರೆ. ಇನ್ಸ್‌ಪೆಕ್ಟರ್ ರಾಮಚಂದ್ರಪ್ಪ 'ನೀನೇನು ಕಣ್ಣಿಂದ ನೋಡಿದ್ಯಾ' ಎಂದು ದಬಾಯಿಸಿದ್ದೇ ಯಾರ್‍ಯಾರದೋ ಹೆಸರಿಗೆ ಎಫ್‌ಐಆರ್ ದಾಖಲಿಸಿಬಿಟ್ಟ.


ರಂಗಣ್ಣ

ಬಿಜೆಪಿ ಗ್ಯಾಂಗಿನ ಇಂಥ ಪುಂಡಾಟಿಕೆಯ ಮುಂದುವರಿಕೆಯೇ ನವೆಂಬರ್ 12 ರ ರಾತ್ರಿ ಅಟ್ಯಾಕ್. ಅವತ್ತು ರಾತ್ರಿ 10 ರ ಹೊತ್ತಿಗೆ ಜೈಕುಮಾರ್ ಗೌಡ ಇನ್ನೇನು ತಮ್ಮ ಮನೆಯತ್ತ ಕಾರು ತಿರುಗಿಸಬೇಕು. ಅಷ್ಟರಲ್ಲೇ ಕೃಷ್ಣಾ ಚೌಲ್ಟ್ರಿ ಮುಂದಿದ್ದ ಅನಿಲ್ ರಂಗಣ್ಣನ ಗ್ಯಾಂಗ್ ಅಡ್ಡಗಟ್ಟಿದೆ. 'ಏನೋ, ನನ್ಮೇಲೇ ಪೊಲೀಸ್ ಕಂಪ್ಲೇಂಟ್ ಕೊಡ್ತೀಯಾ?' ಎಂದವನೇ ಜೈಕುಮಾರ್ ಗೌಡರನ್ನು ಕಾರಿನಿಂದೆಳೆದು ನೆಲಕ್ಕೆ ಹಾಕಿ ತುಳಿದಿದ್ದಾನೆ. ಏಕಾಏಕಿ ಹತ್ತಕ್ಕೂ ಹೆಚ್ಚು ಮಂದಿಯಿದ್ದ ಪುಂಡರ ಗ್ಯಾಂಗ್ ನಡೆಸಿದ ದಾಳಿಯಲ್ಲಿ ಗೌಡರ ಕತ್ತಿನಲ್ಲಿದ್ದ ಚಿನ್ನದ ಚೈನು ನಾಪತ್ತೆಯಾಗಿದೆ. ಪುಂಡರಿಂದ ಬಿಡಿಸಿಕೊಂಡಿದ್ದೇ ಪೊಲೀಸ್ ಠಾಣೆಗೆ ಧಾವಿಸಿ ಬಂದ ಗೌಡರು ಅನಿಲ್ ರಂಗಣ್ಣನ ವಿರುದ್ಧ ದೂರು ಕೊಟ್ಟರೆ ಇನ್ಸ್‌ಪೆಕ್ಟರ್ ರಾಮಚಂದ್ರಪ್ಪ ಅನಿಲ್ ರಂಗಣ್ಣನನ್ನು ಕರೆಸಿದ್ದೇ 'ಯಾಕಯ್ಯಾ ತರ್‍ಲೆ ಮಾಡ್ತೀಯಾ? ಸುಮ್ನೇ ರಾಜಿ ಮಾಡ್ಕಂಡು ಬಿಡು.' ಎಂದು ಗೌಡರನ್ನೇ ದಬಾಯಿಸಿದ.

"ಒದೆ ತಿಂದದ್ದು ನಾನು. ಹೊಡೆದದ್ದು ಅವ್ರು. ಪೊಲೀಸ್ ಠಾಣೆಗೆ ಬಂದು ದೂರು ಕೊಟ್ಟ ತಪ್ಪಿಗೆ ರಾಜಿಯಾಗಬೇಕಾ?" ಎಂದದ್ದೇ ಗೌಡ ಎಫ್‌ಐಆರ್ ಹಾಕುವಂತೆ ಒತ್ತಾಯಿಸಿದ್ದಾರೆ. ಅನಿಲ್ ರಂಗಣ್ಣನ ವಿರುದ್ಧ ಕೇಸು ದಾಖಲಿಸುವ ಮಾತಿರಲಿ ಇನ್ಸ್‌ಪೆಕ್ಟರ್ ರಾಮಚಂದ್ರಪ್ಪ ಎಂಥಾ ಖತರ್‌ನಾಕ್ ಕ್ರಮ ಜರುಗಿಸಿದ್ದಾರೆಂದರೆ, ದೂರು ಕೊಟ್ಟ ಜೈಕುಮಾರ್ ಗೌಡರೇ ಅನಿಲ್ ರಂಗಣ್ಣನ ಮೇಲೆ ಹಲ್ಲೆ ನಡೆಸಿ ಕೊಲೆ ಬೆದರಿಕೆ ಹಾಕಿದ್ದಾರೆಂದು ಎಫ್‌ಐಆರ್ ಹಾಕಿಬಿಟ್ಟ!

ವಾರ್ಡ್ ವಾರ್ 1 BBMP

ಅಲ್ಲಿಗೆ ತಲೆ ಚಚ್ಚಿಕೊಂಡು ಠಾಣೆಯಿಂದ ಹೊರಬಿದ್ದ ಗೌಡ ಮೇಲಧಿಕಾರಿಗಳಿಗೆ ದೂರು ಕೊಟ್ಟಿದ್ದೇ ಕೊಟ್ಟಿದ್ದು. ನಯಾಪೈಸೆಯ ಪ್ರಯೋಜನವಾಗಿಲ್ಲ. ರೌಡಿಗಳ ವಿರುದ್ಧ ದೂರು ಕೊಡಲು ಹೋಗಿ ತನ್ನ ವಿರುದ್ಧವೇ ಕ್ರಿಮಿನಲ್ ಕೇಸು ದಾಖಲಿಸಿಕೊಂಡ ಜೈಕುಮಾರ್ ಗೌಡ ಸದ್ಯ ಕೋರ್ಟಿನಿಂದ ಜಾಮೀನು ಪಡೆಯದೇ ಮನೆಗೆ ಹೋಗುವಂತಿಲ್ಲ. ಮನೆ ಮುಂದೆ ಪೊಲೀಸರು ಠಳಾಯಿಸುತ್ತಿದ್ದಾರೆ. ಧರಣಿ-ಪ್ರತಿಭಟನೆ ನಡೆಸುತ್ತೇನೆಂದರೆ ಅದಕ್ಕೂ ಪೊಲೀಸರ ಪರ್ಮಿಷನ್ ಬೇಕು.

ಹೇಗಿದೆ ಬಿಜೆಪಿ ಐಡಿಯಾ? ಪಾಲಿಕೆ ಎಲೆಕ್ಷನ್ನಿಗೆ ಮೊದಲೇ ಈ ಗತಿಯಾದರೆ ಇನ್ನು ಚುನಾವಣೆ ಹೊತ್ತಿಗೆ ಏನು ಗತಿ?

● ರಾ. ಸೋಮನಾಥ್

ಆರೆಸ್ಸೆಸ್ ಮುಖ್ಯಸ್ಥ ಭಾಗವತ್ ಸಭೆಗೆ ಬಾಡಿಗೆಜನ

ನಿಜಕ್ಕೂ ಆರೆಸ್ಸೆಸ್‌ನವರಿಗೆ ಇಂತಹ ದುರ್ಗತಿ ಬರಬಾರದಿತ್ತು.

ಮೊನ್ನೆ ನವೆಂಬರ್ 22ರಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ನ್ಯಾಷನಲ್ ಲೀಡರ್ ಮೋಹನ ಭಾಗವತ್ ಬೆಂಗಳೂರಿನಲ್ಲಿ ಬಂದು ಬಹಿರಂಗ ಸಭೆ ನಡೆಸಿ ಹೋಗಿದ್ದಾರೆ. ಅವತ್ತು ಅರಮನೆ ಮೈದಾನದಲ್ಲಿ ಐದು ಸಾವಿರ ಜನ ಇದ್ದರು ಎಂದು ಪೊಲೀಸರು ಹಾಗೂ ಮೀಡಿಯಾಗಳು ವರದಿ ಮಾಡಿವೆ. ಆದರೂ ಸಂಘಪರಿವಾರಿಗಳು ಹದಿನೈದು ಸಾವಿರ ಜನ ಬಂದಿದ್ದರು ಎನ್ನುತ್ತಿದ್ದಾರೆ. ಇಲ್ಲಿ ಹೇಳಬೇಕಾದ ವಿಷಯ ಅದಲ್ಲ, ಬದಲಾಗಿ ಆ ಸಭೆಯಲ್ಲಿ ಭಾಗವಹಿಸಿದ್ದ ಖಾಕಿ ಆರೆಸ್ಸೆಸ್ ಕಾರ್ಯಕರ್ತರ ಪೈಕಿ ಮುಕ್ಕಾಲು ಪಾಲು ಬಾಡಿಗೆ ಜನರಾಗಿದ್ದರು ಎಂಬುದೇ ಸ್ವಾರಸ್ಯಕರ ಸಂಗತಿ.



ಬಹುಶಃ ನಿಮಗೂ ನೆನಪಿರಬಹುದು. ಈಗ್ಗೆ ಎರಡು ತಿಂಗಳ ಹಿಂದೆ ಆರೆಸ್ಸೆಸ್‌ನವರು ಒಂದು ಹೇಳಿಕೆ ನೀಡಿ ನವೆಂಬರ್ 22ರ ರ್‍ಯಾಲಿಗೆ ಒಂದು ಲಕ್ಷ ಗಣವೇಷಧಾರಿ ಕಾರ್ಯಕರ್ತರನ್ನು ಸೇರಿಸುವುದಾಗಿಯೂ, ಬೆಂಗಳೂರು ನಾಗರಿಕರಿಂದ ಎರಡು ಲಕ್ಷ ಹೋಳಿಗೆ ರೆಡಿ ಮಾಡಿಸುವುದಾಗಿಯೂ ಹಾಗೂ 10 ಲಕ್ಷ ಮನೆಗಳಿಗೆ ಕರಪತ್ರ ಹಂಚುವುದಾಗಿಯೂ ಹೇಳಿಕೊಂಡಿದ್ದರು. ಆದರೆ ಅವರು ನಿರೀಕ್ಷಿಸಿದಷ್ಟು ಕಾರ್ಯಕ್ರಮ ಯಶಸ್ವಿ ಆಗಲೇ ಇಲ್ಲ. ಮೋಹನ್ ಭಾಗವತ್ ಸಭೆಗೆ ಜನವೇ ಬಾರದಿದ್ದರೆ ಮರ್ಯಾದೆ ಹೋಗುತ್ತಲ್ಲಾ ಎಂದು ಅಳುಕಿದ ಬೆಂಗಳೂರಿನ ಆರೆಸ್ಸೆಸ್ ಪುಡಿ ಲೀಡರ್‌ಗಳು ಕೊನೆಗಳಿಗೆಯಲ್ಲಿ ಒಂದು ಉಪಾಯ ಹುಡುಕಿದ್ದಾರೆ.




ಅದರಂತೆ ಸಿಟಿಯ ಬಿಜೆಪಿ ಶಾಸಕರು ಹಾಗೂ ಮಾಜಿ ಕಾರ್ಪೊರೇಟರ್‌ಗಳ ಮೂಲಕ ಮಾಮೂಲಿ ಬಿಜೆಪಿ ಕಾರ್ಯಕರ್ತರಿಗೆ ಆರೆಸ್ಸೆಸ್ ಚೆಡ್ಡಿ, ಕಾಲಿಗೆ ಶೂಸ್, ಕೈಗೆ ಲಾಠಿ ಕೊಡಿಸಿ ಒಂದು ದಿನದ ಮಟ್ಟಿಗೆ ರ್‍ಯಾಲಿಗೆಂದು ತುಂಬಿಸಿಕೊಂಡು ಹೋಗಿದ್ದಾರೆ. ಇದಕ್ಕೆ ಸಾರಿಗೆ ಸಚಿವ ಅಶೋಕನಿಗೆ ಹೇಳಿಸಿ ನೂರಾರು ಬಿಎಂಟಿಸಿ ಬಸ್‌ಗಳನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ. ಜೆ.ಪಿ.ನಗರ ಏರಿಯಾಗೆ 8 ಬಸ್, ಯಶವಂತಪುರದಿಂದ 10, ಪೀಣ್ಯಗೆ 10, ಜಯನಗರ,ಬನಶಂಕರಿಗೆ 10, ವಿಜಯನಗರದಿಂದ 10... ಹೀಗೆ ನೂರಾರು ಬಿಎಂಟಿಸಿ ಬಸ್‌ಗಳನ್ನು ಕಳುಹಿಸಿ ಕೈಗೆ ಸಿಕ್ಕ ಹುಡುಗರಿಗೆ ಖಾಕಿ ಚೆಡ್ಡಿ ಹಾಕಿಸಿ ಭಾಗವತರ ಮಾನ ಉಳಿಸುವ ಸರ್ಕಸ್ ಮಾಡಲಾಗಿದೆ. ಈ ಹುಡುಗರಿಗೆ ಆರೆಸ್ಸೆಸ್‌ನ ನಮಸ್ತೆ ಸದಾ ವತ್ಸಲೆ ಹಾಡಾಗಲಿ, ಅವರ ಫ್ಯಾಸಿಸ್ಟ್ ಸೆಲ್ಯೂಟ್ ಆಗಲಿ, ಕೊನೆಗೆ ಕದಂ ತಾಲ್ ಡ್ರಿಲ್-ಲಾಠಿ ತಿರುಗಿಸುವ ಶೈಲಿ ಒಂದೂ ಗೊತ್ತಿರಲಿಲ್ಲ. ಹಾಗಾಗಿ ಬೆಂಗಳೂರಿನ ಬೀದಿಗಳಲ್ಲಿ ನಡೆಯಬೇಕಿದ್ದ ಪಥಸಂಚಲನವೂ ರದ್ದಾಯಿತು. ಕೊನೆಗೆ ಅರಮನೆ ಮೈದಾನದಲ್ಲಿ ನಡೆದ ಡ್ರಿಲ್‌ನಲ್ಲಿ ಪಳಗಿದ ಆರೆಸ್ಸೆಸ್‌ಗಳನ್ನು ಮುಂದಿನ ಸಾಲುಗಳಲ್ಲಿ ನಿಲ್ಲಿಸಿ ಬಾಡಿಗೆ ಕಾರ್ಯಕರ್ತರನ್ನು ಹಿಂದಿನ ಸಾಲುಗಳಿಗೆ ತಳ್ಳಿ ಮರ್ಯಾದೆ ಉಳಿಸಿಕೊಳ್ಳುವ ಸರ್ಕಸ್ಸು ನಡೆದಿದೆ. ತಮಾಷೆ ಏನೆಂದರೆ ಈ ಬಾಡಿಗೆ ಆರೆಸ್ಸೆಸ್ ಕಾರ್ಯಕರ್ತರಿಗೆ ಮೋಹನ ಭಾಗವತ ಯಾರು? ಆರೆಸ್ಸೆಸ್ ಅಂದರೇನು ಎಂಬುದರ ತಲೆಬುಡವೇ ಗೊತ್ತಿರಲಿಲ್ಲ. ಹಾಗಾಗಿ ಅವರೆಲ್ಲಾ ಮಧ್ಯಾಹ್ನ 2 ಗಂಟೆಗೆ ಅರಮನೆ ಮೈದಾನಕ್ಕೆ ಹೋದವರು ಸಂಜೆ ನಾಲ್ಕು ಗಂಟೆಗೆಲ್ಲಾ ತಮ್ಮ ಏರಿಯಾಗಳಿಗೆ ವಾಪಸ್ ಬಂದುಬಿಟ್ಟಿದ್ದರು. ಜೆಪಿ ನಗರದ ಬಾಡಿಗೆ ಆರೆಸ್ಸೆಸ್ ಒಬ್ಬ ಗೆಳೆಯನೊಂದಿಗೆ ಈ ಅನುಭವ ಹಂಚಿಕೊಳ್ಳುತ್ತಾ

"ನಾನು ಚಿಕ್ಕ ಹುಡುಗ ಆಗಿದ್ದಾಗಲೂ ಪ್ಯಾಂಟ್ ಹಾಕಿಕೊಳ್ಳುತ್ತಿದೆ. ಈ ......ಕ್ಕಳ ಸಾವಾಸ ಮಾಡಿ ಈಗ ಖಾಕಿ ಚೆಡ್ಡಿ ಹಾಕೋ ಹಂಗಾಯ್ತು ಗುರೂ...." ಎಂದನಂತೆ. ●

ಸುನೀಲನ ಪ್ರಾಣ ಯಾರ ಕೈಯಲ್ಲಿ?


ಸೈಲೆಂಟಾದಷ್ಟೂ ಸುದ್ದಿಯಾಗುವವನು ಅಂತಿದ್ದರೆ ಆತ ಸುನೀಲ್ ಮಾತ್ರ-

ಆತನ ಎನ್‌ಕೌಂಟರ್ ನಡೆದೇಹೋಯಿತೆಂದು ಒಂದು ಚಾನಲ್ ಬಾಯಿ ಬಡಕೊಂಡರೆ, ತಕ್ಷಣವೇ ಮತ್ತೊಂದು ಚಾನಲ್ಲಿನಲ್ಲಿ ಸಿಸಿಬಿ ಪೊಲೀಸರಿಗೆ ಆತ ತಮಿಳುನಾಡಿನಲ್ಲಿ ಸೆರೆಸಿಕ್ಕನೆಂಬ ವಾರ್ತೆ ಬರುತ್ತದೆ. ಮಗದೊಂದು ಪತ್ರಿಕೆ ಸುನೀಲನ ಕೊಲೆ ನಡೆದೇಹೋಯ್ತೆಂದೂ ಇನ್ನೊಂದು ಪತ್ರಿಕೆಯಲ್ಲಿ ಆತನ ಮೇಲೆ ವಿರೋಧಿ ಗ್ಯಾಂಗ್ ಗುಂಡು ಹಾರಿಸಿತೆಂದೂ ಸುದ್ದಿ ಮಾತ್ರ ತೇಲಾಡುತ್ತಿದೆಯೇ ಹೊರತು ಸುನೀಲ ಮಾತ್ರ ಇವತ್ತಿಗೂ ಸೈಲೆಂಟೆ!


ವಿಶ್ವನಾಥ್

ಆತ ಎಲ್ಲಿದ್ದಾನೆ, ಏನಾಗಿದ್ದಾನೆ, ಯಾಕೆ ಹೀಗೆ ಚಿತ್ರವಿಚಿತ್ರ ವದಂತಿಗಳನ್ನು ತೇಲಿಬಿಡುತ್ತಾನೆ; ಇತ್ಯಾದಿ ಏನೊಂದೂ ಪೊಲೀಸರಿಗೆ ಅರ್ಥವಾಗುತ್ತಿಲ್ಲ. ಬುಲೆಟ್ ರವಿಯ ಹತ್ಯೆಯಾಗಿ ಇಂದಿಗೆ ಬರೋಬ್ಬರಿ ನಾಲ್ಕು ತಿಂಗಳಾಯಿತು. ಆ ಕೇಸಿನಲ್ಲಿ ಮೊದಲ ಆರೋಪಿಯಾಗಿ ಜೈಲು ಸೇರಿದ ಗೆಡ್ಡಾನಾಗ ಇಲ್ಲಿಗೆ ನಾಲ್ಕು ದಿನಗಳ ಹಿಂದಷ್ಟೇ ಜೈಲಿಂದ ಹೊರಬಿದ್ದನಾದರೂ ಎರಡನೇ ಆರೋಪಿ ಸುನೀಲ ಮಾತ್ರ ಇವತ್ತಿಗೂ ನಾಪತ್ತೆ-

ನಿಜಕ್ಕೂ ಬುಲೆಟ್ ರವಿ ಕೊಲೆ ಕೇಸಿನಲ್ಲಿ ಸುನೀಲನ ಪಾತ್ರವಿತ್ತಾ? ಯಲಹಂಕದ ಶಾಸಕ ವಿಶ್ವನಾಥ್ ಹುಟ್ಟಹಬ್ಬದ ದಿನ ಗೆಡ್ಡಾನಾಗ, ಸುನೀಲ, ಒಂಟೆ, ಯಲಹಂಕದ ಬಿಜೆಪಿ ಮುಖಂಡ ಮತ್ತು ಎಮ್ಮೆಲ್ಲೇ ವಿಶ್ವನಾಥ್ ಚೇಲಾ ಅಳ್ಳಾಳಸಂದ್ರದ ಸೀಖ್ರಿ ಅಲಿಯಾಸ್ ಸೋಮಶೇಖರ್ ಮುಂತಾದವರೆಲ್ಲ ಸೇರಿಕೊಂಡು ಬುಲೆಟ್ ರವಿಯ ಹತ್ಯೆಗೆ ಸುಪಾರಿ ಪಡೆದದ್ದು ನಿಜವಾ? ಬದುಕಿದ್ದರೆ ಮುಂದೊಮ್ಮೆ ತನಗೇ ಎದುರಾಳಿಯಾಗುತ್ತಾನೆಂಬ ಭೀತಿಗೆ ಬಿದ್ದ ಯಲಹಂಕದ ಶಾಸಕ ವಿಶ್ವನಾಥ್ ಸುನೀಲನಿಗೆ ಸುಪಾರಿ ಕೊಟ್ಟು ರವಿಯನ್ನು ಮುಗಿಸಿದನಾ? ಇತ್ಯಾದಿ ಪ್ರಶ್ನೆಗಳಿಗೆಲ್ಲ ಉತ್ತರ ಸಿಗಬೇಕೆಂದರೆ ಮೊದಲು ಸುನೀಲ ಸಿಗಬೇಕು.


ಬುಲೆಟ್ ರವಿ

ಹಾಗೊಮ್ಮೆ ಆತ ಪೊಲೀಸರಿಗೆ ಸಿಕ್ಕರೂ ಕೂಡ ಯಲಹಂಕ ಶಾಸಕ ವಿಶ್ವನಾಥ್ ಹೆಸರೆಲ್ಲಿ ಬಾಯಿಬಿಡುತ್ತಾನೆ? ಬಹುಶಃ ತಾನೇನಾದರೂ ಎಮ್ಮೆಲ್ಲೇ ವಿಶ್ವನಾಥ್ ಹೆಸರನ್ನು ಹೇಳಿಬಿಡುತ್ತೇನೆಂದು ಅಂತಾ ಕ್ಷಣವೇ ಪೊಲೀಸರು ತನ್ನ ಎನ್‌ಕೌಂಟರ್ ಮಾಡಿಯಾರೆಂಬ ಭೀತಿ ಆತನನ್ನು ಕಾಡುತ್ತಿದೆಯೆ? ಪೊಲೀಸರನ್ನು ಛೂಬಿಟ್ಟು ತನ್ನನ್ನು ಯಲಹಂಕ ಎಮ್ಮೆಲ್ಲೇ ವಿಶ್ವನಾಥ್ ಮುಗಿಸಬಹುದೆಂಬ ಭೀತಿಗೆ ಬಿದ್ದೇ ಸುನೀಲ ದಿನಕ್ಕೊಂದು ಜಾಗ ಬದಲಾಯಿಸುತ್ತಿದ್ದಾನಾ? ಸದ್ಯ ತಮಿಳುನಾಡಿನಿಂದ ಕೇರಳಕ್ಕೆ, ಕೇರಳದಿಂದ ತಮಿಳುನಾಡಿಗೆ ಅಂತರಪಿಶಾಚಿಯಂತೆ ಓಡಾಡುತ್ತಿರುವ ಸೈಲೆಂಟ್ ಸುನೀಲನಿಗೆ ಪೊಲೀಸರಿಗಿಂತಲೂ ತನ್ನ ವಿರೋಧಿ ಗ್ಯಾಂಗಿನ ಭೀತಿಯೇ ವಿಪರೀತವಾಗಿದೆಯಾ?

ಇಲ್ಲದಿದ್ದರೆ ಯಾರಾದರೂ ಅಧಿಕಾರಿಯೊಬ್ಬರ ಮೂಲಕ ಈ ಹೊತ್ತಿಗಾಗಲೇ ಸಿಸಿಬಿ ಪೊಲೀಸರಿಗೆ ಸರೆಂಡರ್ ಆಗಿಬಿಡುತ್ತಿದ್ದ ಸುನೀಲನ ಹುನ್ನಾರ ಮಾತ್ರ ಯಾರಿಗೂ ಅರ್ಥವಾಗುತ್ತಿಲ್ಲ.

ಕಳೆದ ನಾಲ್ಕು ತಿಂಗಳಿಂದ ಆತನ ಪತ್ತೆಗಾಗಿ ನಿದ್ದೆಗೆಟ್ಟು ಅಲೆಯುತ್ತಿರುವ ಸಿಸಿಬಿಯ ಎಸಿಪಿ ಹಾದಿಮನಿಗೆ ಟೀವಿ ವರದಿಗಾರರ ವಿರುದ್ಧ ಅದೆಂಥಾ ಅಸಹ್ಯ ಹುಟ್ಟಿದೆಯೆಂದರೆ; 'ಅಲ್ರೀ ದಿನಕ್ಕೊಂದು ಬಾರಿಯಾದ್ರೂ ಸುನೀಲನ ಎನ್‌ಕೌಂಟರ್ ಆಯ್ತು ಅಂತ ಸುದ್ದಿ ಮಾಡ್ತರಲ್ಲ; ಇವರಿಗೆ ಕಾಮನ್‌ಸೆನ್ಸ್ ಬೇಡವೇನ್ರೀ... ಒಬ್ಬ ಮನುಷ್ಯನನ್ನು ಎಷ್ಟು ಸಲ ಕೊಲ್ಲೋಕೆ ಸಾಧ್ಯ?' ಎಂದು ಹರಿಹಾಯುತ್ತಾರೆ.


ಹೀಗೆ ಸುನೀಲನ ವಿರುದ್ಧ ದಿನಕ್ಕೊಂದು ಎನ್‌ಕೌಂಟರ್ ಸುದ್ದಿ ತೇಲಿಬಿಟ್ಟರೆ ಕೊನೆಗೊಮ್ಮೆ ಪೊಲೀಸರೇ ರೋಸತ್ತು ಎನ್‌ಕೌಂಟರ್ ವಿಚಾರವನ್ನೇ ಕೈಬಿಡುತ್ತಾರೆಂಬುದು ಸುನೀಲನ ಷಡ್ಯಂತ್ರ. ವಿಚಿತ್ರವೆಂದರೆ ಇಂಥ ವದಂತಿಗಳನ್ನು ಜೈಲೊಳಗಿದ್ದುಕೊಂಡೇ ಟೀವಿ ವರದಿಗಾರರ ಕಿವಿಗೆ ಮುಟ್ಟಿಸುತ್ತಿರುವವನು ಕೊರಂಗು. ಜೈಲಲ್ಲಿ ಯಾರದೋ ಮೊಬೈಲ್‌ನಿಂದ ದಿನಕ್ಕೊಂದು ಸಿಮ್‌ಕಾರ್ಡ್ ಬಳಸಿ ಸುದ್ದಿ ರವಾನಿಸುತ್ತಿರುವ ಕೊರಂಗು ಸದ್ಯ ಸುನೀಲನ ಪ್ರಾಣ ರಕ್ಷಣೆಗೆ ನಿಂತಿದ್ದಾನೆ. ಹಕೀಕತ್ತೇನೆಂದರೆ ಸುನೀಲ ಹೀಗೆ ದಿನಕ್ಕೊಂದು ಊರು ಸುತ್ತುತ್ತಾ ಪೊಲೀಸರಿಗೆ ಸಿಗದೇ ಓಡಾಡಿಕೊಂಡಿರುವುದು ಕೇವಲ ಪೊಲೀಸರು ತನ್ನನ್ನು ಎನ್‌ಕೌಂಟರ್ ಮಾಡಿಬಿಡುತ್ತಾರೆಂಬ ಭೀತಿಯಿಂದಾಗಲಿ, ಯಲಹಂಕ ಶಾಸಕ ವಿಶ್ವನಾಥ್ ತನ್ನನ್ನು ಪೊಲೀಸರ ಮೂಲಕ ಕೊಲ್ಲಿಸುತ್ತಾರೆಂಬ ಆತಂಕದಿಂದಾಗಲಿ ಅಲ್ಲವೆಂಬುದು ಪೊಲೀಸರಿಗಷ್ಟೇ ಅಲ್ಲ; ಸ್ವತಃ ಸುನೀಲನ ಸಿಂಡಿಕೇಟಿಗೇ ಚೆನ್ನಾಗಿ ಗೊತ್ತು.

ಅದು ಸೈಕಲ್ ರವಿ ತಂದಿಟ್ಟ ಆಪತ್ತು. ಸುನೀಲನನ್ನು ಮುಗಿಸದೇ ತಾನು ಪೊಲೀಸರಿಗೆ ಸರೆಂಡರ್ ಆಗೋದಿಲ್ಲ ಎಂದು ಮಹಾನ್ ಪಾತಕಿ ಸೈಕಲ್ ರವಿ ಶಪಥಗೈದಿದ್ದಾನೆಂಬುದು ಒಂದು ಸುದ್ದಿ. ಇನ್ನೊಂದೆಡೆ ಮುಲಾಮನ ಹುಡುಗರಾದ ರಾಮು-ಲಕ್ಷ್ಮಣರ ತಂಡ ಸುನೀಲನಿಗಾಗೇ ರೌಂಡಿಂಗ್ ಶುರು ಹಚ್ಚಿಕೊಂಡಿದೆಯೆಂಬುದು ಇನ್ನೊಂದು ಸುದ್ದಿ. ಜೊತೆಗೆ ಗಾಯಿತ್ರಿನಗರದ ಬ್ರೇಕ್ ಜಗ್ಗಿಯ ಶಿಷ್ಯ ತಿಮ್ಮ ಅಲಿಯಾಸ್ ಕಪ್ಪೆರಾಯನ ಪಡೆ ಹಗಲಿರುಳೆನ್ನದೇ ಸುನೀಲನ ಬೇಟೆಗೆ ನಿಂತಿದೆಯೆಂಬುದು ಮಗದೊಂದು ವದಂತಿ. ಇಷ್ಟೇ ಅಲ್ಲದೇ ಕಲಾಸಿಪಾಳ್ಯದ ರಾಮಣ್ಣ ಗಾರ್ಡನ್ನಿನ ರುದ್ರ ಎಂಬ ರೌಡಿ ಕೂಡ ಸುನೀಲನ ವಿರೋಧಿ ಸಿಂಡಿಕೇಟಿನಲ್ಲಿ ಆಕ್ಟೀವ್ ಆಗಿಬಿಟ್ಟಿದ್ದಾನೆ.

ಸುನೀಲನ ರಕ್ತಕ್ಕಾಗಿ ಹಪಹಪಿಸುವ ಇಂಥ ಹಂತಕ ಪಡೆಗಳ ಪೈಕಿ ಕೇಳಿಬರುತ್ತಿರುವ ಮತ್ತೂ ಒಂದು ಹೆಸರೆಂದರೆ ಆತ ಮಚ್ಚನ ಬಂಟ ಪೆದ್ದಗುಂಡ!

ಸುನೀಲನ ಸಮ್ಮುಖದಲ್ಲೇ ಕತ್ರಿಗುಪ್ಪೆ ಲಿಂಗನ ಗ್ಯಾಂಗು ಪೆದ್ದಗುಂಡನನ್ನು ಹಿಡಿದು ಬಡಿದಿತ್ತಲ್ಲ; ಅದಕ್ಕೆ ಪ್ರತೀಕಾರ ಹೇಳಲು ಪೆದ್ದಗುಂಡನ ಗ್ಯಾಂಗ್ ಕೂಡ ಫೀಲ್ಡಿಗಿಳಿದಿದೆಯೆಂಬುದು ಇನ್ನೊಂದು ರೂಮರ್.

ಹೀಗೆ ಸುನೀಲನ ವಿರುದ್ಧ ರೌಂಡಿಂಗ್ ನಡೆಸುತ್ತಿರುವ ಥರೇವಾರಿ ತಂಡಗಳ ಮಧ್ಯೆ ನೆಂಟಸ್ತಿಕೆಯೇನಿಲ್ಲ, ಪ್ರತಿಯೊಂದು ಗ್ಯಾಂಗಿಗೂ ಅವರವರದೇ ಆದ ಕಾರಣ ಮತ್ತು ಜಿದ್ದಿದೆ. ಬಹುಶಃ ಸೈಕಲ್ ರವಿಗೂ ಮುಲಾಮನಿಗೂ ಒಳಸಂಬಂಧಗಳಿರಬಹುದು. ಅಥವಾ ಯಶವಂತಪುರದ ವೆಂಕಿ ಮತ್ತು ರಾಬರಿ ಗಿರಿಯಂಥವರನ್ನು ಫೀಡ್ ಮಾಡಿ ಸುನೀಲನ ಶಿಕಾರಿಗಿಳಿಸಿದ ಸೈಕಲ್ ರವಿಯೇ ಮತ್ತೊಂದೆಡೆಯಿಂದ ಬಳ್ಳನಂಥ ಖತರ್‌ನಾಕ್ ಬ್ಯಾಟ್ಸ್‌ಮನ್‌ನನ್ನೂ ಛೂ ಬಿಟ್ಟಿರಲೂಬಹುದು.



ಒಬ್ಬ ಸುನೀಲನ ಬೇಟೆಗಾಗಿ ಬೆಂಗಳೂರಿನ ಅಸಂಖ್ಯಾತ ರೌಡಿ ಗ್ಯಾಂಗುಗಳೆಲ್ಲ ಒಟ್ಟೊಟ್ಟಿಗೇ ಅಖಾಡಕ್ಕಿಳಿದು ಬಿಟ್ಟರೆ ಅದರ ಕೇಂದ್ರ ಬಿಂದು ಸುನೀಲನ ಮನಸ್ಥಿತಿ ಏನಾಗಬೇಡ? ಸದ್ಯ ಸುನೀಲ ಭೂಗತನಾಗಿರುವುದು ತನ್ನ ವಿರೋಧಿಗಳ ರಕ್ತದಾಹಕ್ಕೇ ಮತ್ತು ಒಳನಂಟಿನ ಕಾರಣಕ್ಕೇ ಹೊರತು ಪೊಲೀಸರ ಭೀತಿಯಿಂದಲ್ಲ. ಹಾಗಿದ್ದರೆ ತಾನೇ ಬಂದು ಯಾರಾದರೂ ಪೊಲೀಸ್ ಅಧಿಕಾರಿಯೆದುರು ನಿಂತುಬಿಡುತ್ತಿದ್ದ. ಕನಿಷ್ಠ ಆತನ ಗಾಡ್‌ಫಾದರ್ ಮಾಹಿನ್ ಮನಸ್ಸು ಮಾಡಿದ್ದರೆ ಎರಡೇ ಕ್ಷಣದಲ್ಲಿ ಸರೆಂಡರ್ ಮಾಡಿಸುತ್ತಿದ್ದ.

ಆದರೆ ಸುನೀಲನ ಆಪತ್ತು ಆತನ ವಿರೋಧಿಗಳ ಕಾರಸ್ಥಾನದಲ್ಲೇ ಹೆಪ್ಪುಗಟ್ಟಿದೆ. ಒಮ್ಮೆ ಸಿಸಿಬಿ ಪೊಲೀಸರ ಕೈಗೆ ಸಿಲುಕಿ ಜೈಲು, ಕೋರ್ಟು ಅಂತಾಗಿಬಿಟ್ಟರೆ ಯಾವ ಕ್ಷಣದಲ್ಲಾದರೂ ಶತ್ರುಗಳ ಅಟ್ಯಾಕ್ ಸಂಭವಿಸಿಬಿಡಬಹುದು. ಕನಿಷ್ಠ ತನ್ನ ವಿರೋಧಿಗಳಿಂದ ಬಚಾವಾಗುವುದಕ್ಕಾದರೂ ಪೊಲೀಸರ ಕೈಗೆ ಸಿಗದಂತೆ ಓಡಾಡಬೇಕಾದ ದರ್ದು ಸುನೀಲನದು. ಹಾಗಂತ ಸಿಸಿಬಿ ಪೊಲೀಸರು ಬಿಡಬೇಕಲ್ಲ, ಒಂದೆಡೆ ಅಶೋಕನ್ ತಂಡ, ಮತ್ತೊಂದೆಡೆ ಇನ್ಸ್‌ಪೆಕ್ಟರ್ ರವಿಪ್ರಕಾಶ್ ಸ್ಕ್ವಾಡು. ಬಾಳೇಗೌಡ, ಮುದುವಿ, ಲೋಕೇಶ್, ನಾಗಣ್ಣ ಗೌಡ ಇತ್ಯಾದಿ ಸಿಸಿಬಿಯ ಎಲ್ಲಾ ಇನ್ಸ್‌ಪೆಕ್ಟರ್‌ಗಳೂ ಒಂದೊಂದು ದಿಕ್ಕಿನಲ್ಲಿ ಸುನೀಲನ ಬೇಟೆಗೆ ನಿಂತುಬಿಟ್ಟರು. ಇಂಥದೊಂದು ಪೊಲೀಸ್ ಜಾಲವನ್ನು ಡೈವರ್ಟ್ ಮಾಡಬೇಕಲ್ಲ, ಅದಕ್ಕೆ ತನ್ನ ಆಪ್ತ ಪಡೆಯನ್ನೇ ಇಬ್ಭಾಗ ಮಾಡಿ ಒಂದಕ್ಕೆ ಒಂಟೆಯನ್ನು ಬಿಟ್ಟ. ಮತ್ತೊಂದರ ಸಾರಥ್ಯ ತಾನೇ ವಹಿಸಿಕೊಂಡ.

ಇತ್ತ ಒಂಟೆ, ವೇಡಿ, ಲಕ್ಕಸಂದ್ರ ವಿಜಿ ಮತ್ತು ಮಾಗಡಿ ರೋಡ್ ಸೆಂಥಿಲ್ ಬೆಂಗಳೂರಿನಲ್ಲಿ ಓಡಾಡಿಕೊಂಡಿದ್ದಂತೆ ಪೊಲೀಸರನ್ನು ಯಾಮಾರಿಸುವುದು ಮತ್ತೊಂದೆಡೆ ತನ್ನ ಹಾರ್ಡ್‌ಕೋರ್ ಶಿಷ್ಯರಾದ ಪೀಸಿ ವಿಜಿ, ಅನಾಲಿ, ಪೀಟಿ ಸಂತೋಷ, ಯಲಹಂಕ ಮಂಜ ಮುಂತಾದವರ ಜೊತೆ ತಮಿಳುನಾಡು, ಕೇರಳಗಳಲ್ಲಿ ತಲೆ ಮರೆಸಿಕೊಂಡಿರುವುದು ಸುನೀಲನ ಹುನ್ನಾರವಾಗಿತ್ತು.

ಲೆಕ್ಕಾಚಾರದಂತೆಯೇ ಆಗಿದೆ: ಒಂಟೆ ಇದ್ದಲ್ಲಿ ಸುನೀಲ ಇದ್ದೇ ಇರುತ್ತಾನೆಂದು ಬಲೆಬೀಸಿದ ಸಿಸಿಬಿ ಪೊಲೀಸರಿಗೆ ಒಂಟೆ, ವೇಡಿ, ಲಕ್ಕಸಂದ್ರ ವಿಜಿ ಮತ್ತು ಸೆಂಥಿಲ್ ಸಿಕ್ಕಿಬಿದ್ದಿದ್ದಾರೆ.

ಅಲ್ಲಿಗೆ ಪೊಲೀಸರ ಸಿಟ್ಟೂ ಅರ್ಧಕ್ಕರ್ಧ ಕಮ್ಮಿಯಾದಂತಾಯ್ತು ಮತ್ತು ಸುನೀಲನಿಗೂ ಉಸಿರಾಡಲು ಅವಕಾಶವಾಯ್ತು. ಮಿಕ್ಕಂತೆ ಕೇರಳ-ತಮಿಳುನಾಡುಗಳ ನಿರ್ಜನ ಫಾರ್ಮ್ ಹೌಸುಗಳು, ಒಂಟಿ ಮನೆಗಳಲ್ಲಿ ದಿನಕ್ಕೊಂದು ಜಾಗ ಬದಲಾಯಿಸುವ ಸುನೀಲನನ್ನು ನಿದ್ದೆಗೆಟ್ಟು ಹಿಂಬಾಲಿಸುವಷ್ಟು ವ್ಯವಧಾನ ತಾನೇ ಯಾವ ಅಧಿಕಾರಿಗಿದೆ?

ಈ ಮಧ್ಯೆಯೇ ಬುಲೆಟ್ ರವಿ ಕೊಲೆ ಕೇಸಲ್ಲಿ ಜೈಲು ಪಾಲಾಗಿದ್ದ ಗೆಡ್ಡಾನಾಗ ಬೇರೆ ಜಾಮೀನು ಪಡೆದು ಹೊರಬಿದ್ದಿದ್ದಾನೆಂದರೆ, ಬೆಂಗಳೂರಿಗೆ ಏನು ಅನಾಹುತ ಕಾದಿದೆಯೋ ಬಲ್ಲವರ್ಯಾರು?

• ರಾ. ಸೋಮನಾಥ್

ದೇವರಾಜ್: ರಕ್ಕಸ ರಾಜ್ಯದ 'ಮನುಷ್ಯ'


ಊರೊಂದರ ಪಾಪಕ್ಕೆ ಮರುಗಿದಾತನಲ್ಲದೇ ಇನ್ಯಾರು ತಲೆದಂಡ ತೆರಬೇಕು?

ಜಯ ಕರ್ನಾಟಕ ಸಂಘಟನೆಯ ಸುಂಕೇನಹಳ್ಳಿ ಘಟಕದ ಅಧ್ಯಕ್ಷ ಎಲ್. ದೇವರಾಜ್ ಕೊಲೆಯಾದ ಪರಿಣಾದಲ್ಲೇ ಮೇಲ್ಕಂಡ ಪ್ರಶ್ನೆಗೆ ಉತ್ತರವಡಗಿದೆ. ಬಸವನಗುಡಿಯ ಕಡ್ಲೇಕಾಯಿ ಪರಿಷೆಗೆ ಬರುವ ಹೆಣ್ಣುಮಕ್ಕಳ ಮಾನ ಕಾಯಲು ಹೋಗಿ ತನ್ನ ಪ್ರಾಣವನ್ನೇ ಬಲಿಕೊಟ್ಟ ಆತ ರಕ್ಕಸ ರಾಜ್ಯದ ಮನುಷ್ಯ ಮಾತ್ರ.

ಆದರ್ಶದ ಸಣ್ಣ ಕಳಕಳಿ ಕೂಡ ಬೆಂಗಳೂರಿನಂಥ ನಗರದಲ್ಲಿ ಹೇಗೆ ಪ್ರಾಣಕ್ಕೆ ಕುತ್ತಾಗಿ ಬಿಡುತ್ತದೆ ಎಂಬುದಕ್ಕೆ ದೇವರಾಜ್ ನಿದರ್ಶನವಾಗುತ್ತಾನೆ. ಕೈತುಂಬಾ ಸಂಬಳವಿತ್ತು, ಬಸವನಗುಡಿಯ ಬುಲ್‌ಟೆಂಪಲ್ ಎದುರಿನ ಸುಂಕೇನಹಳ್ಳಿ ಆತನ ಹುಟ್ಟೂರು. ಸ್ವಂತ ಮನೆಯಿದೆ. ಪಿನೇಕಲ್ [illegible] ಬಿಲ್ಡರ್ಸ್ ಕಂಪೆನಿಯ ಧಣಿ [illegible] ಅತನೆಂದರೆ ಅಚ್ಚುಮೆಚ್ಚು. ಯಾವುದಕ್ಕೂ [illegible] ದೇವರಾಜ್‌ಗೆ ಅದೇನು ಸಾಮಾಜಿಕ [illegible]-

ಶಾಲಾಮಕ್ಕಳಿಗೆ ಪುಸ್ತಕ ಹಂಚುವುದು, ಗಣೇಶೋತ್ಸವ, ರಾಜ್ಯೋತ್ಸವಗಳ ಮೂಲಕ ಶುರುವಾದ ಆತನ ಕಾಳಜಿ ಕೊನೆಗೆ ಬಂದುನಿಂತದ್ದು ಜಯ ಕರ್ನಾಟಕಕ್ಕೆ. ತಾನೇ ನಿಂತು ತನ್ನೆಲ್ಲಾ ಸ್ನೇಹಿತರನ್ನೂ ಸೇರಿಸಿ ಜಯಕರ್ನಾಟಕ ಸಂಘಟನೆಯ ಸುಂಕೇನಹಳ್ಳಿ ಘಟಕದ ಅಧ್ಯಕ್ಷನಾದ ದೇವರಾಜ್ ಬಸವನಗುಡಿಯ ಬುಲ್ ಟೆಂಪಲ್ ಎದುರಿದ್ದ ಅಶ್ವತ್ಥ ಕಟ್ಟೆಯ ಜಾಗವನ್ನು ನೆಲಗಳ್ಳರಿಂದ ರಕ್ಷಿಸಿಕೊಟ್ಟ. ತಾನೇ ಭೂಗಳ್ಳರ ವಿರುದ್ಧ ಹೋರಾಡಿ ಉಳಿಸಿದ ಸ್ಥಳ ಕೊನೆಗೆ ತನ್ನ ಪ್ರಾಣಕ್ಕೇ ಕುತ್ತಾದೀತೆಂಬ ಲೆಕ್ಕಾಚಾರ ತಾನೇ ಆತನಿಗೆಲ್ಲಿತ್ತು?

ಮೊನ್ನೆ ಅಂದರೆ ನವೆಂಬರ್ 17 ರಂದು ಬಸವನಗುಡಿಯ ಕಡ್ಲೇಕಾಯಿ ಪರಿಷೆಯುತ್ತಲ್ಲ, ಸಹಜವಾಗೇ ದೇವರಾಜ್ ಮತ್ತಾತನ ಸ್ನೇಹಿತರು ಪರಿಷೆಗೆ ಬರುವವರ ಸೇವೆಗೆ ನಿಂತರು. ಹೀಗೆ ಪರಿಷೆಗೆ ಬರುವ ಹೆಣ್ಣುಮಕ್ಕಳನ್ನು ಪೀಡಿಸಲೆಂದೇ ಸುತ್ತಮುತ್ತಲ ಏರಿಯಾದ ಪೋಕರಿಗಳೆಲ್ಲ ಬಸವನಗುಡಿ ಸುತ್ತ ಜಮಾಯಿಸುತ್ತಾರೆ. ಅಂಥದೊಂದು ಕೀಚಕಪಡೆಗೆ ಇದೇ ಸುಂಕೇನಹಳ್ಳಿಯ ಚೇತನ್ ಮತ್ತು ಗುಟ್ಟಹಳ್ಳಿಯ ಸೀಮೆಎಣ್ಣೆ ಎಂಬಿಬ್ಬರು ಪೋರ್ಕಿಗಳೇ ಲೀಡರುಗಳು.



ನವೆಂಬರ್ ಹದಿನೇಳರ ಸಂಜೆ ಪರಿಷೆಗೆ ಬಂದ ಹೆಣ್ಣುಮಕ್ಕಳನ್ನು ಅವಮಾನುಷವಾಗಿ ಪೀಡಿಸುತ್ತಿದ್ದ ಪೋಕರಿಗಳನ್ನು ಕಂಡಿದ್ದೇ ಅಲ್ಲಿದ್ದ ಕೆಲ ಕಾರ್ಯಕರ್ತರು ರೊಚ್ಚಿಗೆದ್ದಿದ್ದಾರೆ. ಚುಡಾಯಿಸುತ್ತಿದ್ದವರನ್ನು ಹಿಡಿದು ಬಡಿದಿದ್ದಾರೆ. ಹೀಗೆ ಒದೆ ತಿಂದು ಹೋದ ಪೋಕರಿಗಳು ತಕ್ಷಣವೇ ಗ್ಯಾಂಗ್ ಕಟ್ಟಿಕೊಂಡು ತಮ್ಮನ್ನು ಒದ್ದೋಡಿಸಿದವರ ಮೇಲೆ ಹಲ್ಲೆಗೆ ಯತ್ನಿಸಿದರೆ ಅಲ್ಲಿದ್ದ ದೇವರಾಜ್ ನುಗ್ಗಿ ಬಂದಿದ್ದೇ ಪೋಕರಿಗಳಿಗೆರಡು ಬಾರಿಸಿದ್ದಾರೆ.

ಹೀಗೆ ಒಂದಲ್ಲ ಎರಡು ಬಾರಿ ಒದೆ ತಿಂದು ಹೋದ ಪೋಲಿ ಪಟಾಲಂ ಮರುದಿನ ಅಂದರೆ ನವೆಂಬರ್ 18 ರಂದು ಎಂಥಾ ಮಾರಕ ದಾಳಿ ನಡೆಸಿತೆಂದರೆ ಬಂದುಬಂದಿದ್ದೇ ಅಶ್ವತ್ಥಕಟ್ಟೆಯ ಬಳಿ ಜನಜಂಗುಳಿ ನಿಯಂತ್ರಿಸುತ್ತಿದ್ದ ದೇವರಾಜ್ ಬೆನ್ನಿಗೆ ಲಾಂಗ್‌ನಿಂದ ಹೊಡೆಯಿತು. ಪರಿಷೆಗೆ ಬಂದ ಜನ ಜಂಗುಳಿಯ ಮಧ್ಯೆ ಇಂಥದೊಂದು ದಾಳಿಯ ನಿರೀಕ್ಷೆಯೇ ಇರದ ದೇವರಾಜ್ ರನ್ನು ಪೋರ್ಕಿ ಗ್ಯಾಂಗ್ ಇರಿದಿರಿದು ಕೊಲ್ಲುತ್ತಿದ್ದರೆ ಜನ ದಿಕ್ಕಾಪಾಲಾಗಿ ಹೋದರು.

ಗಾಯಗೊಂಡು ನರಳುತ್ತಿದ್ದ ದೇವರಾಜ್ ರನ್ನು ತಕ್ಷಣವೇ ಕೆಂಪೇಗೌಡ ಆಸ್ಪತ್ರೆಗೆ ಸಾಗಿಸಿದರಾದರೂ ಕಾಲ ಮಿಂಚಿತ್ತು.

ಚೇತನ್, ಸೀಮೆಎಣ್ಣೆ ರಜಿತ್, ಶರತ್, ಅರುಣ್, ಮಂಜಲು ಮುಂತಾದ ಗುಟ್ಟಳ್ಳಿ, ಚಾಮರಾಜಪೇಟೆಯ ಪೋಕರಿಗಳ ಹಿಂಡು ಅನ್ಯಾಯವಾಗಿ ದೇವರಾಜ್‌ರನ್ನು ಕೊಂದು ಹಾಕಿತ್ತು. ಸದ್ಯ ಹನುಮಂತ ನಗರದ ಪೊಲೀಸ್ ಇನ್ಸ್‌ಪೆಕ್ಟರ್ ಶಾಮಣ್ಣ ಕೂಡ ಮಾಮೂಲಿ ಪೊಲೀಸ್ ಅಧಿಕಾರಿಯಲ್ಲ. ಅಂಥವರಿದ್ದೂ ಕೀಚಕ ಪಡೆಗೆ ಶಿಕ್ಷೆಯಾಗದೇ ಹೋದರೆ ಹೆಣ್ಣುಮಕ್ಕಳನ್ನು ಯಾವ ಮುಖ ಹೊತ್ತು ರಕ್ಷಿಸಲೇಬೇಕು?


ತನ್ನ ಆದರ್ಶಕ್ಕಾಗೇ ಬಲಿಯಾದ ದೇವರಾಜ್ ಬೆಂಗಳೂರಿನ ಎಲ್ಲಾ 'ಮನುಷ್ಯರ' ಪ್ರತಿನಿಧಿಯಾಗುತ್ತಾನೆ.


•

ಗುಲ್ಬರ್ಗಾ: ಜೆಡಿಎಸ್ ಸಹಕರಿಸಿದರೆ ಕಾಂಗ್ರೆಸ್ ಗೆಲುವು ಗ್ಯಾರಂಟಿ!

MLC ಚುನಾವಣೆ

ಗುಲಬರ್ಗಾ ಜಿಲ್ಲೆಯಿಂದ ವಿಧಾನ ಪರಿಷತ್‌ಗೆ ನಡೆಯುವ ಚುನಾವಣೆಯ ದಿನಾಂಕ ಹತ್ತಿರವಾಗುತ್ತಿರುವಂತೆ ರಾಜಕೀಯ ಪಕ್ಷಗಳ ಕಾರ್ಯಕರ್ತರು ಹಾಗೂ ಪುಢಾರಿಗಳಲ್ಲಿ ಹೊಸ ಸಂಚಲನ ಉಂಟಾಗಿದೆ. ಆದರೆ ಗಣಿಗಳ್ಳರ ಗದ್ದಲದಿಂದ ನಲುಗಿಹೋಗಿದ್ದ ಬಜೆಪಿಯ ಕಾರ್ಯಕರ್ತರು ಗೊಂದಲದಲ್ಲಿದ್ದಾರೆ. ಆಡಳಿತಾರೂಢ ಪಕ್ಷದ ಪುಢಾರಿಗಳಲ್ಲಿ ಹಾಗು ತಳಮಟ್ಟದ ಕಾರ್ಯಕರ್ತರಲ್ಲಿ ಇರಬೇಕಾದ ಹುಮ್ಮಸ್ಸು ಮತ್ತು ಆತ್ಮವಿಶ್ವಾಸದ ಕೊರತೆಯಿಂದ ಬಜೆಪಿ ಜರ್ಝರಿತಗೊಂಡಿದೆ. ಇದೆಲ್ಲ ಈ ವಿಧಾನ ಪರಿಷತ್ ಚುನಾವಣೆಯ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ಹೇಳಲಿಕ್ಕಾಗುವುದಿಲ್ಲ.



ಅಲ್ಲಮಪ್ರಭು ಪಾಟೀಲ್




ಇದಲ್ಲದೆ ಜನಾರ್ದನ ರೆಡ್ಡಿ ಪಾಳೆಯದಲ್ಲಿ ಸಂಪೂರ್ಣವಾಗಿ ತನ್ನನ್ನು ಗುರುತಿಸಿಕೊಂಡ ಸುರಪುರದ ಶಾಸಕ ರಾಜೂ ಗೌಡನ ಮತಕ್ಷೇತ್ರವಾದ ತಿಂಥಣಿಗೆ ತೀರಾ ಇತ್ತೀಚೆಗೆ ಭೇಟಿಕೊಟ್ಟ ಯಡ್ಡಿ ತನ್ನ ಪಕ್ಷದ ಶಾಸಕನಿಗೂ ತಾನು ಬರುವ ಮಾಹಿತಿಯನ್ನು ಅಧಿಕೃತವಾಗಿ ಹೇಳಿರಲೇ ಇಲ್ಲ. ಈ ಸಂಗತಿಯನ್ನು ಜನಾರ್ಧನ ರೆಡ್ಡಿಯ ಗಮನಕ್ಕೆ ತರುವುದಾಗಿ ಹೇಳಿರುವ ಶಾಸಕ ರಾಜೂಗೌಡ ಈಗ ಮುನಿಸಿಕೊಂಡಿದ್ದಾನೆ. ಇದೆಲ್ಲ ಈ ಸಂದರ್ಭದಲ್ಲಿ ಯಾಕೆ ಪ್ರಮುಖವಾಗುತ್ತದೆಂದರೆ ಜಿಲ್ಲಾ ಪಂಚಾಯತಿ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆಯ ಸಂದರ್ಭದಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದ ರಾಜೂಗೌಡ ಮನಸ್ಸು ಮಾಡಿದರೆ ಬಜೆಪಿಯ ವಿಧಾನ ಪರಿಷತ್ ಅಭ್ಯರ್ಥಿಯನ್ನು ತೇಲಿಸಲೂ ಬಲ್ಲ, ಮುಳುಗಿಸಲೂ ಬಲ್ಲ.

ಆದರೆ ಬಜೆಪಿ ಆಡಳಿತಾರೂಢ ಪಕ್ಷವಾದ್ದರಿಂದ ಹೇಗಾದರೂ ಸೈ ತಾನು ವಿಧಾನ ಪರಿಷತ್ ಕುರ್ಚಿ ಏರಬೇಕೆಂಬ ಜಿದ್ದಾಜಿದ್ದಿ ಬಜೆಪಿಯಲ್ಲಿ ಈಗ ಉಂಟಾಗಿದೆ. ಇದರ ಮುಂಚೂಣಿಯಲ್ಲಿ ಇರುವವರೆಂದರೆ ಬಜೆಪಿ ಜಿಲ್ಲಾಧ್ಯಕ್ಷ ಅಮರನಾಥ ಪಾಟೀಲ, ಅಫಜಲಪುರದ ಮಾಜಿ ಶಾಸಕ ಎಂ.ವೈ. ಪಾಟೀಲ, ಸೇಡಂನ ಮಾಜಿ ಶಾಸಕ ಚಂದ್ರಶೇಖರ ರೆಡ್ಡಿ ಮದನಾ ದೇಶಮುಖ, ಕೋಲಿ ಸಮಾಜದ ಮುಖಂಡ ವಿಠ್ಠಲ್ ಹೇರೂರ, ಯಾದಗಿರಿಯ ಮಾಜಿ ಶಾಸಕ ವೀರಬಸವಂತರೆಡ್ಡಿ ಮುದ್ನಾಳ, ಸುರಪುರದ ಮಾಜಿ ಜಿಪಂ ಉಪಾಧ್ಯಕ್ಷ ಸುರೇಶ ಸಜ್ಜನ್, ಕುರುಬ ಸಮಾಜದ ಮುಖಂಡ ಶಿವಣ್ಣ ಮಂಗ್ಯಾಳ, ಡಾ.ಮಲ್ಲಣ್ಣಗೌಡ ಉಕ್ಕನಾಳ ಮುಂತಾದವರು. ಇವರೆಲ್ಲ ಅಖಾಡಕ್ಕೆ ಇಳಿಯಲು ಸಜ್ಜಾಗಿ ಕುಳಿತಿದ್ದಾರೆ. ಆದರೆ 9-10 ಜನ ಆಕಾಂಕ್ಷಿಗಳಿರುವುದು ಬಜೆಪಿಗೆ ಮುಳುವಾಗಲಿದೆ. ರಾಜೂಗೌಡ ಯಡ್ಡಿಯ ಮೇಲಿನ ಮುನಿಸಿನಿಂದ 'ಆಟ' ಆಡಿಬಿಟ್ಟರಂತೂ ಬಜೆಪಿ ಕತೆ ಗೋವಿಂದಾ...

ಕಾಂಗ್ರೆಸ್ ಕತೆ ಇದಕ್ಕಿಂತ ಭಿನ್ನವಾಗಿಲ್ಲ. ಒಂದು ಕಾಲದಲ್ಲಿ ಇಡೀ ಜಿಲ್ಲೆಯ ರಾಜಕೀಯವನ್ನು ತಮ್ಮ ಕಿರುಬೆರಳಿನ ಸಂಜ್ಞೆಯ ಮೂಲಕ ನಿಯಂತ್ರಿಸುತ್ತಿದ್ದ ಧರ್ಮ ಸಿಂಗ್ ಹಾಗೂ ಮಲ್ಲಿಕಾರ್ಜುನ ಖರ್ಗೆಯ ರಾಜಕೀಯ ಪ್ರಭಾವಳಿ ಇಂದು ಇಲ್ಲಿ ಅಷ್ಟಾಗಿ ಕಾಣುತ್ತಿಲ್ಲ. ಏಕೆಂದರೆ ಚಿತ್ತಾಪುರದಲ್ಲಿ ಖರ್ಗೆ ತನ್ನ ಕುಲಪುತ್ರ ಪ್ರಿಯಾಂಕನನ್ನು ನಿಲ್ಲಿಸಿ ಹೈರಾಣಾಗಿ ಬಸವಳಿದಿದ್ದಾರೆ. ಇನ್ನು ಸ್ವತಃ ಧರ್ಮಸಿಂಗ್ ಇಷ್ಟು ವರ್ಷಗಳವರೆಗೆ ಪ್ರತಿನಿಧಿಸುತ್ತಿದ್ದ ಜೇವರ್ಗಿ ಮತಕ್ಷೇತ್ರದಿಂದಲೇ ಗೇಟ್‌ಪಾಸ್ ಪಡೆದುಕೊಂಡಿದ್ದಾರೆ. ಇದರಿಂದ ಕಾಂಗ್ರೆ ಪಕ್ಷಕ್ಕೆ ಹಿನ್ನಡೆಯಾಗಿದೆ. ಕಳೆದ ಸಲ ಗೆದ್ದಿದ್ದ ಅಮಾತೆಪ್ಪ ಕಂದಕೂರ ಎಂಬ ಕಾಂಗ್ರೆ ಪಕ್ಷದ ಅಭ್ಯರ್ಥಿಗೆ ಮತ್ತೆ ಗೆಲುವು ಸಿಗಬೇಕೆಂದರೆ ಸ್ವಲ್ಪ ಕಷ್ಟಪಡಲೇಬೇಕು. ಕಂದಕೂರ ಬದಲು ಕಾಂಗ್ರೆಸ್‌ನ ಜಿಲ್ಲಾಧ್ಯಕ್ಷ ಅಲ್ಲಮಪ್ರಭು ಪಾಟೀಲ ತನ್ನ ವ್ಯಕ್ತಿಗತ ವರ್ಚಸ್ಸು ಬಳಸಿಕೊಂಡು ವಿಧಾನ ಪರಿಷತ್ ಗಾದಿಯ ಮೇಲೆ ಕೂಡಬೇಕೆಂಬ ಬಯಕೆ ಹೊಂದಿದ್ದಾನೆ. ಹಿಂದೊಂದು ಸಲ ಜಿಲ್ಲಾ ಪಂಚಾಯತಿ ಅಧ್ಯಕ್ಷನಾಗಿ ಜಿಲ್ಲೆಯಾದ್ಯಂತ ತನ್ನ ಕೆಲಸಗಳ ಮೂಲಕ ಹೆಸರು ಮಾಡಿದ, ಎಂದಿನ ತನ್ನ ಸಂಪನ್ನ ನಡವಳಿಕೆಗಳ ಮೂಲಕ ಜನಸಾಮಾನ್ಯರ ಗಮನ ಸೆಳೆದಿರುವ ಪಾಟೀಲ ಸಚ್ಚಾರಿತ್ರ್ಯವಂತ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ. ಜೊತೆಗೆ ಖರ್ಗೆ ಮತ್ತು ಧರ್ಮ ಸಿಂಗ್ ಆದಿಯಾಗಿ ಹಿರಿ-ಕಿರಿಯರೆಲ್ಲರ ಬೆಂಬಲವೂ ಇದೆ. ಆದ್ದರಿಂದ ಅಲ್ಲಮಪ್ರಭು ಪಾಟೀಲ ಅವರೇ ಪಕ್ಷದ ಅಧಿಕೃತ ಅಭ್ಯರ್ಥಿಯಾಗುವ ಅವಕಾಶಗಳಿವೆ. ಅದಾಗ್ಯೂ ಇವರ ಓಟಕ್ಕೆ ಬ್ರೇಕ್ ಹಾಕಲು ಸಿದ್ಧರಾಮಯ್ಯ ಪಾಳೆಯದಲ್ಲಿ ತನ್ನನ್ನು ಗುರುತಿಸಿಕೊಂಡಿದ್ದ ಆಳಂದದ ಮಾಜಿ ಶಾಸಕ ಬಿ.ಆರ್.ಪಾಟೀಲ ತಾವೂ ಒಂದು ಕೈ ನೋಡಬಾರದ್ಯಾಕೆ ಎಂದು ಸಜ್ಜಾಗಿ ನಿಂತಿದ್ದಾರೆ.


ಸುರೇಶ್ ಸಜ್ಜನ್


ಬಿ.ಆರ್.ಪಾಟೀಲ್

ಗುಲಬರ್ಗಾ ಜಿಲ್ಲೆಯಿಂದ ಜೆಡಿಎಸ್ ಪಕ್ಷಕ್ಕೆ ತನ್ನದೇ ಬಲ ಒದಗಿಸಿದ್ದ ಜನತಾಪರಿವಾರದ ನಾಯಕರೆಲ್ಲ ಇದೀಗ ಛಿದ್ರಛಿದ್ರವಾಗಿದ್ದಾರೆ. ಕೆಲವರು ಕಾಂಗ್ರೆನ ಪಾಳೆಯಕ್ಕೆ ಜಿಗಿದಿದ್ದರೆ, ಇನ್ನು ಹಲವರು ಚೆಡ್ಡಿ ತೊಟ್ಟುಕೊಂಡು ಕವಾಯತು ಆರಂಭಿಸಿದ್ದಾರೆ. ಜಿಪಂ, ತಾಪಂ ಹಾಗೂ ಟಿಎಂಸಿ ಎಂಬ ಸಂಸ್ಥೆಗಳಿಗೆ ಈ ಮೊದಲು ಜೆಡಿಎಸ್‌ದಿಂದ ಗೆದ್ದುಬಂದಿದ್ದರೂ ಅವರ ನಿಯತ್ತು ಈಗ ಬದಲಾಗಿದೆ. ಆದ್ದರಿಂದ ಇವರೇ ಇಂದು ನಿರ್ಣಾಯಕ ಪಾತ್ರ ವಹಿಸಬಲ್ಲವರಾಗಿದ್ದಾರೆ. ಆದಾಗ್ಯೂ ಜೆಡಿಎಸ್ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಆ ಪಕ್ಷದ ಜಿಲ್ಲಾಧ್ಯಕ್ಷ ಶಂಕ್ರಣ್ಣ ವಣಕಿಹಾಳ ಎಂಬ ಮಾಜಿ ಜಿಪಂ ಉಪಾಧ್ಯಕ್ಷನನ್ನು ಅಭ್ಯರ್ಥಿಯಾಗಿಸಬಹುದು. ಜೆಡಿಎಸ್ ಅಭ್ಯರ್ಥಿ ಹಾಕದಿದ್ದರೆ ಕಾಂಗ್ರೆಸ್ ಮತ್ತೆ ಗೆಲುವು ಸಾಧಿಸಬಹುದು.

● ವಿಶ್ವಾರಾಧ್ಯ ಸತ್ಯಂಪೇಟೆ

ಚಿಕ್ಕಮಗಳೂರು: ಮೊದಲ ಗೆಲುವಿಗೆ ಬಿಜೆಪಿ ಯತ್ನ

MLC ಚುನಾವಣೆ

ಜಿಲ್ಲೆಯ ವಿಧಾನ ಪರಿಷತ್ ಚುನಾವಣೆ ಕಾವಿನಿಂದ ರಂಗೇರತೊಡಗಿದೆ. ಕಾಂಗ್ರೆಸ್, ಬಜೆಪಿ ಮತ್ತು ಜೆಡಿಎಸ್ ಪಕ್ಷಗಳಲ್ಲಿ ಬಿರುಸಿನ ಚಟುವಟಿಕೆಗಳು ನಡೆಯತೊಡಗಿವೆ. ಒಮ್ಮತದ ಅಭ್ಯರ್ಥಿಗಳ ಆಯ್ಕೆಗಾಗಿ ತೆರೆಮರೆಯಲ್ಲಿ ಮುಸುಕಿನ ಗುದ್ದಾಟ ಏರ್ಪಟ್ಟಿದೆ.

ನಾಮಪತ್ರ ಸಲ್ಲಿಕೆಗೆ ಅಂತಿಮ ದಿನ ಸನ್ನಿಹಿತವಾದರೂ ಈವರೆಗೆ ಯಾವ ಪಕ್ಷವೂ ಒಬ್ಬೇ ಒಬ್ಬ ಅಭ್ಯರ್ಥಿಯನ್ನು ಆಯ್ಕೆ ಮಾಡಿಲ್ಲ. ಜೆಡಿಎಸ್ ಹೊರತುಪಡಿಸಿದರೆ ಉಳಿದ ಎರಡು ಪಕ್ಷಗಳಲ್ಲಿ ಕಸರತ್ತು ನಡೆಯುತ್ತಲೇ ಇದೆ. ಅಲ್ಲಿ ಲಾಬಿಯೂ ನಡೆದಿದೆ. ಕುದುರೆ ವ್ಯಾಪಾರಕ್ಕಾಗಿ ಮಣೆಯನ್ನೂ ಹಾಕಲಾಗುತ್ತಿದೆ. ಜೊತೆಗೆ ಈ ಎರಡು ಪಕ್ಷಗಳಲ್ಲಿ ಆಕಾಂಕ್ಷಿಗಳ ಪಟ್ಟಿ ಮಾತ್ರ ಹನುಮಂತನ ಬಾಲದಂತೆ ಬೆಳೆಯತೊಡಗಿದೆ.


ಚಿಕ್ಕಮಗಳೂರಿನ ಮಟ್ಟಿಗೆ ವಿಧಾನ ಪರಿಷತ್ ಸ್ಥಾನದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಪ್ರಾಬಲ್ಯ ಮೆರೆದ ದಾಖಲೆಗಳಿವೆ. ಕಳೆದ ಬಾರಿ ಮಾಜಿ ಸಂಸದ ಡಿ.ಎಂ. ಪುಟ್ಟೇಗೌಡ ಕಾಂಗ್ರೆಸ್ ಪರವಾಗಿ ಗೆಲುವು ದಾಖಲಿಸಿದ್ದರು. ಇದಕ್ಕೂ ಮುನ್ನ ಎರಡು ಬಾರಿ ಜೆಡಿಎಸ್ ತನ್ನ ಪ್ರಾಬಲ್ಯ ತೋರಿಸಿ ಕೆ.ಬಿ. ಮಲ್ಲಿಕಾರ್ಜುನ ಮತ್ತು ಎಂ.ಎನ್. ನಾಗರಾಜ್ ಆಯ್ಕೆಯಾಗಿದ್ದರು. ಈತನಕ ಜಿಲ್ಲೆಯ ವಿಧಾನ ಪರಿಷತ್ ಸ್ಥಾನದಲ್ಲಿ ಬಜೆಪಿ ಭದ್ರಗೊಂಡ ಇತಿಹಾಸವಿಲ್ಲ.

ವಿಧಾನ ಪರಿಷತ್ ಹೊರತುಪಡಿಸಿದರೆ ಉಳಿದ ವಿಭಾಗಗಳಲ್ಲಿ ಬಜೆಪಿ ಗಟ್ಟಿಯಾಗಿಯೇ ಉಳಿದಿದೆ. ಚಿಕ್ಕಮಗಳೂರಿನಿಂದ ಸಿ.ಟಿ. ರವಿ, ಮೂಡಿಗೆರೆಯಿಂದ ಎಂ.ಪಿ. ಕುಮಾರಸ್ವಾಮಿ, ಶೃಂಗೇರಿಯಿಂದ ಡಿ.ಎನ್. ಜೀವರಾಜ್ ಮತ್ತು ತರೀಕೆರೆಯಿಂದ ಡಿ.ಎಸ್. ಸುರೇಶ್ ಎಂಬ ನಾಲ್ವರು ಶಾಸಕರಲ್ಲದೆ ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಿಂದ ಡಿ.ವಿ. ಸದಾನಂದಗೌಡ ಸಂಸದರಾಗಿದ್ದಾರೆ. ಹಾಗೆ ನೋಡಿದರೆ ಕಾಂಗ್ರೆಸ್ ಕಡೂರು ಕ್ಷೇತ್ರವನ್ನು ಮಾತ್ರ ಗೆದ್ದುಕೊಂಡಿದ್ದು ಕೆ.ಬಿ. ಕೃಷ್ಣಮೂರ್ತಿ ಶಾಸಕರಾಗಿದ್ದಾರೆ. ಜೆಡಿಎಸ್‌ನದ್ದು ಶೂನ್ಯ ಸಂಪಾದನೆ.


ಆದರೆ ಸ್ಥಳೀಯ ಸಂಸ್ಥೆಗಳಲ್ಲಿ ಜೆಡಿಎಸ್ ಮತ್ತು ಬಜೆಪಿಗಿಂತ ಕಾಂಗ್ರೆಸ್ ಕಾರ್ಯಕರ್ತರೇ ಬಹುತೇಕ ಕಡೆ ಪ್ರತಿನಿಧಿಗಳಾಗಿದ್ದಾರೆ. ಆದರೂ ಈ ಬಾರಿ ಹಿಂದಿನ ದಿನಗಳಂತೆ ಲೆಕ್ಕಾಚಾರ ಹಾಕುವುದು ಸಾಧ್ಯವಿಲ್ಲ. ಏಕೆಂದರೆ ತರೀಕೆರೆ ಮತ್ತು ಶೃಂಗೇರಿ ತಾಲ್ಲೂಕು ಪಂಚಾಯತಿಗಳಲ್ಲಿ ಬಹಳ ಹಿಂದೆಯೇ ಆಪರೇಷನ್ ಕಮಲ ನಡೆದು ಹಲವರು ಬಜೆಪಿ ಪಾಲಾಗಿದ್ದರು. ಆನಂತರ ಜಿಲ್ಲೆಯಾದ್ಯಂತ ಆಪರೇಷನ್ ಕಮಲದ ಭಾಗವಾಗಿ ಪ್ರತಿನಿಧಿಗಳ ಕುದುರೆ ವ್ಯಾಪಾರ ನಡೆಯಿತಾದರೂ ಅದರಿಂದ ಪ್ರಯೋಜನವಾಗಿರಲಿಲ್ಲ. ಇನ್ನು ಪ್ರಸ್ತುತ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿರುವ ಜನಪ್ರತಿನಿಧಿಗಳಿಗೆ ಬಜೆಪಿಗಳಿಂದ ತಮಗೆ ಅನುಕೂಲಕರ ವಾತಾವರಣ ಸಿಗುವುದಿಲ್ಲ ಎಂಬುದು ಮನದಟ್ಟಾಗಿದೆ. ಹಾಗಾಗಿ ಇವತ್ತು ಕಾಂಗ್ರೆಸ್ ಮತ್ತು ಜೆಡಿಎಸ್‌ಗಳ ಕಡೆಗೆ ಮುಖ ತಿರುಗಿಸಿರುವವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.


ಜಿಲ್ಲಾ ಪಂಚಾಯತಿಯ 34, ನಗರಸಭೆಯ 35, ಏಳು ತಾಲ್ಲೂಕು ಪಂಚಾಯತಿಗಳ 109, ಮೂರು ಪುರಸಭೆಗಳ 69, ನಾಲ್ಕು ಪಟ್ಟಣ ಪಂಚಾಯತಿಗಳ 44, ಇನ್ನೂರ ಇಪ್ಪತ್ತಾರು ಗ್ರಾಮ ಪಂಚಾಯತಿಗಳ 2372 - ಹೀಗೆ ಒಟ್ಟು 2663 ಮಂದಿ ಸ್ಥಳೀಯ ಸಂಸ್ಥೆ ಪ್ರತಿನಿಧಿಗಳ ಮತಗಳ ಮೇಲೆ ವಿಧಾನ ಪರಿಷತ್ತಿಗೆ ಆಯ್ಕೆಯಾಗುವ ಪಕ್ಷದ ಅಭ್ಯರ್ಥಿಯ ಭವಿಷ್ಯ ನಿರ್ಧಾರವಾಗಲಿದೆ.


ಕಾಂಗ್ರೆಸ್ ಪಕ್ಷದಿಂದ ಒಟ್ಟು 12 ಮಂದಿ ಆಕಾಂಕ್ಷಿಗಳಿದ್ದಾರೆ. ಬಿ.ಎಲ್. ರಾಮದಾಸ್, ಕೆ.ಬಿ. ಮಲ್ಲಿಕಾರ್ಜುನ, ಬಿ.ಆರ್. ನೀಲಕಂಠಪ್ಪ, ಎಸ್. ತಿಪ್ಪೇರುದ್ರಯ್ಯ, ಬಿ.ಸಿ. ಗೀತಾ, ಗಾಯಿತ್ರಿ ಶಾಂತೇಗೌಡ, ಟಿ.ಡಿ. ರಾಜೇಗೌಡ, ಕೆ.ಎಂ. ಕೆಂಪರಾಜ್, ಕೆ.ಎಂ. ಮಂಜುನಾಥ್, ಡಾ. ವಿಜಯ್‌ಕುಮಾರ್, ಎಂ.ಎಂ. ಲಕ್ಷ್ಮಣಗೌಡ, ಟಿ.ಎನ್. ಗೋಪಿನಾಥ್, ಬಿ.ಎಸ್. ಜಯರಾಮ್, ಡಾ. ಕುಮಾರ್ - ಇವರೆಲ್ಲರೂ ಒಬ್ಬರಿಗಿಂತ ಒಬ್ಬರು ಬಲಾಢ್ಯರೇ ಸರಿ. ಆದರೆ ಸ್ವಯಂ ವರ್ಚಸ್ಸಿನಿಂದ ಮತಗಳಿಸುವುದರಲ್ಲಿ ಹಿಂದುಳಿದವರಾಗಿದ್ದಾರೆ. ಇವರಲ್ಲಿ ಒಕ್ಕಲಿಗರೇ ಹೆಚ್ಚಿನ ಸಂಖ್ಯೆಯಲ್ಲಿದ್ದು ಲಿಂಗಾಯತನಾದ ಕೆ.ಬಿ. ಮಲ್ಲಿಕಾರ್ಜುನ ಬಜೆಪಿಯತ್ತ ದೃಷ್ಟಿ ಹರಿಸಿದ್ದಾರೆಂಬ ದಟ್ಟ ವದಂತಿ ಹಬ್ಬಿದೆ. ಆದರೆ ಆತ ಅಲ್ಲಿಗೆ ಹೋದರೂ ಕೂಡ ಬಜೆಪಿಯ ಟಿಕೆಟ್ ಸಿಗುವ ಭರವಸೆ ಇಲ್ಲವೇ ಇಲ್ಲ. ಅಂತಿಮವಾಗಿ ಟಿ.ಡಿ. ರಾಜೇಗೌಡ, ವಿಜಯ್‌ಕುಮಾರ್ ಅಥವಾ ಕೆ.ಬಿ. ಮಲ್ಲಿಕಾರ್ಜುನ ಇವರಲ್ಲೊಬ್ಬರು ಆಯ್ಕೆಯಾಗುವುದು ಖಚಿತವಾಗಿದೆ.


ಧರ್ಮೇಗೌಡ


ಎಂ.ಪಿ.


ಪ್ರಾಣೇಶ್


ಕೇಶವ್


ವಿಜಯ್


ಬಜೆಪಿ ಪಾಳಯದಿಂದ ಮಾಕೋನಹಳ್ಳಿಯ ಎಂ.ಕೆ. ಪ್ರಾಣೇಶ್, ಎಂ.ಎಸ್. ಬೋಜೇಗೌಡ, ಕಡೂರಿನ ಮಾಜಿ ಶಾಸಕ ವಿಶ್ವನಾಥ್ ಮತ್ತು ಕೆಂಜಿಗೆ ಕೇಶವ್ ಪಕ್ಷದ ಒಮ್ಮತದ ಅಭ್ಯರ್ಥಿಯಾಗಲು ಕಸರತ್ತು ನಡೆಸಿದ್ದಾರೆ. ಆದರೆ ಸಚಿವ ಕೆ.ಎಸ್. ಈಶ್ವರಪ್ಪನ ತೀರ್ಮಾನವೇ ಅಂತಿಮ ಅನಿಸಿಕೊಂಡಿದ್ದು ಎಂ.ಕೆ. ಪ್ರಾಣೇಶ್ ಆಯ್ಕೆ ಬಹುತೇಕ ಖಚಿತವಾಗಿದೆ. ಆದರೆ ಈ ಮಧ್ಯೆ ಕಾಂಗ್ರೆಸ್‌ನಿಂದ ಕೆ.ಬಿ. ಮಲ್ಲಿಕಾರ್ಜುನನನ್ನು ಬಜೆಪಿಗೆ ಕರೆತಂದು ಆತನಿಗೆ ವಿಧಾನ ಪರಿಷತ್ ಅಭ್ಯರ್ಥಿಯಾಗಿಸುವ ಭರವಸೆಯನ್ನು ಶಾಸಕ ಸಿ.ಟಿ.ರವಿ ನೀಡಿದ್ದಾನೆ. ಹಾಗೊಮ್ಮೆ ರವಿ ಯಶಸ್ವಿಯಾದರೆ ಪಕ್ಷದ ಹಳೆ ಚೆಡ್ಡಿಗಳು ಬಂಡಾಯದ ಬಾವುಟ ಹಾರಿಸಲು ಸಜ್ಜಾಗುತ್ತಾರೆ.

ಉಳಿದಂತೆ ಜೆಡಿಎಸ್‌ನಿಂದ ಎಸ್.ಎಲ್. ಧರ್ಮೇಗೌಡ ಅಭ್ಯರ್ಥಿಯಾಗುವುದು ಗ್ಯಾರಂಟಿಯಾಗಿದೆ. ಕಳೆದ ಬಾರಿ ವಿಧಾನ ಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಎಸ್.ಎಲ್. ಬೋಜೇಗೌಡರಿಗೆ ಜೆಡಿಎಸ್‌ನಿಂದ ಅವಕಾಶ ನೀಡಲಾಗಿತ್ತು. ಆದ್ದರಿಂದ ಈ ಬಾರಿ ವಿಧಾನ ಪರಿಷತ್ ಚುನಾವಣೆಯಲ್ಲಿ ಧರ್ಮೇಗೌಡರನ್ನು ಕಣಕ್ಕಿಳಿಸಿ ಮಾಜಿ ಶಾಸಕ ಎಸ್.ಆರ್. ಲಕ್ಷ್ಮಯ್ಯರ ಋಣಭಾರ ತೀರಿಸಲು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ಕಟಿಬದ್ಧರಾಗಿದ್ದಾರೆ.

ಜಿಲ್ಲೆಯನ್ನು ತನ್ನ ಭದ್ರಕೋಟೆ ಮಾಡಿಕೊಳ್ಳಲು ಹವಣಿಸುತ್ತಿರುವ ಬಜೆಪಿ ಹಂತಹಂತವಾಗಿ ಎಲ್ಲ ತಾಲ್ಲೂಕು ವ್ಯಾಪ್ತಿಯ ಕ್ಷೇತ್ರಗಳ ಮೇಲೂ ಹಿಡಿತ ಸಾಧಿಸಲು ಹೊಂಚು ಹಾಕಿದೆ. ಅದರಂತೆ ಪ್ರತಿ ಮತಕ್ಕೆ ಹತ್ತು ಸಾವಿರ ರೂಪಾಯಿಗಳ ರೇಟ್‌ಅನ್ನು ಫಿಕ್ಸ್ ಮಾಡಿದೆ. ಬಜೆಪಿಯ ಈ ಹಣ ಬಲ ಪ್ರದರ್ಶನಕ್ಕೆ ಮತ್ತು ಅಪ್ರಜಾತಾಂತ್ರಿಕ ಕಾರ್ಯವೈಖರಿಗೆ ಅವಕಾಶ ಮಾಡಿಕೊಡದಂತೆ ಕಾಂಗ್ರೆಸ್ ಮತ್ತು ಜೆಡಿಎಸ್‌ಗಳು ಒಂದು ಒಪ್ಪಂದ ಮಾಡಿಕೊಂಡರೆ ಒಳ್ಳೆಯದೇನೋ..

● ಅಜೀಜ್ ಕಿರುಗುಂದ

ಉತ್ತರ ಕನ್ನಡ
ಅಖಾಡಕ್ಕಿಳಿವ ಧೈರ್ಯವಿದೆಯಾ ಡಾನ್ ದೇಶಪಾಂಡೆಗೆ?




MLC ಚುನಾವಣೆ

ಉತ್ತರ ಕನ್ನಡ ಬಿಜೆಪಿ ಬುರ್ನಾಸ್ ಬಡಿದಾಟಕ್ಕೆ ಫೇಮಸ್. ರಾಜ್ಯ ಬಿಜೆಪಿ ಅಧ್ಯಕ್ಷ ಸದಾನಂದ ಗೌಡ-ಸಿಎಂ ಯಡ್ಡಿಯಂಥವರೇ ಉತ್ತರ ಕನ್ನಡದ ಬಿಜೆಪಿ ಯುನಿಟ್ ಹೆಸರೆತ್ತಿದರೆ ಅಸಹ್ಯದಿಂದ ಮುಖ ಸಿಂಡರಿಸುತ್ತಾರೆ. ಸ್ವತಃ ದೇಶಪಾಂಡೆಯೇ ಟೋಟಲ್ ಕನ್‌ಫ್ಯೂಸ್ ಆಗಿ ಅಖಾಡಕ್ಕಿಳಿಯಲೋ? ಬೇಡವೋ? ಎಂಬುದೇ ಆತನಿಗೆ ನಿರ್ಧರಿಸಲಾಗುತ್ತಿಲ್ಲ ಪಾಪ! ದೇಶಪಾಂಡೆ ಸ್ಪರ್ಧೆಗೆ ಇಳಿಯದಿದ್ದರೆ ನಾವಿದ್ದೇವೆ ಧೀರಾಧಿಧೀರರು ಎಂದು ಬರೋಬ್ಬರಿ ಹನ್ನೆರಡು ಮಂದಿ ಟಿಕೆಟ್ ಕ್ಲೇಮ್ ಮಾಡಿದ್ದಾರೆ.

ಮತ್ತೆ ಚುನಾವಣೆ ಬರುತ್ತಿದೆ;
ಹಣದ ಹೊಳೆ ಹರಿಯಲಿದೆ

...ಂಥದೊಂದು "ತತ್ವ" ಪದವೀಗ ಉತ್ತರ ಕನ್ನಡದ ...ಯ ಪಡಸಾಲೆಯಲ್ಲಿ ಮೊಳಗುತ್ತಿದೆ. ಸ್ಥಳೀಯ ...ಕ್ಷೇತ್ರದಿಂದ ನಡೆಯಲಿರುವ ವಿಧಾನ ಪರಿಷತ್ ...ವಣೆಗೆ ಜಿಲ್ಲೆಯ ಹಿರಿ-ಮರಿ ಪುಢಾರಿ-...ಣಿಯರು ಗರಿಗರಿ ಅಂಗಿ-ಸೀರೆ ತೊಟ್ಟುಕೊಂಡು ...ಷ ಕಟ್ಟುತ್ತಿದ್ದಾರೆ. ಪ್ರಮುಖ ಎದುರಾಳಿ ಪಕ್ಷಗಳಾದ ...್-ಬಿಜೆಪಿಯ ಟಿಕೆಟ್ ಆಕಾಂಕ್ಷಿಗಳ ಲಾಬಿ-ಲಾಗ ...ಾ ದಿನಕ್ಕೊಂದು ಆಯಾಮ ...ಕೊಂಡು ಕುತೂಹಲ ಕೆರಳಿಸುತ್ತಿದೆ. ...ದೊಂದು ಅಪ್ಪಟ ಹಣದ ಹಣಾ ... ಕೇವಲ 3022 ಮತದಾರರಿರು ...ಂದ ಖರೀದಿ ವ್ಯವಹಾರ ಈ ...ಣೆಯ 'ನೀತಿ ಸಂಹಿತೆ'. ಸುಮಾರು ...ಮುಕ್ಕಾಲು ಸಾವಿರ ಮತದಾರರನ್ನು ... ಮಾಡಿದರೆ ಶಾಸಕನಾದಂತೆಯೇ. ...-ಬಿಜೆಪಿಯ ಪ್ರತಿ ಟಿಕೆಟ್ ಆಕಾಂಕ್ಷಿ ... ಕೋಟಿಯ ಬಜೆಟ್ ರೆಡಿ ...ಕೊಂಡು ವಿಧಾನ ಪರಿಷತ್‌ನ ...) ಕನಸು ಕಾಣುತ್ತಿದ್ದಾನೆ. ಹಣ ... "ಆಟ"ದ ಸಾಮಾನ್ಯ ನಿಯಮ!! ಇದಕ್ಕಿಂತಲೂ ...ಹವೆಂದರೆ, ಬಿಜೆಪಿ ಮತ್ತು ಕಾಂಗ್ರೆಸ್‌ನಲ್ಲಿ ...ಳಗೇ ನಡೆಯುತ್ತಿರುವ ಟಿಕೆಟ್ ಟ್ರ್ಯಾಕ್ಟೀಸ್!



ಕಾಗೇರಿ

ಬಿಜೆಪಿಯಲ್ಲಿ ಬಡಿದಾಟ

...ತ್ತರ ಕನ್ನಡ ಬಿಜೆಪಿ ಬುರ್ನಾಸ್ ಬಡಿದಾಟಕ್ಕೆ .... ರಾಜ್ಯ ಬಿಜೆಪಿ ಅಧ್ಯಕ್ಷ ಸದಾನಂದ ಗೌಡ-ಸಿಎಂ ...ಂಥವರೇ ಉತ್ತರ ಕನ್ನಡದ ಬಿಜೆಪಿ ಯುನಿಟ್ ...ದರೆ ಅಸಹ್ಯದಿಂದ ಮುಖ ಸಿಂಡರಿಸುತ್ತಾರೆ. ಜಿಲ್ಲಾ ...ುಲ್ಲಿ ಬರೋಬ್ಬರಿ ನಾಲ್ಕು ನಾಲ್ಕು ಗ್ಯಾಂಗುಗಳಿವೆ. ...ರಿ ಮಂತ್ರಿ ಕಾಗೇರಿ, ಜೂನಿಯರ್ ಮಿನಿಸ್ಟರ್ ... ಅಸ್ನೋಟಿಕರ್, ಮಾಜಿ ಮಂತ್ರಿ ಶಿವಾನಂದ ... ಮತ್ತು ಸಂಸದ ಅನಂತ್ಕುಮಾರ್ ಪಡೆ ಕಟ್ಟಿಕೊಂಡು ...ದಿಯಲ್ಲೇ ಕಚ್ಚಾಡುತ್ತಿದ್ದಾರೆ; ದೇಶಭಕ್ತರ ಪಕ್ಷದ ... ಪ್ರದರ್ಶಿಸುತ್ತಿದ್ದಾರೆ.

...ಘ ಪರಿವಾರ ಕಾಗೇರಿ ಮಾಣಿ ಬೆನ್ನಿಗಿದ್ದರೆ, ...ಿಕರ್‌ಗೆ ರೆಬೆಲ್ ರೆಡ್ಡಿಗಳ ರಾಜಾಶ್ರಯವಿದೆ; ಸಿಎಂ ...ೀ ಶಿವಾನಂದ ನಾಯ್ಕಗೆ ಗಾಡ್‌ಫಾದರ್. ಫುಂಡ ...ಅನಂತ್ಕುಮಾರ್‌ಗೆ ಮೋದಿ-ಅಡ್ವಾಣಿಯಂಥವರೇ ...ದ್ದಾರೆಂಬ ಅಹಂಕಾರ. ಈ ನಾಲ್ಕೂ ಬಣದವರು ... ಗುಲಾಮನೊಬ್ಬನನ್ನು ಎಮ್ಮೆಲ್ಸಿ ಮಾಡಿ ...ುನ್ನು ಕಬ್ಜಾ ಮಾಡಿಕೊಳ್ಳಲು ಹವಣಿಸುತ್ತಿದ್ದಾರೆ. ... ಅಂಕೋಲೆಯ ಮಾಜಿ ಮುನ್ಸಿಪಾಲ್ಟಿ ಅಧ್ಯಕ್ಷ ... ನಾಡಕರ್ಣಿಗೆ ಟಿಕೆಟ್ ಕೊಡಿಸುವ ಪ್ರಯತ್ನ ...ದ್ದಾರೆ. ಒಂದು ವಾರದಿಂದ ಸಿಎಂ ಯಡ್ಡಿಯ ...ಮಂತ್ರಿಣಿ ಶೋಭಾ ಕರಂದ್ಲಾಜೆ ಮನೆಗೆ ಪ್ರದಕ್ಷಿಣೆ ...ುವ ಕರ್ನಾಟಕ ಸಾಬೂನು ಮತ್ತು ಮಾರ್ಜಕ ... ಅಧ್ಯಕ್ಷ ಶಿವಾನಂದ ನಾಯ್ಕ ಹುರಿಯಾಳಾಗುವ ...ನಲ್ಲಿದ್ದಾರೆ.


...ಿ ಬಿಜೆಪಿ ಅಧ್ಯಕ್ಷ ವಿನೋದ್ ಪ್ರಭು ಎಂಬ ... ಪರ ಸಂಸದ ಅನಂತ್ಕುಮಾರ್ ವಕಾಲತ್ತು ನಡೆಸಿದ್ದಾರೆ. ...ಅಸ್ನೋಟಿಕರ್ ಇದೇ ಜಿಲ್ಲಾಧ್ಯಕ್ಷರ ಪರ ಹಾನೆಂದು ...ಕೊಡುತ್ತಲೇ ತನ್ನ ಬಂದರು ಮಾಫಿಯಾ ದಂಧೆಯ ...್ ಗಣಪತಿ ಉಳ್ವೇಕರ್‌ನನ್ನು ಕ್ಯಾಂಡಿಡೇಟ್ ...ಂತೆ ರೆಡ್ಡಿಗಳಿಗೆ ರಹಸ್ಯವಾಗಿ ದುಂಬಾಲು ... ಈ ನಾಲ್ಕು ಟಿಕೆಟ್ ಆಕಾಂಕ್ಷಿಗಳಲ್ಲಿ ಎಮ್ಮೆಲ್ಸಿ ...ಕಲು ಅರ್ಹತೆ ಇರುವುದು ಅರುಣ ನಾಡಕರ್ಣಿ

ಒಬ್ಬನಿಗೇ. ದಿನಕರ ದೇಸಾಯಿಯವರ ರೈತ-ಕಾರ್ಮಿಕ ಹೋರಾಟದ ಮುಂಚೂಣಿಯಲ್ಲಿದ್ದು ಗೇಣಿದಾರರ ಗೆಳೆಯನೆಂದೇ ಗುರುತಿಸಿಕೊಂಡಿದ್ದ ದಿವಂಗತ ದಯಾನಂದ ನಾಡಕರ್ಣಿಯ ಮಗ ಈ ಅರುಣ.

ಸ್ಥಳೀಯ ರಾಜಕಾರಣದ ಒತ್ತಡದಿಂದ ಅನಿವಾರ್ಯವಾಗಿ ಬಿಜೆಪಿಯಲ್ಲಿರುವ ಈತ ಎಲ್ಲಿ ಜಾತಿಧರ್ಮದವರಿಗೆ ಸಹ್ಯವಾಗಿರುವ ಮನುಷ್ಯ. ಯೂತ್ ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷನಾಗಿ, ಅಂಕೋಲೆಯ ಮುನ್ಸಿಪಾಲ್ಟಿಯ ಅಧ್ಯಕ್ಷನಾಗಿ ಇಡೀ ಜಿಲ್ಲೆಯಲ್ಲಿ ಗುರುತಿಸಿಕೊಂಡಾತ. ಸ್ಥಳೀಯ ಸಂಸ್ಥೆಗಳ ಬೇಕು-ಬೇಡಗಳ ಅರಿವಿರುವಾತ. ಈತ ಎಮ್ಮೆಲ್ಸಿಯಾದರೆ ಪರಿಷತ್ತಿನಲ್ಲಿ ಸಮರ್ಥವಾಗಿ ಹೊಣೆಗಾರಿಕೆ ನಿಭಾಯಿಸಬಲ್ಲ. ಅಸ್ನೋಟಿಕರ್‌ಗೆ ತನ್ನ ಸಹಚರನಿಗೆ ಟಿಕೆಟ್ ಕೊಡಿಸಲು ಸಾಧ್ಯವಾಗದಿದ್ದರೆ ನಾಡಕರ್ಣಿಗೆ ವಿರೋಧವಂತೂ ಮಾಡಲಾರ. ನಾಡಕರ್ಣಿಯ ಹಣೆಬರಹ ಮಂತ್ರಿ ಕಾಗೇರಿಯ ಕೃಪಾಸಿಟಿಯನ್ನು ಅವಲಂಬಿಸಿದೆ.

ಶೂದ್ರ ಶಿವಾನಂದ ನಾಯ್ಕ ಎಮ್ಮೆಲ್ಸಿ ಆಗುವುದು ಮಂತ್ರಿ ಕಾಗೇರಿ ಮತ್ತು ಸಂಸದ ಅನಂತುಗಳ ಎರಡೂ ಪ್ರತ್ಯೇಕ ಹೈಗರ ಟೀಮಿಗೆ ಬೇಡವಾಗಿದೆ. ಕಾಗೇರಿ ಮತ್ತು ಅನಂತ್ಕುಮಾರ್‌ಗಳ ಸಂಬಂಧ ಎಣ್ಣೆ-ಸೀಗೆಕಾಯಿಯಂತಾದರೂ ಶೂದ್ರ ಶಿವಾನಂದ ನಾಯ್ಕ ವಿರುದ್ಧ ಈ ವಿಪ್ರೋತ್ತಮರು ಯಾವ ಗಳಿಗೆಯಲ್ಲಾದರೂ ಒಂದಾಗಿ ಬಿಡಬಲ್ಲರು. ಕಾಗೇರಿಗೆ ದೀವರ ಶಿವಣ್ಣ ಎಮ್ಮೆಲ್ಸಿಯಾದರೆ, ಸಿಎಂ ಯಡ್ಡಿ ಜತೆಗಿನ ಸಖ್ಯದಿಂದ ತನ್ನ ಮಂತ್ರಿಗಿರಿಯನ್ನೇ ಆಕ್ರಮಿಸಬಹುದೆಂಬ ಭಯ. ಅನಂತ್ಕುಮಾರ್‌ಗೆ ಲೋಕಸಭೆ ಇಲೆಕ್ಷನ್‌ನಲ್ಲಿ ಶಿವಣ್ಣ ತನ್ನ ವಿರುದ್ಧ ಕೆಲಸ ಮಾಡಿದ್ದನೆಂಬ ಸಿಟ್ಟು. ಅದಕ್ಕೂ ಹಿಂದಿನ ಅಸೆಂಬ್ಲಿ ಚುನಾವಣೆಯಲ್ಲಿ ಕಾಗೇರಿ-ಅನಂತ್ ಬಣ ಸೇರಿ ಶಿವಣ್ಣನಿಗೆ ಮಣ್ಣುಮುಕ್ಕಿಸಿದ್ದರು. ಇದು ಜಿಲ್ಲಾ ಬಿಜೆಪಿಯಲ್ಲಿನ ವರ್ಗ ಸಂಘರ್ಷ.

ಕಾಗೇರಿ-ಅನಂತ್ಕುಮಾರ್‌ಗಳ ಪ್ರಬಲ ವಿರೋಧದ ಮಧ್ಯದಲ್ಲಿ ಶಿವಣ್ಣ ಸಿಎಂ ಕೃಪೆಯಿಂದ ಬ್ಯಾಕ್‌ವರ್ಡ್ಸ್ ಕೋಟಾದಲ್ಲಿ ಟಿಕೆಟ್ ತರುವ ಸಾಧ್ಯತೆಯೇ ಹೆಚ್ಚು. ಆದರೂ ಅನಂತ್ಕುಮಾರ್ ಜಿಲ್ಲಾ ಬಿಜೆಪಿಯ ಅಧ್ಯಕ್ಷ ವಿನೋದ್ ಪ್ರಭು ಎಂಬ ಕೊಂಕಣಿ ಕುಳನನ್ನು ಎಮ್ಮೆಲ್ಸಿ ಮಾಡಲು ಕಟಿಪಿಟಿ ನಡೆಸಿದ್ದಾರೆ. ಇಡೀ ಜಿಲ್ಲಾ ಬಿಜೆಪಿಯಲ್ಲಿ ಅನಂತ್ ಪರವಿರುವುದು ಈ ವಿನೋದ್ ಎಂಬ ಸಮಯಸಾಧಕ ಚಿಡ್ಡಿ ಮಾತ್ರ. ತಾನೊಬ್ಬ ನಿಷ್ಠಾವಂತ ಆರೆಸೆಸ್ ಎಂದು ಕೊಚ್ಚಿಕೊಳ್ಳುವ ವಿನೋದ್ ಪ್ರಭು ಕಳೆದೆರಡು ಅಸೆಂಬ್ಲಿ ಇಲೆಕ್ಷನ್‌ನಲ್ಲಿ ಪಕ್ಷದ ಅಧಿಕೃತ ಅಭ್ಯರ್ಥಿ ಶಶಿಭೂಷಣ ಹೆಗಡೆಯ ವಿರುದ್ಧ ಕೆಲಸ ಮಾಡಿದ 'ಕೀರ್ತಿವಂತ'. ರೌಡಿ ಸಂಸದನ ಹಿಂಬಾಲಕ ಮತ್ತು ಅಧ್ಯಕ್ಷನಾಗಿದ್ದುಕೊಂಡೇ ಪಾರ್ಟಿಗೆ ದ್ರೋಹ ಮಾಡಿದ 'ಸಾಧನೆ'ಗಳೇ ಈಗ ವಿನೋದ್‌ನಿಗೆ ಎಮ್ಮೆಲ್ಸಿ ಟಿಕೆಟ್ ರೇಸ್‌ನಲ್ಲಿ ತೊಡಕಾಗಿ ಕಾಡುತ್ತಿವೆ. ಜಿಎಸ್‌ಬಿ ವರ್ತಕ ಲಾಬಿಗೂ ಸ್ವಜಾತಿಯ ಪ್ರಭುಗಿಂತ ಸಾರಸ್ವತ ನಾಡಕರ್ಣಿಯೇ ಆಕರ್ಷಕ ಅದ್ಕಿ.




ಅರುಣ್ ನಾಡಕರ್ಣಿ

'ಬಿಜರೀನ್ ಸಚಿವ' ಆನಂದ್ ಅಸ್ನೋಟಿಕರ್‌ನ ಷಡ್ಯಂತ್ರ ನಿಗೂಢವಾಗಿದೆ: ಕ್ಷೇತ್ರದಲ್ಲಿ ಕಿಮ್ಮತ್ತು ಕಳೆದುಕೊಂಡಿರುವ ಅಸ್ನೋಟಿಕರ್ ಮೂರ್ನಾಲ್ಕು ಸ್ವಾರ್ಥ ಕಾರಣಕ್ಕಾಗಿ ಕಾರವಾರ ನಗರಸಭೆ ಅಧ್ಯಕ್ಷ ಕಂ ಅದಿರು ಬಂದರು ಉದ್ಯಮಿ ಗಣಪತಿ ಉಳ್ವೇಕರ್‌ನನ್ನು ಪ್ರೊಜೆಕ್ಟ್ ಮಾಡುತ್ತಿದ್ದಾನೆ. ಈ ಉಳ್ವೇಕರ್ ಆನಂದನ ಅಪ್ಪ ದಿವಂಗತ ವಸಂತ

ಅಸ್ನೋಟಿಕರ್‌ನ ಬಲಗೈ ಬಂಟನಾಗಿದ್ದಾತ. ಅದಿರು ದಂಧೆಯಲ್ಲಿ ಆನಂದ್ ತನಗೆ ಟೊಪ್ಪಿಗೆ ಹಾಕಿರುವುದರಿಂದ ಉಳ್ವೇಕರ್ ಒಳಗೊಳಗೇ ಕುದಿಯುತ್ತಿದ್ದಾನೆ. ಮೇಲ್ನೋಟಕ್ಕಷ್ಟೇ ಆನಂದ್-ಉಳ್ವೇಕರ್ ರಾಜಿಯಾಗಿದ್ದಾರೆ. ಜತೆಗೆ ಈ ಉಳ್ವೇಕರ್‌ಗೆ ಆನಂದನ ಕೆಲವು ಕ್ರಿಮಿನಲ್ ರಹಸ್ಯಗಳೂ ಗೊತ್ತಿವೆ.

ಎಮ್ಮೆಲ್ಸಿ ಟಿಕೆಟ್ ಈ ಉಳ್ವೇಕರ್‌ಗೆ ಕೊಡಿಸಿದರೆ ಆತನನ್ನು ಥಂಡ ಮಾಡಬಹುದೆಂಬ ಲೆಕ್ಕಾಚಾರ ಅಸ್ನೋಟಿಕರ್‌ನದು. ಹಣಕೋಣ ಉಷ್ಣ ವಿದ್ಯುತ್ ಸ್ಥಾವರದ ಪರ ನಿಂತು ಸ್ಥಾವರ ವಿರೋಧಿ ಮಹಿಳೆಯರ ಮೇಲೆ ಪೊಲೀಸರನ್ನು ಛೂಬಿಟ್ಟು ಹಿಂಸಾಕಾಂಡ ನಡೆಸಿದ ಕೊಳಕು ಮಂತ್ರಿ ಆನಂದನ ವಿರುದ್ಧ ಸ್ಥಳೀಯ ಮೀನುಗಾರ ಸಂಕುಲ ತಿರುಗಿಬಿದ್ದಿದೆ. ಅದೇ ಕೋಮಿನ ಉಳ್ವೇಕರ್‌ಗೆ ಟಿಕೆಟ್ ಕೊಡಿಸಿದರೆ ಡ್ಯಾಮೇಜ್ ಕಂಟ್ರೋಲೂ ಆಗುತ್ತದೆಂಬ ಆಸೆ ಆನಂದ ಅಸ್ನೋಟಿಕರ್‌ಗೆ. ಹಾಗಾಗಿ ತನ್ನ ದೇವಪಿತೃಗಳಾದ ರೆಡ್ಡಿಗಾರುಗಳ ಬಲ ಬಳಸಿ ಆನಂದ್ ಎಮ್ಮೆಲ್ಸಿ ಟಿಕೆಟ್ ರಾಜಕಾರಣದಲ್ಲಿ "ಆಟ" ಆರಂಭಿಸಿದ್ದಾನೆ.



ಆನಂದ್ ಅಸ್ನೋಟಿಕರ್

ಕಾಂಗ್ರೆಸ್‌ನಲ್ಲಿ ಕಾಗೇರಿ ಕೈ

ಬಿಜೆಪಿಯಲ್ಲಿ ಜೋರಾಗಿರುವ ಟಿಕೆಟ್ ಕಸರತ್ತು ಈಕ್ವೇಷನ್ ಗಣಿತವೆಲ್ಲ ಕಾಂಗ್ರೆಸ್ ಕ್ಯಾಂಡಿಡೇಟ್ ಯಾರಾಗುತ್ತಾರೆಂಬುದನ್ನು ಅವಲಂಭಿಸಿರುವುದು ಮೋಜಾಗಿದೆ. ಹಾಗೊಮ್ಮೆ ಜಿಲ್ಲಾ "ಡಾನ್" ಆರ್.ವಿ. ದೇಶಪಾಂಡೆಯೇ ಕಾಂಗ್ರೆಸ್ ಹುರಿಯಾಳಾದರೆ "ನಾನೊಲ್ಲೆ" ಎನ್ನುವವರೇ ಹೆಚ್ಚು ಬಿಜೆಪಿ ಟಿಕೆಟ್ ಆಕಾಂಕ್ಷಿಗಳಲ್ಲಿ! ಜಿಲ್ಲಾ ಉಸ್ತುವಾರಿ ಮಂತ್ರಿ ಕಾಗೇರಿ, ಸಂಸದ ಅನಂತ್ಕುಮಾರ್ ಆದಿಯಾಗಿ ಹಲವರು ಕಾಂಗ್ರೆಸ್ ದೇಶಪಾಂಡೆಯ ಹಿತೈಷಿಗಳು. ಇಲ್ಲವೇ ಆತನನ್ನು ಎದುರು ಹಾಕಿಕೊಳ್ಳುವ ತಾಕತ್ತು ಇಲ್ಲದ ಸಮಯ ಸಾಧಕರು. ಹೀಗಾಗಿ ದೇಶಪಾಂಡೆಗೆ ಬಿಜೆಪಿಯವರೇ ಮತ ಹಾಕಿಸುತ್ತಾರೆ.

ಎಮ್ಮೆಲ್ಲೆಗಿರಿ-ಮಂತ್ರಿಗಿರಿಯುದ್ದಕ್ಕೂ ಕಾಗೇರಿ ದೇಶಪಾಂಡೆ ಜತೆ ಅನೈತಿಕ ಹೊಂದಾಣಿಕೆ ಮಾಡಿಕೊಂಡೇ ರಾಜಕಾರಣ ಮಾಡಿಕೊಂಡು ಬಂದಿದ್ದಾರೆ. ಸಂಸದ ಅನಂತ್ಕುಮಾರ್‌ಗಂತೂ ದೇಶಪಾಂಡೆ ಸ್ವಪಕ್ಷದ ವೈರಿಣಿ ಮ್ಯಾಗಿ ಮಣಿಸಲು ಹಿಂದಿನ ಎರಡು ಪಾರ್ಲಿಮೆಂಟ್ ಇಲೆಕ್ಷನ್‌ನಲ್ಲಿ ಅಮೂಲ್ಯ ನೆರವು ನೀಡಿ ಗೆಲ್ಲಿಸಿದ್ದಾರೆ. ಆನಂದ್ ಅಸ್ನೋಟಿಕರ್ ಜತೆಗೂ ಒಳಗೊಳಗೇ 'ರಾಜಿ' ಆಗಿರುವ ಸುದ್ದಿ ಹಬ್ಬದೆ. ದೇಶಪಾಂಡೆಗೆ ಸ್ಥಳೀಯಾಡಳಿತದ ಮೆಂಬರ್‌ಗಳ ರೇಟು-ವೈಟು ಚೆನ್ನಾಗಿ ಗೊತ್ತಿದೆ. ಎಲ್ಲಕ್ಕಿಂತ ಹೆಚ್ಚಾಗಿ ಬಿಜೆಪಿ ಮಂತ್ರಿ-ಶಾಸಕ-ಸಂಸದರ ಹೇತ್ಲಾಂಡಿತನ, ಹೊಣೆಗೇಡಿತನ, ಸ್ವಾರ್ಥದಿಂದ ಜನರಿಗೆ ಬೇಸರ ಬಂದಿದೆ.

ದೇಶಪಾಂಡೆ ಭ್ರಷ್ಟನಾದರೂ ಜಿಲ್ಲೆಯ ಆಗು-ಹೋಗುಗಳಿಗೆ ತಕ್ಷಣ ಸ್ಪಂದಿಸುತ್ತಿದ್ದರು; ಅಧಿಕಾರಿಗಳ ಮೇಲೆ ಹಿಡಿತ ಸಾಧಿಸಿದ್ದ ಅಡ್‌ಮಿನಿಸ್ಟ್ರೇಟರ್ ಆಗಿದ್ದನೆಂಬ ಭಾವನೆ ಜನರಿಗಿದೆ. ಜಿಲ್ಲೆಯ ಈ ಅನಾಯಕತ್ವ-ಅರಾಜಕತೆ ಹೊತ್ತಲ್ಲಿ ದೇಶಪಾಂಡೆ ಬೆಟರ್ ಎಂದು ಕಾಣಿಸುತ್ತಿದ್ದಾರೆ. ಹಾಗಾಗಿ ಆತನ ಎದುರು ಬಿಜೆಪಿಯಿಂದ ಯಾರೇ ನಿಂತರೂ ಗೆಲ್ಲುವುದು ಕಷ್ಟ! ಆದರೆ ದೇಶಪಾಂಡೆಯನ್ನು ಪೂರ್ವಜನ್ಮದ ಪಾಪದ ಭಯ ಕಾಡುತ್ತಿದೆ. ಕಳೆದ 25 ವರ್ಷದಿಂದ ಒಂದಿಲ್ಲೊಂದು ಅಧಿಕಾರದಲ್ಲಿದ್ದ ದೇಶಪಾಂಡೆ ಈಗ ನೀರಿನಿಂದ ಹೊರಬಿದ್ದ ಮೀನಿನಂತಾಗಿದ್ದಾರೆ. ಎಮ್ಮೆಲ್ಸಿಯಂಥ ಒಂದು ಸ್ಥಾನ-ಮಾನ ಜರೂರಾಗಿ ಆತನಿಗೆ ಬೇಕಾಗಿದೆಯಾದರೂ ಇಲೆಕ್ಷನ್‌ಗೆ ಇಳಿಯಲು ಅದೇನೋ ಅಳುಕು!!

ಮೊನ್ನೆ-ಮೊನ್ನೆ ನಡೆದ ಜಿಪಂ ಅಧ್ಯಕ್ಷರ ಆಯ್ಕೆ ವೇಳೆ ದೇಶಪಾಂಡೆ ಎಲ್.ವಿ. ಶಾನಭಾಗ್ ಎಂಬ "ಲೊಳಲೊಟ್ಟೆ"ಯನ್ನು ಪೀಠಕ್ಕೇರಿಸಿದ್ದು ಜಿಲ್ಲೆಯ ಬಹುಸಂಖ್ಯಾತ ಬ್ರಾಹ್ಮಣರನ್ನು ಕೆರಳಿಸಿದೆ. ದೇಶಪಾಂಡೆ ಹೈಗರ ವಿರೋಧಿ ಜಾತಿವಾದಿ ಎಂಬ ಕೂಗೆದ್ದಿದೆ. ಇದೇನಾದರೂ ತನಗೆ ಉಲ್ಟಾ ಹೊಡೆಯಬಹುದೇ ಎಂಬ ಆತಂಕ ದೇಶಪಾಂಡೆಜೀಗೆ. ಹಾಗಂತ ಮ್ಯಾಗಿ ಬಣದ ಭಯ ಆತನಿಗಿಲ್ಲ. ಮ್ಯಾಗಿ ರಾಜ್ಯಪಾಲೆಯಾಗಿ ತೊಲಗಿದ ನಂತರ ಆಕೆಯ ಬಣ ಬರ್ಖಾಸ್ತಾಗಿ ಹೋಗಿದೆ. ಇಡೀ ಜಿಲ್ಲಾ ಕಮಿಟಿ ದೇಶಪಾಂಡೆ ಸುಪರ್ದಿಗೆ ಬಂದಿದೆ.

ದೇಶಪಾಂಡೆ ಎಲ್ಲೂ ತಾನು ಎಮ್ಮೆಲ್ಸಿ ಇಲೆಕ್ಷನ್ ಅಭ್ಯರ್ಥಿ ಎಂದು ಹೇಳಿಲ್ಲ; ಡಿಸಿಸಿಗೆ ಅರ್ಜಿ ಗುಜರಾಯಿಸಿಲ್ಲ. ಆದರೂ ಜಿಲ್ಲಾ ಕಾಂಗ್ರೆಸ್ ಕಮಿಟಿ ಏಕಧ್ವನಿಯಲ್ಲಿ "ದೇಶಪಾಂಡೆಯೇ ನಮ್ಮ ಡಾರ್ಕ್ ಹಾರ್ಸ್" ಎಂದು ಕೆಪಿಸಿಸಿಗೆ ಶಿಫಾರಸ್ಸು ಮಾಡಿದೆ. ದೇಶಪಾಂಡೆ ಕಾಲಲ್ಲಿ ತೋರಿಸಿದ್ದನ್ನು ತಲೆ ಮೇಲೆ ಹೊತ್ತುಕೊಳ್ಳುವ ಜಿಲ್ಲಾ ಕಾಂಗ್ರೆಸ್‌ನ ನಾಲಾಯಕ್ ಅಧ್ಯಕ್ಷ ಶಾಂತರಾಮ ಹೆಗಡೆಯ ಅಧ್ಯಕ್ಷತೆಯಲ್ಲಿ ಇಂಥದೊಂದು ನಿರ್ಣಯ ಆಗಿರುವುದು ನೋಡಿದರೆ ಅದನ್ನು ದೇಶಪಾಂಡೆಯೇ ತೆರೆಮರೆಯಲ್ಲಿ ನಿಂತು ಮಾಡಿಸಿದ್ದಾರೆಂಬುದು ಎಂಥವರಿಗೂ ಅರ್ಥವಾಗಿ ಬಿಡುತ್ತದೆ.

ಆದರೆ ಸ್ವತಃ ದೇಶಪಾಂಡೆಯೇ ಟೋಟಲ್ ಕನ್‌ಫ್ಯೂಸ್ ಆಗಿ ಅಖಾಡಕ್ಕಿಳಿಯಲೋ? ಬೇಡವೋ? ಎಂಬುದೇ ಆತನಿಗೆ ನಿರ್ಧರಿಸಲಾಗುತ್ತಿಲ್ಲ ಪಾಪ! ದೇಶಪಾಂಡೆ ಸ್ಪರ್ಧೆಗೆ ಇಳಿಯದಿದ್ದರೆ ನಾವಿದ್ದೇವೆ ಧೀರಾಧಿಧೀರರು ಎಂದು ಬರೋಬ್ಬರಿ ಹನ್ನೆರಡು ಮಂದಿ ಟಿಕೆಟ್ ಕ್ಲೇಮ್ ಮಾಡಿದ್ದಾರೆ. ಈ ಜೊಳ್ಳುಗಳಲ್ಲಿ ಒಂಚೂರು ಎದ್ದು ಕಾಣುವವರೆಂದರೆ ಮಾಜಿ ಜಿಪಂ ಅಧ್ಯಕ್ಷ ರಮಾನಂದ ನಾಯಕ್, ದೇಶಪಾಂಡೆ ಆಜ್ಞಾನುಧಾರಿ ಗುಲಾಮ ಶಾಂತರಾಮ ಹೆಗಡೆ, ಹಳಿಯಾಳದ ಶ್ರೀಕಾಂತ ಘೋಟನೇಕರ್ ಮತ್ತು ಮಾಜಿ ಶಾಸಕ ಉಮ್ಮಾಣಿ ಭಟ್ಟ.

ದೇಶಪಾಂಡೆ ಧೈರ್ಯ ಮಾಡದಿದ್ದರೆ ಆತ ತನ್ನ ತವರೂರು ಹಳಿಯಾಳದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಘೋಟನೇಕರ್‌ಗೆ ಟಿಕೆಟ್ ಕೊಡಿಸುವ ಸಾಧ್ಯತೆಯೇ ಹೆಚ್ಚು. ಹಳಿಯಾಳದಲ್ಲಿ ನಿರ್ಣಾಯಕರಾಗಿರುವ ಮರಾಠ ಕೋಮಿನ ಘೋಟನೇಕರ್‌ಗೆ ಟಿಕೆಟ್ ಕೊಡದಿದ್ದರೆ ದೇಶಪಾಂಡೆಗೆ ಅಲ್ಲಿ ರಾಜಕಾರಣ ಮಾಡೋದು ಕಷ್ಟವಾದೀತು. ಕಳೆದ 27 ವರ್ಷದಿಂದ ಪ್ರಾತಿನಿಧ್ಯವಿಲ್ಲದೆ ಚಡಪಡಿಸುತ್ತಿರುವ ಮರಾಠರನ್ನು ದೇಶಪಾಂಡೆ ಸಮಾಧಾನಪಡಿಸಬೇಕಾಗಿದೆ. ಡಿಸಿಸಿ ಅಧ್ಯಕ್ಷ-ಹೈಗರ ಶಾಂತಣ್ಣನನ್ನು ಮುಂದೆ ಮಾಡುತ್ತಲೇ ದೇಶಪಾಂಡೆ ಘೋಟನೇಕರ್‌ಗೆ ಛಾನ್ಸ್ ಕೊಡಿಸುವ ಸಂಕೇತಗಳು ಬಿತ್ತರವಾಗುತ್ತಿವೆ.

ಈ ಟಿಕೆಟ್ ಹಂಚಿಕೆಯಲ್ಲಿ ದೇಶಪಾಂಡೆ ವಾಣಿಯೇ ಅಂತಿಮ. ಆತ ತನ್ನ ವೈರಿಗಳಾದ ಮಾಜಿ ಮಂತ್ರಿ ರಾಣೆ, ಮಾಜಿ ಶಾಸಕ ಉಮ್ಮಾಣಿ ಭಟ್ಟರಿಗೆ ಅವಕಾಶ ಖಂಡಿತ ಕೊಡಲಾರರು. ಮ್ಯಾಗಿ ಬಣ ಬಣಗುಡುತ್ತಿದೆ. ಕಾಂಗ್ರೆಸ್‌ನ ವಿಧವಾ ಕೋಟಾದಲ್ಲಿ ಇದೇ ಕ್ಷೇತ್ರದಿಂದ ಎಮ್ಮೆಲ್ಸಿಯಾಗಿದ್ದ ಶುಭಲತಾ ಅಸ್ನೋಟಿಕರ್ (ಮಂತ್ರಿ ಆನಂದ್ ತಾಯಿ) ಮಗನ ಮಂಗಾಟ, ಅನಾರೋಗ್ಯ, ಕೌಟುಂಬಿಕ ಸಮಸ್ಯೆಯಿಂದ ಟಿಕೆಟ್ ಕೇಳುವ ಸ್ಥಿತಿಯಲ್ಲಿಲ್ಲ. ಮಗ ಮಹಾರಾಯ ಬಿಜೆಪಿಗೆ ನೆಗೆದ ಕ್ಷಣದಿಂದಲೇ ಈಕೆ ಕಾಂಗ್ರೆಸ್ಸಿಗೆ ಅಸ್ಪೃಶ್ಯಳಾಗಿ ಬಿಟ್ಟಿದ್ದಾಳೆ.

ರಣರಂಗದಲ್ಲಿ ಕಾಂಗ್ರೆಸ್‌ನ ದೇಶಪಾಂಡೆ V/s ಬಿಜೆಪಿಯ ಶಿವಾನಂದ ನಾಯ್ಕ ನಡುವೆ ಯುದ್ಧವಾಗುವ ಸಂಭವನೀಯತೆಯೇ ಹೆಚ್ಚಿವೆ. ಜೆಡಿಎಸ್‌ಗೆ ಇಲ್ಲಿ ಅಸ್ತಿತ್ವ ಇಲ್ಲ!

● ನಮತ


ಧಾರವಾಡ: ಕಾಂಗ್ರೆಸ್ ಕಲರವ


MLC ಚುನಾವಣೆ

ಒಳಜಗಳ ಮತ್ತು ಆಕಾಂಕ್ಷಿಗಳ ಕಿತ್ತಾಟದಿಂದಾಗಿ ಬಿಜೆಪಿ ಅತಂತ್ರ ಸ್ಥಿತಿಯಲ್ಲಿದ್ದರೆ, ಹೊಸ ಹುರುಪು ಮತ್ತು ನಾಯಕರ ಒಗ್ಗಟ್ಟಿನಿಂದಾಗಿ ಕಾಂಗ್ರೆಸ್ಸಿನಲ್ಲಿ ಕಲರವ ಶುರುವಾಗಿದೆ. ಅಖಂಡ ಧಾರವಾಡ ಜಿಲ್ಲೆ (ಧಾರವಾಡ, ಗದಗ, ಹಾವೇರಿ ಜಿಲ್ಲೆಗಳು)ಯ ಎರಡು ಎಂಎಲ್‌ಸಿ ಸ್ಥಾನಗಳಿಗಾಗಿ ನಡೆಯಲಿರುವ ಚುನಾವಣೆಗಾಗಿ ಕಾಂಗ್ರೆಸ್, ಬಿಜೆಪಿಗಳಲ್ಲಿ ಬಿರುಸಿನ ಚಟುವಟಿಕೆ ಆರಂಭವಾಗಿದೆ.

ಕಳೆದ ಸಲ ಕಾಂಗ್ರೆಸ್ಸಿನ ಎ.ಎಂ. ಹಿಂದಸಗೇರಿ ಮತ್ತು ಸಂಯುಕ್ತ ಜನತಾದಳದಿಂದ ಬಸವರಾಜ ಬೊಮ್ಮಾಯಿ ಗೆದ್ದಿದ್ದರು. ಮುಂದೆ ಬಿಜೆಪಿ ಸೇರಿದ ಬೊಮ್ಮಾಯಿ ತನ್ನ ಜಾಗದಲ್ಲಿ ಹಾವೇರಿಯ ಶಿವರಾಜ್ ಸಜ್ಜನರನ್ನು ಗೆಲ್ಲಿಸಿದ್ದರು. ಈ ಸಲ ಕಾಂಗ್ರೆಸ್ ಎರಡೂ ಸ್ಥಾನಗಳಿಗೆ ಈಗಾಗಲೇ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ, ಸ್ಥಳೀಯ ಸಂಸ್ಥೆಗಳಲ್ಲಿ ಜಾಸ್ತಿ ಇರುವ ತನ್ನ ಸದಸ್ಯರನ್ನೆಲ್ಲ ತಲುಪುವ ಕೆಲಸದಲ್ಲಿ ಮಗ್ನವಾಗಿದೆ. ಬಿಜೆಪಿಯಲ್ಲಿ ಆಕಾಂಕ್ಷಿಗಳ ಪಟ್ಟಿಯೇ ದೊಡ್ಡದಿದ್ದು ಇನ್ನೂ ಅಂತಿಮ ಆಯ್ಕೆ ಮುಗಿದೇ ಇಲ್ಲ.

ಅಖಂಡ ಧಾರವಾಡ ಜಿಲ್ಲೆಯಲ್ಲಿ ಸ್ಥಳೀಯ ಸಂಸ್ಥೆಗಳ ಒಟ್ಟು 7860 ಮತದಾರರಿದ್ದು ಬಹುತೇಕರು ಕಾಂಗ್ರೆಸ್ ಪಾರ್ಟಿಯವರೇ ಆಗಿದ್ದಾರೆ. ಈಗಾಗಲೇ ಎರಡು ಸಲ ಗೆದ್ದಿರುವ ಹಿಂದಸಗೇರಿಯವರಿಗೆ ಮತ್ತೆ ಅವಕಾಶ ಮಾಡಿಕೊಟ್ಟಿರುವ ಕಾಂಗ್ರೆಸ್, ಇನ್ನೊಂದು ಸ್ಥಾನಕ್ಕೆ ಕಳೆದ ಬಾರಿ ಸಜ್ಜನರ್ ವಿರುದ್ಧ ಅಲ್ಪ ಅಂತರದಲ್ಲಿ ಸೋಲುಂಡಿದ್ದ ಯುವಕ ಶ್ರೀನಿವಾಸ್ ಮಾನೆಯನ್ನು ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿದೆ. ತನ್ನ ಸೌಮ್ಯ ಸ್ವಭಾವ ಮತ್ತು ಜನ ಸಂಪರ್ಕದಿಂದಾಗಿ ಹಿಂದಸಗೇರಿ ಮತ್ತೆ ಗೆಲ್ಲುವುದು ಖಾತ್ರಿಯಾಗಿದೆ.


ಶಿವರಾಜ್ ಸಜ್ಜನರ್


ಹಿಂದಸಗೇರಿ

ತನ್ನ ವಿನಯ ಗುಣದಿಂದಾಗಿ ಸ್ಥಳೀಯ ಸಂಸ್ಥೆಗಳ ಸದಸ್ಯರೊಂದಿಗೆ ಸದಾ ಸಂಪರ್ಕವಿಟ್ಟುಕೊಂಡೇ ಬಂದಿರುವ ಕಾಂಗ್ರೆಸ್ಸಿನ ಶ್ರೀನಿವಾಸ್ ಮಾನೆಗೆ ಈ ಸಲ ಕಾಂಗ್ರೆಸ್ ನಾಯಕರೆಲ್ಲ ಭಿನ್ನಮತ ಮರೆತು ಒಟ್ಟಾಗಿರುವುದು ಪ್ಲಸ್‌ಪಾಯಿಂಟ್. ಇನ್ನೊಂದು ಕಡೆ ಬಿಜೆಪಿಯ ಶಿವರಾಜ್ ಸಜ್ಜನರ್ ಎಂಎಲ್‌ಸಿಯಾದ ಮೇಲೆ ಸ್ಥಳೀಯ ಸಂಸ್ಥೆಗಳ ಸದಸ್ಯರನ್ನೇ ಮರೆತಿರುವುದು ಕೂಡಾ ಶ್ರೀನಿವಾಸ್ ಗೆಲುವಿಗೆ ಸಹಾಯ ಮಾಡಲಿದೆ.


ಶ್ರೀನಿವಾಸ್ ಮಾನೆ

ಇದ್ದ ಒಂದು ಸ್ಥಾನವನ್ನೂ ಕಳೆದುಕೊಳ್ಳುವ ಭೀತಿಗೆ ಬಿದ್ದಿರುವ ಬಿಜೆಪಿ ಆಂತರಿಕ ಕಲಹಗಳಿಂದಾಗಿ ಗೊಂದಲದ ಗೂಡಾಗಿ ಪರಿವರ್ತನೆಗೊಂಡಿದೆ. ಹಿಂದೆ ಹಾವೇರಿ ಶಾಸಕನಾಗಿದ್ದಾಗ ಬರೀ ಉಂಡಾಟ ನಡೆಸಿದ್ದ ಶಿವರಾಜ ಸಜ್ಜನರನ್ನು ಮಂತ್ರಿ ಉದಾಸಿ ಗೆಲ್ಲಿಸಿಕೊಂಡಿದ್ದರು. ಬಸವರಾಜ ಬೊಮ್ಮಾಯಿಗೆ ಶಿಗ್ಗಾಂವಿ ಕ್ಷೇತ್ರವನ್ನು ತ್ಯಾಗ ಮಾಡಿದ್ದ ಸೋಮಣ್ಣ ಬೇವಿನಮರದನನ್ನು ಎಂಎಲ್‌ಸಿ ಮಾಡಬೇಕಿದ್ದ ಬೊಮ್ಮಾಯಿ ಕೈಕೊಟ್ಟಿದ್ದರು. ಈ ಸಲವೂ ಸೋಮಣ್ಣ ಬೇವಿನಮರದ ಪ್ರಬಲ ಆಕಾಂಕ್ಷಿಯಾಗಿದ್ದು ಟಿಕೆಟು ಪಡೆಯಲು ಜಿದ್ದಾಜಿದ್ದಿ ನಡೆಸಿದ್ದಾನೆ.



ಬೇವಿನಮರದ

ಬಿಜೆಪಿಯಲ್ಲಿ ಇನ್ನೊಂದು ಸ್ಥಾನಕ್ಕಾಗಿ ಮೊದಲಿಗೆ ಕೇಳಿಬಂದ ಹೆಸರು ಶೆಟ್ಟರ್ ಸಹೋದರ ಪ್ರದೀಪ್ ಶೆಟ್ಟರನದು. ಆದರೆ ಶೆಟ್ಟರ್ ಸಚಿವರಾದ ಮೇಲೆ ಪ್ರದೀಪ್ ಹೆಸರು ಹಿನ್ನೆಲೆಗೆ ಸರಿದಿದೆ. ಈ ಸ್ಥಾನಕ್ಕಾಗಿ ಆರೆಸ್ಸೆಸ್ ಮೂಲದ ಲಿಂಗರಾಜ ಪಾಟೀಲ್, ಮಾಜಿ ಶಾಸಕ ಡಾ.ಆರ್.ಬಿ.ಶಿರಿಯಣ್ಣವರ್, ಕುಂದಗೋಳದ ಎಂ.ಆರ್. ಪಾಟೀಲ್ ಪೈಪೋಟಿಯಲ್ಲಿದ್ದಾರೆ. ಎಂ.ಆರ್. ಪಾಟೀಲ್ ಹೆಸರು ಕುಂದಗೋಳದಾಚೆಗೆ ಗೊತ್ತೇ ಇಲ್ಲ. ಲಿಂಗರಾಜ್ ಪಾಟೀಲ್ ಶೆಟ್ಟರರ ಬ್ಯುಸಿನೆಸ್ ಪಾರ್ಟನರ್ ಆಗಿರುವುದರಿಂದ ಅವರಿಗೆ ಟಿಕೆಟ್ ಕೊಡುವ ವಿಷಯ ಸಮನ್ವಯ ಸಮಿತಿಯ ಮುಂದೆ ಬಂದರೂ ಬರಬಹುದು.

ಸುಪ್ರೀಂಕೋರ್ಟ್ ಸಮಿತಿ, ಆಂಧ್ರ ಸರ್ಕಾರಗಳ ಹೊಡೆತದಿಂದ ತಾಪತ್ರಯಕ್ಕೆ ಬಿದ್ದಿರುವ ರೆಡ್ಡಿ-ರಾಮುಲುಗಳು ಈ ಸಲ ಇತ್ತ ತಲೆ ಹಾಕುತ್ತಿಲ್ಲ. ಬಿಜೆಪಿಗೆ ಈ ಚುನಾವಣೆಯಲ್ಲಿ ಮುಖಭಂಗವಾದಷ್ಟೂ ತಮಗೆ ಒಳ್ಳೆಯದೆಂದೇ ತಿಳಿದಿರುವ ರೆಡ್ಡಿ ಗ್ಯಾಂಗ್ ಒಳಗೊಳಗೆ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಹಣಕಾಸಿನ ನೆರವನ್ನು ನೀಡಬಹುದು.

ಸಣ್ಣ ಸಂಖ್ಯೆಯಲ್ಲಿರುವ ಜೆಡಿಎಸ್‌ನ ಸ್ಥಳೀಯ ಸಂಸ್ಥೆ ಸದಸ್ಯರು ಬಸವರಾಜ ಹೊರಟ್ಟಿಯ ನಿರ್ದೇಶನದಂತೆ ಕಾಂಗ್ರೆಸ್ಸಿನ ಹಿಂದಸಗೇರಿ ಮತ್ತು ಶ್ರೀನಿವಾಸ ಮಾನೆ ಪರವೇ ನಿಲ್ಲಲಿದ್ದಾರೆ. ಎಚ್ಕೆ ಪಾಟೀಲ್, ಅನಿಲ್‌ಕುಮಾರ್ ಪಾಟೀಲ್, ಸಂತೋಷ್ ಲಾಡ್, ಮಂಜುನಾಥ್ ಕುನ್ನೂರು, ಎಸ್.ಆರ್. ಮೋರೆಗಳು ತಮ್ಮ ನಡುವಿನ ಮನಸ್ತಾಪಗಳನ್ನು ಬದಿಗೊತ್ತಿ ಒಟ್ಟಾಗಿ ಕೆಲಸ ಮಾಡುತ್ತಿರುವುದು ಕಾಂಗ್ರೆಸ್ ಕಲರವಕ್ಕೆ ಇನ್ನಷ್ಟು ಶಕ್ತಿ ತಂದಿದೆ.

-ಹುರುಳಿಕೊಪ್ಪ ವಿನಯ್


ಶಿವಣ್ಣ- ಸಾಯಿಪ್ರಕಾಶ್

ಚೊಂಬು ಕೊಟ್ಟ ತಂಗಿ

ಓಂ ಸಾಯಿ ಸರ್ವನಾಶ?

ಒಂದಲ್ಲ ಎರಡಲ್ಲ ಬರೋಬ್ಬರಿ ಮೂರು ಕೋಟಿಯ ಮೊತ್ತಕ್ಕೆ ಓಂ ಸಾಯಿ ಪ್ರಕಾಶ್ ಎಂಬ ಹಡಗೊಂದು ಮುಳುಗಿಹೋಗಿದೆ!

'ದೇವರು ಕೊಟ್ಟ ತಂಗಿ' ಎಂಬ ಅಬ್ಬಾಯಿ ನಾಯ್ಡು ಶೈಲಿಯ ಸಿನಿಮಾ ಮಾಡಲು ಹೋಗಿ ತನ್ನ ಮನೆಯನ್ನೇ ಅಡವಿಟ್ಟು ಬಂಡವಾಳ ಹಾಕಿದ ಸಾಯಿಪ್ರಕಾಶ್ ಥೇಟರುಗಳಿಂದ ತಂಗಿಯನ್ನು ಎತ್ತುವ ಮೊದಲೇ ಭೂಗತರಾಗಿದ್ದಾರೆ!

ಫೈನಾನ್ಸಿಯರ್‌ಗಳಿನ್ನೂ ಸಾಯಿಪ್ರಕಾಶ್‌ರನ್ನು ಮನೆಯಿಂದ ಹೊರದಬ್ಬಿಲ್ಲ ಎಂಬ ಸಂಗತಿಬಿಟ್ಟರೆ ಸಾಯಿಪ್ರಕಾಶ್ ಜೀವನ ಪರ್ಯಂತ ಕೂಡಿಟ್ಟಿದ್ದ ಚರಸ್ಥಿರ ಸಂಪತ್ತೆಲ್ಲವನ್ನೂ..... ತಂಗಿ ನಿವಾಳಿಸಿ ಹಾಕಿದೆ.

..... ತಂಗಿಯ ಹೀರೋ ಶಿವಣ್ಣನಿಗಿನ್ನೂ ಸಾಯಿಪ್ರಕಾಶ್ 30 ಲಕ್ಷ ಕೊಡಬೇಕೆಂದೂ, ಅದರ ವಸೂಲಿಗೆ ರಾಜ್ ಕ್ಯಾಂಪಿನ ಸರದಾರ ಚಿನ್ನ ಎಂಬಾತ ಸಾಯಿಪ್ರಕಾಶ್ ಬೆನ್ನಿಗೆ ಬಿದ್ದಿದ್ದಾನೆಂದೂ ಆತನ ಕಾಟ ತಾಳಲಾರದೇ ಸಾಯಿಪ್ರಕಾಶ್ ನಾಪತ್ತೆಯಾಗಿದ್ದಾರೆಂದೂ ಗಾಂಧಿನಗರದಾದ್ಯಂತ ಹಬ್ಬಿದ ಗಾಳಿ ಸುದ್ದಿಗೆ ತಳಬುಡವಿಲ್ಲದಿದ್ದರೂ ಸರಿಸುಮಾರು ನಾಲ್ಕು ಕೋಟಿಯ 'ದೇವರು ಕೊಟ್ಟ ತಂಗಿ' ಎಂಬ ಚಿತ್ರ ಓಂಸಾಯಿ ಪ್ರಕಾಶ್ ಪಾಲಿಗೆ ಪ್ರಳಯ ಸ್ವರೂಪಿಯಾಗಿದ್ದಕ್ಕೆ ಮುಖ್ಯ ಕಾರಣ '2012' ಎಂಬ ಹಾಲಿವುಡ್ ಚಿತ್ರವಂತೆ.

ಸರಿಸುಮಾರು ಸಾವಿರ ಕೋಟಿಯ ಬಂಡವಾಳದ ಪ್ರಳಯದ ಕಥಾವಸ್ತುವುಳ್ಳ '2012' ಎಂಬ ಹಾಲಿವುಡ್ ಚಿತ್ರವೊಂದು ಕೇವಲ ಸಾಯಿಪ್ರಕಾಶರನ್ನಷ್ಟೇ ಅಲ್ಲ, ಯೋಗರಾಜ್ ಭಟ್ಟರ 'ಮನಸಾರೆ', ರಮೇಶ್-ಕೋಮಲ್ ಜೋಡಿಯ 3 ಗುಟ್ಟು, ತರುಣ್-ರೇಖಾ ನಟಿಸಿದ 'ಪರಿಚಯ', ದುನಿಯಾ ವಿಜಿಯ 'ದೇವ್ರು', ಲೂಸ್ ಮಾದನ 'ಯೋಗಿ' ಮತ್ತು ಜಗ್ಗೇಶ್ ಮಗನ 'ಗಿಲ್ಲಿ' ಇತ್ಯಾದಿ ಚೂರುಪಾರು ಉಸಿರಾಡುತ್ತಿದ್ದ ಅರ್ಧ ಡಜನ್ ಕನ್ನಡ ಚಿತ್ರಗಳನ್ನೂ ಒಂದೇ ಏಟಿಗೆ ಹೊಸಕಿ ಹಾಕಿದೆ.


ಮೀರಾ ಜಾಸ್ಮಿನ್

ಪ್ರಳಯ ಸನ್ನಿಗೆ ಬಿದ್ದ ಜನ '2012' ಎಂಬ ಚಿತ್ರವನ್ನು ಕಾಳಸಂತೆಯಲ್ಲಿ ಟಿಕೆಟ್ ಕೊಂಡಾದರೂ ನೋಡುತ್ತಿರುವಾಗ 'ದೇವರು ಕೊಟ್ಟ ತಂಗಿ'ಯ ಪುರಾಣ ಯಾರಿಗೆ ಬೇಕು? ಯಾಕೋ ಸಾಯಿಪ್ರಕಾಶ್ ಟೈಮೇ ಖರಾಬ್ ಆಗಿರಬೇಕು.

'ಅಣ್ಣತಂಗಿ', 'ತವರಿಗೆ ಬಾ ತಂಗಿ' ಇತ್ಯಾದಿ 'ತಂಗಿ' ಹಂಗಿನ ಹಿಟ್ ಚಿತ್ರಗಳ ಸರಣಿಯನ್ನೇ ಸೃಷ್ಟಿಸಿದವರು ಓಂ ಸಾಯಿಪ್ರಕಾಶ್. ಪಕ್ಕಾ ಆಟೋ ಚಾಲಕನಂತೆ ಖಾಕಿ ಡ್ರೆಸ್, ಹಣೆಯಲ್ಲಿ ನಿತ್ಯ ಬೆಳಗುವ ಮುತ್ತೈದೆ ಕುಂಕುಮ, ಬಾಯಿಬಿಟ್ಟರೆ ಸಾಕು ಓಂ ಸಾಯಿರಾಮ್ ಮಂತ್ರದ ಸಾಯಿಪ್ರಕಾಶ್ ಹೇಳಿಕೇಳಿ ಅಬ್ಬಾಯಿನಾಯ್ಡು ಅಪರಾವತಾರ. 'ದೇವರು ಕೊಟ್ಟ ತಂಗಿ'ಗಿಂತಲೂ ಮುನ್ನ ತೆಗೆದ 'ಭಾಗ್ಯದ ಬಳೆಗಾರ', 'ಸಿಟಿಜನ್', 'ಜೂಟ್', 'ಉಗಾದಿ', 'ಬಂಧು ಬಳಗ'; ಇತ್ಯಾದಿ ಫ್ಯಾಮಿಲಿ ಸೆಂಟಿಮೆಂಟಿನ ಯಾವೊಂದು ಚಿತ್ರವೂ ಬರಕತ್ತಾಗಲಿಲ್ಲ. ಶಿವಣ್ಣ ಮತ್ತು ಉಪ್ಪಿ ಒಟ್ಟೊಟ್ಟಿಗೆ ನಟಿಸಿದ್ದ 'ಲವಕುಶ' ಎಂಬ ಅತೀ ನಿರೀಕ್ಷೆಯ ಚಿತ್ರ ಕೂಡ ಸಾಯಿಪ್ರಕಾಶ್‌ರನ್ನು ಗೆಲ್ಲಿಸಲಾಗಲಿಲ್ಲ.

ಇಂಥ ದಾರಿದ್ರ್ಯದಲ್ಲೇ ಸಾಯಿಪ್ರಕಾಶ್ ತಮ್ಮ ಮಹತ್ವಾಕಾಂಕ್ಷೆಯ 'ದೇವರು ಕೊಟ್ಟ ತಂಗಿ'ಗೆ ಕೈಯಿಟ್ಟರು. ಜೀವನ ಪೂರ್ತಿ ಗಳಿಸಿದ ದುಡ್ಡೂ ಸಾಲದೇ ಗೋವಿಂದರಾಜನಗರದ ತಮ್ಮ ಮನೆಯನ್ನೇ ಫೈನಾನ್ಸರ್‌ಗೆ ಒತ್ತೆಯಿಟ್ಟು 'ದೇವರು ಕೊಟ್ಟ ತಂಗಿ' ಸೃಷ್ಟಿಗೆ ನಿಂತರು. ಆ ಹೊತ್ತಿಗೆ ಶಿವಣ್ಣನ ಕಾಲ್‌ಶೀಟ್ ಬೇರೆ ಏರಿತ್ತು, ಮೂವತ್ತೊಂಭತ್ತೋ ನಲವತ್ತೋ ಲಕ್ಷ ದಕ್ಕುತ್ತಿದ್ದ ಶಿವಣ್ಣನಿಗೆಂದು ಸಾಯಿಪ್ರಕಾಶ್ ಕೊಟ್ಟಿದ್ದು ಅರವತ್ತೈದು ಲಕ್ಷದ ಕಂತೆಯನ್ನು, ಜೊತೆಗೆ ಮಲೆಯಾಳಿ ಕುಟ್ಟಿ ಮೀರಾ ಜಾಸ್ಮಿನ್‌ಗೆಂದು ಹಲವು ಲಕ್ಷ ಕೈಬಿಟ್ಟವು. ಇನ್ನು ಸಾಧು ಕೋಕಿಲ, ಅವಿನಾಶ್, ದೊಡ್ಡಣ್ಣ, ಹೇಮಾ ಚೌಧುರಿ, ರೇಖಾ, ಎಂ.ಎನ್. ಲಕ್ಷ್ಮೀದೇವಿ, ಮೋನಿಕಾ ಮುಂತಾದ ನಟರಿಗೆಂದು, ಹಂಸಲೇಖಾ ಸಂಗೀತಕ್ಕೆಂದು ಹೆಚ್ಚೂಕಮ್ಮಿ ಒಂದೂಕಾಲು ಕೋಟಿಯಷ್ಟು ದುಡ್ಡು ಶೂಟಿಂಗಿಗೆ ಮೊದಲೇ ಖರ್ಚಾಗಿತ್ತು.

ಪತ್ನಿ ರಾಜಮ್ಮ ಸಾಯಿಪ್ರಕಾಶ್ ಹೆಸರಲ್ಲಿ ಭಾರೀ ನಿರೀಕ್ಷೆಯಿಟ್ಟುಕೊಂಡೆ ಸಾಯಿಪ್ರಕಾಶ್... ತಂಗಿ ಶೂಟಿಂಗ್ ಮುಗಿಸಿದ್ದರು. ವಿಪರ್ಯಾಸವೆಂದರೆ ಇಷ್ಟೆಲ ಸರ್ಕಸ್ ಮಾಡಿ ತೆಗೆದ... ತಂಗಿಯನ್ನು ನೋಡಿದ ಹಂಚಿಕೆದಾರರ್ಯಾರೂ ಸಾಯಿ ಪ್ರಕಾಶ್ ಕೇಳಿದ ರೇಟಿಗೆ ಒಪ್ಪಲೇ ಇಲ್ಲ. ಅದು '..... ತಂಗಿ'ಗೊದಗಿದ ಮೊದಲ ವಿಘ್ನ. ಈ ಹೊತ್ತಿಗಾಗಲೇ ಮೂರೂಕಾಲು ಕೋಟಿಯಷ್ಟು ದುಡ್ಡು ಕೈಬಿಟ್ಟಾಗಿತ್ತು. ಕೊನೆಗೆ ರಿಲೀಸ್ ಮಾಡುವ ಕರ್ಮವನ್ನೂ ತಾವೇ ಹೊ ಸಾಯಿಪ್ರಕಾಶ್ ಪ್ರಚಾರಕ್ಕೊಂದೇ ಸರಿಸುಮಾರು ಮೂವತ್ತೈದು ಲಕ್ಷ ಸುರಿದರು ಮೆಜೆಸ್ಟಿಕ್‌ನ ಭೂಮಿಕಾ, ಮಾಗಡಿ ರಸ್ತೆಯ ಪ್ರಮೋದ್, ಪಿವಿಆರ್, ಉಮಾ ಇತ್ಯಾದಿ ಬೆಂಗಳೂರಿನ ಮಾಮೂಲಿ ಥೇಟರ್‌ಗಳನ್ನು ಬಿಟ್ಟರೆ '.... ತಂಗಿ ತೆರೆಕಂಡಿದ್ದು ಕರ್ನಾಟಕದ ಇಪ್ಪತ್ತೊಂದು ಕೇಂದ್ರಗಳಲ್ಲಿ ಮಾತ್ರ.

ನವೆಂಬರ್ ಹನ್ನೆರಡರಂದು ಭಾರೀ ಸದ್ದು ಮಾಡಿಯೇ ರಾಜ್ಯಾದ್ಯಂ ತೆರೆಕಂಡ 'ದೇವರು ಕೊಟ್ಟ ತಂಗಿ' ಬಹುಶಃ ಕಾಲಿಟ್ಟ ಗಳಿಗೆಯೇ ಸರಿಯಿರಲಿ ವೇನೊ. ಬಿಡುಗಡೆಯಾದ ದಿನ ಕೂಡ ಕರ್ನಾಟಕದ ಯಾವೊಂದು ಥೇಟರಿನಲ್ಲೂ ಹೌಸ್‌ಫುಲ್ಲಾಗಲಿಲ್ಲ. ಎಂಥಾ ಹೀನಾಯವೆಂದರೆ ಹುಬ್ಬಳ್ಳಿಯಾಗಲಿ, ಬೆಂಗಳೂ ರಾಗಲಿ, ಮೈಸೂರು, ಮಂಡ್ಯ ಎಲ್ಲೂ ಮೊದಲ ದಿನ ಕೂಡ ಯಾವುದೇ ಪ್ರದರ್ಶನದಲ್ಲೂ ಪ್ರೇಕ್ಷಕರ ಸಂಖ್ಯೆ ಶೇ. ಮೂವತ್ತೈದನ್ನು ಮೀರಲೇ ಇಲ್ಲ.

ಇವತ್ತಲ್ಲಾ ನಾಳೆ ಪಿಕಪ್ ಆಗೇ ಆಗುತ್ತದೆ ಎಂದು ಲೆಕ್ಕ ಹಾಕಿ ಸಾಯಿಪ್ರಕಾಶ್‌ಗೆ ಅದರ ಮರುದಿನ '2012' ಎಂಬ ಹಾಲಿವುಡ್ ಚಿ ಬಿಡುಗಡೆಯಾಗಿದ್ದು ಭಯಂಕರ ಪೆಟ್ಟನ್ನೇ ಕೊಟ್ಟಿತ್ತು. ಪ್ರಳಯದ ಸನ್ನಿಯನ್ನೇ ಎಬ್ಬಿಸಿದ '2012' ರಿಲೀಸ್ ಆದ ದಿನದಿಂದ ಯಾಪಾಟಿ ಹೌಸ್‌ಫುಲ್ಲಾಯಿತೆಂದ ಚಿತ್ರದುರ್ಗ, ಮೈಸೂರಿನಂಥ ಊರಲ್ಲೂ ಟಿಕೆಟ್ಟೊಂದು ನೂರು ರೂಪಾಯಿ ಕಾಳಸಂತೆಯಲ್ಲಿ ಬಿಕರಿಯಾಗುತ್ತಿತ್ತು. '2012'ಕ್ಕಿಂತಲೂ ಒಂದು ದಿನ ಮೊದಲೆ ಬಿಡುಗಡೆಯಾಗಿದ್ದ 'ದೇವರು ಕೊಟ್ಟ ತಂಗಿ'ಯ ಕಲೆಕ್ಷನ್ ಎರಡನೇ ದಿನ ಶೇ. 25 ಕ್ಕೆ ಕುಸಿಯಿತು. ಮೂರನೇ ದಿನಕ್ಕದು ಶೇ. 2 ಕ್ಕಿಳಿದು ಎರಡನೇ ವಾರಕ್ಕೆ 'ದೇವರು ಕೊಟ್ಟ ತಂಗಿ' ಕಾಲಿಡು ಹೊತ್ತಿಗೆ ಶೇ. 18 ರಿಂದ ಹನ್ನೆರಡನ್ನು ಮುಟ್ಟಿತು.

ಆಗಲೇ ಸಾಯಿ ಪ್ರಕಾಶ್ ಕುಸಿದು ಕುಳಿತದ್ದು. ದಿನದಿಂ ದಿನಕ್ಕೆ '...... ತಂಗಿ'ಯ ಗಳಿಕೆ ಉರುಳುರುಳಿ ಬೀಳುತ್ತಿದ್ದ '2012' ಹೌಸ್‌ಫುಲ್ಲಾಗುತ್ತಲೇ ಇತ್ತು. ಅಂಥಾ 'ಮನಸಾ ಚಿತ್ರವೇ ಪ್ರಳಯದ ಸಿನಿಮಾ ಮುಂದೆ ಸುಸ್ತು ಹೊಡೆದ ಮಲಗಿರುವಾಗ ತನ್ನದಿನ್ನು ಯಾವ ಲೆಕ್ಕ? ಎಂದ ಸಾಯಿಪ್ರಕಾ ಮೂರೂವರೆ ಕೋಟಿಗೆ ಗ್ರಾಚಾರ ಬಂತೆಂದೇ ತಲೆ ಚ ಕೊಂಡರು. ಬಿಡುಗಡೆಯ ಹೊತ್ತಿಗಾಗಲೇ '...... ತಂಗಿ'ಯ ಒಟ್ಟೂ ಬಜೆಟ್ಟು ನಾಲ್ಕು ಕೋಟಿ ಮುಟ್ಟಾಗಿತ್ತು. ಬಿಡುಗ ನಂತರದ ಗಳಿಕೆ ಥೇಟರುಗಳ ಬಾಡಿಗೆಗೂ ಗಿಟ್ಟದೇ ಬೆಂಗಳೂ ಸೇರಿದಂತೆ ಕರ್ನಾಟಕದ ಬಹುತೇಕ ಥೇಟರುಗಳ ಬಾಡಿ ಪೂರ್ತಿ ಸಾಯಿಪ್ರಕಾಶ್ ತಲೆಗೇ ಬಿತ್ತು.

ಹಾಕಿದ ಬಂಡವಾಳ ಹಾಳಾಗಿ ಥೇಟರುಗಳ ಬಾಡಿಗೆಗೂ ಸಾಲ ತಂ ಕಟ್ಟಬೇಕಾದ ಹತಾಶ ಸ್ಥಿತಿಗಿಳಿದ ಸಾಯಿಪ್ರಕಾಶ್ '...... ತಂಗಿ' ಬಿಡುಗಡೆಯಾ ಎರಡು ವಾರ ತುಂಬುವ ಮೊದಲೇ ಭೂಗತರಾದರು. ಸದ್ಯ ಮೆಜೆಸ್ಟಿಕ್ 'ಭೂಮಿಕಾ' ಥೇಟರ್ ಬಿಟ್ಟರೆ ಕರ್ನಾಟಕದ ಬಹುತೇಕ ಥೇಟರುಗಳಿಂ '...... ತಂಗಿ' ಕಣ್ಮರೆಯಾಗಿದೆ. ಸಾಯಿಪ್ರಕಾಶ್ ಯಾರ ಕೈಗೂ ಸಿಗು ಮಾತಿರಲಿ ಕನಿಷ್ಠ ಫೋನ್ ಕೂಡ ಎತ್ತುವುದಿಲ್ಲ. ಒಂದು ಮೂಲದ ಪ್ರಕಾ ಸ್ಯಾಟ್‌ಲೈಟ್ ಬಾಬತ್ತೆಂದು ಎಂಬತ್ತು ಲಕ್ಷ ಸಿಕ್ಕಿದ್ದು ಬಿಟ್ಟರೆ 'ದೇವರು ಕೊ ತಂಗಿ' ಸಾಯಿಪ್ರಕಾಶ್ ಕೈಗೆ ಸರಿಸುಮಾರು ಮೂರೂವರೆ ಕೋಟಿಯ ಚೊಂ ಕೊಟ್ಟಿದ್ದಾಳೆ. ಪೇಲವ ಕತೆ, ನಿಸ್ತೇಜ ಸಂಗೀತ, ಅದೇ ಮಾಮೂಲಿ ಪಾತ್ರಗಳನ್ನು ಜನ ಎಷ್ಟು ಅಂತ ನೋಡುತ್ತಾರೆ?

ಯಾವುದೋ ಓಬೀರಾಯನ ಕಾಲದ ಕತೆ ಹೆಣೆದು ನಾಲ್ಕು ಕೋ ಸುರಿದು ಏನೇ ಸರ್ಕಸ್ ಮಾಡಿದರೂ ತಂಗಿ ಸೆಂಟಿಮೆಂಟು ಬಾಳಿಕೆ ಬರಬೇಕ ಆದೀಗ ಸವಕಲು ನಾಣ್ಯ. ಹಾಲಿವುಡ್ ಎಬ್ಬಿಸಿದ ಪ್ರಳಯದ ಸನ್ನಿಯ ಮುಂ ತಂಗಿಯ ಗೋಳು ಯಾರಿಗೆ ಬೇಕು?

● ರಾ. ಸೋಮನಾಥ



ದರ್ಶನ್


ದರ್ಶನ್-ಉಪ್ಪಿಯದೂ ಇದೇ ಹಣೆಬರಹ

ಇದೇ ಶಿವಣ್ಣ-ಸಾಯಿಪ್ರಕಾಶ್ ಕಾಂಬಿನೇಷನ್ನಿದ್ದ 'ಭಾಗ್ಯದ ಬಳೆಗಾರ' ತೆರೆ ಕಾಣುವ ಮೊದಲೇ ಒಂದೂವರೆ ಕೋಟಿಯ ಸಾಲದಲ್ಲಿದ್ದದ್ದು ಬಿಡುಗಡೆಯಾದ ಮೇಲೆ ನಷ್ಟದ ಒಟ್ಟು ಮೊತ್ತವನ್ನು ಎರಡು ಕೋಟಿಗೇರಿಸಿತು.


ಇದು ಶಿವಣ್ಣನ ಗತಿಯಾದರೆ, ದರ್ಶನ್ ಹಾಕಿಕೊಂಡು 'ಅಭಯ್' ತೆಗೆದ ಬಾಬುರೆಡ್ಡಿ ಅದನ್ನು ರಿಲೀಜ್ ಮಾಡಿದ ತಪ್ಪಿಗೆ ಎರಡು ಕೋಟಿ ಕಳಕೊಂಡ. ಉಪ್ಪಿಯನ್ನು ಹಾಕಿಕೊಂಡು ರಜನಿ ನಿರ್ಮಿಸಿದ ರಾಮುಗೆ ಎಂಥಾ ಶಾಕ್ ಕಾದಿತ್ತೆಂದರೆ ರಜೆಯ ದಿನವೇ 'ರಜನಿ' ತೆರೆಕಂಡರೂ ಅದರ ಮಾರ್ನಿಂಗ್ ಷೋ ಕೂಡ ಹೌಸ್‌ಫುಲ್ಲಾಗಿರಲಿಲ್ಲ.

ಇದು ವಾಸ್ತವ. ಈ ವರ್ಷ ತೆರೆಕಂಡ ಅಷ್ಟೂ ಕನ್ನಡ ಚಿತ್ರಗಳ ಪೈಕಿ 'ಜಂಗ್ಲಿ' ಮತ್ತು 'ಮನಸಾರೆ' ಚೂರೂಪಾರು ಗಳಿಸಿದ್ದು ಬಿಟ್ಟರೆ ದರ್ಶನ್, ಸುದೀಪ್, ಉಪ್ಪಿ, ಶಿವಣ್ಣ, ಲೂಸ್ ಮಾದ ಯಾರಿಗೂ ಬೋಣಿಯಾಗುತ್ತಿಲ್ಲ. ಸಿನಿಮಾದ ಅರ್ಧ ಬಜೆಟ್ಟನ್ನೇ ಸಂಭಾವನೆಯಾಗಿ ನುಂಗುವ ಇಂಥ ಹೀರೋಗಳ ಮುಖಕ್ಕೆ ಕನಿಷ್ಠ ಮಾರ್ನಿಂಗ್ ಷೋ ಕೂಡ ಹೌಸ್‌ಫುಲ್ಲಾಗುತ್ತಿಲ್ಲ. ಇಂಥ ಹೀರೋಗಳನ್ನು ನಂಬಿಕೊಂಡು ಕತೆ ಹೇಗಿದ್ದರೂ ಪರವಾಗಿಲ್ಲ ಎಂದು ರೊಕ್ಕ ಸುರಿಯುವ ಸಾಯಿಪ್ರಕಾಶ್ ಥರದವರಿಗೆ ಇದಕ್ಕಿಂತ ಇನ್ನೆಂಥಾ ಗತಿ ಸಾಧ್ಯ? ●


ರಾಮು



ಕುಮಾರಣ್ಣನಿಗೆ 'ಕೀರುತಿ' ರಾಧಿಕಾಗೆ 'ಆರತಿ'!



ಮುಂಬೈನ ತಾಜ್ ಹೋಟೆಲ್‌ಗೆ ಉಗ್ರರು ನುಸುಳಿದಾಗ ಮಾಧ್ಯಮದವರು ಅದರೆದುರು ನಿಂತು ಲೊಚಗುಟ್ಟಿದ್ದರಲ್ಲಾ? ಹೆಚ್ಚೂ ಕಡಿಮೆ ಅದನ್ನೇ ನೆನಪಿಸುತ್ತಿಲ್ಲವೇ ಇಲ್ಲಿರುವ ಚಿತ್ರ?!

ಇದು ಜಯನಗರ ಮೂರನೇ ಬ್ಲಾಕ್‌ನಲ್ಲಿರುವ ಕ್ರಿಡೆಲ್ ಎಂಬ ಐಷಾರಾಮಿ ಆಸ್ಪತ್ರೆ.

ಅದು 'ಬಾಯಲ್ಲಿ ಚಿನ್ನದ ಚಮಚ ಇಟ್ಟುಕೊಂಡೇ ಭೂಮಿಗಿಳಿಯುವ' ಶ್ರೀಮಂತ ಮಕ್ಕಳ ಹೆರಿಗೆಗೆಂದೇ ಇರುವ, ಅತ್ಯಂತ ನವೀನ ಯಂತ್ರೋಪಕರಣಗಳನ್ನು ಹೊಂದಿರುವ ಬೆಂಗಳೂರಿನ ದುಬಾರಿ ಹೈಟೆಕ್ ಹೆರಿಗೆ ಆಸ್ಪತ್ರೆ.

ಈಗ ಮಾಜಿ ಮುಖ್ಯಮಂತ್ರಿ ಕುಮಾರಣ್ಣ ಮತ್ತು ಶ್ರೀಮತಿ ರಾಧಿಕಾ ಅವರ ಎರಡನೇ ಕುಡಿ ಜನ್ಮವೆತ್ತಿರುವುದೂ ಇದೇ ಆಸ್ಪತ್ರೆಯಲ್ಲೇ!

ಇದನ್ನೆಲ್ಲಾ ನೋಡಿದರೆ ಕಬಾಬು ಚೆಲುವೆ ರಾಧಿಕಾ ನಟನೆಯಿಂದ ವಾಲಂಟರಿ ರಿಟೈರ್‌ಮೆಂಟು ಪಡೆದು ಈಗ ಪರ್ಮನೆಂಟಾಗಿ ಮಕ್ಕಳನ್ನು ಹೆರುವ ಫ್ಯಾಕ್ಟರಿ ತೆರೆದುಕೊಂಡಂತೆ ಕಾಣುತ್ತಿದೆ....!

'ರಾಧಿಕಾ ಮತ್ತೆ ಪ್ರೆಗ್ನೆಂಟಂತೆ' ಅನ್ನೋ ಗಾಳಿ ಸುದ್ದಿ ಮೂರು ತಿಂಗಳ ಹಿಂದೆಯೇ ತೇಲಿಬಂದಿತ್ತು, ಕಳೆದ ಅಕ್ಟೋಬರ್ 9ರಂದು ಗರ್ಭವತಿ ರಾಧಿಕಾ ಜಯನಗರದ ಕ್ರಿಡೆಲ್ ಆಸ್ಪತ್ರೆಗೆ ಚೆಕಪ್‌ಗೆಂದು ಹೋದಾಗ ಆ ಸುದ್ದಿ ಎಲ್ಲೆಡೆ ಹರಡಿತ್ತು.

ಈಗ ಕ್ರಿಡೆಲ್ ಆಸ್ಪತ್ರೆಯಲ್ಲಿ ರಾಧಿಕಾಳಿಗೆ ಹೆರಿಗೆಯಾಗಿರುವ ವಿಚಾರವನ್ನು ದಿನಪತ್ರಿಕೆಗಳೂ ತಮ್ಮ ಮುಖಪುಟದಲ್ಲಿ ಪ್ರಕಟಿಸಿವೆ.

ಎರಡನೇ ಮುಹೂರ್ತ!

ಕಳೆದ ವರ್ಷದ ಅಂತ್ಯದಲ್ಲಿ ನಡೆದ ಉಪ ಚುನಾವಣೆಯಲ್ಲಿ ತನ್ನ ಪತ್ನಿ ಅನಿತಾರನ್ನು ಮಧುಗಿರಿ ವಿಧಾನಸಭಾ ಕ್ಷೇತ್ರದಿಂದ ಕಣಕ್ಕೆ ಇಳಿಸಿದ್ದರು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ. ತನ್ನ ಪತ್ನಿಯನ್ನು ಶತಾಯಗತಾಯ ಗೆಲ್ಲಿಸಲೇಬೇಕೆಂದು ಪಣತೊಟ್ಟ ಕುಮಾರಣ್ಣ ಮಧುಗಿರಿಯ ರೋಡುರೋಡುಗಳಲ್ಲಿ ಮತಯಾಚಿಸಿದ್ದರು. ಕೊನೆಗೂ ಅನಿತಾರನ್ನು ಅಭೂತಪೂರ್ವವಾಗಿ ಗೆಲ್ಲಿಸಿ ವಿಧಾನಸೌಧದ ಮೆಟ್ಟಿಲುಗಳನ್ನೇರಿಸಿದ್ದರು.

ಹೀಗೆ ಹಲವು ವಾರಗಳ ಕಾಲ ಮಧುಗಿರಿಯ ರಣಬಿಸಿಲಿನಲ್ಲಿ ಓಡಾಡಿದ್ದ ಕುಮಾರಣ್ಣನಿಗೆ ಅದೆಂಥಾ ದೇಹಾಲಸ್ಯ ಕಾಡಿತ್ತೋ ಏನೋ. ಎಲೆಕ್ಷನ್‌ನಲ್ಲಿ ಗೆದ್ದ ಅನಿತಕ್ಕನನ್ನು ವಿಧಾನಸೌಧಕ್ಕೆ ಕಳುಹಿಸಿದ ಕುಮಾರಣ್ಣ ಅದಾದ ಎರಡೇ ದಿನಗಳಲ್ಲಿ ತಮ್ಮ ಗೆಳತಿ ರಾಧಿಕಾಳೊಂದಿಗೆ ವಿಮಾನವೇರಿ ನೇರವಾಗಿ ಮಾಲ್ಡೀವ್ಸ್‌ಗೆ ಹಾರಿದ್ದರು. ಈ 'ಅಪರೂಪದ ಜೋಡಿ' ವಿಮಾನದಲ್ಲಿ ಅಕ್ಕಪಕ್ಕ ಕುಳಿತು ಪ್ರಯಾಣ ಬೆಳೆಸಿದ್ದರ ಬಗ್ಗೆ ಕುಮಾರಸ್ವಾಮಿಯವರ ವೈರಿಗಳು ಬೋರ್ಡಿಂಗ್ ಪಾಸ್‌ಗಳ ಪ್ರತಿಗಳನ್ನು ಪಡೆದು ಅವುಗಳನ್ನು ದಿನಪತ್ರಿಕೆಗಳ ಕಚೇರಿಗಳಿಗೆ ಕಳುಹಿಸಿ ತಮಾಷೆ ನೋಡಿದ್ದರು.



ರಾಧಿಕಾ

ಆದರೆ ಇದ್ಯಾವುದರ ಬಗ್ಗೆಯೂ ಕುಮಾರಸ್ವಾಮಿ ತಲೆಕೆಡಿಸಿಕೊಳ್ಳಲಿಲ್ಲ, ಬದಲಾಗಿ ರಾಧಿಕಾ ತನ್ನ ತವರೂರಾದ ಉಡುಪಿ ಸಮೀಪದ ಪಾಲೆತ್ತೂರಿನಲ್ಲಿರುವ ಫಾರ್ಮ್‌ನಲ್ಲಿ ನಾಗಮಂಡಲ ಇಡಿಸಿದಾಗ ಅಲ್ಲಿಗೂ ಕುಮಾರಣ್ಣ ಹಾಜರಾಗಿ ಬಹಿರಂಗವಾಗಿ ಆಕೆಯೊಂದಿಗೆ ಕಾಣಿಸಿಕೊಂಡಿದ್ದರು.

ಈ ಮಧ್ಯೆ ಕುಮಾರಸ್ವಾಮಿ- ರಾಧಿಕಾಳ ಸಂಬಂಧ ಕುರಿತಂತೆ ದೇವೇಗೌಡರ ಕುಟುಂಬದಲ್ಲಿ ರಂಪಾಟ ನಡೆದಿತ್ತು ಎಂಬ ಸುದ್ದಿಯೂ ಹೇಳಿಬಂದಿತ್ತು. ಅನಿತಕ್ಕ ಅಂದು ಮಾಡಿದ ಗಲಾಟೆ, ಇಟ್ಟ ಕಣ್ಣೀರೆಲ್ಲ ಸಂಪೂರ್ಣವಾಗಿ ವಿಫಲವಾಗಿವೆ ಎಂಬುದನ್ನು ರಾಧಿಕಾಳ ಎರಡನೆ ಮಗುವಿನ ಜನ್ಮ ಸಾರುತ್ತಿದೆ..


ಮೊದಲನೆ ಮಗು

ಕುಮಾರಸ್ವಾಮಿ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗಲೇ ರಾಧಿಕಾಳೊಂದಿಗಿನ ಅವರ ನಂಟು ಬಹಿರಂಗಗೊಂಡಿತ್ತು, ಗ್ರಾಮ ವಾಸ್ತವ್ಯ ಎಂದು ರಾಜ್ಯದ ಮೂಲೆ ಮೂಲೆಯನ್ನು ಸುತ್ತಾಡುತ್ತಿದ್ದ ಕುಮಾರಣ್ಣ ತಮ್ಮ ದಣಿವನ್ನು ನಿವಾರಿಸಿಕೊಳ್ಳುತ್ತಿದ್ದದ್ದೇ ರಾಧಿಕಾಳ ಮನೆಯಲ್ಲಿ, ಇದೆಲ್ಲದರ ಪ್ರತಿಫಲವೆಂಬಂತೆ ರಾಧಿಕಾ ಗರ್ಭವತಿ ಯಾದಳು.



ಅನಿತಾ

ರಾಧಿಕಾಳ ಪ್ರೆಗ್ನೆಂಸಿಯಿಂದ ಇಕ್ಕಟ್ಟಿಗೆ ಸಿಕ್ಕಿಹಾಕಿಕೊಂಡಿದ್ದು 'ಈಶ್ವರ್' ಚಿತ್ರದ ನಿರ್ಮಾಪಕ ಶಂಕರ್ ಗೌಡ. ಆ ಚಿತ್ರದಲ್ಲಿ ಆದಿತ್ಯನೊಂದಿಗೆ ರಾಧಿಕಾ ನಟಿಸಿದ್ದಳು. 'ಈಶ್ವರ್' ಚಿತ್ರದ ಬಹುತೇಕ ಚಿತ್ರೀಕರಣ ಅಂತಿಮಘಟ್ಟದಲ್ಲಿದ್ದಾಗ ರಾಧಿಕಾ ಬದುಕಲ್ಲಿ 'ಕುಮಾರ ಸಂಭವ'ವಾಗಿದ್ದೇ ತಡ ರಾಧಿಕಾ ಉಳಿದ ಭಾಗದ ಚಿತ್ರೀಕರಣಕ್ಕೆ ಬರುವುದನ್ನೇ ನಿಲ್ಲಿಸಿಬಿಟ್ಟಳು. ಅರ್ಧಂಬರ್ಧಕ್ಕೆ ಚಿತ್ರೀಕರಣ ನಿಂತುಹೋಗಿದ್ದರಿಂದ ನಿರ್ಮಾಪಕ ಶಂಕರೇಗೌಡ ಲಬಲಬೊ ಬಾಯಿ ಬಡಿದುಕೊಳ್ಳಲು ಶುರು ಮಾಡಿದ. ಛೇಂಬರ್ ಮುಂದೆ ಕಂಪ್ಲೇಂಟು ಕೊಡುತ್ತೇನೆಂದು ಊಳಿಡಲು ಆರಂಭಿಸಿದ.



ರವಿರಾಜ್

ಅಕಸ್ಮಾತ್ ಶಂಕರೇಗೌಡ ಛೇಂಬರ್ ಮೆಟ್ಟಿಲೇರಿದರೆ ಎಲ್ಲ 'ವಿಚಾರ' ಬಹಿರಂಗವಾಗಿಬಿಡುತ್ತದೆ ಎಂಬುದನ್ನು ಅರಿತ ರಾಧಿಕಾ 'ಈಶ್ವರ್' ಚಿತ್ರ ನಿರ್ಮಾಣಕ್ಕೆ ತಗುಲಿದ್ದ ಖರ್ಚಿಗೆ ಎರಡು ಪಟ್ಟು ಅಂದರೆ ಮೂರೂವರೆ ಕೋಟಿ ರೂಪಾಯಿಗಳನ್ನು ಶಂಕರೇಗೌಡನಿಗೆ ಕೊಟ್ಟು ಆ ಚಿತ್ರವನ್ನು ತನ್ನ ಅಣ್ಣ ರವಿರಾಜನ ಹೆಸರಲ್ಲಿ ಖರೀದಿಸಿಬಿಟ್ಟಳು.



ಶಂಕರ್

ಅದಕ್ಕೂ ಮುನ್ನ ಇದ್ದಬದ್ದ ಸಿನಿಮಾ ಕಮಿಟ್‌ಮೆಂಟ್‌ಗಳನ್ನೆಲ್ಲ ಅರ್ಜೆಂಟಾಗಿ ಮುಗಿಸಿದ್ದ ರಾಧಿಕಾ ಹೊಸ ಚಿತ್ರಗಳಿಗೆ ಸಹಿ ಹಾಕುವುದನ್ನೇ ನಿಲ್ಲಿಸಿದಳು. ಆದರೆ 'ಕಣ್ಣೀರು ಚಿತ್ರಗಳ ಸರದಾರ' ಸಾಯಿಪ್ರಕಾಶ್ ಅವರ ನಿರ್ದೇಶನದ 'ದೇವರು ಕೊಟ್ಟ ತಂಗಿ' ಚಿತ್ರದಲ್ಲಿ ಶಿವಣ್ಣನ ತಂಗಿಯ ಪಾತ್ರದಲ್ಲಿ ನಟಿಸುವುದಾಗಿ ರಾಧಿಕಾ ಒಪ್ಪಿದ್ದಳಂತೆ. ಆ ಕಾರಣಕ್ಕೆ 'ರಾಧಿಕಾ ವಸ್ತುಂದಿ ವಸ್ತುಂದಿ' ಅಂತಾ ಸಾಯಿಪ್ರಕಾಶ್ ಕಾದೂ ಕಾದೂ ಕಡೆಗೆ ತಾವೇ ಕಣ್ಣೀರಿಡುವ ಹಂತ ತಲುಪಿದರು. ಆದರೆ ರಾಧಿಕಾ ಮಾತ್ರ ಲಂಡನ್‌ಗೆ ಹಾರಿ ಹೋಗಿ ಅಲ್ಲಿನ ಸುಸಜ್ಜಿತ ಆಸ್ಪತ್ರೆಯಲ್ಲಿ ಮೊದಲ ಮಗುವಿಗೆ ಜನ್ಮನೀಡಿ "ಲಾಲಿ ಲಾಲಿ ಸು'ಕುಮಾರ'...." ಎಂದು ತನ್ನ ಮಗನ ಶುಶ್ರೂಷೆಯಲ್ಲಿ ತೊಡಗಿದಳು!

ಇದಾದ ಒಂದೂವರೆ ತಿಂಗಳ ನಂತರ ರಾಧಿಕಾ ಪ್ರತ್ಯಕ್ಷವಾಗಿದ್ದು ಮೈಸೂರಿನಲ್ಲಿರುವ ಮೈಸೂರು ಲ್ಯಾಂಪ್ಸ್ ಫ್ಯಾಕ್ಟರಿಯ ಕಾಂಪೌಂಡಿನೊಳಗೆ. ಅದು 'ಈಶ್ವರ್' ಚಿತ್ರದ ಹಾಡಿನ ಚಿತ್ರೀಕರಣ. ಅಸಲಿಗೆ ಆ ಹಾಡನ್ನು ಅದಕ್ಕೂ ಮೊದಲೇ ಚಿತ್ರೀಕರಣ ಮಾಡಲಾಗಿತ್ತು, ಆದರೆ ಮೊದಲು ಶೂಟ್ ಆಗಿದ್ದ ಆ ಹಾಡಿನಲ್ಲಿ ರಾಧಿಕಾ ತುಂಡು ಬಟ್ಟೆಯನ್ನು ತೊಟ್ಟು ಸಖತ್ ಸ್ಪೈಸಿಯಾಗಿ ಕಾಣಿಸಿ ಕೊಂಡಿದ್ದಳಂತೆ. ಇದನ್ನು ನೋಡಿದ ಕುಮಾರಣ್ಣ 'ಇದೆಲ್ಲಾ ನನಗೆ ಹಿಡಿಸೊಲ್ಲ, ಮತ್ತೆ ರೀ ಶೂಟ್ ಮಾಡು' ಎಂದು ಹಠ ಹಿಡಿದು ಕೂತುಬಿಟ್ಟರಂತೆ. ಹೀಗಾಗಿ ಮೈತುಂಬ ಬಿಳೀ ಬಟ್ಟೆ ತೊಟ್ಟು ಅದೇ ಹಾಡಿಗೆ ರಾಧಿಕಾ ಧಿಮಿಕಿಟ ಹೆಜ್ಜೆ ಹಾಕಿದ್ದಳು.


ಆಗ ಆಕೆಯ ಬೆನ್ನತ್ತಿ ಹೋದ ಪತ್ರಕರ್ತರ ಮುಂದೆ "ಇದು ನಾನು ನಟಿಯಾಗಿ ನಟಿಸುತ್ತಿರುವ ಕೊನೆಯ ಚಿತ್ರ. ಇನ್ನು ಮುಂದೆ ನಾನು ಮುಖಕ್ಕೆ ಬಣ್ಣ ಹಚ್ಚಿ ಯಾವುದೇ ಹೊಸ ಚಿತ್ರದಲ್ಲಿ ನಟಿಸುವುದಿಲ್ಲ, ಈ ಬಗ್ಗೆ ನಾನು ದೃಢವಾಗಿ ಒಂದು ತೀರ್ಮಾನಕ್ಕೆ ಬಂದಿದ್ದೇನೆ" ಎಂದು ನಟನೆಗೆ ವಿದಾಯ ಹೇಳುವ ಮಾತನ್ನು ಆಡಿದ್ದಳು.

ಕರಾವಳಿ ಕನ್ಯೆ ರಾಧಿಕಾ ಹೀಗೆ ರಿಟೈರ್‌ಮೆಂಟ್ ಘೋಷಿಸಿದ ಒಂಭತ್ತನೇ ತಿಂಗಳಿಗೆ ಕರೆಕ್ಟಾಗಿ ಈಗ 'ಮಣ್ಣಿನ ಮಗಳಿಗೆ' ಜೀವ ಕೊಟ್ಟಿದ್ದಾಳೆ. ಎರಡು ವರ್ಷಕ್ಕೆ ಮುಂಚೆಯೇ ಕುಮಾರಣ್ಣನ ಕೀರ್ತಿಗೆ ಗಂಡು ಸಂತಾನ ಪಡೆದಿದ್ದ ಈ ಜೋಡಿಯ ಮಡಿಲಿಗೆ ಈಗ ರಾಧಿಕಾಳ ಆರತಿಗೆ ಕುವರಿಯೊಂದರ ಆಗಮನವಾಗಿದೆ.

ದೇವೇಗೌಡ ಎಂಬ 'ಮಣ್ಣಿನ ಮಗ'ನ ವಂಶ ಹೀಗೆ ನಿರಾತಂಕವಾಗಿ ಬೆಳೆಯುತ್ತಿದೆ...

●ಅರುಣ್ ಕುಮಾರ್.ಜಿ

ಕಾರ್ಟೂನ್ ಕಾರ್ನರ್





ಲಿಬರ್ಹಾನ್ ವರದಿ

ಕಳಚಿಬಿದ್ದ ಸೌಮ್ಯ ಮುಖವಾಡ ತೆರೆದುಕೊಂಡ ವ್ಯಾಘ್ರ ಮುಖ

ಹೇ ರಾಮ್ ಬಚಾವ್ರೋ

ಈಗಾಗಲೇ ಬೀದಿನಾಯಿ ಜಗಳದಂತಹ ಆಂತರಿಕ ಮಾರಾಮಾರಿಯಿಂದ ಬಳಲಿ ಬಸವಳಿದು ನೆಲಕ್ಕೆ ಬಿದ್ದಿರುವ ಬಿಜೆಪಿಯ ಮೇಲೆ ಜಸ್ಟಿಸ್ ಮನಮೋಹನ್ ಸಿಂಗ್ ಲಿಬರ್ಹಾನ್ ಮತ್ತೊಂದು ಚಪ್ಪಡಿ ಕಲ್ಲು ಎಳೆದು ಮೇಲೇಳದಂತೆ ಮಾಡಿದ್ದಾರೆ. ಚಾರಿತ್ರಿಕ ಬಾಬ್ರಿ ಮಸೀದಿ ಧ್ವಂಸದಲ್ಲಿ ತಮ್ಮದೇನೂ ಪಾತ್ರವಿಲ್ಲ, ತಾವು ನಿರ್ದೋಷಿಗಳೆಂದು ಅಮಾಯಕರಂತೆ ಕಣ್ಣೀರಿಡುತ್ತಿದ್ದ ಎಲ್ಲಾ ಬಿಜೆಪಿ ಮತ್ತು ಸಂಘಪರಿವಾರಿಗಳ ಅಸಲೀ ಮುಖವನ್ನು ದಾಖಲೆ ಸಮೇತವಾಗಿ ಬಿಚ್ಚಿಟ್ಟಿದ್ದಾರೆ. ಅದರಲ್ಲೂ ವಿಶೇಷವಾಗಿ ಬಿಜೆಪಿಯ ಸೌಮ್ಯಮುಖ ಎಂದೇ ಬಿಂಬಿಸಲಾಗಿದ್ದ ವಾಜಪೇಯಿಯನ್ನೂ ಒಳಗೊಂಡಂತೆ ಎಲ್.ಕೆ.ಅಡ್ವಾಣಿ, ಮುರಳಿ ಮನೋಹರ ಜೋಷಿ ಸೇರಿದಂತೆ 68 ಜನರ ಅಸಲೀ ವ್ಯಾಘ್ರ ಮುಖವನ್ನು ಬಿಚ್ಚಿಟ್ಟು ಅವರಿಗೆ "ಢೋಂಗಿ ಸೌಮ್ಯವಾದಿಗಳು" ಎಂಬ ಬಿರುದು ಕೊಟ್ಟು ಬರೆ ಎಳೆದಿದ್ದಾರೆ.

ಲಿಬರ್ಹಾನ್ ವರದಿ ಸಂಸತ್ತಿನಲ್ಲಿ ಮಂಡನೆಯಾಗುವ ಮೊದಲೇ 'ಇಂಡಿಯನ್ ಎಕ್ಸ್‌ಪ್ರೆಸ್' ಇಂಗ್ಲಿಷ್ ಪತ್ರಿಕೆಯು ಮುಖಪುಟದಲ್ಲಿ ಅದರ ಸಾರಾಂಶ ಪ್ರಕಟಗೊಳ್ಳುತ್ತಿದ್ದಂತೆಯೇ ಅಡ್ವಾಣಿಯಾದಿಯಾಗಿ ಬಿಜೆಪಿಗಳು ಸಂಸತ್ತಿನ ಉಭಯ ಸದನಗಳಲ್ಲಿ ಕುಂಡೆಗೆ ಚೇಳು ಕಡಿದವರಂತೆ ಅರಚಾಡಲಾರಂಭಿಸಿದರು. ವಾಸ್ತವದಲ್ಲಿ ಅವರ ಎದೆಗೆ ಗುದ್ದಿದ್ದು ವರದಿಯು ಸಂಸತ್ತಿನಲ್ಲಿ ಮಂಡನೆಯಾಗುವ ಮೊದಲೇ ಸಾರ್ವಜನಿಕವಾಗಿ ಪತ್ರಿಕೆಗೆ ಸೋರಿಕೆಯಾಗಿ ಪ್ರಕಟಗೊಂಡಿದ್ದಲ್ಲ, ಬದಲಿಗೆ, ಇಲ್ಲಿಯ ತನಕ ತಾವು ನಿರ್ದೋಷಿಗಳೆಂದು ಅಮಾಯಕರಂತೆ ನಾಟಕವಾಡುತ್ತಿದ್ದ ಬಿಜೆಪಿ ನಾಯಕರ ಅಸಲೀ ಚಹರೆಯನ್ನು ಬಿಚ್ಚಿಟ್ಟು ಬಾಬ್ರಿ ಮಸೀದಿ ಧ್ವಂಸದಲ್ಲಿ ಅವರೇ ನೇರ ಹೊಣೆಗಾರರು ಎಂಬುದನ್ನು ಸ್ಪಷ್ಟವಾಗಿ ದಾಖಲೆ ಸಮೇತ ಹೇಳಿರುವ ವಿವರಗಳು ಸಾರ್ವಜನಿಕರಿಗೆ ಗೊತ್ತಾಗಿಬಿಟ್ಟಿವಲ್ಲ ಎಂಬುದಕ್ಕೆ. ವಿಶೇಷ ಎಂದರೆ ಇದರ ವಿರುದ್ಧ ಸದನಗಳಲ್ಲಿ "ಜೈ ಶ್ರೀರಾಮ್" ಎಂಬ ಘೋಷಣೆ ಕೂಗುತ್ತಾ ಗಲಾಟೆ ಎಬ್ಬಿಸಿದರೂ ವರದಿಯು ಬಹಿರಂಗಗೊಳ್ಳುವುದನ್ನು, ಅವರ ಮುಖವಾಡ ಕಳಚುವುದನ್ನು ತಡೆಯುವುದಕ್ಕೆ ಯಾವ 'ಶ್ರೀರಾಮಚಂದ್ರ'ನೂ ಬರಲಿಲ್ಲ!

ಕುಮಾರ್ ಬುರಡಿಕಟ್ಟಿ






1992 ಡಿಸೆಂಬರ್ 6 ಆಧುನಿಕ ಭಾರತದ ಚರಿತ್ರೆಯಲ್ಲೇ ಒಂದು ಕರಾಳ ದಿನ. ಹದಿನಾರನೇ ಶತಮಾನದಲ್ಲಿ ನಿರ್ಮಾಣಗೊಂಡ ಬಾಬ್ರಿ ಮಸೀದಿಯನ್ನು ಬಿಜೆಪಿ, ಆರೆಸ್ಸೆಸ್, ವಿಶ್ವ ಹಿಂದೂ ಪರಿಷತ್, ಭಜರಂಗ ದಳ, ಶಿವಸೇನೆ ಮುಂತಾದ ಭಯೋತ್ಪಾದಕ ಸಂಘಟನೆಗಳ ಮಂಗಗಳು ಧ್ವಂಸಗೊಳಿಸಿದ ದಿನ. ಆ ಮೂಲಕ ಹಿಂದೂ-ಮುಸ್ಲಿಂ-ಕ್ರಿಶ್ಚಿಯನ್ನರಾದಿಯಾಗಿ ಹಲವು ಧಾರ್ಮಿಕ ಸಮುದಾಯಗಳು ಶತಶತಮಾನಗಳಿಂದ ನಡೆಸಿದ್ದ ಸಾಮರಸ್ಯ ಮತ್ತು ಸಹಬಾಳ್ವೆಗೆ ಬೆಂಕಿ ಕೊಡಲಿ ಪೆಟ್ಟು ನೀಡಿದ ದಿನ. ಕೋಮುಗಲಭೆಗಳಿಂದ ಕೂಡಿದ ಭವಿಷ್ಯದ ಭಾರತ ನಿರ್ಮಾಣಕ್ಕೆ ಮುನ್ನುಡಿ ಬರೆದ ದಿನ. ಸಾಮರಸ್ಯ ಸಹಬಾಳ್ವೆ ಮತ್ತು ಶಾಂತಿಗಳನ್ನು ಬಯಸುವ ಬಹುತೇಕ ಮನಸ್ಸುಗಳನ್ನು ಅತೀವವಾಗಿ ಕಲಕಿದ ದಿನ.

ಇಂಥ ಕರಾಳ ಘಟನೆಗೆ ಆರೆಸ್ಸೆಸ್, ಬಿಜೆಪಿ, ವಿಹೆಚ್‌ಪಿ, ಶಿವಸೇನೆಗಳಂಥ ಹಿಂದೂತ್ವವಾದಿ ಸಂಘಟನೆಗಳೇ ನೇರ ಕಾರಣ. ಅವುಗಳಿಗೆ ನೇತೃತ್ವ ವಹಿಸಿದ್ದ ಅಟಲ್ ಬಿಹಾರಿ ವಾಜಪೇಯಿ, ಅಡ್ವಾನಿ, ಮುರಳಿ ಮನೋಹರ ಜೋಶಿ ಮುಂತಾದ ಸಂಘಪರಿವಾರಿಗಳೇ ನೇರವಾಗಿ ಅಪರಾಧಿಗಳಾಗಿದ್ದಾರೆ ಎಂಬುದು ಅಂದೇ ನಿಚ್ಚಳವಾಗಿತ್ತಾದರೂ ಈಗ ಅದನ್ನು ಲಿಬರ್ಹಾನ್ ವರದಿ ಮತ್ತೊಮ್ಮೆ ಎತ್ತಿಹಿಡಿದಿದೆ.

ಬಾಬ್ರಿ ಮಸೀದಿ ಧ್ವಂಸ ಪ್ರಕರಣ ಕುರಿತಂತೆ ವರದಿಯನ್ನು ಸಿದ್ಧಪಡಿಸುವುದಕ್ಕೆ ನ್ಯಾ. ಲಿಬರ್ಹಾನ್ ತೆಗೆದುಕೊಂಡ ಸಮಯ ಬರೋಬ್ಬರಿ ಹದಿನಾರು ವರ್ಷ ಆರು ತಿಂಗಳು. ಲಿಬರ್ಹಾನ್ ಆಯೋಗ ಏಕಸದಸ್ಯ ಆಯೋಗವಾಗಿರುವುದರಿಂದ ನ್ಯಾ. ಲಿಬರ್ಹಾನ್ ಅವರೊಬ್ಬರೇ ಈ ಸುದೀರ್ಘ ವರದಿಯನ್ನು ಬರೆದಿದ್ದಾರೆ. ಈ ಹದಿನಾರೂವರೆ ವರ್ಷಗಳ ಸುದೀರ್ಘ ಅವಧಿಯಲ್ಲಿ ಅವರು ನೂರಾರು ಗಂಟೆಗಳ ವಿಡಿಯೋ ಚಿತ್ರೀಕರಣಗಳನ್ನು ಗಮನವಿಟ್ಟು ವೀಕ್ಷಿಸಿದ್ದಾರೆ, ಸಾವಿರಾರು ಪುಟಗಳ ದಾಖಲೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದ್ದಾರೆ, ನೂರಾರು ಜನರ ಸಂದರ್ಶನಗಳನ್ನು ಮಾಡಿದ್ದಾರೆ, ಬಾಬ್ರಿ ಮಸೀದಿ - ರಾಮಜನ್ಮ ಭೂಮಿ ವಿವಾದ ಕುರಿತಾದ ಚರಿತ್ರೆಯನ್ನೂ ಆಳವಾಗಿ ಅಧ್ಯಯನ ಮಾಡಿದ್ದಾರೆ. ಈ ಎಲ್ಲಾ ಪರಿಶ್ರಮದ ಭಾಗವಾಗಿಯೇ ಒಂದು ಸಾವಿರಕ್ಕೂ ಹೆಚ್ಚು ಪುಟದ ವಸ್ತುನಿಷ್ಠ ವರದಿ ಸಿದ್ಧಗೊಂಡಿದೆ. ಈ ವರದಿಯಲ್ಲಿ ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸಿದ ಅಪರಾಧದಲ್ಲಿ ಯಾರ್‍ಯಾರು ನೇರ ಅಪರಾಧಿಗಳು ಎಂದು ಲಿಬ್ರಹಾನ್ ಹೇಳಿದ್ದಾರೋ ಅವರ ಅಪರಾಧವನ್ನು ಸಾಬೀತುಗೊಳಿಸುವುದಕ್ಕೆ ಅದಕ್ಕೆ ಪೂರಕವಾದ ಸಾಕ್ಷ್ಯಾಧಾರಗಳ ದಾಖಲೆಗಳನ್ನೂ ಕೊಟ್ಟಿದ್ದಾರೆ. ಈ ಎಲ್ಲಾ ಕಾರಣಕ್ಕಾಗಿಯೇ ವಾಜಪೇಯಿಗಾಗಲೀ, ಅಡ್ವಾಣಿಗಾಗಲೀ, ಮುರಳಿ ಮನೋಹರ ಜೋಶಿಗಾಗಲೀ ಅಥವಾ ಆ ಅಪರಾಧದಲ್ಲಿ ಭಾಗಿಯಾಗಿದ್ದ ಇನ್ನಿತರ ನಾಯಕರಿಗಾಗಲೀ ಇಂದು ಲಿಬ್ರಹಾನ್ ವರದಿಯನ್ನು ವಿರೋಧಿಸುವುದಕ್ಕೆ ನಾಲಿಗೆಯೇ ಇಲ್ಲದಂತಾಗಿದೆ. ಇಲ್ಲಿಯತನಕ ಮಾಡಿದಂತೆ 'ಬಾಬ್ರಿ ಮಸೀದಿ ಧ್ವಂಸದಲ್ಲಿ ತಮ್ಮ ಪಾತ್ರವಿಲ್ಲ, ತಾವು ನಿರ್ದೋಷಿಗಳು' ಎಂದು ಹೇಳುವುದಕ್ಕೆ ಅವರಿಂದಾಗುತ್ತಿಲ್ಲ, ಆದ್ದರಿಂದಲೇ 'ಜನರನ್ನು ದಿಕ್ಕು ತಪ್ಪಿಸುವುದಕ್ಕಾಗಿ, ತಮ್ಮ ಮೇಲೆ ಅನವಶ್ಯಕ ಗೂಬೆ ಕೂರಿಸುವುದಕ್ಕಾಗಿ ವರದಿ ಮಂಡಿಸಲಾಗಿದೆ' ಎಂದು ಜಾಳುಜಾಳಾಗಿ ಮಾತನಾಡುತ್ತಿದ್ದಾರೆಯೇ ಹೊರತು ವರದಿಯಲ್ಲಿರುವ ಅಂಶಗಳ ಬಗ್ಗೆ ನಿರ್ದಿಷ್ಟವಾಗಿ ಯಾರೂ ಮಾತನಾಡುತ್ತಿಲ್ಲ.

ಈ ವರದಿ ಬಹಿರಂಗಪಡಿಸಿದ ಪ್ರಮುಖ ವಿಚಾರಗಳಲ್ಲಿ ಬಾಬ್ರಿ ಮಸೀದಿ ಧ್ವಂಸಕ್ಕೆ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿಯೂ ಕಾರಣವಾಗಿದ್ದಾರೆ ಎಂಬುದು. ಅಸಲಿಗೆ ವಾಜಪೇಯಿ ಕೂಡ ಕಟ್ಟಾ ಹಿಂದೂತ್ವವಾದಿ ಹಾಗೂ ಕೋಮುಗಲಭೆಗಳಂಥ ರಕ್ತರಾಜಕಾರಣದಲ್ಲಿ ನಂಬಿಕೆಯಿಟ್ಟ ಮನುಷ್ಯ ಎಂಬುದರಲ್ಲಿ ಯಾವುದೇ ಅನುಮಾನ ಬೇಕಿಲ್ಲ, ಆದರೂ ಹಿಂದೂತ್ವದ ನಂಜುಕಾರಕ ಸಿದ್ಧಾಂತವನ್ನು ಒಪ್ಪದವರೂ ಕೂಡ, ಭಜರಂಗದಳದಂತಹ ಪುಂಡರ ದಾಂಧಲೆಗಳನ್ನು ವಿರೋಧಿಸುವವರೂ ಸಹ, ಬಿಜೆಪಿಯಂಥ ಕೋಮುವಾದಿ ಪಕ್ಷವನ್ನು ಜರಿಯುವವರೂ ಸಹ ಅದೇ ಬಿಜೆಪಿಯ ಅತ್ಯುನ್ನತ ನಾಯಕಮಣಿಯಾಗಿದ್ದ ಅಟಲ್ ಬಿಹಾರಿ ವಾಜಪೇಯಿಯವರನ್ನು ಮೆಚ್ಚಿಕೊಳ್ಳುತ್ತಿದ್ದುದುಂಟು. ಅದಕ್ಕೆ ಕಾರಣವೂ ಇತ್ತು, ಅವರು ಅಡ್ವಾಣಿಯಂತೆಯಾಗಲೀ, ನರೇಂದ್ರ ಮೋದಿಯಂತೆಯಾಗಲೀ ಬಹಿರಂಗವಾಗಿ ಹಿಂಸಾಚಾರವನ್ನು ಸಮರ್ಥಿಸುತ್ತಿರಲಿಲ್ಲ. ಅವರ ನಿಜವಾದ ವ್ಯಾಘ್ರ ಮುಖವನ್ನು 'ಸೌಮ್ಯ' ಮತ್ತು 'ಮಾನವೀಯ' ಮುಖವಾಡದಿಂದ ಮುಚ್ಚಿಟ್ಟಿದ್ದರು. ಹಾಗಾಗಿ, ಬಾಬ್ರೀ ಮಸೀದಿ ಧ್ವಂಸ ಪ್ರಕರಣದಲ್ಲೂ ಕೂಡ 'ವಾಜಪೇಯಿ ಹಿಂಸಾಚಾರವನ್ನು ಸಮರ್ಥಿಸುವವರಲ್ಲ, ಅವರ ಕೈಮೀರಿ ಅದೆಲ್ಲಾ ನಡೆದಿದೆ' ಎಂದು ಹಲವರು ವಾದಿಸಿದ್ದುಂಟು. ಬಾಬ್ರಿ ಮಸೀದಿ ಧ್ವಂಸವಾಗುತ್ತಿದ್ದಾಗ ವಾಜಪೇಯಿ ಅಯೋಧ್ಯೆಯಲ್ಲಿರಲೇ ಇಲ್ಲ, ಹಾಗಿದ್ದ ಮೇಲೆ ಅವರ್‍ಹೇಗೆ ತಪ್ಪಿತಸ್ಥರಾಗುತ್ತಾರೆ ಎಂದು ಪ್ರಶ್ನಿಸಿದ್ದುಂಟು. ಈಗ ನ್ಯಾಯಮೂರ್ತಿ ಲಿಬರ್ಹಾನ್ ಅವರು ತಮ್ಮ ವರದಿಯಲ್ಲಿ ವಾಜಪೇಯಿಯವರೂ ಬಾಬ್ರಿ ಮಸೀದಿ ಧ್ವಂಸಕ್ಕೆ ಹೇಗೆ ನೇರವಾಗಿ ಕಾರಣರಾಗಿದ್ದಾರೆ ಎಂಬುದನ್ನು ದಾಖಲೆ ಸಮೇತವಾಗಿ ವಿವರಿಸಿ ಆ ಮುಖವಾಡಗಳನ್ನು ಕಳಚಿ ಅವರ ನೈಜ ವ್ಯಾಘ್ರ ಮುಖವನ್ನು ಜಗತ್ತಿಗೆ ತೋರಿಸಿದ್ದಾರೆ.

ಬಾಬ್ರಿ ಮಸೀದಿ ನೆಲಕ್ಕುರುಳುವ ಹಿಂದಿನ ದಿನ, ಅಂದರೆ 1992ರ ಡಿಸೆಂಬರ್ 5ರಂದು ಅಯೋಧ್ಯೆಯಲ್ಲಿ ಲಕ್ಷಾಂತರ ಕರಸೇವಕರನ್ನುದ್ದೇಶಿಸಿ ಮಾತನಾಡಿದ ವಾಜಪೇಯಿ ರಾಮಮಂದಿರ ನಿರ್ಮಾಣಕ್ಕೆ ಕಟಿಬದ್ಧರಾಗಿರುವುದಾಗಿ ಘೋಷಿಸಿದ್ದಲ್ಲದೇ ಬಾಬ್ರಿ ಮಸೀದಿ ಧ್ವಂಸ ಮಾಡುವುದಕ್ಕೆ ನೆರೆದಿದ್ದ ಅಪಾರ ಕರಸೇವಕರಲ್ಲೊಮ್ಮನ ಹುರಿದುಂಬಿಸಿ ಬಂದಿದ್ದರು. ವಾಸ್ತವದಲ್ಲಿ ಅವರು ನೇರವಾಗಿ

ದ್ರೋಹಿಗಳಿಗೆ ಶಿಕ್ಷೆ ಇಲ್ಲವೇ?

ಈಗ ಮೂಲಭೂತ ಪ್ರಶ್ನೆಯೊಂದು ಏಳುತ್ತದೆ. ಬಾಬ್ರಿ ಮಸೀದಿ ಧ್ವಂಸದಂಥ ಒಂದು ಘನಘೋರ ಅಪರಾಧವೆಸಗಿ ದೇಶವನ್ನು ಕೋಮುದಳ್ಳುರಿಗೆ ನೂಕಿದ ಅಪರಾಧಿಗಳಿಗೆ ಈ ನೆಲದ ಕಾನೂನಿನನ್ವಯ ಶಿಕ್ಷೆಯಾಗುತ್ತದೆಯೇ ಎಂಬುದು. ಏಕೆಂದರೆ ಇಲ್ಲಿಯತನಕ ಅಪರಾಧವನ್ನು ಸಾಬೀತುಪಡಿಸುವುದಕ್ಕೆ ಸೂಕ್ತ ಸಾಕ್ಷ್ಯಾಧಾರಗಳಿಲ್ಲ ಎಂದು ಜಾರಿಕೊಳ್ಳುವುದಕ್ಕೆ ಯಾವುದೇ ಸರ್ಕಾರಕ್ಕೆ ಅವಕಾಶವಿತ್ತು, ಈಗ ಲಿಬರ್ಹಾನ್ ಅವರು ಅಪರಾಧವನ್ನು ಸಾಬೀತುಗೊಳಿಸುವುದಕ್ಕೆ ಅವಶ್ಯವಿರುವ ಎಲ್ಲಾ ದಾಖಲೆಗಳನ್ನು, ಸಾಕ್ಷ್ಯಾಧಾರಗಳನ್ನು ತಮ್ಮ ಒಂದು ಸಾವಿರಕ್ಕೂ ಹೆಚ್ಚು ಪುಟಗಳ ವರದಿಯಲ್ಲಿ ಕೊಟ್ಟಿದ್ದಾರೆ. ಅದರ ಆಧಾರದಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗಬೇಕಾದುದು ಈಗಿನ ತುರ್ತು ಅಗತ್ಯ. ಒಂದುವೇಳೆ ಶಿಕ್ಷೆಯಾಗದಿದ್ದರೆ ಬಲಿಷ್ಠರು ಘನಘೋರ ಅಪರಾಧ ಎಸಗಿಯೂ ಕಾನೂನಿನ ಕಣ್ಣಿಗೆ ಮಣ್ಣೆರಚಿ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಸಾಧ್ಯ ಎಂಬ ಸಂದೇಶ ರವಾನೆಯಾಗುತ್ತದೆ. ಆಗ ಈ ದೇಶದ ನ್ಯಾಯಾಂಗ ವ್ಯವಸ್ಥೆಯ ಮೇಲೆ ಜನ ಇಟ್ಟಿರುವ ಅಲ್ಪ ಸ್ವಲ್ಪ ವಿಶ್ವಾಸವೂ ಹೊರಟುಹೋಗುತ್ತದೆ. ಅದು ಈ ದೇಶದ ಪ್ರಜಾತಂತ್ರ ವ್ಯವಸ್ಥೆಯು ಶಿಥಿಲಕ್ಕೆ ಕಾರಣವಾಗುತ್ತದೆ. ಹಾಗಾಗಿ, ಅಪರಾಧಿಗಳಿಗೆ ಶಿಕ್ಷೆಯಾಗುವಂತೆ ಕೇಂದ್ರ ಸರ್ಕಾರ ಕ್ರಮಗಳನ್ನು ಕೈಗೊಳ್ಳಬೇಕಾದುದು ಇಂದಿನ ತುರ್ತು ಅಗತ್ಯವಾಗಿದೆ.

ಆದರೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದಿಂದ ಅಂತಹದ್ದೊಂದು ಕಠಿಣ ಕ್ರಮವನ್ನು ನಿರೀಕ್ಷಿಸುವುದು ತುಸು ಕಷ್ಟ. ಇಂಥ ಘಟನೆಗೆ ಸಂಬಂಧಪಟ್ಟಂತೆ ಯಾವುದೇ ಆಯೋಗ ನೀಡುವ ವರದಿಯ ಜೊತೆಗೆ ಸರ್ಕಾರ ಈ ಕುರಿತಂತೆ ತೆಗೆದುಕೊಂಡ/ತೆಗೆದುಕೊಳ್ಳುವ ಕ್ರಮಗಳನ್ನು ಸೇರಿಸಿ (Action Taken Report – ATR) ಸಂಸತ್ತಿನಲ್ಲಿ ಮಂಡಿಸಬೇಕು. ಆದರೆ, ಯುಪಿಎ ಸರ್ಕಾರ ಕೇವಲ ಲಿಬರ್ಹಾನ್ ವರದಿಯನ್ನು ಮಾತ್ರ ಸಲ್ಲಿಸಿದೆಯೇ ಹೊರತು ಎಟಿಆರ್‌ನ್ನು ಸಲ್ಲಿಸಿಲ್ಲ. ಲಿಬರ್ಹಾನ್ ವರದಿಯಲ್ಲಿ ಸುಮಾರು 60ಕ್ಕಿಂತ ಹೆಚ್ಚು ಶಿಫಾರಸ್ಸುಗಳನ್ನು ಮಾಡಲಾಗಿದೆಯಾದರೂ ನಿರ್ದಿಷ್ಟವಾಗಿ ಅವುಗಳಲ್ಲಿ ಬಹುತೇಕವು ಇಂಥ ಘಟನೆ ಮರುಕಳಿಸದಂತೆ ತಡೆಯುವುದಕ್ಕೆ ಏನು ಮಾಡಬೇಕು ಎಂಬುದನ್ನು ವಿವರಿಸುತ್ತವೆಯೇ ಹೊರತು ಈಗಾಗಲೇ ನಡೆದ ಬಾಬ್ರಿ ಮಸೀದಿಯ ದುಷ್ಕೃತ್ಯಕ್ಕೆ ನೇರವಾಗಿ ಹೊಣೆಗಾರರಾಗಿರುವವರಿಗೆ ಶಿಕ್ಷೆ ವಿಧಿಸುವ ಕುರಿತಂತೆ ಏನನ್ನೂ ಹೇಳುವುದಿಲ್ಲ.

ಒಂದು ಅಪರಾಧ ನಡೆದರೆ ಅದರಲ್ಲಿ ನೇರವಾಗಿ ಭಾಗಿಯಾದವರು ಮಾತ್ರವಲ್ಲ ಅದಕ್ಕೆ ಕುಮ್ಮಕ್ಕು ಕೊಟ್ಟವರು, ಪ್ರಚೋದಿಸಿದವರು, ಬೆಂಬಲಕ್ಕೆ ನಿಂತವರು ಎಲ್ಲರೂ ನೇರವಾಗಿ ಭಾಗಿಯಾದವರಷ್ಟೇ ಅಪರಾಧಿಗಳಾಗುತ್ತಾರೆ ಎಂದು ಹೇಳುವ ಕೋಕ, ಪೋಕಗಳಂಥ ಅನೇಕ ಕಾನೂನುಗಳು ನಮ್ಮಲ್ಲಿವೆ. ಅಲ್ಲದೇ 1999ರ ನಂತರ ಅನೇಕ ಅಂತರರಾಷ್ಟ್ರೀಯ ಕೋರ್ಟುಗಳೂ ಕೂಡ ಇದೇ ಮಾನದಂಡವನ್ನು ಅನುಸರಿಸುತ್ತಿದ್ದು ಭಾರತವೂ ಅದನ್ನು ತಾತ್ವಿಕವಾಗಿ ಒಪ್ಪಿಕೊಂಡಿದೆ. ಕಾಂಗ್ರೆಸ್‌ಗೆ ನಿಜವಾಗಲೂ ಅಪರಾಧಿಗಳನ್ನು ಶಿಕ್ಷಿಸಬೇಕು ಎಂಬ ಇರಾದೆಯಿದ್ದಿದ್ದರೆ ಇಷ್ಟು ಸಾಕಿತ್ತು ಬಾಬ್ರಿ ಮಸೀದಿ ಧ್ವಂಸಗೊಳಿಸಿದ ಅಪರಾಧಿಗಳನ್ನು ಜೈಲಿಗಟ್ಟುವುದಕ್ಕೆ. ಆದರೆ ಅವರನ್ನು ಶಿಕ್ಷಿಸಬೇಕೆಂಬ ಇರಾದೆ ಕಾಂಗ್ರೆಸ್‌ಗೆ ಇದ್ದಂತಿಲ್ಲ.

ವಾಸ್ತವದಲ್ಲಿ ಇದು ಕಾಂಗ್ರೆಸ್‌ಗೆ ಹುಟ್ಟುತ್ತಲೇ ಅಂಟಿಕೊಂಡು ಬಂದ ರೋಗ. ಅಂತರ್ಯದಲ್ಲಿ ಕಾಂಗ್ರೆಸ್ ಕೂಡ ಹಿಂದೂತ್ವ ಕೋಮುವಾದಿಯೇ. ಬಿಜೆಪಿ ಹಿಂದೂತ್ವವನ್ನು ಕಠೋರವಾಗಿ ಪ್ರತಿಪಾದಿಸಿದರೆ ಕಾಂಗ್ರೆಸ್ ಅದನ್ನು ಅಷ್ಟೊಂದು ಪ್ರಖರವಾಗಿ ಪ್ರತಿಪಾದಿಸುವುದಿಲ್ಲ, ಇದಿಷ್ಟೇ ಕಾಂಗ್ರೆಸ್‌ಗೂ ಮತ್ತು ಬಿಜೆಪಿಗೂ ಇರುವ ವ್ಯತ್ಯಾಸ. ಹೀಗಿದ್ದ ಮೇಲೆ ಯುಪಿಎ ಸರ್ಕಾರ ಬಾಬ್ರಿ ಮಸೀದಿ ಧ್ವಂಸದ ಆರೋಪಿಗಳನ್ನು ಶಿಕ್ಷಿಸುತ್ತದೆ ಎಂದು ನಂಬುವುದಾದರೂ ಹೇಗೆ?

ಕಾರ್ಯದಲ್ಲಿ ಭಾಗವಹಿಸಬಾರದೆಂದು ತನಗೆ ...ಸಿದ ಎಂಬುದನ್ನೂ ಅವರು ಅದೇ ಸಂದರ್ಭದಲ್ಲಿ ...ಬಿದ್ದರು. ಅಸಲೀಯತ್ತೇನೆಂದರೆ ಅವರು ನೇರವಾಗಿ ...ಕಾರ್ಯದಲ್ಲಿ ಭಾಗಿಯಾದರೆ ಅಲ್ಲಿಯತನಕ ಅವರು ...ಕೊಂಡು ಬಂದಿದ್ದ 'ಸೌಮ್ಯತೆ'ಯ ಮುಖವಾಡ ... ಕಳಚಿ ಬೀಳುತ್ತದೆ. ಆ ಮೂಲಕ ಬಿಜೆಪಿ-ಭಜರಂಗ ...ನ್ನು ವಿರೋಧಿಸಿದರೂ ವಾಜಪೇಯಿಯವನ್ನು ...ಳ್ಳುವ ಒಂದು ಜನವಿಭಾಗವೇ ಸಂಘಪರಿವಾರ ... ದೂರವಾಗುತ್ತದೆ ಎಂಬ ಕಾರಣಕ್ಕೆ ಮಸೀದಿ ...ರ್ಯದಲ್ಲಿ ಅವರು ನೇರವಾಗಿ ಭಾಗವಹಿಸಬಾರ... ಆರೆಸ್ಸೆಸ್‌ನ ನಾಯಕರೇ ಅವರಿಗೆ ಆದೇಶ ...ದ್ದರು. ಅದರಂತೆ ವಾಜಪೇಯಿ ಜನರನ್ನು ಹುರಿ... ದೆಹಲಿಗೆ ವಾಪಸ್ಸಾಗಿದ್ದರು. ಅದೇ ರೀತಿ ... ಮತ್ತು ಮುರಳಿ ಮನೋಹರ್ ಜೋಶಿಯವರೂ ಅಯೋಧ್ಯೆಯಲ್ಲಿದ್ದರೂ ಬಾಬ್ರೀ ಮಸೀದಿ ...ರ್ಯಾಚರಣೆಯ ನಿರ್ದಿಷ್ಟ ಪ್ರದೇಶದಲ್ಲಿರದೇ ...ವೆ ತುಸು ದೂರದಲ್ಲಿದ್ದರು. ಅವರು ಮಸೀದಿ ...ಡೆಯುವಾಗ ಸ್ಥಳದಲ್ಲಿರಲಿಲ್ಲ ಅಥವಾ ಊರಲ್ಲಿರ... ...ಬ ಕಾರಣಕ್ಕೆ ಅವರು ನೇರವಾಗಿ ಹೊಣೆಗಾರರಲ್ಲ ... ಹೇಳುವುದು ಎಷ್ಟು ಸರಿ ಎಂಬ ಮೂಲಭೂತ ...ನ್ನು ಲಿಬರ್ಹಾನ್ ವರದಿ ಪ್ರಶ್ನಿಸುತ್ತದೆ.

...ಬರ್ಹಾನ್ ಅವರ ಮಾತಿನಲ್ಲೇ ಹೇಳುವುದಾದರೆ ...ಯ ಉದ್ದೇಶಗಳಿಗಾಗಿ ಕೆಲವು ನಾಯಕರ ಜಾತ್ಯತೀತ ...ವನ್ನು ರಕ್ಷಿಸುವುದಕ್ಕಾಗಿ - ಅವರನ್ನು ...ರ್ವಕವಾಗಿ ಕಾರ್ಯಾಚರಣಾ ಪ್ರದೇಶದಿಂದ ...ಡಲಾಗಿತ್ತು". ಆದರೆ ಸಂಘಪರಿವಾರ ಅವರಿಗೆ ... ಇಂಥ ರಕ್ಷಾಕವಚದ ಕಾರಣದಿಂದಾಗಿ ಅವರು ...ಯವಾಗಿ ಮತ್ತು ಕಾನೂನಿನಿಂದ ತಪ್ಪಿಸಿಕೊಳ್ಳಲು ...ಲ್ಲ ಎಂಬುದನ್ನೂ ವರದಿ ಬೊಟ್ಟು ಮಾಡಿ ...ದೆ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಸುಪಾರಿ ... ಪ್ರೊಫೆಷನಲ್ ಕೊಲೆಗಡುಕರಿಂದ ಕೊಲೆ ಮಾಡಿಸಿ ...ಮಾಡಿದ್ದು ನಾನಲ್ಲ' ಎಂದು ಕಾನೂನಿನ ಕಣ್ಣಿನಿಂದ ...ಳ್ಳಲೆತ್ನಿಸುವ ನೈಜ ಕೊಲೆಗಡುಕರ ಕಪಟವನ್ನೇ ...ಮಸೀದಿ ಧ್ವಂಸ ಕೃತ್ಯದಲ್ಲಿ ವಾಜಪೇಯಿ, ಅಡ್ವಾಣಿ ... ಮುರಳಿ ಮನೋಹರ್ ಜೋಶಿಯವರು ...ಸಿದ್ದಾರೆ.

...ಗಾದರೆ ಬಾಬ್ರಿ ಮಸೀದಿ ಧ್ವಂಸ ಕಾರ್ಯಾಚರಣೆ ... ವಿಧ್ವಂಸಕಾರರ ಗುಂಪಿಗೆ ನೇತೃತ್ವ ಕೊಟ್ಟು ...ಸಿದವರು ಯಾರು? ಲಿಬರ್ಹಾನ್ ವರದಿಯ ...ವಿನಯ್ ಕಟಿಯಾರ್, ಪರಮಹಂಸ ರಾಮಚಂದ್ರ ...ಅಶೋಕ್ ಸಿಂಘಾಲ್, ಚಂಪತ್ ರಾಯ್, ಸ್ವಾಮಿ ...ನಂದ, ಎಸ್.ಸಿ.ದೀಕ್ಷಿತ್, ಬಿ.ಪಿ.ಸಿಂಘಾಲ್, ...ರ್ ಗಿರಿರಾಜ್ ಮುಂತಾದವರು. ಇವರೆಲ್ಲರೂ ...ಗದಳ, ವಿಶ್ವ ಹಿಂದೂ ಪರಿಷತ್, ಬಿಜೆಪಿಗಳಂಥ ...ರಿವಾರದ ವಿವಿಧ ಸಂಘಟನೆಗಳಿಗೆ ಸೇರಿದ ...ವರು. ಕಾವಿ ತೊಟ್ಟುಕೊಂಡು ಸಮಾಜಕ್ಕೆ ಶಾಂತಿ ... ಹೇಳಿಕೊಡಬೇಕಾದವರು. ಆದರೆ, ಆ ದಿನ ... ಮಾಡಿದ್ದು ಮಾತ್ರ ಭಾರತವು ಭವಿಷ್ಯದಲ್ಲಿ ...ಗಲಭೆಗಳಿಂದ ಶಾಶ್ವತ ಅಶಾಂತಿಯತ್ತ ಹೋಗುವ ...ರಿ ಕೆಲಸವನ್ನು.

...ಸ್ ಲಿಬರ್ಹಾನ್ ಅವರ ವರದಿಯ ಮತ್ತೊಂದು ...ತೆ ಕಾಣುವುದು ಅದು ರಾಷ್ಟ್ರೀಯ ಸ್ವಯಂ ...ಸಂಘದ ಬಗೆಗಿನ ಅದರ ವಿಶ್ಲೇಷಣೆಯಲ್ಲಿ ಮತ್ತು ...ಘಟನೆಯ ಬಗ್ಗೆ ಅದು ತಳೆದ ನಿಲುವಿನಲ್ಲಿ. ಈ ...ಲ್ಲಿ ಆರೆಸ್ಸೆಸ್‌ಅನ್ನು ಒಂದು ರಾಷ್ಟ್ರಭಕ್ತ ಸಂಘಟನೆಯೆಂದೇ ಬಹಳಷ್ಟು ಜನರನ್ನು ನಂಬಿಸಲಾಗಿದೆ. ತಾವು ನಂಬಿದ ಸಿದ್ಧಾಂತಕ್ಕಾಗಿ ಆರೆಸ್ಸೆಸ್ ನಾಯಕರು, ಕಾರ್ಯಕರ್ತರು ತೋರುವ ಬದ್ಧತೆ, ಆಚರಿಸುವ ಶಿಸ್ತು ಬಹಳಷ್ಟು ಜನರನ್ನು ಪ್ರೇರೇಪಿಸಿದ್ದು ನಿಜ. ಈ ಕಾರಣಕ್ಕಾಗಿಯೇ ಭಜರಂಗದಳದಂತ ಉಗ್ರ ಸಂಘಟನೆಗಳ ಹಿಂಸಾಚಾರ ಮತ್ತು ಪುಂಡಾಟಿಕೆಯನ್ನು ವಿರೋಧಿಸುವ ಜನ ಕೂಡ ಅದರ ಮಾತೃ ಸಂಘಟನೆಯೇ ಆಗಿರುವ ಆರೆಸ್ಸೆಸ್ ಅನ್ನು ಮೆಚ್ಚಿಕೊಳ್ಳುತ್ತಾರೆ. ಅಧಿಕಾರ ಮತ್ತು ಹಣಕ್ಕಾಗಿ



ಬಿಜೆಪಿಯೊಳಗೆ ನಡೆಯುವ ಕಿತ್ತಾಟ ಮತ್ತು ಭ್ರಷ್ಟಾಚಾರಗಳಿಂದ ಬೇಸತ್ತಿರುವ ಜನ ಕೂಡ ಅದರದ್ದೇ ಮಾತೃ ಸಂಘಟನೆಯಾಗಿರುವ ಆರೆಸ್ಸೆಸ್ ಬಗ್ಗೆ ಸದಾಭಿಪ್ರಾಯ ಮೂಡಿಸಿಕೊಂಡಿದ್ದಾರೆ. ಆದರೆ, ಜಸ್ಟೀಸ್ ಲಿಬರ್ಹಾನ್ ಆರೆಸ್ಸೆಸ್‌ಗಿರುವ ಈ ರಾಷ್ಟ್ರಭಕ್ತಿಯ ಮುಖವಾಡವನ್ನೂ ಸಾಕ್ಷಾಧಾರಗಳ ಸಮೇತವಾಗಿ ಕಳಚಿ ಹಾಕಿದ್ದಾರೆ. ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ವಿಶ್ವ ಹಿಂದೂ ಪರಿಷತ್‌ಗಳು ಸಾಮಾನ್ಯ ಜನರನ್ನು ಬ್ರೇನ್‌ವಾಶ್ ಮಾಡಿ, '*ಇತ್ತೀಚಿನ ಚರಿತ್ರೆಯಲ್ಲೇ ಕೇಳಿಕಂಡರಿಯದಂಥ ಹೀನಕೃತ್ಯವೊಂದನ್ನು ನಡೆಸುವುದಕ್ಕೆ ಶಕ್ತರಾಗುವಂತೆ ಮತೋನ್ಮಾದಿಗಳನ್ನಾಗಿ ಪರಿವರ್ತಿಸಿದವು*' ಎಂದು ಸ್ಪಷ್ಟವಾಗಿ ಬರೆದಿದ್ದಾರೆ. ಅಸಲಿಗೆ ಇಡೀ ಬಾಬ್ರೀ ಮಸೀದಿಯ ಧ್ವಂಸ ಕಾರ್ಯಾಚರಣೆಯ ಒಂದೊಂದು ಸಣ್ಣ ವಿವರಗಳ ಯೋಜನೆ ಸಿದ್ಧಗೊಂಡಿದ್ದೇ ಆರೆಸ್ಸೆಸ್ ಪಡಸಾಲೆಯಲ್ಲಿ, ಮಾತ್ರವಲ್ಲ ಆ ಯೋಜನೆಗಳು ಯಶಸ್ವಿಯಾಗಿ ಜಾರಿಯಾಗುವಂತೆ ಆರೆಸ್ಸೆಸ್ ಮತ್ತು ವಿಹೆಚ್‌ಪಿ ನಾಯಕರೇ ಅದರ ಮೇಲುಸ್ತುವಾರಿ ವಹಿಸಿದ್ದರು ಎಂದು ಲಿಬರ್ಹಾನ್ ದಾಳಿ ಮಾಡಿದ್ದಾರೆ.

ಆರೆಸ್ಸೆಸ್ ಮತ್ತು ವಿಹೆಚ್‌ಪಿಗಳು ಹೇಗೆ ಪ್ರಜಾತಂತ್ರ, ಧರ್ಮನಿರಪೇಕ್ಷತೆ, ಜಾತ್ಯತೀತತೆ ಮತ್ತು ಬಹುಸಂಸ್ಕೃತೀಯ ಭಾರತೀಯ ಸಮಾಜದ ವಿರುದ್ಧ ಯುದ್ಧ ಸಾರಿದ್ದಾರೆ ಎಂಬುದನ್ನು, ಅದಕ್ಕಾಗಿ ಎಂಥ ದೂರಗಾಮಿ ಮತ್ತು ಪ್ರತಿಗಾಮಿ ಯೋಜನೆಗಳನ್ನು ರೂಪಿಸಿದ್ದಾರೆಂಬುದನ್ನು ಲಿಬರ್ಹಾನ್ ಬಹಳ ಚೆನ್ನಾಗಿ ಬಯಲುಗೊಳಿಸಿದ್ದಾರೆ. ಅವರ ಮಾತಿನಲ್ಲೇ ಹೇಳುವುದಾದರೆ "*ವಿವಾದಿತ ಸ್ಮಾರಕದ ಧ್ವಂಸವು ಧರ್ಮ, ಪ್ರಾದೇಶಿಕತೆ, ಮೀಸಲಾತಿ, ಜಾತಿ ಮುಂತಾದವುಗಳ ಮುಖವಾಡದಲ್ಲಿ ಜಾತ್ಯತೀತತೆ, ಧರ್ಮನಿರಪೇಕ್ಷತೆ ಮತ್ತು ಬಹುಸಂಸ್ಕೃತಿಯ ಸಮಾಜದ ವಿರುದ್ಧ ಅವರು ನಡೆಸುತ್ತಿರುವ ಒಟ್ಟಾರೆ ಅಭಿಯಾನದಲ್ಲಿ ಒಂದು ಜಯಶಾಲಿ ಯುದ್ಧ ಮಾತ್ರ*".

ಬಾಬ್ರೀ ಮಸೀದಿ ಧ್ವಂಸವು 'ಅಯೋಧ್ಯಾ ಚಳವಳಿ' ಹೆಸರಿನಲ್ಲಿ ಸಮಾಜದ ಎಲ್ಲಾ ವರ್ಗದವರೂ ಪಾಲ್ಗೊಂಡ ನಿಜವಾದ ಒಂದು ಜನಾಂದೋಲನವಾಗಿತ್ತು ಎಂದು ಪ್ರತಿಬಿಂಬಿಸಲಾಗಿದೆ. ಆದರೆ, ಜಸ್ಟೀಸ್ ಲಿಬರ್ಹಾನ್ ಅವರು ಅದನ್ನು ಬಲವಾಗಿ ತಳ್ಳಿಹಾಕಿದ್ದಾರೆ. ಆರೆಸ್ಸೆಸ್, ವಿಹೆಚ್‌ಪಿ, ಭಜರಂಗದಳ, ಬಿಜೆಪಿಗಳಂಥ ಸಂಘಪರಿವಾರದ ಸಂಘಟನೆಗಳು ಸೇರಿಕೊಂಡು ನಡೆಸಿದ ದುಷ್ಕೃತ್ಯವಾಗಿತ್ತೇ ಹೊರತು ಅದೊಂದು ಜನಾಂದೋಲನವೂ ಆಗಿರಲಿಲ್ಲ, ಅದಕ್ಕೆ ಸಾಮಾನ್ಯ ಜನರ ಬೆಂಬಲವೂ ಇರಲಿಲ್ಲ ಎಂದು ಅವರು ತೋರಿಸಿಕೊಟ್ಟಿದ್ದಾರೆ. ಬಾಬ್ರಿ ಮಸೀದಿ ಧ್ವಂಸವನ್ನು ವಿರೋಧಿಸಿದರೆ ತಮ್ಮನ್ನೆಲ್ಲಿ ನಾಸ್ತಿಕರು, ಹಿಂದೂ ವಿರೋಧಿಗಳು ಅಥವಾ ದೇಶದ್ರೋಹಿಗಳು ಎಂಬ ಹಣೆಪಟ್ಟಿ ಹಚ್ಚಿ ದಾಳಿ ಮಾಡಿಯಾರು ಎಂಬ ಭಯದ ಕಾರಣಕ್ಕೆ ಬಹಳಷ್ಟು ಸಾಮಾನ್ಯ ಜನರು ಮೌನವಾಗಿದ್ದರೇ ಹೊರತು ಮಸೀದಿಯ ಧ್ವಂಸಕ್ಕೆ ಬೆಂಬಲ ಸೂಚಿಸುವುದಕ್ಕಲ್ಲ ಎಂದು ಲಿಬರ್ಹಾನ್ ಅಭಿಪ್ರಾಯ ಪಟ್ಟಿದ್ದಾರೆ. ಅಲ್ಲದೇ, ಮಸೀದಿಯ ಧ್ವಂಸಕ್ಕೆ ಮುಂಚೆ ರಾಮಜನ್ಮಭೂಮಿ ವಿವಾದ ಉತ್ತುಂಗಕ್ಕೇರುತ್ತಿದ್ದಂತೆಯೇ ಬಿಜೆಪಿ, ಭಜರಂಗದಳ, ವಿಶ್ವಹಿಂದೂ ಪರಿಷತ್ ಮುಂತಾದ ಸಂಘಪರಿವಾರದ ಸಂಘಟನೆಗಳಲ್ಲಿ ಅನೇಕ ಚಿಕ್ಕಪುಟ್ಟ ನಾಯಕರು ಈ ವಿಷಯವನ್ನು ಬಳಸಿಕೊಂಡು ತಾವೂ ವೈಯಕ್ತಿಕವಾಗಿ ವರ್ಚಸ್ಸಿಗೆ ಬಂದು ನಾಯಕರಾಗಿ ಹೊರಹೊಮ್ಮಿರುವುದನ್ನೂ ಲಿಬರ್ಹಾನ್ ಮನಮುಟ್ಟುವಂತೆ ವಿವರಿಸಿದ್ದಾರೆ.

ಬಾಬ್ರಿ ಮಸೀದಿ ಧ್ವಂಸ ಕೃತ್ಯದಲ್ಲಿ ಭಾಗವಹಿಸಿದ ಅಪರಾಧಿಗಳನ್ನು ಲಿಬರ್ಹಾನ್ ಅವರು ಮೂರು ಭಾಗಗಳಲ್ಲಿ ವಿಂಗಡಿಸಿದ್ದಾರೆ. ಮೊದಲನೇ ಗುಂಪಿನಲ್ಲಿರುವವರು ನೇರವಾಗಿ ಆ ದುಷ್ಕೃತ್ಯದಲ್ಲಿ ಭಾಗಿಯಾದ ಮತೋನ್ಮಾದಿ ಜನಸ್ತೋಮ. "*ಅವರ ಸಕ್ರಿಯ ಭಾಗವಹಿಸುವಿಕೆಯಿಲ್ಲದೇ 1992ರ ಡಿಸೆಂಬರ್ 6 ಸಂಭವಿಸಲು ಸಾಧ್ಯವೇ ಆಗುತ್ತಿರಲಿಲ್ಲ*" ಎಂದು ವರದಿ ಹೇಳುತ್ತದೆ. ಅದೇ ರೀತಿಯಲ್ಲಿ ಎರಡನೇ ಗುಂಪಿನಲ್ಲಿರುವವರು ವಾಸ್ತವದಲ್ಲಿ ತೀರ್ಮಾನ ರೂಪಕರಲ್ಲದಿದ್ದರೂ ಮೊದಲನೇ ಗುಂಪಿನ ಜನಸ್ತೋಮದಲ್ಲಿ ಮತೋನ್ಮಾದವನ್ನು ಕೆರಳಿಸಿ ಬಾಬ್ರಿ ಮಸೀದಿಯ ಧ್ವಂಸಕ್ಕೆ ಕಾರಣರಾದವರು. ಆದರೆ, ಅವರು ಮಾಡಿದ ಪಾಪದ ಕಾರಣದಿಂದಾಗಿ ಅವರೇನೂ ಕಡಿಮೆ ಅಪರಾಧಿಗಳಲ್ಲ. ಈ ಎರಡನೇ ಗುಂಪಿನಲ್ಲಿರುವವರೆಂದರೆ ತಾವು ಸೌಮ್ಯವಾದಿಗಳೆಂದು ಪೋಜು ಕೊಡುತ್ತಿದ್ದ ಅಟಲ್ ಬಿಹಾರಿ ವಾಜಪೇಯಿ, ಎಲ್.ಕೆ.ಅಡ್ವಾಣಿ, ಮುರಳಿ ಮನೋಹರ ಜೋಶಿ ಮುಂತಾದವರಿದ್ದಾರೆ. ಇವರನ್ನೇ




ಜಸ್ಟೀಸ್ ಲಿಬರ್ಹಾನ್ ಅವರು 'ಢೋಂಗಿ ಸೌಮ್ಯವಾದಿಗಳು' (pseudo-moderates) ಎಂದು ಕರೆದದ್ದು. ಇವರೆಲ್ಲಾ ಬಾಬ್ರಿ ಮಸೀದಿಯನ್ನು ಕೆಡವುದಿಲ್ಲ ಎಂದು ನ್ಯಾಯಾಲಯಕ್ಕೆ ಭರವಸೆಯನ್ನು ಕೊಟ್ಟು ಅದಕ್ಕೆ ವಿರುದ್ಧವಾಗಿ ಮಸೀದಿ ಕೆಡವಿ ನ್ಯಾಯಾಲಯಕ್ಕೆ ಮಾತ್ರವಲ್ಲ ಇಡೀ ದೇಶಕ್ಕೆ ದೇಶದ ಜನಸಮುದಾಯಕ್ಕೆ ದ್ರೋಹಬಗೆದ ಮಹನೀಯರು. ಆ ವಿಚಾರವನ್ನೂ ಕೂಡ ಲಿಬರ್ಹಾನ್ ಒತ್ತಿ ಹೇಳಿದ್ದಾರೆ. "*ಅಯೋಧ್ಯ ಅಭಿಯಾನದ ಆರಂಭದಲ್ಲೇ ಅವರು ಕಾಣಿಸಿಕೊಂಡು ನ್ಯಾಯಾಲಯಗಳಿಗೆ, ಜನರಿಗೆ ಹಾಗೂ ಇಡೀಯಾಗಿ ದೇಶಕ್ಕೆ ಸುಳ್ಳು ಭರವಸೆಗಳನ್ನು ಕೊಟ್ಟರು*" ಎಂದು ವರದಿಯಲ್ಲಿ ಸ್ಪಷ್ಟವಾಗಿ ಬೊಟ್ಟು ಮಾಡಿ ತೋರಿದ್ದಾರೆ. ಇನ್ನು ಮಸೀದಿ ಧ್ವಂಸದಲ್ಲಿ ಪಾಲ್ಗೊಂಡ ಮೂರನೇ ಗುಂಪಿನಲ್ಲಿರುವವರೆಂದರೆ ಇಂಥ ಒಂದು ವಿಧ್ವಂಸಕ ಕೃತ್ಯ ನಡೆಯದಂತೆ ತಡೆಯುವ ಮೂಲಕ ಕಾನೂನಿನ ರಕ್ಷಣೆಗೆ ನಿಲ್ಲಬೇಕಾದ ಮಹೋನ್ನತ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದ ಪ್ರಭುತ್ವದ ಅಧಿಕಾರಿಗಳು.

ಲಿಬರ್ಹಾನ್ ಕಂಗಳಿಗೆ ಗುರಿಯಾಗಿರುವ ಮತ್ತೊಬ್ಬ ಪ್ರಮುಖ ವ್ಯಕ್ತಿ ಎಂದರೆ ಅಂದಿನ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದ ಬಿಜೆಪಿಯ ಕಲ್ಯಾಣ್ ಸಿಂಗ್. ಮಸೀದಿ ಧ್ವಂಸ ಕೃತ್ಯದಲ್ಲಿ ಕಲ್ಯಾಣ್ ಸಿಂಗ್ ಸರ್ಕಾರದ ಪಾತ್ರವನ್ನು ವಿವರಿಸುವುದಕ್ಕಾಗಿಯೇ ಲಿಬರ್ಹಾನ್ 45 ಪುಟಗಳನ್ನು ಮೀಸಲಿರಿಸಿದ್ದಾರೆ. ಮಸೀದಿಯನ್ನು ಕೆಡವುದಕ್ಕೆ ಅವಕಾಶ ಕೊಡದೆ ಉತ್ತರ ಪ್ರದೇಶ ಸರ್ಕಾರ ಕಾನೂನಿನ, ಸಂವಿಧಾನದ ರಕ್ಷಣೆಗೆ ನಿಲ್ಲಬೇಕಿತ್ತು. ಆದರೆ, ಸರ್ಕಾರಿ ಆಡಳಿತದ ಪ್ರತಿಯೊಂದು ಯಂತ್ರಾಂಗವೂ 'ಮಸೀದಿ ಧ್ವಂಸಕ್ಕೆ ಹಾಗೂ ತದನಂತರದ ದುಷ್ಕೃತ್ಯಗಳಿಗೆ ಬೆಂಗಾವಲಾಗಿ ನಿಲ್ಲುವ ಮೂಲಕ ಬಿಜೆಪಿಯು ತನ್ನ ರಾಜಕೀಯ ಅಜೆಂಡಾವನ್ನು ಪೂರೈಸುವುದಕ್ಕೆ ನೆರವಾಯಿತು ಎಂದು ವರದಿ ಕಲ್ಯಾಣ್ ಸಿಂಗ್ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ. ಮತೋನ್ಮಾದಿ ದುಷ್ಕರ್ಮಿಗಳು ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸುತ್ತಿದ್ದರೆ ಪೊಲೀಸರು ಮತ್ತು ಸರ್ಕಾರಿ ಅಧಿಕಾರಿಗಳು ಮೂಕ ಪ್ರೇಕ್ಷಕರಾಗಿ ನೋಡುತ್ತಿದ್ದರೆ ಹೊರತು ಅದನ್ನು ತಡೆಯುವ ಸಣ್ಣ ಪ್ರಯತ್ನವನ್ನೂ ಮಾಡಲಿಲ್ಲ ಎಂದು ವರದಿಯಲ್ಲಿ ಲಿಬರ್ಹಾನ್ ಕಿಡಿ ಕಾರಿದ್ದಾರೆ. ನ್ಯಾಯಾಲಯದ ಆದೇಶವಿದ್ದರೂ ಅದನ್ನು ಪರಿಪಾಲಿಸುವ ನಿರ್ದಿಷ್ಟ ಜವಾಬ್ದಾರಿಯನ್ನು ಹೊತ್ತುಕೊಳ್ಳುವುದಕ್ಕೆ ನಿರಾಕರಿಸಿ ವಿಧ್ವಂಸಕರ ಬೆನ್ನಿಗೆ ನಿಂತಿದ್ದು ಸಹಜವಾಗಿ ಸಂವಿಧಾನ ವಿರೋಧಿಯಾಗಿದೆ ಎಂಬುದು ಲಿಬರ್ಹಾನ್ ಅವರ ಅಭಿಪ್ರಾಯವಾಗಿದೆ. ಅಷ್ಟೇ ಅಲ್ಲ, ಉತ್ತರ ಪ್ರದೇಶ ಸರ್ಕಾರವು "*ದೇಶದ ಸಂವಿಧಾನದ ಒಕ್ಕೂಟ ವ್ಯವಸ್ಥೆಯ ಮೇಲೆ ಆಧಾರಪಟ್ಟು ಮಸೀದಿ ಧ್ವಂಸವಾಗದಂತೆ ತಡೆಯುವುದಕ್ಕೆ ಕೇಂದ್ರ ಸರ್ಕಾರ ಮಧ್ಯಪ್ರವೇಶಿಸುವುದನ್ನೂ ಕೂಡ ಬಲವಾಗಿ ಪ್ರತಿರೋಧಿಸಿ ತಡೆಯಿತು*" ಎಂದು ವರದಿಯಲ್ಲಿ ದಾಖಲೆ ಸಮೇತವಾಗಿ ವಿವರಿಸಿದೆ.

ಎಂಥ ತ್ಯಾಗಕ್ಕೂ ಸಿದ್ಧವಾಗಿದ್ದ ಸುಮಾರು ಎರಡು ಲಕ್ಷದಷ್ಟಿದ್ದ ಹಿಂದೂ ಜನಸ್ತೋಮದ ಕ್ರೋಧ ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸಿತು ಎಂದು ಸಂಘಪರಿವಾರದವರು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಆ ಮೂಲಕ ಇಡೀ ಘಟನೆ ಆ ಕ್ಷಣದಲ್ಲಿ ಸ್ವಪ್ರೇರಿತವಾಗಿ ನಡೆದದ್ದೇ ಹೊರತು ಪೂರ್ವಯೋಜಿತ ಕೃತ್ಯವಲ್ಲ ಎಂದು ಬಿಂಬಿಸುವುದಕ್ಕೆ ಪ್ರಯತ್ನಿಸುತ್ತಾರೆ. ಆದರೆ, ಜಸ್ಟೀಸ್ ಲಿಬರ್ಹಾನ್ ಅವರು ಅದನ್ನು ಸಾರಾಸಗಟಾಗಿ ತಿರಸ್ಕರಿಸಿ ಅದು ಬಹಳ ವ್ಯವಸ್ಥಿತವಾಗಿ ನಡೆದ ಪೂರ್ವಯೋಜಿತ ಕೃತ್ಯ ಎಂಬುದನ್ನು ಸಾಕ್ಷಾಧಾರಗಳ ಸಮೇತ ವಿಶ್ಲೇಷಿಸಿದ್ದಾರೆ. ಅದಕ್ಕೊಂದು ಉದಾಹರಣೆ ಎಂದರೆ ಆ ಸಂದರ್ಭದಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದ ಕಲ್ಯಾಣ್ ಸಿಂಗ್ ತೆಗೆದುಕೊಂಡ ಕ್ರಮಗಳು. ಮಸೀದಿ ಧ್ವಂಸವಾಗುವುದನ್ನು ತಡೆಯುವುದಕ್ಕೆ ಕಲ್ಯಾಣ್ ಸಿಂಗ್ ಯಾವುದೇ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿರಲಿಲ್ಲ. ಇನ್ನೂ ಕೆಟ್ಟದ್ದೇನೆಂದರೆ ಮಸೀದಿಯನ್ನು ಧ್ವಂಸಗೊಳಿಸುವುದಕ್ಕೆ ಏನೆಲ್ಲಾ ಸಹಾಯ, ಸಹಕಾರ ಮಾಡಬೇಕೋ ಅದನ್ನೆಲ್ಲಾ ಬಹಿರಂಗವಾಗಿಯೇ ಮಾಡಿದ್ದರು! ಯಾವ ಅಧಿಕಾರಿಯನ್ನು ಎಲ್ಲಿಗೆ ಬೇಕಾದರೂ ವರ್ಗಾಯಿಸುವ ಪರಮೋಚ್ಚ ಅಧಿಕಾರವನ್ನು ಹೊಂದಿದ್ದ ಕಲ್ಯಾಣ್ ಸಿಂಗ್ ಹಿಂದೂತ್ವದ ಸಿದ್ಧಾಂತವನ್ನು ತಲೆಗಿಳಿಸಿಕೊಂಡ, ಸಂಘಪರಿವಾರದ ಹಿನ್ನೆಲೆಯಿಂದ ಬಂದ, ಮುಸ್ಲಿಂ

▶▶▶14



ನರಸಿಂಹ ರಾವ್‌ಗೆ ಕ್ಲೀನ್‌ಚಿಟ್ ಯಾಕೆ?



ಜಸ್ಟೀಸ್ ಲಿಬರ್ಹಾನ್ ಅವರು ಬಾಬ್ರಿ ಮಸೀದಿ ಧ್ವಂಸ ಪ್ರಕರಣದಲ್ಲಿ ಆಗ ಕೇಂದ್ರದಲ್ಲಿದ್ದ ಕಾಂಗ್ರೆಸ್ ಸರ್ಕಾರದ ಪಾತ್ರವನ್ನು ಗೌಣಗೊಳಿಸಿದ್ದಾರೆಯೇ ಎಂಬ ಪ್ರಶ್ನೆ ಎದ್ದಿದೆ. ಒಂದು ರೀತಿಯಲ್ಲಿ ಈ ಪ್ರಶ್ನೆ ಏಳುವುದಕ್ಕೆ ಸಕಾರಣವೂ ಇದೆ. ಬಾಬ್ರಿ ಮಸೀದಿ ಧ್ವಂಸಗೊಳಿಸಿದ ದುಷ್ಕೃತ್ಯದಲ್ಲಿ ಸಂಘಪರಿವಾರ ಮತ್ತು ಬಿಜೆಪಿಗಳು ನಿರ್ವಹಿಸಿದ ಪಾತ್ರಕ್ಕೂ ಹಾಗೂ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರ ನಿರ್ವಹಿಸಿದ ಪಾತ್ರಕ್ಕೂ ಅಪಾರ ವ್ಯತ್ಯಾಸವಿರುವುದು ನಿಜ. ಆದರೆ, ಈ ಚಾರಿತ್ರಿಕ ಸ್ಮಾರಕ ...ಗೊಳ್ಳುವುದಕ್ಕೆ ಕಾಂಗ್ರೆಸ್ ಕೂಡ ಪರೋಕ್ಷವಾಗಿ ಕಾರಣವಾಗಿದ್ದು ಸುಳ್ಳೇನಲ್ಲ.

...ಬಾಬ್ರಿ ಮಸೀದಿ - ರಾಮಜನ್ಮಭೂಮಿ 'ವಿಚಾರ' ಒಂದು 'ವಿವಾದ'ವಾಗಿ ಮೊಟ್ಟ ಮೊದಲ ಬಾರಿಗೆ ...ಲೆಗೆ ಬಂದಿದ್ದು 1949ರಲ್ಲಿ. ಆಗ ನೆಹರೂ ನೇತೃತ್ವದಲ್ಲಿದ್ದ ಕೇಂದ್ರ ಸರ್ಕಾರ ಮಸೀದಿಗೆ ಬೀಗ ಹಾಕಿ ಹಿಂದೂ ... ಮುಸ್ಲಿಮರಿಬ್ಬರನ್ನೂ ನಿರ್ಬಂಧಿಸಿತು. ಅದರೊಂದಿಗೆ ಅದನ್ನೊಂದು "ವಿವಾದಿತ ವಿಚಾರ" ಎಂಬುದನ್ನು ... ಅವರೇ ಅಧಿಕೃತಗೊಳಿಸಿದರು. ಬೀಗ ಹಾಕುವುದರ ಬದಲು ರಾಮ ಮಂದಿರವನ್ನು ಕೆಡವಿ ಮಸೀದಿ ...ಗಿದೆ ಎಂಬ ಹಿಂದೂ ಮತಾಂಧರ ವಾದವನ್ನು ಚಾರಿತ್ರಿಕ ಸತ್ಯಗಳ ಮೂಲಕ ಬಾಯ್ಮುಚ್ಚಿಸಿದ್ದರೆ, ಅವರ ...ಟಗಳನ್ನು ನಿರ್ದಯವಾಗಿ ಹತ್ತಿಕ್ಕಿದ್ದರೆ ಭವಿಷ್ಯದಲ್ಲಿ ಅಂತಹದ್ದೊಂದು ದುರ್ಘಟನೆಯೇ ನಡೆಯುತ್ತಿರಲಿಲ್ಲ.

...1984ರ ನಂತರದಲ್ಲಿ ಸಂಘಪರಿವಾರ ಬಾಬ್ರಿ ಮಸೀದಿ ವಿರೋಧಿ ಅಭಿಯಾನವನ್ನು ಇನ್ನಷ್ಟು ಬಿರುಸುಗೊಳಿಸಿತು. ... ಮಸೀದಿಯ ಬೀಗವನ್ನು ತೆರೆದು ಹಿಂದೂಗಳಿಗೆ ಪೂಜೆಗೆ ಅವಕಾಶ ಮಾಡಿಕೊಡಬೇಕೆಂಬುದೇ ಈ ...ನದ ಪ್ರಧಾನ ಉದ್ದೇಶವಾಗಿತ್ತು. 1986ರಲ್ಲಿ ಪ್ರಧಾನಿ ರಾಜೀವ್ ಗಾಂಧಿ ಇದಕ್ಕೆ ಮಣಿದು ಮಸೀದಿಯ ...ನ್ನು ತೆರೆಸಿದರು. ವಾಸ್ತವದಲ್ಲಿ ಅದು ಬಾಬ್ರಿ ಮಸೀದಿ ಧ್ವಂಸ ಉದ್ದೇಶಕ್ಕೆ ಸಿಕ್ಕ ಮೊದಲ ಜಯವಾಗಿತ್ತು. ಈ ...ರಿಂದ ಮತ್ತಷ್ಟು ಪುಳಕಿತರಾದ ಸಂಘಪರಿವಾರಿಗಳು ತಮ್ಮ ಬಾಬ್ರಿ ಮಸೀದಿ ವಿರೋಧಿ ಅಭಿಯಾನವನ್ನು ...ನ್ನು ಬಿರುಸುಗೊಳಿಸಿದರು. ರಥಯಾತ್ರೆ, ಇಟ್ಟಿಗೆ ಯಾತ್ರೆ ಮುಂತಾದವುಗಳನ್ನು ನಡೆಸಿ ದೇಶದಾದ್ಯಂತ ಜನರಿಗೆ ಹಿಂದೂ ಮತೋನ್ಮಾದವನ್ನು ತುಂಬಿ ಮುಸ್ಲಿಮರ ವಿರುದ್ಧ ಬಾಬ್ರಿ ಮಸೀದಿಯ ವಿರುದ್ಧ ದ್ವೇಷ ಬಿತ್ತಲಾರಂಭಿಸಿದರು. ಈ ಸಂದರ್ಭದಲ್ಲಿ ಕೇಂದ್ರದಲ್ಲಿ ಪ್ರಧಾನಿಯಾಗಿ ರಾಜೀವ್ ಗಾಂಧಿ ಇದ್ದರು ಹಾಗೂ ಅಯೋಧ್ಯೆಯಿರುವ ಉತ್ತರ ಪ್ರದೇಶದಲ್ಲಿ ಮುಖ್ಯಮಂತ್ರಿಯಾಗಿ ಬಹಾದ್ದೂರ್ ಸಿಂಗ್ ಇದ್ದರು. ಇಬ್ಬರೂ ಕಾಂಗ್ರೆಸ್ಸಿಗರೆ. ರಾಜೀವ್ ಆಗಲೀ ಅಥವಾ ಬಹದ್ದೂರ್ ಆಗಲೀ ಸಂಘಪರಿವಾರದ ಬಾಬ್ರಿ ಮಸೀದಿ ವಿರೋಧಿ ಅಭಿಯಾನವನ್ನು ನಿಯಂತ್ರಿಸುವುದಕ್ಕೆ ಯಾವುದೇ ಪ್ರಯತ್ನ ಮಾಡಲಿಲ್ಲ. ಪರಿಣಾಮವಾಗಿ ಸಂಘಪರಿವಾರಿಗಳು ಜನರಲ್ಲಿ ಹಿಂದೂ ಮತೋನ್ಮಾದವನ್ನು ಬಿತ್ತುವಲ್ಲಿ, ಬಾಬ್ರಿ ಮಸೀದಿ ಮತ್ತು ಮುಸ್ಲಿಮರ ವಿರುದ್ಧ ದ್ವೇಷವನ್ನು ಬೆಳೆಸುವಲ್ಲಿ ಯಶಸ್ವಿಯಾದರು.


1992ರಲ್ಲಿ ಮಸೀದಿ ಧ್ವಂಸಗೊಂಡಾಗ ಕೇಂದ್ರದಲ್ಲಿ ಪ್ರಧಾನಿಯಾಗಿ ಪಿ.ವಿ.ನರಸಿಂಹರಾವ್ ಇದ್ದರು. ಅವರೂ ಕಾಂಗ್ರೆಸ್ಸಿಗರೆ. ಉತ್ತರ ಪ್ರದೇಶದಲ್ಲಿ ಮುಖ್ಯಮಂತ್ರಿಯಾಗಿ ಕಲ್ಯಾಣ್ ಸಿಂಗ್ ಇದ್ದರು. ಅವರು ಬಿಜೆಪಿಯವರು. ಕಲ್ಯಾಣ್ ಸಿಂಗ್ ಏನೋ ಮಸೀದಿ ಧ್ವಂಸಕ್ಕೆ ಕಂಕಣಬದ್ಧವಾಗಿರುವುದರಿಂದ ಅದಕ್ಕೆ ಬೆಂಗಾವಲಾಗಿ ನಿಲ್ಲುತ್ತಾರೆಂಬುದು ಎಲ್ಲರಿಗೂ ಗೊತ್ತಿದ್ದ ಸತ್ಯವಾಗಿತ್ತು. ಅದಕ್ಕಾಗಿ ಪ್ರಭುತ್ವ ಯಂತ್ರಾಂಗವನ್ನೂ ಬಳಸುತ್ತಾರೆಂಬುದೂ ಅಷ್ಟೇ ನಿಚ್ಚಳವಾಗಿತ್ತು. ಹಾಗಿದ್ದ ಮೇಲೂ ಪ್ರಧಾನಿ ನರಸಿಂಹ ರಾವ್ ಏಕೆ ಸುಮ್ಮನಿದ್ದರು? ಮಸೀದಿ ಉರುಳಿದ ದಿನವೇ ಕಲ್ಯಾಣ್ ಸಿಂಗ್ ರಾಜೀನಾಮೆ ಕೊಡುವುದರೊಂದಿಗೆ ರಾತ್ರಿ 9.10ಕ್ಕೆ ರಾಷ್ಟ್ರಪತಿ ಆಡಳಿತ ಹೇರಲಾಯಿತು. ಆ ಕೆಲಸವನ್ನು ಮೊದಲೇ ಏಕೆ ಮಾಡಲಿಲ್ಲ? ಕೇಂದ್ರದಿಂದ ಸೈನ್ಯವನ್ನು ಕಳಿಸಿ ಮಸೀದಿ ಧ್ವಂಸವಾಗುವುದನ್ನು ಏಕೆ ತಡೆಯಲಿಲ್ಲ?

ಲಿಬರ್ಹಾನ್ ಅವರು ತಮ್ಮ ವರದಿಯಲ್ಲಿ ಮಸೀದಿ ಧ್ವಂಸದ ಕುರಿತಂತೆ ಚಾರಿತ್ರಿಕ ಘಟನೆಗಳನ್ನು ಪಟ್ಟಿಮಾಡುತ್ತಾರೆಯೇ ಹೊರತು ಆ ದುಷ್ಕೃತ್ಯ ತಡೆಯುವಲ್ಲಿನ ಕಾಂಗ್ರೆಸ್‌ನ ನಿಷ್ಕ್ರಿಯತೆಯ ಬಗ್ಗೆ ಕಠೋರವಾಗಿ ಟೀಕೆ ಮಾಡುವುದಿಲ್ಲ. ರಾಜೀವ್ ಗಾಂಧಿ, ನರಸಿಂಹ ರಾವ್ ಮತ್ತು ಬಹದ್ದೂರ್ ಸಿಂಗ್ ಅವರನ್ನು ಪ್ರಜ್ಞಾಪೂರ್ವಕವಾಗಿ ರಕ್ಷಿಸುವುದಕ್ಕೆ ಮಾಡಿದ ಕೆಲಸದಂತೆ ಕಾಣುತ್ತದೆ. ಏನೇ ಆದರೂ ವಸ್ತುನಿಷ್ಠವಾಗಿ ಮೂಡಿಬಂದಿರುವ ಲಿಬರ್ಹಾನ್ ವರದಿಯಲ್ಲಿ ಇದೊಂದು ದೊಡ್ಡ ಕೊರತೆಯೇನೋ ಹೌದು ●



ವಿದ್ಯಾರ್ಥಿಗಳ ಮೇಲೆ ಮತ್ತೆ ಭಜರಂಗಿ ದಾಳಿ ಬಯಲಾದ ಮೋಹನ್ ಆಳ್ವನ ಬಂಡವಾಳ

ತನ್ನನ್ನು ತಾನು ಕರ್ನಾಟಕದ ಸಾಂಸ್ಕೃತಿಕ ರಾಯಭಾರಿಯೆಂದು ಭ್ರಮಿಸಿದ್ದ ಕ್ಯಾಪಿಟೇಶನ್ ಕುಳ ಡಾ. ಎಂ. ಮೋಹನ್ ಆಳ್ವನ ಬಂಡವಾಳ ಮತ್ತೊಮ್ಮೆ ಬಯಲಾಗಿದೆ. ಈತ ಚಡ್ಡಿಗಳ ಡಾರ್ಲಿಂಗ್ ಎಂಬುವುದು ಗುಟ್ಟಿನ ಸಂಗತಿಯೇನಲ್ಲ. ಕಳೆದೊಂದು ದಶಕದಿಂದ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಯುವ ಹಿಂದೂ ಸಮಾಜೋತ್ಸವ (ಮತ ಬ್ಯಾಂಕೋತ್ಸವ), ಗೋವಿನ ರಕ್ಷಣೆ ಕುರಿತ ನಾಟಕ ಇತ್ಯಾದಿಗಳಿಗೆಲ್ಲಾ ಮುಖ್ಯ ಫೈನಾನ್ಶಿಯರ್‌ಗಳು ದಕ್ಷಿಣಕನ್ನಡದ ಎರಡು ಪ್ರಮುಖ ಕ್ಯಾಪಿಟೇಶನ್ ಕುಳಗಳಾದ ನಿಟ್ಟೆ ಶಿಕ್ಷಣ ಸಂಸ್ಥೆಯ ಎನ್.ವಿನಯ್ ಹೆಗ್ಡೆ ಮತ್ತು ಆಳ್ವಾಸ್ ಶಿಕ್ಷಣ ಸಂಸ್ಥೆಯ ಎಂ.ಮೋಹನ್ ಆಳ್ವ. ಇಲ್ಲಿ ನಡೆಯುವ ಹಿಂದೂ ಸಮಾಜೋತ್ಸವಗಳ ಸಮಿತಿಗಳಲ್ಲಿ ಗುತ್ತುದ ಗುತ್ತಿಗೆ (ಕರಾವಳಿಯ ಬಂಟರ ಗೌಡಿಕೆ) ಹೆಸರಾದ ಬಂಟ ಸಮುದಾಯದ ಈ ಎರಡು ಕ್ಯಾಪಿಟೇಶನ್ ಕುಳಗಳಿಗೆ ಉನ್ನತ ಸ್ಥಾನಮಾನಗಳನ್ನು ನೀಡಲಾಗುತ್ತದೆ. ಚಡ್ಡಿ ನಾಯಕರು ಇಂತಹ ಸ್ಥಾನಮಾನ ಕೊಡುವಾಗ ಅದರ ಘನತೆಗೆ ತಕ್ಕಂತೆ ನಡೆದುಕೊಳ್ಳಬೇಕಲ್ಲವೇ? ಚಡ್ಡಿ ವಲಯದಲ್ಲಿನ ತಮ್ಮ ಸ್ಥಾನದ ಘನತೆಗೆ ತಕ್ಕಂತೆ ಮೋಹನ್ ಆಳ್ವ ಮುಸ್ಲಿಂ ವಿದ್ಯಾರ್ಥಿಗಳ ಮೇಲೆ ಭಜರಂಗಿ ಪುಂಡರಿಂದ ಹಲ್ಲೆ ನಡೆಸಿ ಸಾರ್ಥಕ್ಯನಾಗಿದ್ದಾನೆ. ಈ ಹಲ್ಲೆ ಪ್ರಕರಣದ ಹಿಂದೆ ಹಿಂದೂತ್ವದ ನಂಜು ಮತ್ತು ತನ್ನ ಕಾಲೇಜಿನ ಎದುರಾಳಿ ಕಾಲೇಜಿನ ಪ್ರತಿಭೆಗಳನ್ನು ವಾಮಮಾರ್ಗದಲ್ಲಿ ಹಣಿಯುವ ದುಷ್ಟ ಹುನ್ನಾರವಿದೆ.



ಮೋಹನ್ ಆಳ್ವ

ಮಂಗಳೂರು ತಾಲ್ಲೂಕಿನ ಎಡಪದವು ವಿವೇಕಾನಂದ ಅನುದಾನಿತ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳ ಮೇಲೆ ಭಜರಂಗಿ ಗೂಂಡಾಗಳು ನವೆಂಬರ್ ಹದಿನೈದರ ಆದಿತ್ಯವಾರದಂದು ವಾಮಂಜೂರು ಎಂಬಲ್ಲಿ ಹಲ್ಲೆ ನಡೆಸಿದ್ದರು. ಬೇಸರದ ಸಂಗತಿಯೇನೆಂದರೆ ಸದ್ರಿ ಹಲ್ಲೆಯ ಹಿಂದಿನ ಸೂತ್ರಧಾರಿ ಅದೇ ಕಾಲೇಜಿನ ಸಂಚಾಲಕ ಮೋಹನ ಆಳ್ವ. ಹಲ್ಲೆಗೆ ಕಾರಣ ಅದೇ ಫ್ಯಾಸಿಸಂನ ನಂಜು. ಅಂದರೆ ಮುಸ್ಲಿಂ ಹುಡುಗರು ತಮ್ಮ ಸಹಪಾಠಿ ಹಿಂದೂ ಹುಡುಗಿಯರೊಂದಿಗೆ ಪ್ರಯಾಣಿಸುತ್ತಿದ್ದುದು.



ಪತ್ರಿಕಾಗೋಷ್ಠಿಯಲ್ಲಿ ದಾಳಿಗೊಳಗಾದ ವಿದ್ಯಾರ್ಥಿಗಳು.....

ಜಿಲ್ಲಾ ಮಟ್ಟದಲ್ಲಿ ವಿಜೇತರಾದ ಅನುದಾನಿತ ವಿವೇಕಾನಂದ ಕಾಲೇಜಿನ ಐವತ್ತು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಪದವಿಪೂರ್ವ ಶಿಕ್ಷಣ ಇಲಾಖೆ ಆಯೋಜಿಸಿದ್ದ ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದರು. ಆ ಪೈಕಿ ವಿದ್ಯಾರ್ಥಿಗಳ ಒಂದು ತಂಡವು ನವೆಂಬರ್ ಹದಿನೈದರಂದು ಹಾಸನಕ್ಕೆ ಪ್ರಯಾಣಿಸುತ್ತಿದ್ದರು. ಸಹಜವಾಗಿಯೇ ಹಿಂದೂ ಮುಸ್ಲಿಂ ಎರಡೂ ಕೋಮಿನ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಆ ತಂಡದಲ್ಲಿದ್ದರು. ಈ ಹಲ್ಲೆ ಪ್ರಕರಣದ ಸೂತ್ರಧಾರ ತಾನೇ ಎಂಬುದನ್ನು ಸ್ವತಃ ಪೆದ್ದ ಮೋಹನ್ ಆಳ್ವ ತನ್ನ ಮಾತು ಮತ್ತು ಕೃತಿಗಳಿಂದ ಬಹಿರಂಗಪಡಿಸಿದ್ದಾನೆ. ತನ್ನದೇ ಸಂಚಾಲಕತ್ವದ ಕಾಲೇಜಿನ ವಿದ್ಯಾರ್ಥಿಗಳ ಮೇಲೆ ಭಜರಂಗಿಗಳು ಹಲ್ಲೆ ನಡೆಸಿರುವಾಗ ಅದನ್ನು ಖಂಡಿಸಿ ಹೇಳಿಕೆ ನೀಡುವುದು, ಪೊಲೀಸರಿಗೆ ದೂರು ನೀಡುವುದನ್ನು ಬಿಟ್ಟು, "ವಿದ್ಯಾರ್ಥಿಗಳು ಕ್ರೀಡಾಕೂಟಕ್ಕೆ ತೆರಳಿದ್ದಲ್ಲ, ಮೋಜು ಮಾಡಲು ಹೋಗಿದ್ದು" ಎಂದು ಮರ್ಯಾದೆ ಬಿಟ್ಟು ಒದರಿದ್ದಾನೆ. ವಿದ್ಯಾರ್ಥಿಗಳಿಗೆ ನೈತಿಕ ಬೆಂಬಲ ನೀಡಿದ್ದ ಪ್ರಾಂಶುಪಾಲ ನಿತ್ಯಾನಂದ ಮತ್ತು ದೈಹಿಕ ಶಿಕ್ಷಕ ಪ್ರೇಮನಾಥ ಶೆಟ್ಟಿಯವರ ಮೇಲೆ ನೀಚ ಪದ ಪ್ರಯೋಗ ಮಾಡಿ ವಿದ್ಯಾರ್ಥಿಗಳ ಮುಂದೆಯೇ ಅವರನ್ನು ಅವಮಾನಿಸಿದ್ದಾನೆ. ಇದರಿಂದ ಕ್ರುದ್ಧರಾದ ವಿದ್ಯಾರ್ಥಿಗಳು ಇದನ್ನು ಪ್ರಶ್ನಿಸಿದ್ದಕ್ಕೆ ಅವರ ಮೇಲೆ ಕೈ ಮಾಡಿ ಒಂಬತ್ತು ಮುಸ್ಲಿಂ ವಿದ್ಯಾರ್ಥಿಗಳನ್ನು ಕಾಲೇಜಿನಿಂದ ಅಮಾನತು ಮಾಡಿದ್ದಾನೆ. ಇದನ್ನು ಪ್ರಶ್ನಿಸಿದ ವಿದ್ಯಾರ್ಥಿಯೊಬ್ಬನ ತಂದೆಯ ಜೊತೆ ತೀರಾ ಅನಾಗರಿಕನಂತೆ ಮಾತಾಡಿದ್ದಾನೆ. ಆ ಬಳಿಕ ಕಾಲೇಜಿನ ದೈಹಿಕ ಶಿಕ್ಷಕ ಪ್ರೇಮನಾಥ ಶೆಟ್ಟಿಯವರಿಗೆ ಶೋಕಾಸ್ ನೋಟೀಸು ಜಾರಿ ಮಾಡಿ ತಗಾದೆ ತೆಗೆದಿದ್ದಾನೆ. ಶೋಕಾಸ್ ನೋಟೀಸ್‌ನಲ್ಲಿ ಪ್ರೇಮನಾಥ ಶೆಟ್ಟಿಯವರಿಗೆ ಕೇಳಲಾದ ಪ್ರಶ್ನೆಗಳು ಬಹಳ ವಿಚಿತ್ರವಾಗಿವೆ: "ಯಾರನ್ನ ಕೇಳಿ ವಿದ್ಯಾರ್ಥಿಗಳನ್ನು ಕ್ರೀಡಾಕೂಟಕ್ಕೆ ಕಳುಹಿಸಿದಿರಿ? ಸಂಚಾಲಕರಿಗೆ ಯಾಕೆ ಕ್ರೀಡಾ ಕೂಟಕ್ಕೆ ತೆರಳುವ ಬಗ್ಗೆ ಮಾಹಿತಿ ನೀಡಿಲ್ಲ?"

ವಿದ್ಯಾರ್ಥಿಗಳನ್ನು ಕ್ರೀಡಾಕೂಟಕ್ಕೆ ಕಳುಹಿಸುವ ಕುರಿತು ಸಂಸ್ಥೆಯ ಶೈಕ್ಷಣಿಕ ಮುಖ್ಯಸ್ಥ ನಿರ್ಧರಿಸಬೇಕೇ ಹೊರತು ಆಡಳಿತ ಮಂಡಳಿ ಮುಖ್ಯಸ್ಥನಲ್ಲ ಎಂಬುದು ಶಿಕ್ಷಣ ಮಾಫಿಯಾವೊಂದರ ಅಧಿಪತಿ ಮೋಹನ ಆಳ್ವನಿಗೇಕೆ ತಿಳಿಯದಾಯಿತು? ಹಾಸನದಲ್ಲಿ ನಡೆಯುವ ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ತೆರಳುವ ಬಗ್ಗೆ ಪದವಿಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರಿಂದ ಅನುಮತಿ ಪತ್ರವನ್ನು ಪ್ರೇಮನಾಥ ಶೆಟ್ಟಿ ಪಡೆದಿದ್ದರು. ಕರಾವಳಿಯಲ್ಲಿ ಹಿಂದೂತ್ವವಾದಿಗಳು ನಡೆಸುವ ಆಟಾಟೋಪವನ್ನು ನಿತ್ಯ ನೋಡುತ್ತಿರುವ ಪ್ರೇಮನಾಥ ಶೆಟ್ಟಿಯವರು ವಿದ್ಯಾರ್ಥಿ-ವಿದ್ಯಾರ್ಥಿನಿಯರ ಹೆತ್ತವರಿಂದಲೂ ಕ್ರೀಡಾಕೂಟಕ್ಕೆ ಕಳುಹಿಸಲು ಅನುಮತಿ ಪತ್ರ ಪಡೆದಿದ್ದರು. ಪ್ರಾಂಶುಪಾಲರಿಂದ ಮೌಖಿಕ ಅನುಮತಿಯನ್ನು ಪಡೆದಿದ್ದರು.

ಆಳ್ವನ ಮತ್ಸರದ ಹಿಂದಿನ ಗುಟ್ಟು

ಎಡಪದವು ವಿವೇಕಾನಂದ ಪದವಿ ಪೂರ್ವ ಕಾಲೇಜಿನ ಕ್ರೀಡಾಳುಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚಿನವರು ಮುಸ್ಲಿಂ ವಿದ್ಯಾರ್ಥಿಗಳು. ಹೆಚ್ಚಿನವರೆಲ್ಲ ತೀರಾ ಬಡಕುಟುಂಬದ ಹಿನ್ನೆಲೆಯವರು. ವಿದ್ಯಾರ್ಥಿಗಳಲ್ಲಿ ಸುಪ್ತವಾಗಿ ಅಡಗಿರುವ ಪ್ರತಿಭೆಯನ್ನು ಗುರುತಿಸಿ ಅವರಿಗೆ ಪ್ರೋತ್ಸಾಹ ಮತ್ತು ನಿರಂತರ ತರಬೇತಿ ನೀಡಿ ಅವರನ್ನು ಉತ್ತಮ ಕ್ರೀಡಾಳು ಗಳನ್ನಾಗಿ ರೂಪಿಸುವಲ್ಲಿ ದೈಹಿಕ ಶಿಕ್ಷಕ ಪ್ರೇಮನಾಥ ಶೆಟ್ಟಿ ಯವರ ಪಾತ್ರ ದೊಡ್ಡದಿದೆ. ಪಕ್ಕಾ ಜಾತ್ಯತೀತ ಮನೋಭಾವ ದವರೂ, ಅತ್ಯಂತ ಸಂಭಾವಿತರೂ ಆದ ಪ್ರೇಮನಾಥ ಶೆಟ್ಟಿ ಪುತ್ತೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರೂ, ಜಿಲ್ಲಾ ಕಾಂಗ್ರೆಸ್‌ನ ಪ್ರಭಾವಿ ಮುಖಂಡರೂ ಆಗಿರುವ ಕಾಪು ಹೇಮನಾಥ ಶೆಟ್ಟಿಯವರ ಖಾಸಾ ತಮ್ಮ. ಜಾತ್ಯತೀತ ಮನೋಭಾವದ ಪ್ರೇಮನಾಥ ಶೆಟ್ಟಿಯವರನ್ನು ಹಿಂದೂತ್ವದ ನಂಜು ಪ್ರಾಣಿ ಮೋಹನ್ ಆಳ್ವ ಸಹಿಸುತ್ತಾನಾದರೂ ಹೇಗೆ?

ಈ ಬಾರಿ ಎಡಪದವು ವಿವೇಕಾನಂದ ಪದವಿಪೂರ್ವ ಕಾಲೇಜಿನಿಂದ ಒಟ್ಟು 50 ವಿದ್ಯಾರ್ಥಿಗಳು ರಾಜ್ಯಮಟ್ಟಕ್ಕೆ ಮತ್ತು ಮೂವರು ಅಂತಾರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಇದೆಲ್ಲದರ ಕ್ರೆಡಿಟ್ ಪ್ರೇಮನಾಥ ಶೆಟ್ಟಿಯವರಿಗೆ ಸಲ್ಲುತ್ತದೆ ಎಂಬ ವಿಚಾರ ಮೋಹನ ಆಳ್ವನನ್ನು ಮತ್ಸರದಿಂದ ಉರಿಯುವಂತೆ ಮಾಡಿದೆ.

ಎಡಪದವು ವಿವೇಕಾನಂದ ಕಾಲೇಜಿನ ತಂಡವು ಅನೇಕ ಬಾರಿ ಆಳ್ವಾಸ್ ಶಿಕ್ಷಣ ಸಂಸ್ಥೆಯನ್ನು ಮಣ್ಣುಮುಕ್ಕಿಸಿತ್ತು. ಎಡಪದವು ಕಾಲೇಜನ್ನು ಶತಾಯಗತಾಯ ಸೋಲಿಸಲೇಬೇಕೆಂದು ಮೋಹನ ಆಳ್ವ ಸುತ್ತಮುತ್ತಲ ಬೇರೆ ಬೇರೆ ಕಾಲೇಜಿನ ಪ್ರತಿಭಾವಂತ ಕ್ರೀಡಾಳು ವಿದ್ಯಾರ್ಥಿಗಳನ್ನು ಪುಸಲಾಯಿಸಿ ತಂದು ತನ್ನ ಕಾಲೇಜಿನಲ್ಲಿ ಉಚಿತ ಪ್ರವೇಶವನ್ನು ನೀಡುತ್ತಿದ್ದ. ಎಲ್ಲಾ ವಾಮಮಾರ್ಗದ ಪ್ರಯತ್ನದ ಬಳಿಕವೂ ಎಡಪದವು ಕಾಲೇಜಿನ ವಿದ್ಯಾರ್ಥಿಗಳನ್ನು ಯಾವುದೇ ಕ್ರೀಡೆಗಳಲ್ಲೂ ತನ್ನ ಒಡೆತನದ ಆಳ್ವಾಸ್‌ಗೆ ಸೋಲಿಸಲು ಸಾಧ್ಯವಾಗುತ್ತಿಲ್ಲವಲ್ಲ ಎಂಬ ಮತ್ಸರವು ಮೋಹನ ಆಳ್ವನಿಂದ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸುವಂತಹ ನೀಚ ಕೆಲಸಕ್ಕಿಳಿಸಿದೆ. ಈ ಮೂಲಕ ಮೋಹನ್ ಆಳ್ವ ಎಡಪದವು ವಿವೇಕಾನಂದ ಕಾಲೇ ಜಿನ ವಿದ್ಯಾರ್ಥಿಗಳು ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ತೆರಳದಂತೆ ತಡೆದಿದ್ದಾನೆ.

ಕಾಲೇಜು ಆವರಣದಲ್ಲಿ ಠಳಾಯಿಸುತ್ತಿರುವ ಭಜರಂಗಿಗಳು

ವಾಮಂಜೂರು ಹಲ್ಲೆ ಪ್ರಕರಣದ ಆರೋಪಿಗಳು ಅನಾರೋಗ್ಯದ ನೆಪಹೇಳಿ ವೆನ್ಲಾಕ್ ಆಸ್ಪತ್ರೆಗೆ ದಾಖಲಾಗಿ ಅಲ್ಲಿಂದ ಪರಾರಿಯಾಗಿದ್ದರು. ಪರಾರಿಯಾಗಿದ್ದ ನಾಲ್ಕು ಮಂದಿ ಆರೋಪಿಗಳು ಎಡಪದವು ಕಾಲೇಜಿನ ಆವರಣದಲ್ಲೇ ಠಿಕಾಣಿ ಹೂಡಿ ಕಾಲೇಜಿನಲ್ಲಿ ಕಾವಲಿಗಾಗಿ ನಿಯೋಜಿತ ರಾಗಿದ್ದ ಸ್ಥಳೀಯ ಠಾಣೆಯ ಪೊಲೀಸರೊಂದಿಗೆ ಹರಟೆ ಹೊಡೆಯುತ್ತಿದ್ದರು. ಅಷ್ಟರವರೆಗೆ ಖಾಕಿ ಚಡ್ಡಿಗಳು, ಕೇಸರಿ ಕ್ರಿಮಿನಲ್‌ಗಳೊಂದಿಗೆ ಅನ್ಯೋನ್ಯವಾಗಿದ್ದಾರೆ. ಪಣಂಬೂರಿನ ಅತ್ಯಂತ ಖಡಕ್ ಡಿವೈಎಸ್ಪಿ ಗಿರೀಶ್‌ರವರಿಗೆ ಸುದ್ದಿ ಮುಟ್ಟಿದ್ದೇ ತಡ ಗಿರೀಶ್ ಅವರು ಸ್ವತಃ ಖಾಸಗಿ ವಾಹನವೊಂದರಲ್ಲಿ ಮಫ್ತಿಯಲ್ಲಿ ಕಾಲೇಜಿನ ಆವರಣಕ್ಕೆ ದಾಳಿ ಮಾಡಿ ಭಜರಂಗಿಗಳನ್ನು ಹಿಡಿದು ಕಂಬಿಯೊಳಗೆ ತಳ್ಳಿದ್ದಾರೆ. ಗಿರೀಶ್‌ರವರು ದಾಳಿ ನಡೆಸಿದ ಸಂದರ್ಭ ಸೆಕ್ಸ್ ಸಿಡಿ ಪ್ರವೀಣ ಭಜರಂಗಿ ನಾಯಕ ಸುಧಾಕರಗೌಡ ಯಾನೆ ಒಡಿಲ್ ಸುಧಾಕರನೂ ಸೆರೆಸಿಕ್ಕಿ ಸದ್ಯ ಕಂಬಿಯೊಳಗಿದ್ದಾನೆ.


ಎಂಎಲ್‌ಸಿ ಹುದ್ದೆಯ ಮೇಲೆ ಕಣ್ಣಿಟ್ಟ ಆಳ್ವ

ಸತತವಾಗಿ ನುಡಿಸಿರಿ ಎಂಬ ಸಾಂಸ್ಕೃತಿಕ ಜಾತ್ರೆ ಏರ್ಪಡಿಸಿ, ಗೋ ರಕ್ಷಣೆಯ ನಾಟಕಗಳ ನೇತೃತ್ವ ವಹಿಸಿ, ಹಿಂದೂ ಸಮಾಜೋತ್ಸವ ನಡೆಸಿಯೂ ಚಡ್ಡಿಗಳು ತಥಾಸ್ತು ಎನ್ನಲಿಲ್ಲ. ಈಗ ಶತಾಯಗತಾಯ ಎಂಎಲ್‌ಸಿ ಹುದ್ದೆ ಗಿಟ್ಟಿಸಿಕೊಳ್ಳಬೇಕೆಂದು ಚಡ್ಡಿಗಳನ್ನು ಖುಷಿಪಡಿಸುವ ಗೂಂಡಾ ಕೆಲಸಕ್ಕೂ ಇಳಿದಿದ್ದಾನೆ ಈ ಆಳ್ವ.

ಪ್ರತಿಷ್ಠೆಯ ಅಸಾಧ್ಯ ಹುಚ್ಚು ತಲೆಗೇರಿಸಿಕೊಂಡಿರುವ ಮೋಹನ್ ಆಳ್ವ ತನ್ನ ಒಡೆತನದ ಸಂಸ್ಥೆಯ ಪ್ರತಿಷ್ಠೆಗೋಸ್ಕರ ತನ್ನದೇ ಸಂಚಾಲಕತ್ವದ ಕಾಲೇಜಿನ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಮೇಲೆ ಹಗೆ ಸಾಧಿಸುವಷ್ಟು ಕೀಳುಮಟ್ಟಕ್ಕಿಳಿದಿದ್ದಾನೆ.

ಅರ್ಧ ಕರ್ನಾಟಕವೇ ನೆರೆಯಲ್ಲಿ ಮುಳುಗಿ ಜನ ತುತ್ತು ಕೂಳಿಗಾಗಿ, ತುಂಡುಬಟ್ಟೆಗಾಗಿ, ಒಂದು ಸೂರಿಗಾಗಿ ಚಡಪಡಿಸುತ್ತಿರುವಂತಹ ವಿಷಮ ಕಾಲದಲ್ಲೂ ಅದ್ದೂರಿಯ 'ನುಡಿಸಿರಿ' ನಡೆಸಿ ಪ್ರತಿಷ್ಠೆಗಾಗಿ ತಾನು ಏನು ಬೇಕಾದರೂ ಮಾಡಬಲ್ಲೆ ಎಂಬುದನ್ನು ಮೋಹನ್ ಆಳ್ವ ಸಾಬೀತುಪಡಿಸುತ್ತಿದ್ದಾನೆ.

● ಇಸ್ಮತ್ ಪಜೀರ್





ಭಜರಂಗಿಗಳಿಗೆ ಮೂಗುದಾರ ಹಾಕುತ್ತಿರುವ ಮೂವರು ಪೊಲೀಸ್ ಆಫೀಸರ್ಸ್

ಕರಾವಳಿಯ ಬಹುತೇಕ ಪಿಎಸ್‌ಐಗಳು, ಕಾನ್ಸ್‌ಟೇಬಲ್‌ಗಳು ಭಜರ[ಂಗಿ]ಗಳೊಂದಿಗೆ ಶಾಮೀಲಾಗಿ ತಮ್ಮ ಕರ್ತವ್ಯವನ್ನೇ ಮರೆತಿದ್ದಾರೆ. 'ಮಾರ[ಲ್] ಪೊಲೀಸಿಂಗ್' ಎಂಬ ಸಂಘ ಪರಿವಾರದ ಗೂಂಡಾಗಿರಿಗೆ ಕುಮ್ಮ[ಕ್ಕು] ನೀಡುತ್ತಿದ್ದಾರೆ. ಭಜರಂಗಿಗಳ ಅಕ್ರಮ ವೇಶ್ಯಾವಾಟಿಕೆ, ಅಕ್ರಮ ಬಾರ್‌ಗ[ಳಿಗೆ] ಸಂಪೂರ್ಣ ಸಹಕಾರ ನೀಡುತ್ತ ತಾವೂ ಪಾಲು ಎಣಿಸಿಕೊಳ್ಳುತ್ತಿದ್ದಾರೆ.

ಈ ಎಲ್ಲದರ ನಡುವೆ ಮೂವರು ಪೊಲೀಸ್ ಅಧಿಕಾರಿಗಳು ಮ[…] ಭಜರಂಗಿ ಭಂಡರ ಪಾಲಿಗೆ ತಲೆನೋವಾಗಿ ಪರಿಣಮಿಸಿದ್ದಾರೆ. ಮಂಗಳೂ[ರು] ಎಸ್.ಪಿ. ಸುಬ್ರಮಣ್ಯೇಶ್ವರ್ ರಾವ್, ಮಂಗಳೂರಿನ ಡಿವೈಎಸ್[ಪಿ] ಅಮಿತ್‌ಕುಮಾರ್ ಸಿಂಗ್ ಮತ್ತು ಪಣಂಬೂರಿನ ಡಿವೈಎಸ್[ಪಿ] ಗಿರೀಶ್‌ಕುಮಾರ್‌ರವರು ಎಲ್ಲ ಅಕ್ರಮ ಚಟುವಟಿಕೆಗಳಿಗೆ ಕಡಿವಾ[ಣ] ಹಾಕುತ್ತಿರುವುದರಿಂದ ಹೆಚ್ಚು ತೊಂದರೆಗೊಳಗಾದವರು ಭಜರಂಗಿ ಪುಂಡ[ರು] ಆಗಿದ್ದಾರೆ. ನೈತಿಕ ಪೊಲೀಸಿಂಗ್ ಮಾಡುವ ಘಟಾಂಗರೂ ಈ ಅಧಿಕಾರಿ[ಗಳ] ರುಚಿ ನೋಡಬೇಕಾಗಿದೆ. ಮಂಗಳೂರಿನ ಕಾರ್‌ಸ್ಟ್ರೀಟ್ (ರಥಬೀದಿ) ಕಾಲೇಜಿ[ನಲ್ಲಿ] ಗದ್ದಲ ಎಬ್ಬಿಸಲು ಹೋಗಿದ್ದ ಮಂಗಚಡ್ಡಿಗಳಿಗೆ ಡಿವೈಎಸ್‌ಪಿ ಅಮಿ[ತ್] ಕುಮಾರ್ ಸಿಂಗ್ ನಡುರಸ್ತೆಯಲ್ಲೇ ಪಾಠ ಕಲಿಸಿದ್ದರು.

ಈಗ ಎಡಪದವು ಕಾಲೇಜಿನ ವಿದ್ಯಾರ್ಥಿಗಳ ಮೇಲೆ ಹಲ್ಲೆ ಮಾಡಿರು[ವ] ಭಜರಂಗದಳದ ಪಡಪ್ರೋಸಿಗಳಾದ ಸೆಕ್ಸ್ ಸಿಡಿ ರೂವಾರಿ ಒಡಿಲ್ ಸುಧಾ[ಕರ] ಗೌಡ, ಗುರುರಾಜ, ಯು. ದಯಾನಂದ್ ಮತ್ತು ಹರೀಶ್‌ರನ್ನು ಒ[…] ಎಳೆದು ತಂದಿದ್ದು ಪಣಂಬೂರಿನ ಡಿವೈಎಸ್‌ಪಿ ಗಿರೀಶ್‌ಕುಮಾರ್. ಮೊದ[ಲು] ವೆನ್‌ಲಾಕ್ ಆಸ್ಪತ್ರೆ ಸೇರಿ ಅಲ್ಲಿಂದ ಓಡಿಹೋಗಿದ್ದ ಈ ಭಜರಂಗಿ ಮುಠ್ಠಾಳ[ರನ್ನು] ಎಡಪದವು ಕಾಲೇಜಿನ ಆವರಣದಲ್ಲಿ ಮತ್ತೆ ಹಿಡಿದು ಹಾಕಿದ[ವರು] ಗಿರೀಶ್‌ಕುಮಾರ್. ಕಾನ್ಸ್‌ಟೇಬಲ್‌ಗಳನ್ನು ನೆಚ್ಚದ ಗಿರೀಶ್ ತಾವೇ ಮಫ್ತಿಯ[ಲ್ಲಿ] ಹೋಗಿ ಪುಂಡರನ್ನು ಹಿಡಿದು ತಂದು ಜೈಲಿಗಟ್ಟಿದ್ದಾರೆ. ಎಂದಿನ[ಂತೆ] ಕರಾವಳಿಯ ಆರೆಸ್ಸೆಸ್ ಮುಖ್ಯಸ್ಥ ಕಲ್ಲಡ್ಕ ಪ್ರಭಾಕರ ಭಟ್ಟ ಗಿರೀಶ[್‌ರಿಗೆ] ಫೋನ್ ಮಾಡಿ ತನ್ನ ಮರಿಮಂಗಗಳನ್ನು ಬಿಡ[ಲು] ಆದೇಶಿಸಿದ್ದಾನೆ. ಬೇರೆ ಡಿವೈಎಸ್‌ಪಿಗಳಾಗಿ[ದ್ದರೆ] ಯಾಕಪ್ಪ ರಗಳೆ ಅಂತಾ ಬಿಟ್ಟುಬಿಡುತ್ತಿದ್ದರೇನೋ. ಆದರೆ ಪ್ರಾಮಾಣಿಕ ಅಧಿಕಾರಿ ಗಿರೀಶ್‌ರವ[ರು] ಕಲ್ಲಡ್ಕನಿಗೆ ಸೊಪ್ಪು ಹಾಕಿಲ್ಲ. ಅಷ್ಟಕ್ಕೂ ಈ ಧೂರ್ತ[ರ] ರಕ್ಷಣೆ ಮಾಡಬೇಕೆಂದಿದ್ದರೆ ಕೋರ್ಟಿಗೆ ಬಂ[ದು] ಹೇಳಿಕೆ ನೀಡಿ ಎಂದು ಕಲ್ಲಡ್ಕನ ಮುಖ[ಕ್ಕೆ] ಹೊಡೆದಂತೆ ಗಿರೀಶ್ ಹೇಳಿದ್ದಾರೆ.



ಎಸ್. ಸುಬ್ರಮಣ್ಯೇಶ್ವರ ರಾವ್

ಅಂದಂತೆ ಈ ಹಿಂದೆ ಹಿಂದೂ ಹುಡುಗಿ[ಯ] ಸೆಕ್ಸ್ ಸಿ.ಡಿ. ಮಾಡಿದ್ದ ಮನೆಹಾಳ ಒಡಿ[ಲ್] ಸುಧಾಕರನನ್ನು ಗಿರೀಶರೇ ಜೈಲಿಗಟ್ಟಿದ್ದರು. ಜಾಮೀನಿನ ಮೇಲೆ ಹೊರಬ[ಂದ] ಸುಧಾಕರ ಈಗ ಎಡಪದವು ಕಾಲೇಜಿನ ಮೂವರು ಮುಸ್ಲಿಮ್ ಹುಡುಗ[ರು] ಇಬ್ಬರು ಹಿಂದೂ ಹುಡುಗಿಯರ ಮೇಲೆ ಹಲ್ಲೆ ಮಾಡಿಸಿ ಮತ್ತೆ ಗಿರೀ[ಶ್] ಕೈಗೆ ಸಿಕ್ಕಿಬಿದ್ದಿದ್ದಾನೆ.

ಎಸ್‌ಪಿ. ಸುಬ್ರಮಣ್ಯೇಶ್ವರ ರಾವ್, ಡಿವೈಎಸ್‌ಪಿಗಳಾದ ಅಮಿತಕುಮಾ[ರ್] ಸಿಂಗ್ ಮತ್ತು ಗಿರೀಶ್‌ರವರಿಂದಾಗಿ ಲಂಚಕೋರ ಪಿಎಸ್‌ಐ ಮ[ತ್ತು] ಕಾನ್ಸ್‌ಟೇಬಲ್‌ಗಳಿಗೆ ಇಕ್ಕಟ್ಟು ಶುರುವಾಗಿದೆ. ಸದಾ ಭಜರಂಗಿ ಬದ್ಮಾಶ್[ಗಳ] ಜೊತೆ ಮಿಲಾಖತ್ ನಡೆಸಿ ಅವರ ಎಲ್ಲ ಅಕ್ರಮ ದಂಧೆಗಳಿಗೆ ರ[…] ನೀಡುತ್ತಿದ್ದ, ಮುಸ್ಲಿಮರ ಮೇಲೆ ಹಲ್ಲೆ ಮಾಡುತ್ತಿದ್ದ ಭಜರಂಗಿಗಳ[ನ್ನು] ಕಾಪಾಡಿ, ಹಲ್ಲೆಗೊಳಗಾದ ಮುಸ್ಲಿಮರನ್ನೇ 'ಜೈಲಿಗೆ ಹಾಕಿ ಹಿಂಸಿಸು[ತ್ತಿದ್ದ] ಬಜ್ಪೆಯ ಪಿಎಸ್‌ಐ ರಾಘವ ಪಡಿಲ್ ಎಂಬ ದುಷ್ಟನ ಹಾವಳಿ ಮಿತಿಮ[ೀರಿ] ಹೋಗಿತ್ತು, ಇತ್ತೀಚೆಗಷ್ಟೇ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ[ವರು] ಈತನ ವಿರುದ್ಧ ಪಶ್ಚಿಮ ವಲಯ ಐಜಿಪಿ ಗೋಪಾಲ್ ಹೊಸೂರ್‌ರವ[ರಿಗೆ] ದೂರು ಹೇಳಿದಾಗ, "ಆತನ ತಪ್ಪುಗಳು ಗಮನಕ್ಕೆ ಬಂದಿವೆ" ಎಂ[ದು] ಹೊಸೂರ್‌ರವರ ಮುಖದಲ್ಲಿ ರಾಘವನನ್ನು ವರ್ಗಾವಣೆ ಮಾಡಲಾ[ಗದ] ಅಸಹಾಯಕತೆ ಕಂಡಿತ್ತು,

ಎಡಪದವು ಕಾಲೇಜು ಪ್ರಕರಣ ನೆಪ ಮಾಡಿಕೊಂಡ ಎಸ್[ಐ] ರಾಘವ ಡಿವೈಎಸ್‌ಪಿ ಗಿರೀಶ್ ವಿರುದ್ಧ ಭಜರಂಗಿಗಳಿಂದ ಪ್ರತಿಭ[ಟನೆ] ಮಾಡಿಸಿದ್ದ. ತನ್ನ ಕಳ್ಳಾಟಗಳಿಗೆ ಆಸ್ಪದ ಕೊಡದ ತನ್ನ ಹಿರಿಯ ಅಧಿ[ಕಾರಿ] ವಿರುದ್ಧವೇ ರಾಘವ ಪಿತೂರಿ ನಡೆಸಿದ್ದು ತಿಳಿದಾಯ್ತು ಎಂದು ಪೊಲೀ[ಸ್] ವರಿಷ್ಠರಿಗೇ ಮನವರಿಕೆಯಾಯ್ತು. ಸದ್ಯ ಬಜ್ಪೆ ಎಸ್‌ಐ ರಾಘವ ಪಡಿಲ್‌ನ[ನ್ನು] ಕೆಲಸಕ್ಕೆ ಬಾರದ ಹುದ್ದೆಗೆ ಟ್ರಾನ್ಸ್‌ಫರ್ ಮಾಡುವ ಮೂಲಕ ಬಜ್[ಪೆ] ಜನರಿಗೆ ನೆಮ್ಮದಿ ತರಲಾಗಿದೆ. ಚಡ್ಡಿಗಳಿಗೆ ಮಣಿಯದ ಎಸ್[ಪಿ] ಸುಬ್ರಮಣ್ಯೇಶ್ವರ್ ರಾವ್, ಡಿವೈಎಸ್‌ಪಿಗಳಾದ ಅಮಿತ್‌ಕುಮಾರ್ ಸಿ[ಂಗ್] ಮತ್ತು ಗಿರೀಶ್‌ಕುಮಾರ್‌ರಂತಹ ಇನ್ನಷ್ಟು ಅಧಿಕಾರಿಗಳನ್ನು ಕರಾ[ವಳಿಯ] ಠಾಣೆಗಳಿಗೆ ತರುವುದು ಅತ್ಯಗತ್ಯವಾಗಿದೆ. ಆದರೆ ಗೃಹ ಸಚಿವ ಆಚಾರ್ಯ[ರು] ಈ ಮೂವರು ಅಧಿಕಾರಿಗಳನ್ನೇ ಎತ್ತಂಗಡಿ ಮಾಡುವ ಹುನ್ನಾರದಲ್ಲಿ[ದ್ದಾರೆ].

-ಮಲ್ಲನಗೌಡ

ಜಲಮಂತ್ರಿಗೆ ಮಲಬಾಧೆ ಶೆಟ್ಟರೆ ಜಾಪಾಳ ಮಾತ್ರೆ

ರಾಜ್ಯ ಬಿಜೆಪಿಯಲ್ಲಿ ಶುರುವಾಗಿದ್ದ ಯಡ್ಡಿ-ರೆಡ್ಡಿ ಕದನ ಈಗ ತಣ್ಣಗಾಗಿರುಬಹುದು. ಒಂದಿಷ್ಟು ರಾಜಿ ಸಂಧಾನಗಳ ಕಾರಣದಿಂದ ಅಲ್ಲೀಗ ತಾತ್ಕಾಲಿಕ ಕದನ ವಿರಾಮ ಮಾಡಿಕೊಂಡಿರಬಹುದು.


ಆದರೆ ಉತ್ತರ ಕರ್ನಾಟಕದಲ್ಲಿ, ಅದರಲ್ಲೂ ಧಾರವಾಡ ಪ್ರಾಂತ್ಯದಲ್ಲಿ ಬಿಜೆಪಿಯೊಳಗೆ ಗುದುಮುರುಗಿ ಶುರುವಾಗಿಬಿಟ್ಟಿದೆ. ಜಗದೀಶ ಶೆಟ್ಟರ್ ಮಂತ್ರಿಯಾಗಿದ್ದೇ ತಡ ಶೆಟ್ಟಿ-ಮರಿಶೆಟ್ಟಿಗಳು ಎದ್ದು ಕುಳಿತಿವೆ. ಅವರ ಕದನವೀಗ ಬಸವರಾಜ ಬೊಮ್ಮಾಯಿ ವಿರುದ್ಧ. ಸದ್ಯಕ್ಕೆ ತಲೆ ಉಳಿಸಿಕೊಂಡಿರುವ ಜಲಮಂತ್ರಿಗೀಗ ಅತಂತ್ರ ಸ್ಥಿತಿಯಲ್ಲಿ ಮಲಬಾಧೆ ಶುರುವಾಗಿಬಿಟ್ಟಿದೆ.

ಮುಖ್ಯಮಂತ್ರಿ ಯಡಿಯೂರಪ್ಪ ಅತ್ತೂ ಕರೆದು ಸಮನ್ವಯ ಸಮಿತಿಗೆ ತನ್ನನ್ನು ಸೇರಿಸಿಕೊಂಡ ಮೇಲೆ ಬೊಮ್ಮಾಯಿ ಒಂದಿಷ್ಟು ನಿರಾಳರಂತೆ ಕಂಡರೂ ಹೊಟ್ಟೆಯೊಳಗೆ ಶೆಟ್ಟರ್ ಎಂಬ ಜಾಪಾಳ ಮಾತ್ರೆ ಕಸಿವಿಸಿ ಉಂಟುಮಾಡುತ್ತಲೇ ಇದೆ.



ಯಡ್ಡಿ

ಯಡಿಯೂರಪ್ಪನ ಬಿಟ್ಟಿ ಪ್ರೀತಿಗೆ ಮಂತ್ರಿಯಾದ ಬಸು ಬೊಮ್ಮಾಯಿ ತಾನು ಉತ್ತರ ಕರ್ನಾಟಕದ ಸಿಎಂ ಇದ್ದ ಹಾಗೆ ಅಂದುಕೊಳ್ಳುತ್ತ ಜಗದೀಶ್ ಶೆಟ್ಟರ್ ಮತ್ತು ಅವರ ಬಣಜಿಗ ಬೆಂಬಲಿಗರಿಗೆ ಬತ್ತಿ ಇಡುತ್ತಾ ಬಂದಿದ್ದರು. ಈಗ ಶೆಟ್ಟರ್ ಹವಾ ಶುರುವಾಗಿದ್ದೇ ತಡ ಕಂಡಕಂಡ ಲೀಡರುಗಳ ಕಾಲಿಗೆ ಡೈವ್ ಹೊಡೆದು ಸಚಿವ ಸ್ಥಾನ ಗಟ್ಟಿಗೊಳಿಸಿಕೊಳ್ಳುತ್ತಿದ್ದಾರೆ. ರೆಡ್ಡಿಗಳ ಪರತ್ತಿನಂತೆ ತಲೆದಂಡವಾಗುವುದನ್ನು ತಪ್ಪಿಸಿಕೊಳ್ಳಲು ಶೆಟ್ಟರ್ ಜೊತೆ ರಾಜಿಗೂ ತಯಾರಾಗಿ ಒಳಸಂಧಾನಕ್ಕೆ ಮುಂದಾಗುತ್ತಿದ್ದಾರೆ. ಯಡಿಯೂರಪ್ಪರ ಅಭಯ ಹಸ್ತವಿದ್ದಾಗಲೂ ಬಸು ಬೊಮ್ಮಾಯಿಯ ಚಳಿಜ್ವರ ನಿಂತಿಲ್ಲ.

ಇಬ್ಬರ ಜಗಳದ ನಡುವೆ ಲಾಭ


ವಿಜಯಸಂಕೇಶ್ವರ್

2004ರ ಚುನಾವಣೆಯಲ್ಲಿ ಬಿಜೆಪಿಗೆ 79 ಸೀಟು ಬಂದವಲ್ಲ; ಅದರಲ್ಲಿ ಉತ್ತರ ಕರ್ನಾಟಕದ ಲಿಂಗಾಯತ ಶಾಸಕರೇ ಹೆಚ್ಚಿದ್ದು ಜಗದೀಶ್ ಶೆಟ್ಟರ್ ಬಿಜೆಪಿಯ ಲಿಂಗಾಯತ ನಾಯಕನಂತೆ ಪೋಸು ಕೊಡುತ್ತಾ ಅನಂತಕುಮಾರರನ್ನು ಮುಂಚೂಣಿ ನಾಯಕನನ್ನಾಗಿ ಮಾಡಲು ಹವಣಿಸಿದರು. ಅಂದರೆ ಇದು ಯಡಿಯೂರಪ್ಪರನ್ನು ತುಳಿಯುವ ಹಾದಿ ಆಗಿತ್ತು.


ಬಸು ಬೊಮ್ಮಾಯಿ

ಕೊನೆಯಲ್ಲಿ ಅನಂತು ಕೇಂದ್ರ ರಾಜಕೀಯಕ್ಕೆ ಓಡಿಸಲ್ಪಟ್ಟ ಮೇಲೆ ಇಲ್ಲಿ ಯಡ್ಡಿ ಅವಿರೋಧ ನಾಯಕನಾದರು. ಮುಂದೆ ಕುಮಾರಸ್ವಾಮಿ ಜೊತೆ ಮೈತ್ರಿ ಸರ್ಕಾರ ಅರ್ಧಕ್ಕೆ ಕುಸಿದಾಗ ಯಡಿಯೂರಪ್ಪ ಲಿಂಗಾಯತರ ಸಿಂಪಥಿ ಪಡೆದು ಗೆದ್ದು ಸಿಎಂ ಆದರು. ಈ ಸಲವೂ ಉತ್ತರ ಕರ್ನಾಟಕದ ಲಿಂಗಾಯತ ಶಾಸಕರೇ ಹೆಚ್ಚಿರುವುದರಿಂದ ಎಲ್ಲಿ ಜಗದೀಶ್ ಶೆಟ್ಟರ್ ಪರ್ಯಾಯ ನಾಯಕನಾಗಿ ಬೆಳೆದುಬಿಟ್ಟಾರೋ ಎಂಬ ಆತಂಕದಲ್ಲಿ ಯಡ್ಡಿ ಅವರನ್ನು ಸ್ಪೀಕರ್ ಸ್ಥಾನದಲ್ಲಿ ಕಟ್ಟಿಹಾಕಿಬಿಟ್ಟರು.

ಬಿಜೆಪಿಯಿಂದ ತಾವೇ ಕರೆತಂದಿದ್ದ ಬಸು ಬೊಮ್ಮಾಯಿಗೆ ಜಲಸಂಪನ್ಮೂಲ ಖಾತೆ ಕೊಟ್ಟಿದ್ದಲ್ಲದೇ ಧಾರವಾಡ ಪ್ರಾಂತ್ಯದಲ್ಲಿ ಶೆಟ್ಟರ್ ಹಣಿಯಲು ಬೊಮ್ಮಾಯಿಯನ್ನು ಬಳಸುತ್ತಾ ಬಂದರು ಯಡಿಯೂರಪ್ಪ. ಯಡ್ಡಿ-ಶೆಟ್ಟರ್ ಜಗಳದಲ್ಲಿ ಲಾಭವುಂಡ ಬಸು ಬೊಮ್ಮಾಯಿ ಯಡ್ಡಿಯ ಸಲಹೆಯಂತೆ ಶೆಟ್ಟರ್ ಗ್ಯಾಂಗ್ ವಿಭಜಿಸುತ್ತಾ ಬಂದರು. ಬೇರೆ ಬೇರೆ ಪಾರ್ಟಿಗಳ ಬಣಜಿಗರನ್ನು (ಶೆಟ್ಟರ್ ಕೂಡಾ ಬಣಜಿಗ) ಬಿಜೆಪಿಗೆ ಸೇರಿಸಿಕೊಂಡ ಬೊಮ್ಮಾಯಿ ಧಾರವಾಡ, ಹಾವೇರಿ ಜಿಲ್ಲೆಗಳಲ್ಲಿ ಪಕ್ಷದೊಳಗಿನ ತಮ್ಮ ಬೆಂಬಲ ಹೆಚ್ಚಿಸಿಕೊಳ್ಳತೊಡಗಿದರು. ಇದೆಲ್ಲವನ್ನು ಸ್ಪೀಕರ್ ಶೆಟ್ಟರ್ ಸುಮ್ಮನೆ ನೋಡ್ತಾ ಇದ್ದರು. ಆದರೀಗ ಅವರು ಸಚಿವ ಶೆಟ್ಟರ್. ಈಗ ಶುರುವಾಗಿದೆ ಬಸು ಬೊಮ್ಮಾಯಿಯನ್ನು ಹಣಿಯುವ ಕೆಲಸ.

ಬಿಜೆಪಿ ಬಿಟ್ಟು ಅಬ್ಬೇಪಾರಿಯಾಗಿದ್ದ ಲಿಂಗಾಯತ ವಿಜಯ ಸಂಕೇಶ್ವರರನ್ನು ಬಿಜೆಪಿಗೆ ತಂದು ಎಂಎಲ್‌ಸಿ ಮಾಡಿದ್ದೂ ಬೊಮ್ಮಾಯಿಯೇ. ಇದು ಶೆಟ್ಟರ್‌ಗೆ ಆದ ಮೊದಲ ಹಿನ್ನಡೆ. ಈ ಮೊದಲು ಶೆಟ್ಟರ್ ವಿರುದ್ಧ ಸ್ಪರ್ಧಿಸಿ ಸೋತಿದ್ದ ಕಾಂಗ್ರೆಸ್ಸಿನ ಅಕ್ಕಿ ಕಳ್ಳಸಾಗಾಟದ ದೊರೆ ಬಣಜಿಗ ಶಂಕ್ರಣ್ಣ ಮುನವಳ್ಳಿಯನ್ನು ಬಿಜೆಪಿಗೆ ತಂದ ಬಸು ಶೆಟ್ಟರ್ ಪಾಳೆಯಕ್ಕೆ ಮತ್ತೊಂದು ಶಾಕ್ ಕೊಟ್ಟಿದ್ದರು. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಸದಸ್ಯರು ಸೇರಿದಂತೆ, ಬೆಳಗಾವಿ, ಹಾವೇರಿ, ಧಾರವಾಡ, ಗದಗ ಜಿಲ್ಲೆಗಳ ಹಲವಾರು ಶಾಸಕರನ್ನು ಅನಂತ್ ಬಣದಿಂದ ದೂರಮಾಡಿ ಯಡ್ಡಿ ಬಣಕ್ಕೆ ತಂದುಹಾಕಿ ಶೆಟ್ಟರರನ್ನು ಮತ್ತಷ್ಟು ಕಂಗಾಲು ಮಾಡಿದ್ದೂ ಇದೇ ಬಸು ಬೊಮ್ಮಾಯಿ.


ಹೀಗೆ ಸುಮಾರು ಎರಡು ವರ್ಷ ಯಡ್ಡಿ ಪ್ರಚೋದನೆಯಿಂದ ಬಸು ಬೊಮ್ಮಾಯಿ ನಡೆಸುತ್ತಾ ಬಂದ ಕಿತಾಪತಿ ನೋಡುತ್ತ ಸುಮ್ಮನಿದ್ದ ಶೆಟ್ಟರ್ ಇತ್ತೀಚೆಗೆ ತಮ್ಮ ಅಸ್ತ್ರಗಳನ್ನು ಬಳಸತೊಡಗಿದರು. ... ರೆಡ್ಡಿಗಳ ಪರತ್ತುಗಳಲ್ಲಿ ಬೊಮ್ಮಾಯಿಯ ತಲೆದಂಡವೂ ಸೇರಿಕೊಂಡಿತು. ... ಬೊಮ್ಮಾಯಿಯ ತಲೆದಂಡ ತಪ್ಪಿಸಿದ್ದಾರೆ.

ಸುಮ್ಮನಿರದೆ ಇರುವೆ ಬಿಟ್ಕೊಂಡ!

ಬರೋಬ್ಬರಿ ಇಪ್ಪತ್ತು ದಿನ ಇಡೀ ದೇಶ ನೋಡಿ ನಗುವಂತೆ ನಡೆದ ಯಡ್ಡಿ-ರೆಡ್ಡಿಗಳ ಜಗಳದ ಕಿಡಿ ಹೊತ್ತಿಸಿದ್ದೇ ಬಸು ಬೊಮ್ಮಾಯಿ ಎನ್ನಬಹುದು. ಯಡಿಯೂರಪ್ಪ ಗದಗ ಜಿಲ್ಲೆಯಲ್ಲಿ ನೆರೆ ಕಾರ್ಯದ ಪರಿಶೀಲನೆ ನಡೆಸುತ್ತಿದ್ದಾಗ ಜೊತೆಗೇ ಇದ್ದ ಬೊಮ್ಮಾಯಿ ರೆಡ್ಡಿ-ರಾಮುಲುಗಳ ವಿರುದ್ಧ ಸರಿಯಾದ ಬತ್ತಿಯನ್ನೇ ಇಟ್ಟುಬಿಟ್ಟರು. ಗದಗ ಜಿಲ್ಲಾ ಉಸ್ತುವಾರಿ ಸಚಿವ ರಾಮುಲು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ, ಇಲ್ಲಿರೋ ಅಧಿಕಾರಿಗಳೆಲ್ಲ ರೆಡ್ಡಿಗಳ ಹಿಂಬಾಲಕರು, ಇವರೆಲ್ಲ ಕೆಲಸ ಮಾಡದೇ ನಿಮಗೆ ಕೆಟ್ಟ ಹೆಸರು ತರ್‍ತಾ ಇದ್ದಾರೆ ಅಂತೆಲ್ಲ ಬೊಮ್ಮಾಯಿ ಹೇಳಿದ ಕೂಡಲೇ ಜಾಗೃತರಾದ ಯಡಿಯೂರಪ್ಪ ಗದಗಿನ ಜಿಲ್ಲಾಧಿಕಾರಿ ಪ್ರಸಾದರನ್ನು ನಿಂತನಿಂತಲ್ಲೇ ಟ್ರಾನ್ಸ್‌ಫರ್ ಮಾಡಿ ಒಗೆದುಬಿಟ್ಟರು. ಅಷ್ಟೇ ಅಲ್ಲ, ಪಕ್ಕದಲ್ಲೇ ಇದ್ದ ಎಸ್‌ಪಿಗೆ ಡಿಸಿಯನ್ನು ಅರೆಸ್ಟ್ ಮಾಡಿ ಎಂದೂ ಹೇಳಿಬಿಟ್ಟರು. ಆಗಲೇ ಒಳಗೊಳಗೆ ಕುದಿಯುತ್ತಿದ್ದ ರೆಡ್ಡಿ-ರಾಮುಲುಗಳು ಬಹಿರಂಗವಾಗಿ ಕದನಕ್ಕಿಳಿದಿದ್ದು. ಅಂದಂತೆ ಪ್ರತಿ ಅದಿರು ಲಾರಿಯ ಮೇಲೆ ಸಾವಿರ ರೂಪಾಯಿ ಶುಲ್ಕ ವಿಧಿಸುವ ಐಡಿಯಾ ಕೊಟ್ಟಿದ್ದೂ ಬೊಮ್ಮಾಯಿಯೇ.


ಜಗದೀಶ್ ಶೆಟ್ಟರ್

ಮುಂದಿನ ಕತೆ ಗೊತ್ತೇ ಇದೆ. ಅನಂತು, ಶೆಟ್ಟರ್, ರೆಡ್ಡಿಗಳೆಲ್ಲ ಒಂದಾಗಿ ಯಡ್ಡಿಯ ಕೈಕಟ್ಟಿ ಹಾಕಿದ ಮೇಲೆ ಬಸು ಬೊಮ್ಮಾಯಿಯೇ ಬೆಳೆಸಿದ ನವಲಗುಂದದ ಶಾಸಕ ಮುನೇನಕೊಪ್ಪ ಸೇರಿದಂತೆ, ಆರೇಳು ಶಾಸಕರು ಶೆಟ್ಟರ್ ಪರ ನಿಂತು ಬೊಮ್ಮಾಯಿಯನ್ನು ಒಂಟಿ ಮಾಡಿಬಿಟ್ಟಿದ್ದಾರೆ.


ಶಂಕ್ರಣ್ಣ ಮುನವಳ್ಳಿ

ಇವರ ಈ ಅಂತರ್ಯುದ್ಧ ಎಂಎಲ್‌ಸಿ ಚುನಾವಣೆಯಲ್ಲಿ ಬಿಜೆಪಿಗೆ ಹಿನ್ನಡೆ ಮಾಡುವ ಸಾಧ್ಯತೆಗಳು ಜಾಸ್ತಿಯಾಗತೊಡಗಿವೆ.

● ವಿನಯ್

ಶಾಸಕ ಪಟ್ಟಣಶೆಟ್ಟಿ ಬ್ಯಾಂಕ್ ನೇಮಕಾತಿಯಲ್ಲಿ ಎಷ್ಟು ಕೂಡಿಟ್ಟಿ?

ಬಾದಾಮಿಯ ಶಾಸಕ ಬಿಜೆಪಿಯ ಎಂ.ಕೆ. ಪಟ್ಟಣಶೆಟ್ಟಿ ಕಣ್ಣಿಗೆ ನೆರೆಸಂತ್ರಸ್ತರು ಕಾಣುತ್ತಲೇ ಇಲ್ಲ. ಆದರೂ ಈ ಹೊತ್ತಿನಲ್ಲೂ ಎಲ್ಲಿ ಸಿಗುತ್ತೋ ಅಲ್ಲಿ ಬಾಚಿಕೊಳ್ಳುವುದನ್ನು ಮಾತ್ರ ಆತ ಬಿಟ್ಟಿಲ್ಲ.

ಬಾದಾಮಿಯಲ್ಲಿ ಕೇಂದ್ರ ಕಚೇರಿ ಮತ್ತು ಉತ್ತರ ಕರ್ನಾಟಕದಲ್ಲಿ 13 ಶಾಖೆಗಳನ್ನು ಹೊಂದಿರುವ ವೀರಪುಲಕೇಶಿ ಬ್ಯಾಂಕಿನ ನೇಮಕಾತಿಯಲ್ಲಿ ಕೋಟಿ ಕೋಟಿ ನುಂಗಿ ವಂಚನೆ ಮಾಡಿ ಕುಳಿತಿದ್ದಾನೆ ಪಟ್ಟಣಶೆಟ್ಟಿ. ರಿಸರ್ವ್ ಬ್ಯಾಂಕ್ ಅನುಮತಿಯಂತೆ ವೀರ ಪುಲಕೇಶಿ ಬ್ಯಾಂಕಿನ ಇಪ್ಪತ್ತು ಕ್ಲಾರ್ಕ್ ಹುದ್ದೆಗಳ ನೇಮಕಾತಿಯನ್ನು ಹರಾಜಿಗಿಟ್ಟ ಶಾಸಕ ಪಟ್ಟಣಶೆಟ್ಟಿ ಮೂರು ಬಿಟ್ಟು ಬಿಟ್ಟಿದ್ದಾನೆ. ಪ್ರತಿ ಹುದ್ದೆಯನ್ನು 8 ರಿಂದ 10 ಲಕ್ಷಕ್ಕೆ ಸೇಲ್ ಮಾಡಿ ಒಂದೂವರೆ ಕೋಟಿಗೂ ಮಿಕ್ಕಿ ಆದಾಯ ಮಾಡಿಕೊಂಡಿರುವ ಪಟ್ಟಣಶೆಟ್ಟಿಗೆ ನೆರೆಸಂತ್ರಸ್ತರ ನೆನಪಾದರೂ ಹೇಗೆ ಬಂದೀತು? ಬ್ಯಾಂಕಿನಲ್ಲಿ ಉದ್ಯೋಗ ಪಡೆಯಲು ಆಶಿಸಿದ್ದ ಕೆಲವರು ಸ್ವಲ್ಪ ... ಆಮೇಲೆ ಕೊಡ್ತೀವಿ ಎಂದರೂ ಪಟ್ಟಣಶೆಟ್ಟಿ ಒಪ್ಪಿಲ್ಲ, ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ... ಎಂದುಕೊಂಡ ಕೆಲ ಉದ್ಯೋಗಾಕಾಂಕ್ಷಿಗಳು ಮನೆ, ಹೊಲ ಮಾರಿ ಪಟ್ಟಣಶೆಟ್ಟಿಯ ... ತುಂಬಿಸಿದ್ದಾರೆ.

ಕಳೆದ ತಿಂಗಳಷ್ಟೇ ... ಗುರುತಿಸಿ ... ತಂದು ಪತ್ನಿ ಶಾಂತಾಬಾಯಿಯ ... ಹಾಕಿದ್ದ ಶಾಸಕ ಈಗ ... ಉದ್ಯೋಗಿಗಳನ್ನೂ ...

ನೆರೆ ಪರಿಹಾರದಲ್ಲೂ ನೆಕ್ಕಿದ

...



ದೋಚಿ ಕೊಟ್ಟಿದ್ದನಷ್ಟೇ. ಈ ತಹಶೀಲ್ದಾರ್ ಕರ್ಜಗಿ ಪಟ್ಟಣಶೆಟ್ಟಿಯ ಪತ್ನಿ ಶಾಂತಾಬಾಯಿಯವರ ಪಿ.ಎ. ತರಹ ಓಡಾಡುತ್ತಾನೆ. ಹಾಗೆಯೇ ಪಿಎಸ್‌ಐ ಧುಳಖೇಡ್ ಎಂಬ ಭ್ರಷ್ಟಾತಿಭ್ರಷ್ಟನೂ ಶಾಸಕ ಮತ್ತು ಆತನ ಪತ್ನಿಯ ಸೇವಕನೇ. ಖರ್ಜಗಿ, ಧುಳಖೇಡ್ ಇಬ್ಬರನ್ನು ಕಿರುಬೆರಳಿನಲ್ಲಿ ಆಡಿಸುವ ಶಾಂತಾಬಾಯಿ ಒಂದು ರೀತಿಯಲ್ಲಿ ಡಿ-ಫ್ಯಾಕ್ಟೋ ಎಂಎಲ್‌ಎ ಇದ್ದಂತೆ. ಈ ದುಷ್ಟಕೂಟ ನೆರೆಪರಿಹಾರದಲ್ಲೂ ಪಕ್ಷಪಾತ ನಡೆಸಿಬಿಟ್ಟಿದೆ. ಮನೆ ಬೀಳದಿದ್ದರೂ ಬಿಜೆಪಿ ಕಾರ್ಯಕರ್ತರಿಗೆ ಪರಿಹಾರ ನೀಡಲಾಗಿದೆ.

ಹದಿನೈದು ವರ್ಷಗಳಿಂದ ಪಟ್ಟದಕಲ್ಲು ಗ್ರಾಮವನ್ನು ಸ್ಥಳಾಂತರ ಮಾಡಿ ಎಂದು ಭಾರತೀಯ ಪ್ರಾಚೀನ ಪುರಾತತ್ವ ಇಲಾಖೆ ಕೇಳುತ್ತ ಬಂದಿದೆ. ಆದರೆ ಯಾವ ಶಾಸಕನೂ ಈ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ನದಿದಡದಲ್ಲಿರುವ ಪಟ್ಟದಕಲ್ಲು ಈ ಸಲದ ನೆರೆಹಾವಳಿಯಲ್ಲಿ ಸಂಪೂರ್ಣ ಮುಳುಗಿದೆ. ಜನ ಪುರಾತನ ದೇವಸ್ಥಾನಗಳ ದೇಗುಲಗಳಲ್ಲಿ, ... ಕಾಲ ತಳ್ಳುತ್ತಿದ್ದಾರೆ. ಈಗ ಪಟ್ಟದಕಲ್ಲಿನ ಸಂಪೂರ್ಣ ಸ್ಥಳಾಂತರದ ... ಚರ್ಚೆಗೆ ಬಂದಿದೆ. ... ಸ್ಥಳಾಂತರ ಯೋಜನೆಗೆ ... ಪರಮಚೇಲಾಗಳಿಗೆ ಸೇರಿದ ಭೂಮಿಯಾಗಿದೆ. ಇದರಲ್ಲಿ ಉಮೇಶ ಹಕ್ಕಿ (22 ಎಕರೆ), ಮಲ್ಲಯ್ಯ ನೀರಲಗಿ ಮತ್ತು ಶೇಕು ಹಿರೇಮಠ ಎಂಬ ಪಟ್ಟಣಶೆಟ್ಟಿ ಬಾಲಂಗೋಚಿಗಳ ಜಮೀನೇ ಅಧಿಕವಾಗಿದೆ. ಏಳೆಂಟು ಸಾವಿರ ಜನರ ಶಾಶ್ವತ ಪುನರ್ವಸತಿಗಿಂತ ತನ್ನ ನಾಲ್ಕಾರು ಚೇಲಾಗಳ ಹಿತರಕ್ಷಣೆಯೇ ಶಾಸಕನಿಗೆ ಮುಖ್ಯವಾಗಿದೆ.

ಇದಕ್ಕೆ ಪರ್ಯಾಯವಾಗಿ, ಜನರನ್ನು ಅಲ್ಲಿ ಇಲ್ಲಿ ಅಂತ ಎಲ್ಲೆಲ್ಲೋ ಸ್ಥಳಾಂತರ ಮಾಡಲು ಪಟ್ಟಣಶೆಟ್ಟಿ ಯೋಚಿಸುತ್ತಿದ್ದಾನೆ. ಮೊನ್ನೆ ಕಂದಾಯ ಸಚಿವ ಕರುಣಾಕರ ರೆಡ್ಡಿ ಊರಿಗೆ ಬಂದಾಗ ಶಾಸಕ ಜನರ ಮುಂದೆ ಇದನ್ನೇ ಒದರಿದ್ದಾನೆ. "ನೀವೇ ಏನಾದರೂ ಮಾಡಿಕೊಳ್ಳಿ" ಎಂದು ಕಳ್ಳ ರೆಡ್ಡಿ ಜಾಗ ಖಾಲಿ ಮಾಡಿದ್ದಾನೆ. "ನಾವೆಲ್ಲಾ ನೂರಾರು ವರ್ಷದಿಂದ ಕೂಡಿ ಬದುಕೀವಿ. ನೀವು ಶಿಫ್ಟ್ ಮಾಡೋದಾದ್ರ ಒಂದs ಕಡಗಿ ಶಿಫ್ಟ್ ಮಾಡಿ" ಎಂದು ಜನರೆಲ್ಲ ಒಕ್ಕೊರಲಿನಿಂದ ಕೇಳಿದ್ದು ಪಟ್ಟಣಶೆಟ್ಟಿಗೆ ತಟ್ಟಲೇ ಇಲ್ಲ. ಇನ್ನೇನು ಆತ ಕಾರುಹತ್ತಿ ಹೊರಟೇಬಿಟ್ಟಿದ್ದ. ಕಾರಿಗೆ ಅಡ್ಡ ಹಾಕಿದ ಜನ, ಪಟ್ಟಣಶೆಟ್ಟಿಯನ್ನು ಹೊರಗೆಳೆದು ಜಗ್ಗಾಡಿದ್ದಾರೆ. ಶಾಸಕನ ಭಂಟ ಪಿಎಸ್‌ಐ ಧುಳಖೇಡ್ ಹೇಗೋ ಶಾಸಕನನ್ನು ಬಚಾವು ಮಾಡಿದ್ದಾನೆ.

ಇತ್ತ ನೆರೆಪರಿಹಾರ ಕಾರ್ಯವನ್ನು ಮಾಡದ ಶಾಸಕ ಪಟ್ಟಣಶೆಟ್ಟಿ ಅತ್ತ ಮಿನಿಸ್ಟ್ರಿಗಿರಿಯ ಹಗಲುಕನಸು ಕಾಣುತ್ತಿದ್ದಾನೆ. ಸದ್ಯ ಬ್ಯಾಂಕ್ ನೇಮಕಾತಿಯಲ್ಲಿ ಮೇಯ್ದ ಮೇವು ಜೀರ್ಣಗೊಂಡ ಮೇಲಾದರೂ ಈ ಮನುಷ್ಯ ನೆರೆಪರಿಹಾರ ಕಾರ್ಯದಲ್ಲಿ ಪಾಲ್ಗೊಳ್ಳುವಂತಾಗಲಿ.

● ಮೇಘರಾಜ್

ಶಾಸಕನ ಬಳಿ ಬರೀ ಅಂಡರ್‌ವೇರ್ ಉಳಿದೈತಂತೆ!

ಮೊನ್ನೆ ಹಳ್ಳಿಯೊಂದರ ಗುಂಪು ಶಾಸಕ ಪಟ್ಟಣಶೆಟ್ಟಿಯ ಮನೆಗೆ ಹೋಗಿದೆ. ಆಗ ಬನೀನು, ಅಂಡರ್‌ವೇರ್‌ನಲ್ಲೇ ರೂಮಿಂದ ಹೊರಬಂದ ಶಾಸಕ ಮಹಾಶಯ. "ಸರs ನಮ್ಮೂರಾಗ ಮಾರುತಿ ಕಾರ್ತಿಕೋತ್ಸವ ಐತಿ. ನೀವೂ ಪಟ್ಟಿ ಕೊಟ್ಟು, ಪುಣ್ಯ ಕಟಗೊಳ್ರಿ" ಎಂದು ಜನ ವಂತಿಗೆ ಕೇಳಿದ್ದಾರೆ.

ಮನೆಗೆ ಬಂದ ಯಾವ ಜನಸಾಮಾನ್ಯನಿಗೂ ಒಂದು ಲೋಟ ನೀರು ಕೊಡದ ಈ ಭಂಡ ಶಾಸಕ "ಕೊಟ್ ಕೊಟ್ ನನಗೂ ಸಾಕ್‌ಸಾಕಾಗಿ ಹೋಗೈತಿ. ನನ್ ಕಡೆ ಈಗ ಮೈ ಮ್ಯಾಲಿನ ಚಡ್ಡಿ ಮತ್ ಬನಿಯನ್ ಬಿಟ್ರ ಏನೇನೂ ಇಲ್ಲ ನೋಡ್ರಿ" ಎಂದು ಅರಚಿದ್ದಾನೆ. ಜನರ ಗುಂಪು ಸೀದಾ ಬಜಾರ್‌ಗೆ ಬಂದು ... ಶರ್ಟು, ಪ್ಯಾಂಟು ಖರೀದಿಸಿ, ಅವುಗಳನ್ನು ಒಂದು ದೊಡ್ಡ ಕೋಲಿಗೆ ... ಮೆರವಣಿಗೆ ಮಾಡುತ್ತ "ಎಂಎಲ್‌ಎಗೆ ತೊಡಾಕ ಬಟ್ಟಿ ಇಲ್ಲಂತಿ ..." ...

ಗುಲ್ಬರ್ಗಾ: 'ಕಿಡಿ' ಪತ್ರಿಕೆಯ ಹೊಣೆಗೇಡಿ ಹಿರೇಮಠ!

ದುಡಿಯದೇ ಕಾಸು ಮಾಡಲು ಎಂ.ಎಸ್.ಹಿರೇಮಠ ಎಂಬ ದುಷ್ಟ ಹುಟ್ಟುಹಾಕಿರುವ ಪತ್ರಿಕೆಯ ಹೆಸರು 'ಕಿಡಿ'. 'ಕಿಡಿ'ಯ ಧ್ಯೇಯವಾಕ್ಯವೇ 'ಕೊಡಿ' ಎಂದು ಕೈಯೊಡ್ಡಿ ನಿಲ್ಲುವುದು.

ಬೆವರು ಹರಿಸದೇ ಬಿಟ್ಟಿಯಾಗಿ ಐಷಾರಾಮಿ ಬದುಕು ಸಾಗಿಸೋದು ಹಿರೇಮಠನ ನಿತ್ಯಕಾಯಕ. ಅದಕ್ಕಾಗಿ ಕೈಯಲ್ಲಿ ಸದಾ ಇದ್ದೇ ಇದೆ 'ಕಿಡಿ' ಎಂಬ ಬ್ಲ್ಯಾಕ್‌ಮೇಲ್ ಅಸ್ತ್ರ ಪ್ರತಿಷ್ಠಿತರ ವೈಯಕ್ತಿಕ ಜೀವನದ ವಿಷಯ ಸಂಗ್ರಹಿಸಿ, ಸಂಸಾರದಲ್ಲಿ 'ಕಿಡಿ' ಹಾಕಲು ಯತ್ನಿಸುವುದು ಇವನ ಕಾರ್ಯಶೈಲಿ. ವಿಷಯವನ್ನು ಪ್ರಿಂಟ್ ಮಾಡೋ ಮೊದಲು ಬ್ಲ್ಯಾಕ್‌ಮೇಲ್ ಮಾಡಿ 'ಒಂದಷ್ಟು ಕೊಡಿ' ಎನ್ನುವುದು ಇವನ ಹಲ್ಕಾ ಬುದ್ಧಿ.

ಇತ್ತೀಚೆಗೆ ಸಣ್ಣಸಣ್ಣ ಮಠಗಳಿಗೆ ಜೋತು ಬಿದ್ದಿದ್ದಾನೆ ಈ ಹಿರೇಮಠ ಎಂಬ ಅಡ್ನಾಡಿ. ಬಹುತೇಕ ಮಠಗಳು ಅಡ್ಡದಾರಿ ಹಿಡಿದಿರುವುದು ಈತನ ಕಸುಬಿಗೆ ಅನುಕೂಲವಾಗಿದೆ. ಆದರೆ ಈ ದುಷ್ಟನ ಬ್ಲ್ಯಾಕ್‌ಮೇಲ್‌ಗೆ ಸಂಭಾವಿತ ಸ್ವಾಮಿಗಳೂ ಬಲಿಯಾಗುತ್ತಿದ್ದಾರೆ. ಮಠದಿಂದ ಸಮಾಜಕ್ಕೆ ಅನ್ಯಾಯವಾಗಿದೆಯೋ ಇಲ್ಲವೋ ಎಂಬುದು ಈ ಬಕಾಸುರನಿಗೆ ಮುಖ್ಯವಲ್ಲವೇ ಅಲ್ಲ, ಈತ ಹುಡುಕುವುದು ಬರೀ ಸೆಕ್ಸ್ ಪ್ರಸಂಗಗಳನ್ನು. ಅಂತಹ ಪ್ರಸಂಗ ಸಿಕ್ಕಾಗ ಬ್ಲ್ಯಾಕ್‌ಮೇಲ್ ಮಾಡಿ ಸರಿಯಾಗೇ ಪೀಕುತ್ತಾನೆ. ಅಂತಹ ಯಾವ ವಿಷಯವೂ ಸಿಗದೇ ಹೋದಾಗ ತಾನೇ ಸೃಷ್ಟಿಸಿ ಸಿಕ್ಕಷ್ಟು ಸುಲಿಯಲು ಪರದಾಡುತ್ತಾನೆ.



ಇಂತಹ ಪ್ರಕರಣವೊಂದರಲ್ಲಿ ಸಂಭಾವಿತ ಸ್ವಾಮಿಗಳಿಬ್ಬರು ಇವನ ಒತ್ತಡ, ತಂತ್ರಕ್ಕೆ ಮಣಿಯದೇ ನಿಂತಿದ್ದರಿಂದ ಇವನ ಕಳ್ಳಾಟ ಬಯಲುಗೊಂಡಿದೆ.

ಗುಲ್ಬರ್ಗಾ ಜಿಲ್ಲೆಯ ಗುರುಮಿಠಕಲ್‌ನಲ್ಲಿ 'ಖಾಸಾ ಮಠ' ಎಂಬ ಐತಿಹಾಸಿಕ ಪರಂಪರೆಗೆ ಸೇರಿದ ಮಠವೊಂದಿದೆ. ಈ ಮಠಕ್ಕೆ ಶಾಂತವೀರಸ್ವಾಮಿ ಎಂಬ ನೈಜ ಬಸವಾನುಯಾಯಿ ಬಂದಾಗಿನಿಂದ ಜನಸಾಮಾನ್ಯರಿಗೆ ಮಠ ಹತ್ತಿರವಾಗಿದೆ. ಧರ್ಮ ಕಾರ್ಯಗಳ ಜೊತೆಗೆ ಬಡಮಕ್ಕಳಿಗೆ ಶಿಕ್ಷಣ ನೀಡುತ್ತ ಶಾಂತವೀರಸ್ವಾಮಿ ಜನಪ್ರಿಯರಾಗಿದ್ದಾರೆ. ಆದರೆ ಮಠದ ಮೇಲೆ ಹಿಡಿತ ಸಾಧಿಸಬಯಸಿದ ಕೆಲ ಪಟ್ಟಭದ್ರಶಕ್ತಿಗಳು ಶಾಂತವೀರಸ್ವಾಮಿಯ ತೇಜೋವಧೆ ಮಾಡಲು 'ಕಿಡಿ'ಯ ಕಿಡಿಗೇಡಿ ಹಿರೇಮಠನನ್ನು ಬಳಸಿಕೊಂಡು ರಂಪಾಟ ಮಾಡಿಬಿಟ್ಟಿದ್ದಾರೆ.

ದೇವದುರ್ಗ ತಾಲ್ಲೂಕು ಗೊಬ್ಬೂರು ಗ್ರಾಮದ ದೇವಮ್ಮ ಉರ್ಫ್ ಬಸಮ್ಮ ಪೊಲೀಸ್‌ಗೌಡ್ರು ಎಂಬಾಕೆ ತನ್ನ 'ಕೆಟ್ಟ ಚಾಳಿ'ಯಿಂದಾಗಿ ಮನೆಯಿಂದ ಹೊರಹಾಕಲ್ಪಟ್ಟಳು. ಡಾ.ಬುಡ್ಡಪ್ಪ ಎಂಬುವವರು ಈಕೆಯನ್ನು ಶಾಂತವೀರಸ್ವಾಮಿಗಳ ಮಠಕ್ಕೆ ತಂದು ಸೇರಿಸಿದರು. ಹಲವು ತಿಂಗಳ ನಂತರ ಮಠದಲ್ಲಿ ಆವರಿವರೊಂದಿಗೆ ಬಸಮ್ಮಳ ಕಣ್ಣಾಮುಚ್ಚಾಲೆ ಶುರುವಾಯಿತು.

ಜನರ ನಾಲಿಗೆಯ ಮೇಲೆ ಈ ಸುದ್ದಿ ಹರಿದಾಡಿ ಸ್ವಾಮಿಗಳಿಗೆ ನೋವುಂಟಾಯಿತು. ಆಕೆಯನ್ನು ಆಕೆಯ ಮನೆಗೆ ಕಳಿಸಲು ಯತ್ನಿಸಿದರು. ಆದರೆ ತನ್ನ ಚಂಚಲತೆಯಿಂದ ಊರಿನ ಪಿತೂರಿ ಗುಂಪಿನ ಬೆಂಬಲ ಪಡೆದಿದ್ದ ಬಸಮ್ಮ ಮಠದಲ್ಲೇ ಗಟ್ಟಿಯಾಗಿ ಠಿಕಾಣಿ ಹಾಕಿಬಿಟ್ಟಳು.

ಬಸವಕಲ್ಯಾಣ ತಾಲ್ಲೂಕಿನ ಬೇಲೂರು ಮಠದ ಶಿವಕುಮಾರ್ ಸ್ವಾಮಿಗಳ ಬಳಿ ಇದನ್ನು ಚರ್ಚಿಸಿದ ಶಾಂತವೀರಸ್ವಾಮಿ, ಬಸಮ್ಮನಿಗೆ ತೀರಾ ಅನ್ಯಾಯವಾಗದಂತೆ ಯೋಚಿಸಿ, ಆಕೆಯನ್ನು ದಿ.ಬಿ.ವಿ.ಪಟೇಲ ಎಂಬುವವರ ಪತ್ನಿ ಸುಶೀಲಾಬಾಯಿ ಅಜ್ಜಿಯವರ ಅಡುಗೆ ಸಹಾಯಕಿಯಾಗಿ ನೇಮಿಸಿ ಮಠಕ್ಕೆ ಆಕೆಯಿಂದ ಮುಕ್ತಿ ಕೊಡಿಸಿದರು.

ಹೇಗಾದರೂ ಸೈ, ಶಾಂತವೀರಸ್ವಾಮಿಯನ್ನು ಬದ್ನಾಮ್ ಮಾಡಲು ಕಾದಿದ್ದ ಊರಿನ ಪಟ್ಟಭದ್ರರು ಕೊನೆಯ ಅಸ್ತ್ರವೆಂಬಂತೆ 'ಕಿಡಿ'ಯ ಖಳ ಹಿರೇಮಠನನ್ನು ಛೂ ಬಿಟ್ಟರು. ಹಸಿದ ನಾಯಿಯಂತೆ ನುಗ್ಗಿದ ಹಿರೇಮಠ ಬಸವಕಲ್ಯಾಣದಲ್ಲಿದ್ದ ಬಸಮ್ಮಳನ್ನು ಸಂಪರ್ಕಿಸಿ ಶಾಂತವೀರಸ್ವಾಮಿಗಳ ಮೇಲೆ ರೇಪು ಕೇಸು ಹಾಕಿಸಿಬಿಟ್ಟ. ಇದನ್ನು ಕೂಲಂಕಷವಾಗಿ ಪರಿಶೀಲಿಸಿದ ಯಾದಗಿರಿಯ ಡಿವೈಎಸ್ಪಿ ರಶ್ಮಿ ಬಸಮ್ಮಳ ಅರ್ಜಿಯನ್ನು ಕಸದಬುಟ್ಟಿಗೆ ಎಸೆದರು. ಆಗಲೂ ಬಿಡದ ಹಿರೇಮಠ, ಬಸಮ್ಮಳ ಮೂಲಕ ಸ್ವಾಮಿಗೆ ಫೋನ್ ಮಾಡಿಸಿ, ನಾಲ್ಕು ಲಕ್ಷ ಕೊಡಲು ದುಂಬಾಲು ಬಿದ್ದ. (ಈ ಸಂಭಾಷಣೆ ರಿಕಾರ್ಡ್ ಆಗಿದ್ದು ಅದನ್ನು 'ಪತ್ರಿಕೆ' ಖಾತ್ರಿ ಪಡಿಸಿಕೊಂಡಿದೆ) ಏನೂ ತಪ್ಪು ಮಾಡದ ಶಾಂತವೀರಸ್ವಾಮಿಗಳು ಹಿರೇಮಠನ ಒತ್ತಡ ತಂತ್ರಕ್ಕೆ ಮಣಿಯಲಿಲ್ಲ.

ದುಡ್ಡು ಪೀಕಲೇಬೇಕು ಎಂದು ಜಿದ್ದಿಗೆ ಬಿದ್ದ ಹಿರೇಮಠ ಗುರುಮಿಠಕಲ್‌ನಲ್ಲಿ ಮತ್ತು ಬೇಲೂರು ಮಠದ ಶಿವಕುಮಾರ ಸ್ವಾಮಿಗಳ ಊರಿನಲ್ಲಿ ತಿರುಗಾಡುತ್ತಾ ಬಸಮ್ಮಳ ಜೊತೆ ಇಬ್ಬರು ಸ್ವಾಮಿಗಳಿಗೂ ಸಂಬಂಧವಿದೆ ಎಂದು ಜಾಹೀರು ಮಾಡುತ್ತ ಇಬ್ಬರೂ ಸ್ವಾಮಿಗಳಿಗೆ ಬ್ಲ್ಯಾಕ್‌ಮೇಲ್ ಮಾಡಲು ಯತ್ನಿಸಿದ. "ಬಸಮ್ಮಳಿಗೆ ಆಕೆಯ ಕಷ್ಟಕಾಲದಲ್ಲಿ ಮಾನವೀಯ ನೆರವು ನೀಡಿದ್ದೇವೆಯೇ ಹೊರತು ನಾವು ಇನ್ಯಾವ ತಪ್ಪು ಮಾಡಿಲ್ಲ, ಆಕೆಗೆ ಅನ್ಯಾಯವನ್ನು ಮಾಡಿಲ್ಲ, ಏನಾದ್ರೂ ಬರಕೊಳ್ಳಿ" ಎಂದು ಇಬ್ಬರೂ ಸ್ವಾಮಿಗಳು ಗಟ್ಟಿಯಾಗಿ ನಿಂತುಬಿಟ್ಟಾಗ ಜೋಳಿಗೆಸ್ವಾಮಿ ಹಿರೇಮಠ ಸುಸ್ತಾಗಿಬಿಟ್ಟ. ಆಗಲೇ ಆತ ತನ್ನ ಕೊಳಕು ಅಸ್ತ್ರ 'ಕಿಡಿ'ಯನ್ನು ಕೈಗೆತ್ತಿಕೊಂಡ.

ಬೇಲೂರು ಮಠದ ಶಿವಕುಮಾರ ಸ್ವಾಮಿ ಮತ್ತು ಬಸಮ್ಮಳ ಭಾವಚಿತ್ರಗಳನ್ನು ತನ್ನ 'ಕಿಡಿ' ಪೇಪರಿನ ಮುಖಪುಟದಲ್ಲಿ ಹಾಕಿ 'ಬಾಯಿಗೆ ಬಟ್ಟೆ ಇಟ್ಟು ರೇಪ್ ಮಾಡಿದ ಸ್ವಾಮಿ ಕಾಮಿ' ಎಂದು ಅಪ್ಪಟ್ಟ ಸುಳ್ಳು ಬರೆದು ವಿಕೃತ ಖುಷಿಪಟ್ಟ ಘಟಂಗ ಹಿರೇಮಠ.

ಸಂಭಾವಿತ ಸ್ವಾಮಿಗಳಿಬ್ಬರು ಇದನ್ನೆಲ್ಲ ಧೈರ್ಯದಿಂದ ಎದುರಿಸಬೇಕಾಗಿದೆ. ಎರಡೂ ಮಠಗಳ ನಿಜವಾದ ಅನುಯಾಯಿಗಳು 'ಕಿಡಿ'ಗೇಡಿ ಹಿರೇಮಠನ ವಿರುದ್ಧ ಕೂಡಲೇ ಕೇಸು ಜಡಿಯಬೇಕಿದೆ.

● ಮಲ್ಲನಗೌಡರ್

ಪ್ರತಿಕ್ರಿಯೆ

ಅಕ್ಟೋಬರ್ 28, 2009 ರ ಪತ್ರಿಕೆಯಲ್ಲಿ ಪ್ರಕಟವಾದ ಕುಮಾರ್ ಬುರಡಿಕಟ್ಟಿಯವರ 'ಅರುಣಾಚಲ ಪ್ರದೇಶ ಯಾರಿಗೆ ಸೇರಿದ್ದು?' ಎಂಬ ಲೇಖನಕ್ಕೆ ನನ್ನ ಪ್ರತಿಕ್ರಿಯೆ. ಪ್ರಸ್ತುತ ಲೇಖನದಲ್ಲಿ ಕುಮಾರ್‌ರವರು 'ಅರುಣಾಚಲ ಪ್ರದೇಶ'ದ ಪ್ರಶ್ನೆಯನ್ನು ವಸ್ತುನಿಷ್ಠವಾಗಿ ನೋಡಬೇಕೆಂದೂ, ಇಂತಹ ಸಂಕೀರ್ಣ ವಿಷಯಗಳನ್ನು ಸರಳಗೊಳಿಸಿ ನೋಡಲಾಗುವುದಿಲ್ಲ ಎಂದಿರುವುದೂ ಒಪ್ಪತಕ್ಕದ್ದೇ. ಅವರ ಲೇಖನವು 'ಅರುಣಾಚಲ'ದ ಸಮಸ್ಯೆಯನ್ನು ಒಂದು ಚಾರಿತ್ರಿಕ ದೃಷ್ಟಿಕೋನದಲ್ಲಿ ನೋಡುತ್ತದೆ. ವಿಷಯದ ಕುರಿತ ಲೇಖಕರ ಆಳ ಗ್ರಹಿಕೆಯನ್ನು ಪ್ರತಿಬಿಂಬಿಸುತ್ತದೆ. ಆದರೆ ಲೇಖನದಲ್ಲಿ ಹಲವಾರು ಆಕ್ಷೇಪಣೀಯ ಅಂಶಗಳೂ ಇವೆ.

- ಅಮೆರಿಕಾ ಹಾಗೂ ಸೋವಿಯತ್ ಒಕ್ಕೂಟಗಳ ನಡುವಿನ ಶೀತಲ ಸಮರದಲ್ಲಿ 'ಅಲಿಪ್ತ ನೀತಿ'ಯನ್ನು ಅನುಸರಿಸಿದ ಅಂದಿನ ಭಾರತದ ಪ್ರಧಾನಿ ನೆಹರೂರವರು ಲೇಖನದಲ್ಲಿ ಹೇಳಿರುವಂತೆ ಅಮೆರಿಕ ಪರವಾದ ನಿಲುವನ್ನು ಹೊಂದಿರಲಿಲ್ಲ, ಬದಲಾಗಿ ನೆಹರೂ ಸೋವಿಯತ್ ರಷ್ಯಾ ಹಾಗೂ ಕಮ್ಯೂನಿಸ್ಟ್ ಚೀನಾಗಳೊಂದಿಗೆ ಬಾಂಧವ್ಯವನ್ನು ವೃದ್ಧಿಸಲು ತೀವ್ರವಾಗಿ ಪ್ರಯತ್ನಿಸಿದ್ದರು. ಈ ಹಿನ್ನೆಲೆಯಲ್ಲಿಯೇ ಅವರು ಚೀನಾದೊಂದಿಗೆ 'ಪಂಚಶೀಲ' ಒಪ್ಪಂದಕ್ಕೆ ಸಹಿಹಾಕಿದ್ದರು. ಅಲ್ಲದೆ ಚೀನಾದೊಂದಿಗೆ ಸ್ನೇಹವನ್ನು ಉಳಿಸಿಕೊಳ್ಳುವ ಸಲುವಾಗಿ ನೆಹರೂ ಏಕಪಕ್ಷೀಯವಾಗಿ ಟಿಬೆಟ್ ಮೇಲಿನ ಚೀನಾದ ಸಾರ್ವಭೌಮತೆಯನ್ನು ಒಪ್ಪಿಕೊಂಡಿದ್ದರು ಕೂಡಾ. ವಾಸ್ತವದಲ್ಲಿ ಭಾರತದ ಕುರಿತ ಚೀನಾದ ಆಕ್ರಮಣಕಾರಿ ನಿಲುವನ್ನು ಗುರುತಿಸದೇ ಇದ್ದುದೇ ನೆಹರೂ ಮಾಡಿದ್ದ ತಪ್ಪಾಗಿತ್ತು.



- ಲೇಖನದಲ್ಲಿ ಎಲ್ಲವನ್ನೂ ಚೀನಾದ ದೃಷ್ಟಿಯಲ್ಲೇ ನೋಡಲಾಗಿದೆ. ಜಾತ್ಯತೀತವಾದಿಯೂ, ಸಮಾಜವಾದಿಯೂ ಆಗಿದ್ದ ನೆಹರೂರನ್ನು ಟೀಕಿಸಿರುವುದಲ್ಲದೆ ತನ್ನದೇ ದೇಶದ ಜನರನ್ನು ಭೀಕರ ದಾರುಣತೆಗೆ ತಳ್ಳಿದ ಮಾವೋ ತ್ಸೆ ತುಂಗ್‌ನನ್ನು ಶಾಂತಿಯ ಧೂತನೆಂಬಂತೆ ಬಿಂಬಿಸಲಾಗಿದೆ. ಅಮೆರಿಕ ವಿರೋಧಿ ನಿಲುವನ್ನು ಪ್ರತಿಪಾದಿಸಿದ ನೆಹರೂರನ್ನು 'ಸಾಮ್ರಾಜ್ಯಶಾಹಿಯ ಬಾಲಬಡುಕ ನಾಯಿ' ಎಂಬ ಕಮ್ಯೂನಿಸ್ಟ್ ಪದಪುಂಜದಲ್ಲಿ ಖಂಡಿಸಲಾಗಿದೆ.



- ಮಾವೋ ತ್ಸೆ ತುಂಗ್ ಬಯಸಿದ್ದೇ ಆದಲ್ಲಿ ಭಾರತದ ಸೈನ್ಯವು ಧೂಳೀಪಟವಾಗುತ್ತಿತ್ತು ಎಂಬಂತೆ ಬರೆಯಲಾಗಿದೆ. ಅಂದು ಭಾರತೀಯ ಸೈನ್ಯವು ಹಿಮಾಲಯದಲ್ಲಿ ಅವಮಾನಕರವಾದ ಸೋಲನ್ನನುಭವಿಸಿದ್ದು ನಿಜ. ಆದರೆ ಟಿಬೆಟ್ ಮೂಲಕವೇ ಇದ್ದ ಚೀನಾದ ಸೈನಿಕ ಪೂರೈಕೆಗಳನ್ನು ಭಾರತೀಯ ಸೈನ್ಯವು ಬಾಂಬ್ ಉಡಾಯಿಸಿ ನಾಶಮಾಡುವುದೇನೂ ಕಷ್ಟವಿರಲಿಲ್ಲ.
- ಅದೇ ಹೊತ್ತಿಗೆ 'ಕ್ಯೂಬನ್ ಮಿಸೈಲ್ ಕ್ರೈಸಿಸ್' ನಡೆದು ಎರಡು ಅಗ್ರ ರಾಷ್ಟ್ರಗಳ ನಡುವೆ ಇನ್ನೇನು ಅಣು ಯುದ್ಧವೇ ನಡೆಬಿಟ್ಟಿತು ಎಂಬ ಪರಿಸ್ಥಿತಿ ನಿರ್ಮಾಣವಾಗಿ, ಅಮೆರಿಕದ ಅಧ್ಯಕ್ಷ ಕೆನಡಿ ನೀಡಿದ ಎಚ್ಚರಿಕೆಗೆ ಹೆದರಿ ಸೋವಿಯತ್ ಒಕ್ಕೂಟವು ಕ್ಯೂಬದಿಂದ ಹಿಂದ್ಸರಿಯಿತು. ಸಾಮ್ರಾಜ್ಯಶಾಹಿಯನ್ನು 'ಕಾಗದದ ಹುಲಿ' ಎಂದು ಜರಿದ ಮಾವೋ ತ್ಸೆ ತುಂಗ್‌ನೇ ಭಾರತದ ಮೇಲೆ ಚೀನಾ ದಾಳಿಯ ವಿರುದ್ಧ ಅಮೆರಿಕವು ನೀಡಿದ ಗಂಭೀರ ಎಚ್ಚರಿಕೆಗೆ ನಡುಗಿ ತನ್ನ ಪಿಎಲ್‌ಎಯನ್ನು ಹಿಂದಕ್ಕೆ ಪಡೆದ.
- 1962ರಲ್ಲಿ ನೆಹರೂರವರೇ ಖುದ್ದಾಗಿ ಯುದ್ಧವನ್ನು ಘೋಷಿಸಿದ್ದರು ಎಂದು ಹೇಳಿದ್ದೀರಿ. ಆದರೆ ಅಂದಿನ ಪರಿಸ್ಥಿಯಲ್ಲಿ ಯಾರೂ ಯುದ್ಧವನ್ನು ಘೋಷಿಸಿರಲಿಲ್ಲ. ರಾಷ್ಟ್ರೀಯ ಭದ್ರತೆಯಂತಹ ವಿಷಯಗಳನ್ನು ವಿಶ್ಲೇಷಿಸುವಾಗ ಮನಸ್ಸಿಗೆ ಬಂದ ಹಾಗೆ ಪದಗಳನ್ನು ಬಳಸಕೂಡದು.

ನಿಮ್ಮ ಪತ್ರಿಕೆಯು ಜಾತ್ಯತೀತತೆ, ಕೋಮುವಾದದ ವಿರುದ್ಧ ನಿಲುವು ತಾಳಿದೆ. ಚರಿತ್ರೆಯನ್ನು ತಿರುಚುವವರ, ಅರ್ಧಸತ್ಯ ಹೇಳುವವರ ಹಾಗೂ ಬೌದ್ಧಿಕ ಅಪ್ರಮಾಣಿಕರ ವಿರುದ್ಧ ನಿಮ್ಮ ಪತ್ರಿಕೆ ಹೋರಾಡುತ್ತದೆ. ಹಾಗಿರುವಾಗ ನಿಮ್ಮ ಪತ್ರಿಕೆಯಲ್ಲಿಯೇ ಇಂತಹ ಚರಿತ್ರೆಯ ತಿರುಚುವಿಕೆ ಮತ್ತು ಅರ್ಧ ಸತ್ಯ ಪ್ರಕಟವಾಗಕೂಡದಲ್ಲವೇ?

- ರಜತ್‌ಕುಮಾರ್ ಸರ್‌ನಾಯಕ್, ಮುಧೋಳ

ಹೇ ರಾಮ್ ಬಚಾವೋ

◄◄◄11

ದ್ವೇಷದ ಅಮಲೇರಿಸಿಕೊಂಡ ಉನ್ನತ ಅಧಿಕಾರಿಗಳನ್ನು ಬಾಬ್ರಿ ಮಸೀದಿಯ ಧ್ವಂಸಕ್ಕೆ ಮುನ್ನ ಪ್ರಜ್ಞಾಪೂರ್ವಕವಾಗಿ ಆ ಪ್ರದೇಶಕ್ಕೆ ಖುದ್ದಾಗಿ ಅವರೇ ವರ್ಗಾಯಿಸಿದ್ದರು. ಮಸೀದಿ ಧ್ವಂಸ ಮಾಡುವುದಕ್ಕೆ ಕಲ್ಯಾಣ್ ಸಿಂಗ್ ಸರ್ಕಾರದ ಅಧಿಕಾರಿಗಳಿಂದ ಎಲ್ಲ ರೀತಿಯ ನೆರವು ಸಿಗಬೇಕೇ ಹೊರತು ಯಾವುದೇ ಅಡೆತಡೆಯಾಗಬಾರದು ಎಂಬ ಉದ್ದೇಶದಿಂದಲೇ ಹಾಗೆ ಮಾಡಲಾಗಿತ್ತು. ಅದು ಒಟ್ಟಾರೆ ಮಸೀದಿ ಧ್ವಂಸ ಕೃತ್ಯ ಯೋಜನೆಯ ಅವಿಭಾಜ್ಯ ಅಂಗವಾಗಿತ್ತು. ಪರಿಣಾಮ ನಿರೀಕ್ಷಿತವಾಗಿತ್ತು. ಫಾಜಿಯಾಬಾದ್‌ನಿಂದ ಅಯೋಧ್ಯೆ ತನಕ ಮಸೀದಿ ಧ್ವಂಸಕ್ಕಾಗಿ ತೆರಳುತ್ತಿದ್ದ ಕರಸೇವಕರನ್ನು ತಡೆಯುವುದಕ್ಕೆ ಯಾವುದೇ ಜಾಗದಲ್ಲೂ ಒಂದೇ ಒಂದು ಪೊಲೀಸ್ ಪೋಸ್ಟ್ ನಿರ್ಮಾಣವಾಗಿರಲಿಲ್ಲ, ಅಯೋಧ್ಯೆಯಲ್ಲಿ ಕರಸೇವಕರ ಪುಂಡಾಟಿಕೆಗೆ, ಹಿಂಸಾಚಾರಕ್ಕೆ, ವಿಧ್ವಂಸಕೃತ್ಯಕ್ಕೆ ಅಡೆತಡೆಗಳಿರಲಿಲ್ಲ, ಹದಿನಾರನೇ ಶತಮಾನದ ಪುರಾತನ ಸ್ಮಾರಕವಾದ ಬಾಬ್ರಿ ಮಸೀದಿ ನೋಡುನೋಡುತ್ತಿದ್ದಂತೆಯೇ ಧ್ವಂಸಗೊಂಡಿತು. ಈ ಹಿನ್ನೆಲೆಯಲ್ಲಿ ಕಲ್ಯಾಣ್ ಸಿಂಗ್ ಕೂಡ ನೇರವಾಗಿ ಆ ದುಷ್ಕೃತ್ಯದಲ್ಲಿ ಭಾಗಿಯೇ ಎಂದು ಲಿಬರ್ಹಾನ್ ಎತ್ತಿ ತೋರಿದ್ದಾರೆ.

ಲಿಬರ್ಹಾನ್ ವರದಿ ಬಹಿರಂಗಗೊಳ್ಳುತ್ತಿದ್ದಂತೆಯೇ ಅದಕ್ಕೆ ಪ್ರತಿಕ್ರಿಯಿಸಿರುವ ಕಲ್ಯಾಣ್ ಸಿಂಗ್ ತನ್ನನ್ನು ಬಲವಾಗಿ ಸಮರ್ಥಿಸಿಕೊಂಡಿದ್ದಾರೆ. "ಯಾರನ್ನು ರಕ್ಷಿಸಬೇಕಿತ್ತು? ಕರಸೇವಕರನ್ನೋ ಅಥವಾ ಬಾಬ್ರಿ ಮಸೀದಿಯನ್ನೋ? ಪೊಲೀಸರಿಗೆ ಗುಂಡು ಹಾರಿಸಲು ಆದೇಶ ಕೊಟ್ಟು ಮಸೀದಿ ರಕ್ಷಣೆಗೆ ನಿಂತಿದ್ದರೆ ಕರಸೇವಕರ ಮಾರಣಹೋಮವಾಗುತ್ತಿತ್ತು. ನಾನು ಒಂದು ಮಾರಣ ಹೋಮವನ್ನು ತಡೆದೆ. ಮಸೀದಿ ಧ್ವಂಸಗೊಂಡಿತು" ಎಂದು ತಮ್ಮನ್ನು ತಾವು ಸಮರ್ಥಿಸಿಕೊಂಡಿದ್ದಾರೆ. ಆದರೆ, ಲಿಬರ್ಹಾನ್ ವರದಿಯಲ್ಲಿ ಹೇಳಿರುವಂತೆ ಕಲ್ಯಾಣ್ ಸಿಂಗ್ ಅವರೇ ಖುದ್ದಾಗಿ ಹಿಂದೂತ್ವ ಸಿದ್ಧಾಂತವನ್ನು, ಮುಸ್ಲಿಂ ದ್ವೇಷವನ್ನು ತಲೆಗಿಳಿಸಿಕೊಂಡ ಅಧಿಕಾರಿಗಳನ್ನು ದೊಡ್ಡ ಪ್ರಮಾಣದಲ್ಲಿ ಆ ಪ್ರದೇಶಕ್ಕೆ ಯಾಕೆ ವರ್ಗಾಯಿಸಿದರು ಎಂಬುದಕ್ಕಾಗಲೀ, ಮಸೀದಿ ಧ್ವಂಸಕ್ಕಾಗಿ ಹಲವು ವರ್ಷಗಳಿಂದಲೇ ದೊಡ್ಡ ಪ್ರಮಾಣದಲ್ಲಿ ಅಡ್ವಾಣಿ ನೇತೃತ್ವದಲ್ಲಿ ರಥಯಾತ್ರೆ, ಇಟ್ಟಿಗೆ ಯಾತ್ರೆ ನಡೆಯುತ್ತಿದ್ದುದು ಗೊತ್ತಿದ್ದರೂ ಯಾಕೆ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳಲಿಲ್ಲ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸುವುದನ್ನು ಯಾಕೆ ಪ್ರತಿರೋಧಿಸಿದರು ಎಂಬಿತ್ಯಾದಿ ಪ್ರಶ್ನೆಗಳಿಗೆ ಕಲ್ಯಾಣ್ ಸಿಂಗ್ ಬಳಿ ಉತ್ತರವಿಲ್ಲ, ತಾವೇ ಮಸೀದಿ ಧ್ವಂಸಕ್ಕೆ ಮಾಡಬೇಕಾದ ಸಹಾಯವನ್ನೆಲ್ಲಾ ಮಾಡಿ ಈಗ 'ಜನರನ್ನು ಉಳಿಸುವುದಕ್ಕಾಗಿ ಮಸೀದಿಯನ್ನು ಬಲಿಕೊಟ್ಟೆ' ಎಂದು ಬಹಳ ಮುತ್ಸದ್ದಿಯಂತೆ ಮಾತನಾಡುತ್ತಿದ್ದಾರೆ.

ಕಲ್ಯಾಣ್ ಸಿಂಗ್ ಈಗ ಬಿಜೆಪಿಯಲ್ಲಿಲ್ಲ, ಹಿಂದುಳಿದ ವರ್ಗಗಳಿಗೆ ಸೇರಿದ ಅವರನ್ನು ಬ್ರಾಹ್ಮಣರೇ ನಿಯಂತ್ರಿಸುತ್ತಿರುವ ಬಿಜೆಪಿಯಿಂದ ಹೊರದಬ್ಬಲಾಗಿದೆ. ಬಿಜೆಪಿಯಿಂದ ಹೊರಬರುವಾಗ "ದೇಶದಲ್ಲಿ ಶೇ.50ಕ್ಕೂ ಹೆಚ್ಚು ಹಿಂದುಳಿದ ವರ್ಗದ ಜನರೇ ಇದ್ದೇವೆ. ಆದರೂ, ಬ್ರಾಹ್ಮಣವಾದಿಗಳ ಬಿಜೆಪಿಯಲ್ಲಿ ಹಿಂದುಳಿದ ವರ್ಗದಿಂದ



ಬಂದಿರುವ ನನ್ನಂಥವರಿಗೆ ಯಾವುದೇ ಜಾಗವೂ ಇಲ್ಲ, ಮರ್ಯಾದೆಯೂ ಇಲ್ಲ. ನಿರಂತರ ಅವಮಾನ, ಅವಹೇಳನಗಳನ್ನು ಸಹಿಸಲಾರದೇ ಆ ಉಸಿರು ಕಟ್ಟಿಸುವ ವಾತಾವರಣದಿಂದ ಹೊರಬಂದೆ" ಎಂದು ಕಲ್ಯಾಣ್ ಸಿಂಗ್ ಹೇಳಿದ್ದರು. ಅವರನ್ನು ಬಾಬ್ರಿ ಮಸೀದಿ ಧ್ವಂಸಕ್ಕೆ ಎಷ್ಟು ಬೇಕೋ ಅಷ್ಟನ್ನು ಬಳಸಿಕೊಂಡು ಕಸದಬುಟ್ಟಿಗೆ ಬಿಸಾಡಿದರು. ಅದೆಲ್ಲಾ ಈಗ ಅರಿವಾಗಿರುವಾಗ ಈಗಲಾದರೂ ಅವರು ಬಾಬ್ರಿ ಮಸೀದಿ ಧ್ವಂಸ ಕುರಿತಂತೆ ಸತ್ಯವನ್ನು ಹೇಳಬೇಕಿತ್ತು, ಆ ಕೆಲಸವನ್ನು ಅವರು ಮಾಡಿಲ್ಲ. ಮಾಡಿದರೆ ತಾವೇ ಆ ದುಷ್ಕೃತ್ಯದಲ್ಲಿ ಭಾಗಿಯಾಗಿದ್ದನ್ನು ಒಪ್ಪಿಕೊಂಡಂತಾಗುತ್ತದೆ ಎಂಬ ಕಾರಣಕ್ಕೇ ಅದನ್ನು ಮರೆಮಾಚಿ 'ಮಾರಣ ಹೋಮವನ್ನು ತಪ್ಪಿಸಿದ ಜನನಾಯಕ'ನಾಗಲು ಹೊರಟಿದ್ದಾರೆ.

ಸಾರಾಂಶೀಕರಿಸಿ ಹೇಳುವುದಾದರೆ ಚಾರಿತ್ರಿಕ ಬಾಬರಿ ಮಸೀದಿ ಧ್ವಂಸಕೃತ್ಯ ಒಂದು ವ್ಯವಸ್ಥಿತ ಮತ್ತು ಪೂರ್ವಯೋಜಿತ ಕೃತ್ಯವಾಗಿತ್ತೇ ಹೊರತು ಯಾವ ತ್ಯಾಗಕ್ಕೂ ಸಿದ್ಧವಿದ್ದ ಹಿಂದೂ ಮತೋನ್ಮಾದಿ ಜನಸ್ತೋಮದ ಸ್ವಪ್ರೇರಿತ ಕೃತ್ಯವಾಗಿರಲಿಲ್ಲ ಎಂಬುದಾಗಲೀ, ಈ ದುಷ್ಕೃತ್ಯವನ್ನು ಆರೆಸ್ಸೆಸ್‌ನ ಮಾರ್ಗದರ್ಶನ ಮತ್ತು ಮೇಲುಸ್ತುವಾರಿಯಲ್ಲಿ ಭಜರಂಗದಳ, ವಿಶ್ವ ಹಿಂದೂ ಪರಿಷತ್, ಬಿಜೆಪಿ ಮತ್ತು ಶಿವಸೇನೆಗಳಂಥ ಸಂಘಪರಿವಾರದ ಸಂಘಟನೆಗಳೇ ಮಾಡಿದ್ದವು ಎಂಬುದಾಗಲೀ, ಬಿಜೆಪಿಯ ಅತ್ಯುನ್ನತ ನಾಯಕರಾದ ವಾಜಪೇಯಿ, ಅಡ್ವಾಣಿ, ಜೋಶಿಯಂಥ ವರೇ ಅದರ ನೇತೃತ್ವ ವಹಿಸಿದ್ದರೆಂಬುದಾಗಲೀ, ಉತ್ತರ ಪ್ರದೇಶದ ಕಲ್ಯಾಣ್ ಸಿಂಗ್ ಸರ್ಕಾರ ಖುದ್ದಾಗಿ ವಿಧ್ವಂಸಕಾರರಿಗೆ ಬೆಂಗಾವಲಾಗಿ ನಿಂತಿತ್ತೆಂಬುದಾಗಲೀ ಯಾರಿಗೂ ಗೊತ್ತಿರದ ಸತ್ಯವೇನಾಗಿರಲಿಲ್ಲ, ಅಥವ ಜಸ್ಟೀಸ್ ಲಿಬರ್ಹಾನ್ ಅವರು ಹೊಸದಾಗಿ ಹೇಳಿರುವ ವಿಷಯಗಳೇನಲ್ಲ. ಈ ದುಷ್ಕೃತ್ಯ ನಡೆಯುವ ವರ್ಷಗಳ ಮುಂಚೆಯೇ ಹೀಗಾಗುತ್ತದೆಂದು ಯಾರು ಬೇಕಾದರೂ ಅಂದಾಜಿಸಬಹುದಿತ್ತು. ಅಂತೆಯೇ ದುರ್ಘಟನೆ ನಡೆದ ದಿನದಿಂದಲೇ ಅದರರಲ್ಲಿ ಪಾಲ್ಗೊಂಡವರು, ಬೆಂಬಲಕ್ಕೆ ನಿಂತವರು, ಮಾರ್ಗದರ್ಶನ ಕೊಟ್ಟು ಮೇಲುಸ್ತುವಾರಿ ವಹಿಸಿದವರು ಯಾರ್‍ಯಾರೆಂಬುದು ಇಡೀ ದೇಶಕ್ಕೆ ಗೊತ್ತಿರುವ ಸತ್ಯವಾಗಿತ್ತು. ಜಸ್ಟೀಸ್ ಲಿಬರ್ಹಾನ್ ಅವರ ಹೆಗ್ಗಳಿಕೆಯೇನೆಂದರೆ ನೂರಾರು ಗಂಟೆಗಳ ವಿಡಿಯೋ ಚಿತ್ರೀಕರಣ, ಸಾವಿರಾರು ಪುಟಗಳ ದಾಖಲೆ, ನೂರಾರು ಜನರ ಸಂದರ್ಶನ, ವಿವಾದದ ಚಾರಿತ್ರಿಕ ಅವಲೋಕನ - ಹೀಗೆ ಹದಿನಾರು ವರ್ಷಗಳ ಕಾಲ ಸತತ ಅಧ್ಯಯನ ನಡೆಸಿ ಈಗಾಗಲೇ ನಂಬಲಾಗಿದ್ದ ಸತ್ಯಗಳನ್ನು ದಾಖಲೆ ಮತ್ತು ಸಾಕ್ಷ್ಯಾಧಾರಗಳ ಸಮೇತ ಅಧಿಕೃತಗೊಳಿಸಿರುವುದು.


ಜಾತಿ ಪ್ರಶ್ನೆಗೆ ಉತ್ತರವನ್ನು ಹುಡುಕುವ ಪ್ರಯತ್ನದಲ್ಲಿ...

ಸಮಕಾಲೀನ ಸಂದರ್ಭದಲ್ಲಿ ಒಂದು ಸ್ಪಷ್ಟವಾದ ಕೋನ ಮತ್ತು ಆಳವಾದ ವಿಶ್ಲೇಷಣೆಯೊಂದಿಗೆ ಯುತ್ತಿರುವ ಕೆಲವೇ ಕನ್ನಡ ಲೇಖಕರಲ್ಲಿ ನಾ. ದಿವಾಕರ ಹಲವಾರು ಪತ್ರಿಕೆಗಳಲ್ಲಿ ಸಮಕಾಲೀನ ವಿಷಯಗಳ ವಿದ್ವತ್ ಪೂರ್ಣ ಪ್ರಬಂಧಗಳನ್ನು ಬರೆಯುವ ಅವರು ನವ ಕರ್ನಾಟಕ ಪ್ರಕಾಶನಕ್ಕಾಗಿ ಜಾತಿ ಮತ್ತು ದಲಿತ ಚಳವಳಿಗಳ ಬಗ್ಗೆ ಒಂದು ಪೂರ್ಣ ಣದ ಪುಸ್ತಕವನ್ನೇ ಬರೆದಿದ್ದಾರೆ.

ದಲಿತರು: ವಿಮೋಚನೆಯ ಹಾದಿ-ಒಂದು ಅವ ಭಾರತದ ಜಾತಿ ಪ್ರಶ್ನೆಯ ಬಗ್ಗೆ ಮತ್ತು ಭಾರತದ ಚಳವಳಿಗಳ ಇಂದಿನ ಪರಿಸ್ಥಿತಿಯ ಬಗ್ಗೆ ರ್ಶಾತ್ಮಕ ಅವಲೋಕನ ಮಾಡುವ ಕೃತಿ. ಈ ನದ ಉದ್ದೇಶ ಅಕೆಡೆಮಿಕ್ ಆದದ್ದಲ್ಲ. ಭಾರತದ ದಲಿತ ಚಳವಳಿಗಳ ದುಸ್ಥಿತಿಗೆ ರಾಜಕೀಯ, ಕ ಮತ್ತು ಸಂಘಟನಾತ್ಮಕ ಕಾರಣಗಳನ್ನು ಹುಡುಕಿ ದ ಮುಕ್ತವಾದ ನಿಜವಾದ ವಿಮೋಚನಾ ಯನ್ನು ಅನ್ವೇಷಣೆ ಮಾಡುವುದೇ ಈ ಕೃತಿಯ ವಾಗಿದೆ. ಆದ್ದರಿಂದ ಜಾತಿ ಪ್ರಶ್ನೆಯನ್ನು ಅದರ ಸಮಕಾಲೀನ ಸಂಕೀರ್ಣತೆಯಲ್ಲಿ ಗ್ರಹಿಸುವ ಯಾವುದನ್ನು ದಲಿತರ ವಿಮುಕ್ತಿಗೆ ದಾರಿಯಲ್ಲಾ ಭಾವಿಸುತ್ತಾರೋ ಅಂತಹುದರ ಬಗ್ಗೆ ನಿಷ್ಠುರ ಣೆಯನ್ನು ಅನುಸರಿಸಿದ್ದಾರೆ. ಪುಸ್ತಕದ ಮೊದಲರ್ಧ ಪರಂಪರಾನುಗತವಾಗಿ ದಲಿತ ಚಳವಳಿ ತವಾಗಿದ್ದ ರಾಜ್ಯಗಳಲ್ಲಿ ಜಾತಿ ವ್ಯವಸ್ಥೆ ಮತ್ತು ಪರಿಸ್ಥಿತಿ ಹೇಗಿದೆ ಎಂಬುದನ್ನು ವಿವರಿಸುತ್ತದೆ. ವಿವರಿಸಲು ಲೇಖಕರು ಆಯಾ ರಾಜ್ಯಗಳಲ್ಲಿ ಮೇಲೆ ಇತ್ತೀಚೆಗೆ ನಡೆದ ದೌರ್ಜನ್ಯಗಳನ್ನು ಪರಣೆಯಾಗಿಟ್ಟುಕೊಂಡು ವಿವರಿಸುತ್ತಾರೆ. ಇತ್ತೀಚೆಗೆ ನಾಡಿನಲ್ಲಿ ಪಂಚಾಯತ್‌ಗಳಲ್ಲಿ ಮೀಸಲಾತಿಯನ್ವಯ ಗೆ ಅಧ್ಯಕ್ಷ ಸ್ಥಾನ ಬಿಟ್ಟುಕೊಡಬೇಕಾಗುತ್ತದೆಂದು ಚುನಾವಣೆಯೇ ನಡೆಯದಂತೆ ಮಾಡಿದ್ದು, ಮಧುರೈ ಉದಂಪುರ ಎಂಬಲ್ಲಿ ದಲಿತರನ್ನು ಹೊರಗಿಡಲು ತಿಯವರು ಕಟ್ಟಿದ್ದ 30 ಮೀಟರ್ ಎತ್ತರದ ಗಳು ಪ್ರಗತಿಪರ ರಾಜ್ಯವೆಂಬ ಹೆಗ್ಗಳಿಕೆಯುಳ್ಳ ನಾಡಿನಲ್ಲಿ ಅಸ್ತಿತ್ವದಲ್ಲಿರುವ ಜಾತಿ ವ್ಯವಸ್ಥೆಯನ್ನು ಮಾಡುತ್ತದೆ. ಅದೇ ರೀತಿ ಉತ್ತರಪ್ರದೇಶದಲ್ಲಿ ಸಮಾಜ ಪಕ್ಷವೇ ಅಧಿಕಾರಕ್ಕೆ ಬಂದಿದ್ದರೂ ಅಂಕಿಅಂಶಗಳು ತೋರುವಂತೆ ಹೇಗೆ ದಲಿತರ ಶೋಷಣೆ ಮತ್ತು ದೌರ್ಜನ್ಯಗಳು ಮುಂದುವರೆದಿದೆ ದನ್ನು ಲೇಖಕರು ಎತ್ತಿತೋರಿಸುತ್ತಾರೆ. ಬಿಹಾರದ್ದೂ ಕಥೆ. ಅಂಬೇಡ್ಕರ್ ಚಳವಳಿಯ ತವರಾದ ರಾಷ್ಟ್ರದಲ್ಲಿ ದಲಿತ ಪ್ಯಾಂಥರ್ಸ್‌ನ ಅವಸಾನದ ನಂತರ ಖೈರ್ಲಾಂಜಿ ಹತ್ಯಾಕಾಂಡದವರೆಗೆ ಹೇಗೆ ವಾಗಿ ದಲಿತರು ದೌರ್ಜನ್ಯಗಳಿಗೆ ಒಳಗಾಗುತ್ತಿದ್ದಾರೆ ದಲಿತ ನಾಯಕರ ಅವಕಾಶವಾದಿ ರಾಜಕಾರಣ ದಲಿತ ಚಳವಳಿ ಯಾವ ರೀತಿಯಲ್ಲೂ ದಲಿತರನ್ನು ಹೋಗುತ್ತಿದೆ ಎಂಬುದನ್ನು ಲೇಖಕರು ವಾಗಿ ಬಿಚ್ಚಿಡುತ್ತಾರೆ. ಪಂಜಾಬ್ ಮತ್ತು ಣಗಳಲ್ಲಿ ದಲಿತ ಮತ್ತು ಪ್ರಗತಿಪರ ಚಳವಳಿಯ ಮತ್ತು ಅವನತಿಗಳನ್ನು ದಾಖಲಿಸುತ್ತಲೇ ಸಂತ ದೇವಸ್ಥಾನ ನಿರ್ಮಾಣ ಮಾಡಲು ಪಂಜಾಬಿನ ಸಿಖ್ಖರು ಒಡ್ಡುತ್ತಿರುವ ಆತಂಕಗಳು, ಹರ್ಯಾಣದ ಮತ್ತು ಜಜ್ಜಿರಾದಲ್ಲಿ ದಲಿತರ ಜೀವಂತ ದಹನ ಇತ್ಯಾದಿಗಳನ್ನು ಉದಾಹರಣೆಯಾಗಿ ನೀಡುತ್ತಾರೆ. ಕರ್ನಾಟಕದಲ್ಲಿ ಕಂಬಾಲಪಲ್ಲಿ ಹತ್ಯಾಕಾಂಡದ ಗಳೆಲ್ಲಾ ಖುಲಾಸೆಯಾಗುವುದನ್ನು ಅಸಹಾಯಕ ನೋಡುತ್ತಾ ನಿಲ್ಲಬೇಕಾದ ದಲಿತ ಚಳವಳಿಗಳ ಗಳನ್ನು ವಿವರಿಸುತ್ತಾ ಇಲ್ಲಿನ ದಲಿತ ಚಳವಳಿಗಳ ರಾಜಕೀಯ ಮತ್ತು ಸಂಘಟನಾತ್ಮಕ ಕಾರಣಗಳನ್ನು ಲೇಖಕರು ಪ್ರಯತ್ನಿಸುತ್ತಾರೆ.

ವ್ಯತಿರಿಕ್ತವಾಗಿ ಕೇರಳದಲ್ಲಿ ಏಕೆ ದಲಿತರ ಭಾರತದ ಇತರ ಎಲ್ಲಾ ರಾಜ್ಯಗಳಿಂದ ಉತ್ತಮ ಎಂಬುದನ್ನು ವಿಶ್ಲೇಷಿಸುತ್ತಾರೆ. ದಿವಾಕರರ ಪ್ರಕಾರ ಕಾರಣ ಅಲ್ಲಿ ಕಳೆದೆರಡು ಶತಮಾನಗಳಿಂದ ಕೊಂಡು ಬಂದ ಸಾಮಾಜಿಕ ಸುಧಾರಣಾ ಜಾತಿ ತಾರತಮ್ಯ ನಿವಾರಣೆಗೆ ಭೂಮಿಕೆ ದ್ದು, ಆ ನಂತರದ ಬಲವಾದ ಎಡಪಂಥೀಯ ದಲಿತರ ಭೌತಿಕ ಬದುಕಿನ ಮೇಲೆ ನಡೆಯುವ ಗಳ ವಿರುದ್ಧ ಸತತ ಹೋರಾಟ ನಡೆಸಿ ಯಶಸ್ಸನ್ನು ಇದನ್ನು ಹಿನ್ನೆಲೆಯಾಗಿಟ್ಟುಕೊಂಡೇ ಮುಂದೆ ದಲಿತರ ಭೌತಿಕ ಬದುಕಿನ ಪರಿಸ್ಥಿತಿ ಸುಧಾರಿಸದೆ ಮೋಚನೆಗೆ ಯಾವ ಅರ್ಥವೂ ಇಲ್ಲ ಎಂಬ ವಾದ ಪ್ರಮೇಯವನ್ನು ದಾಖಲಿಸ ಬಯಸುತ್ತಾರೆ.

ಹೀಗಾಗಿಯೇ ಪುಸ್ತಕದ ನಂತರದ ಭಾಗದಲ್ಲಿ ಲೇಖಕರು ದಲಿತರ ವಿಮೋಚನೆಗೆಂದು ವಿವಿಧ ಚಿಂತನಾಧಾರೆಗಳು ಮತ್ತು ಹೋರಾಟಗಾರರು ಮುಂದಿಡುವ ಹೋರಾಟ ಮಾರ್ಗಗಳ ಮಿತಿಯ ಬಗ್ಗೆ ಆಳವಾದ ವಿಶ್ಲೇಷಣೆಯನ್ನು ನಡೆಸುತ್ತಾರೆ. ಸ್ವಾತಂತ್ರ್ಯ ಹೋರಾಟದಲ್ಲಿ ಅಂಬೇಡ್ಕರ್‌ರವರ ದಣಿವರಿಯದ ಹೋರಾಟದಿಂದಾಗಿಯೇ ಮೀಸಲಾತಿ ಯೆಂಬ ಅವಕಾಶ ದಲಿತರಿಗೆ ಸಿಕ್ಕಿತೆಂದು ಗುರುತಿಸುತ್ತಲೇ ಪ್ರಸ್ತುತ ಜಾಗತೀಕರಣದ ಕಾಲಘಟ್ಟದಲ್ಲಿ ಸರ್ಕಾರವೇ ಅಪ್ರಸ್ತುತವಾಗುತ್ತಿರುವಾಗ ಹೇಗೆ ಮೀಸಲಾತಿ ಜಾತಿ ವಿನಾಶದ ಅಸ್ತ್ರವಾಗಲಾರದೆಂದು ವಿವರಿಸುತ್ತಾರೆ. ಸ್ವಾತಂತ್ರ್ಯ ಹೋರಾಟದಲ್ಲಿ ಜಾತಿವಿನಾಶವೆಂಬ ಕ್ರಾಂತಿಕಾರಿ ಕಾರ್ಯಕ್ರಮವನ್ನು ದುರ್ಬಲಗೊಳಿಸಲೆಂದೇ ದಲಿತರನ್ನು ಸಂಸದೀಯ ಸಾಂಸ್ಥಿಕ ವ್ಯವಸ್ಥೆಯೊಳಗೆ ಸೀಮಿತಗೊಳಿಸುವ ತಂತ್ರವನ್ನು ಕಾಂಗ್ರೆಸ್ ನಾಯಕರು ಅನುಸರಿಸಿದ್ದರು ಮತ್ತು ಅಂಬೇಡ್ಕರ್ ಅವರನ್ನು ಸಂವಿಧಾನ ರಚನಾ ಮಂಡಲಿಯ ಅಧ್ಯಕ್ಷರನ್ನಾಗಿ ಮಾಡುವುದರ ಹಿಂದೆಯೂ ಈ ಉದ್ದೇಶವಿತ್ತು ಎಂಬ ಚಿಂತಕ ಆನಂದ್ ತೇಲ್‌ತುಂಬ್ಡೆಯವರ ಮಾತನ್ನು ಲೇಖಕ ದಿವಾಕರ ಅವರೂ ಅನುಮೋದಿಸುತ್ತಾರೆ. ಹಾಗೆಯೇ ಮೀಸಲಾತಿಯು ಆಯಾ ಸಮುದಾಯಗಳ ಒಂದು ಮಧ್ಯಮವರ್ಗಕ್ಕೆ ಮಾತ್ರ ಸಹಾಯಕವಾಗಿದೆ ಎಂಬ ಅಂಶವನ್ನು ಗಮನಕ್ಕೆ ತರುತ್ತಾರೆ. ಬಹುಜನ ಸಮಾಜ ಪಕ್ಷದಂತ ಪರ್ಯಾಯಗಳೂ ಸಹ ಯಾವುದೇ ಪರ್ಯಾಯ ಆರ್ಥಿಕ ಮತ್ತು ರಾಜಕೀಯ ಚಿಂತನೆಯನ್ನು ಮುಂದಿಡದೇ ಇರುವ ಬೂರ್ಜ್ವಾ ರಚನೆಯಲ್ಲೇ ಅಧಿಕಾರ ಹಿಡಿಯುವ ಪ್ರಯತ್ನದಲ್ಲಿ ದಲಿತರ ಬದುಕನ್ನು ಯಾವ ರೀತಿಯಿಂದಲೂ ಸುಧಾರಿಸದೆ ಆತ್ಮಘಾತುಕವಾಗಬಹುದು ಎಂಬುದನ್ನು ಸಮರ್ಥವಾಗಿ ಪ್ರತಿಪಾದಿಸುತ್ತಾರೆ.



ದಲಿತರು
ವಿಮೋಚನೆಯ ಹಾದಿ ಒಂದು ಅವಲೋಕನ
ಪುಟಗಳು : 112
ಬೆಲೆ : 150/-
ಪ್ರಕಾಶನ : ನವಕರ್ನಾಟಕ ಪಬ್ಲಿಕೇಷನ್

ಜಾಗತೀಕರಣವು ದಲಿತರಿಗೆ ಇನ್ನಷ್ಟು ಕಡುಕಷ್ಟಗಳನ್ನು ಮಾತ್ರ ತಂದುಕೊಡುತ್ತದೆ ಎಂಬ ವಿಷಯವನ್ನೂ ಅಂಕಿಅಂಶಗಳ ಸಮೇತ ಸಮರ್ಥವಾಗಿ ಓದುಗರ ಮುಂದಿರಿಸುತ್ತಾರೆ. ಅವರು ನೀಡಿರುವ ಒಂದು ಅಂಕಿಅಂಶ ಕುತೂಹಲಕಾರಿಯಾಗಿದೆ. ಜಾಗತೀಕರಣ ಪ್ರಕ್ರಿಯೆ ಪ್ರಾರಂಭವಾದ 1991-2001ರ ನಡುವಿನ ಹತ್ತು ವರ್ಷಗಳಲ್ಲಿ ದಲಿತರಿಗೆ ಅವರ ಜನಸಂಖ್ಯಾ ಅನುಪಾತಕ್ಕೆ ಪರಿಸಮವಾಗಿಯಲ್ಲವಾದರೂ ಎ,ಬಿ,ಸಿ ವರ್ಗದಲ್ಲಿ 91ಕ್ಕಿಂತ ಹೆಚ್ಚಿನ ಉದ್ಯೋಗಗಳು ಸಿಕ್ಕಿವೆ. ಆದರೆ ದಲಿತರಿಗೆ ಹೆಚ್ಚಿನ ಉದ್ಯೋಗ ಅವಕಾಶಗಳನ್ನು ಒದಗಿಸಿಕೊಡುವ 'ಡಿ' ವರ್ಗದ ಸುಮಾರು 40,000 ಉದ್ಯೋಗಾವಕಾಶಗಳು ಇಲ್ಲವಾಗಿವೆ. ಇದು ಸಹ ಜಾಗತೀಕರಣ ದಲಿತ ಮಧ್ಯಮ ವರ್ಗಕ್ಕೆ ಅಪ್ಯಾಯಮಾನವಾಗಿದ್ದರೂ ದಲಿತ ಸಮುದಾಯಕ್ಕೆ ಮಾರಕವಾಗಿದೆ ಎಂಬುದನ್ನು ಸಾಬೀತುಪಡಿಸುತ್ತದೆ.

ಪುಸ್ತಕ ವಿಮರ್ಶೆ

ಅದೇರೀತಿ ದೇವಸ್ಥಾನ ಪ್ರವೇಶದಂತ ಹೋರಾಟಗಳು ಈ ಹಿಂದೆ ಒಂದು ವೈದಿಕ ವಿರೋಧಿ ಕಾರ್ಯತಂತ್ರವಾಗಿದ್ದರೂ ಹಿಂದೂತ್ವವಾದಿಗಳ ಬದಲಾದ ಪ್ರಣಾಳಿಯಲ್ಲಿ ಈ ಕಾರ್ಯಕ್ರಮವೂ ಪುರೋಹಿತಶಾಹಿಯ ಸದೃಢೀಕರಣಕ್ಕೆ ಪೂರಕವಾಗಿಬಿಡುವ ಅಪಾಯದ ಬಗ್ಗೆ ಗಮನ ಸೆಳೆಯುತ್ತಾರೆ. ಹಾಗೆಯೇ ಅಂತರ್ಜಾತಿ ವಿವಾಹಗಳು ಸಹ ವಿಶಾಲ ಜಾತಿವಿನಾಶ ಕಾರ್ಯಕ್ರಮದ ಭಾಗವಾಗಿ ಇರದಿದ್ದರೆ ಅದು ತನ್ನಂತೆ ತಾನೇ ಜಾತಿಪ್ರಜ್ಞೆಯ ನಾಶಕ್ಕೆ ಕಾರಣವಾಗದೆ ಮತ್ತೊಂದು ರೀತಿಯಲ್ಲಿ ಜಾತಿಪ್ರಜ್ಞೆಯ ಮುಂದುವರಿಕೆಗೂ ಕಾರಣವಾಗುತ್ತದೆ ಎಂದು ಎಚ್ಚರಿಸುತ್ತಾರೆ. ಅದೇರೀತಿ ದಲಿತ ವಿಮೋಚನೆಯ ಹಾದಿಯ ಭಾಗವಾಗಿ ಇಂದು ಮತಾಂತರದ ಕಾರ್ಯಪ್ರಣಾಳಿಕೆಗೂ ಜಾತಿವಿನಾಶದ ಅಲಗು ದೊರಕುತ್ತಿಲ್ಲ ಎಂಬುದನ್ನು ವಿವರಿಸುತ್ತಾರೆ.

ಇಂದಿನ ಜಾತಿ ವ್ಯವಸ್ಥೆಯ ಮೂಲಸ್ವರೂಪದ ಬಗ್ಗೆ ವಿವರಿಸುತ್ತಾ ಭಾರತದ ಇತಿಹಾಸದಲ್ಲಿ ಹೇಗೆ ಬೌದ್ಧಿಕ ಮತ್ತು ಭೌತಿಕ ಶ್ರಮಗಳ ಶ್ರೇಣೀಕೃತ ವಿಭಜನೆಯೇ ಜಾತಿ ವ್ಯವಸ್ಥೆಯ ಹುಟ್ಟಿಗೆ ಮತ್ತು ಇಂದೂ ಮುಂದುವರೆಯುತ್ತಿರುವುದಕ್ಕೆ ಕಾರಣವಾಗಿದೆಯೆಂದೂ ವಿವರಿಸುತ್ತಾರೆ.

ಪ್ರಾಯಶಃ ಜಾತಿಯ ಪುನರುತ್ಥಾನದ ಬಗೆಗೆ ಲೇಖಕರ ಈ ಸರಳೀಕೃತ ವಿವರಣೆಯೇ ಈ ಪುಸ್ತಕದ ಪ್ರಧಾನ ಕೊರತೆಯೂ ಆಗಿಬಿಟ್ಟಿದೆ. ಜಾತಿ ವ್ಯವಸ್ಥೆಯ ಹುಟ್ಟಿನಲ್ಲಿ ಮತ್ತು ಇಂದಿನ ಮುಂದುವರಿಕೆಯಲ್ಲಿ ಶ್ರೇಣೀಕೃತ ಶ್ರಮವಿಭಜನೆಯ ಅಂಶವಿದ್ದೇ ಇದೆ. ಆದರೆ ಜಾತಿ ವ್ಯವಸ್ಥೆಯಲ್ಲಿ ಬರುತ್ತಿರುವ ಎಲ್ಲಾ ಪರಿವರ್ತನೆಗಳನ್ನು ಕೇವಲ ಈ ಶ್ರೇಣೀಕೃತ ಶ್ರಮವಿಭಜನೆಯ ಅಂಶವನ್ನು ಮಾತ್ರ ಆಧರಿಸಿ ವಿವರಿಸಿಬಿಡಲು ಸಾಧ್ಯವಿಲ್ಲ. ಈ ದೇಶದಲ್ಲಿ ನಿರ್ದಿಷ್ಟ ಬಗೆಯ ಊಳಿಗಮಾನ್ಯ ಪದ್ಧತಿಯ ರಾಜಕೀಯ ಮತ್ತು ಸಾಮಾಜಿಕ ಅಗತ್ಯಗಳ ಭಾಗವಾಗಿ ಜಾತಿ ವ್ಯವಸ್ಥೆ ಉಗಮವಾಯಿತು. ಈ ಬಗೆಯ ಶೋಷಕ ಮತ್ತು ಶ್ರೇಣೀಕೃತ ಸಾಮಾಜಿಕ ವಿಭಜನೆಯನ್ನು ಸ್ಥಿರಗೊಳಿಸಲು ಬ್ರಾಹ್ಮಣೀಯ ಹಿಂದೂ ಧರ್ಮ ಮತ್ತು ಧರ್ಮಶಾಸ್ತ್ರಗಳು ಸಹಾಯಕ್ಕೆ ಬಂದವು. ಆದರೆ ಕಾಲಾನುಕ್ರಮದಲ್ಲಿ ಭಾರತದ ಊಳಿಗಮಾನ್ಯತೆ ಬದಲಾಗುತ್ತಾ ಬರುತ್ತಿದೆ. ಅದರಲ್ಲೂ ಬ್ರಿಟಿಷ್ ಆಳ್ವಿಕೆಯ 200 ವರ್ಷಗಳು ಮತ್ತು 1947ರ ನಂತರದ ಕೆಲವು ಬಂಡವಾಳಶಾಹಿ ಉಪಕ್ರಮಗಳು ಭಾರತದ ಊಳಿಗಮಾನ್ಯತೆಯ ಸ್ವರೂಪವನ್ನು ಬದಲಿಸಿವೆ. ಅವು ಜಾತಿಯನ್ನು ಖಂಡಿತಾ ನಾಶ ಮಾಡಿಲ್ಲವಾದರೂ ಅದನ್ನು ಹೊಸ ಅಗತ್ಯಗಳಿಗೆ ತಕ್ಕನಾಗಿ ಪರಿವರ್ತನೆ ಮಾಡಿವೆ. ಅದರಲ್ಲಿ ಅತಿ ಮುಖ್ಯವಾದದ್ದು ಗ್ರಾಮೀಣ ಪ್ರದೇಶದಲ್ಲಿ ಶೂದ್ರ ಭೂಮಾಲೀಕರ ಶಕ್ತಿಯ ರಾಜಕೀಯ ಸದೃಢೀಕರಣ ಮತ್ತು ದಲಿತ ಶಕ್ತಿಯ ನಿತ್ರಾಣೀಕರಣ. ಇಂದಿನ ಎಲ್ಲಾ ಜಾತಿ ದೌರ್ಜನ್ಯಗಳ ಗತಿತರ್ಕವನ್ನು ನಿಯಂತ್ರಿಸುತ್ತಿರುವುದು ಈ ರಾಜಕೀಯ ಆರ್ಥಿಕತೆಯೇ! ವಿಕೇಂದ್ರೀಕರಣ, ಉಳುವವನಿಗೆ ಭೂಮಿಯಂಥ ಪ್ರಗತಿಪರ ಕಾಯಿದೆಗಳೆಲ್ಲಾ ಗ್ರಾಮೀಣ ಪ್ರದೇಶದಲ್ಲಿ ಸಾರಾಂಶದಲ್ಲಿ ದಲಿತರಿಗೆದುರಾಗಿ ಶೂದ್ರಶಕ್ತಿಯ ಸದೃಢೀಕರಣವನ್ನಷ್ಟೇ ಮಾಡಿವೆ. ಹೀಗಾಗಿ ಪ್ರಸ್ತುತ ಜಾತಿ ವ್ಯವಸ್ಥೆಯ ಮತ್ತು ದಲಿತರ ಸಾಪೇಕ್ಷ ದೌರ್ಬಲ್ಯದ ವಿಶ್ಲೇಷಣೆ ಮಾಡುವಾಗ ಮತ್ತು ದಲಿತರ ವಿಮೋಚನಾ ಮಾರ್ಗದ ಹಾದಿಯನ್ನು ಹುಡುಕುವಾಗ ಗ್ರಾಮೀಣ ಪ್ರದೇಶದ ಈ ಹೊಸಬಗೆಯ ರಾಜಕೀಯ ಆರ್ಥಿಕತೆಯ ವಿಶ್ಲೇಷಣೆ ಅತ್ಯಗತ್ಯವಾಗಿತ್ತು.

ಈ ಕೊರತೆಯಿರುವುದರಿಂದಲೇ ಪುಸ್ತಕದಲ್ಲಿ ಅಲ್ಲಲ್ಲಿ ಹಲವಾರು ವೈರುಧ್ಯಗಳು ಎದ್ದುಕಾಣುತ್ತವೆ. ಉದಾಹರಣೆಗೆ ಕರ್ನಾಟಕದಲ್ಲಿ ದಲಿತರು ಮತ್ತು ರೈತ ಸಂಘದ ನಡುವೆ ನಡೆದ ಮತ್ತು ನಡೆಯುತ್ತಲೇ ಇರುವ ರಾಜಕೀಯ ಹೊಂದಾಣಿಕೆಯ ಬಗ್ಗೆ ಲೇಖಕರು ಸಕಾರಣವಾದ ಸಂದೇಹವನ್ನು ವ್ಯಕ್ತಪಡಿಸುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ರೈತ ಸಂಘ ಪ್ರತಿನಿಧಿಸುವ ಮಧ್ಯಮ ಮತ್ತು ಶ್ರೀಮಂತ ರೈತಾಪಿಯ ಜೊತೆಗೇ ದಲಿತರು ವೈರುಧ್ಯವನ್ನು ಎದುರಿಸಬೇಕಾಗಿರುವಾಗ ಈ ಹೊಂದಾಣಿಕೆ ಹೇಗೆ ಉಳಿದುಕೊಳ್ಳಲು ಸಾಧ್ಯ ಎಂದು ಲೇಖಕರು ಸರಿಯಾಗಿಯೇ ಪ್ರಶ್ನಿಸುತ್ತಾರೆ. ಆದರೆ ಮತ್ತೊಂದು ಕಡೆ ಈ ದೇಶದಲ್ಲಿ ಶ್ರಮಜೀವಿಗಳೆಂದರೆ ದಲಿತರು, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರು ಎಂದು ಹೇಳುತ್ತಾ ಆ ಸಮುದಾಯಗಳ ನಡುವೆ ರಾಜಕೀಯ ಐಕ್ಯರಂಗದ ಅಗತ್ಯತೆಯನ್ನು ಎತ್ತಿ ಹೇಳುತ್ತಾರೆ. ಪುಸ್ತಕದ ಕೊನೆಯಲ್ಲಿ ಈ ದೇಶದಲ್ಲಿ ಶ್ರಮಜೀವಿಗಳೆಂದರೆ ಕೇವಲ ದಲಿತ ಸಮುದಾಯ ಮಾತ್ರ ಎಂದು ಸಮ್ ಅಪ್ ಮಾಡುತ್ತಾರೆ!

ಇಂಥಾ ಸರಳೀಕರಣಗಳು ಇಂದಿನ ಜಾತಿ ಚಲನೆಯ ಗತಿತರ್ಕದ ಸಂಕೀರ್ಣತೆಯನ್ನು ಅರ್ಥಮಾಡಿಕೊಳ್ಳಲು ಸಹಾಯಕ್ಕೆ ಬರುವುದಿಲ್ಲ. ಏಕೆಂದರೆ ಇಂದು ದಲಿತ ಸಮುದಾಯವೂ ಒಳಗೊಂಡಂತೆ ಶೂದ್ರ-ಹಿಂದುಳಿದ, ಅಲ್ಪಸಂಖ್ಯಾತ, ಕೊನೆಗೆ ಆದಿವಾಸಿಯಂತ ಸಮುದಾಯಗಳಲ್ಲೂ ವರ್ಗಗಳು ಹುಟ್ಟಿಕೊಂಡಿವೆ. ಸಂಸದೀಯ ರಾಜಕಾರಣದಲ್ಲಿ ರಾಜಕೀಯ ಅಧಿಕಾರ ಮತ್ತು ಆರ್ಥಿಕ ಉನ್ನತಿಯನ್ನು ಪಡೆದುಕೊಳ್ಳಲು ಆಯಾ ಸಮುದಾಯಗಳ ಮೇಲ್ವರ್ಗದವರೇ ಜಾತಿ ಅಥವಾ ಸಮುದಾಯಗಳ ಹೆಸರಿನಲ್ಲಿ ರಾಜಕಾರಣ ಮಾಡುತ್ತಿದ್ದಾರೆ. ಇಂದಿನ ದಲಿತ ಚಳವಳಿಗಳು ಹಳ್ಳಿಯಿಂದ ಪಟ್ಟಣಕ್ಕೆ ವಲಸೆ ಹೋಗಿರಲು ಮತ್ತು ಅವರ ಬೇಡಿಕೆಗಳು ಭೂಮಿ ಪ್ರಶ್ನೆಯಿಂದ ಕೇವಲ ಮೀಸಲಾತಿ, ರೋಸ್ಟರ್ ಸುತ್ತಾ ಸುತ್ತುತ್ತಿರುವುದು ಇದೇ ಕಾರಣಕ್ಕೆ. ಹೀಗಿರುವಾಗ ದಲಿತ, ಹಿಂದುಳಿದ, ಅಲ್ಪಸಂಖ್ಯಾತರ ಸಮುದಾಯ ಮಟ್ಟದ ಐಕ್ಯರಂಗವು, ದಲಿತ ಹೋರಾಟವು ವರ್ಗ ಹೋರಾಟವನ್ನು ಒಳಗೊಳ್ಳಬೇಕೆಂಬ ಲೇಖಕರ ಆಶಯಕ್ಕೆ ವಿರುದ್ಧವಾಗುತ್ತದೆ.

ಆದರೂ ಹೆಚ್ಚುತ್ತಿರುವ ಸಾಮ್ರಾಜ್ಯಶಾಹಿ ಶೋಷಣೆಯ ವಿರುದ್ಧದ ಹೋರಾಟದ ವಿಶಾಲ ಜನಸಮುದಾಯಗಳ ಐಕ್ಯರಂಗದಲ್ಲಿ ದಲಿತ ಮತ್ತು ಶೂದ್ರ ರೈತಾಪಿ ಸಮುದಾಯದ ಹೆಚ್ಚಿನ ಭಾಗ ಒಂದಾಗಬಹುದಾದ ಸಾಧ್ಯತೆಯೂ ಇದೆ. ಆದರೆ ಒಂದು ಊಳಿಗಮಾನ್ಯ ವಿರೋಧಿ ಐಕ್ಯರಂಗದಲ್ಲಿ ದಲಿತ, ಹಿಂದುಳಿದವರ ಐಕ್ಯತೆ ವರ್ಗದ ನೆಲೆಯಲ್ಲಿ ಅಂದರೆ ಬಡ, ಭೂ ಹೀನ, ಕೂಲಿ ಎಂಬ ನೆಲೆಯಲ್ಲಿ ಸಾಧ್ಯವೇ ಹೊರತು ಸಮುದಾಯಗಳ ಮಟ್ಟದಲ್ಲಲ್ಲ. ಪ್ರಸ್ತುತ ಜಾತಿ ವ್ಯವಸ್ಥೆಯ ಸ್ವರೂಪವನ್ನು ಅದರ ರಾಜಕೀಯ ಆರ್ಥಿಕ ನೆಲೆಗಟ್ಟಿನಲ್ಲಿ ವಿಶ್ಲೇಷಿಸದೇ ಇರುವುದರಿಂದಲೇ ಪುಸ್ತಕದ ಪ್ರಥಮ ಭಾಗವೂ ಸಹ ವಿವಿಧ ರಾಜ್ಯಗಳಲ್ಲಿ ಜಾತಿ ಕ್ರೌರ್ಯವನ್ನು ತೆರೆದಿಡುತ್ತದೆಯೇ ವಿನಃ ಅಲ್ಲಿನ ಜಾತಿ ವ್ಯವಸ್ಥೆಯ ಸ್ವರೂಪದ ಪರಿಚಯವನ್ನು ಮಾಡಿಕೊಡುವುದಿಲ್ಲ. ಆದ್ದರಿಂದಲೇ ಕೇರಳದ ಸಂದರ್ಭದಲ್ಲಿ ಜಾತಿ ದೌರ್ಜನ್ಯಗಳು ಇಲ್ಲದಿರುವುದೇ ಹೆಗ್ಗಳಿಕೆಯಾಗಿ ಅಲ್ಲಿನ ಸಮಾಜದಲ್ಲಿ ಈಗಲೂ ಅಂತರ್‌ಗಾಮಿನಿಯಾಗಿ ಹರಿಯುತ್ತಾ ಸದೃಢಗೊಳ್ಳುತ್ತಿರುವ ಜಾತಿತಾರತಮ್ಯಗಳ ವಿವರಣೆಗೆ ಲೇಖಕರು ಮುಂದಾಗುವುದಿಲ್ಲ.


ಅದೇನೇ ಇದ್ದರೂ ಇಂದು ದಲಿತ ಹೋರಾಟಗಳು ಗಟ್ಟಿಗೊಳ್ಳಬೇಕೆಂದರೆ ಮತ್ತು ಜಾತಿವಿನಾಶದ ಕಾರ್ಯಕ್ರಮ ಸುಸಂಗತವಾಗಬೇಕೆಂದರೆ ಅವು ವರ್ಗ ಹೋರಾಟದ ಆಯಾಮವನ್ನು ಒಳಗೊಳ್ಳಬೇಕೆಂಬ ಲೇಖಕರ ಆಶಯ ಮತ್ತು ತೀರ್ಮಾನವನ್ನಂತೂ ಯಾರೂ ಪ್ರಶ್ನಿಸಲು ಸಾಧ್ಯವಿಲ್ಲ. ಈ ದೇಶದ ದಲಿತರ ಶೇ.70ಕ್ಕಿಂತಲೂ ಹೆಚ್ಚು ಮಂದಿ ಹಳ್ಳಿಯಲ್ಲಿ ಜೀತಗಾರರಾಗಿ ಮತ್ತು ಭೂಹೀನ ಕಾರ್ಮಿಕರಾಗಿ ಬದುಕುತ್ತಿರುವುದರಿಂದ ಈ ದೇಶದ ದಲಿತರ ಸಮಸ್ಯೆಯೆಂದರೆ ಭೂಮಿ ಸಮಸ್ಯೆಯೇ ಆಗಿದೆ. ಹೀಗಾಗಿ ಎಲ್ಲಿಯತನಕ ದಲಿತ ಚಳವಳಿಗಳು ಮತ್ತೆ ನಗರಗಳಿಂದ ಗ್ರಾಮಗಳಿಗೆ ಮರಳಿ ಭೂಹೋರಾಟವನ್ನು ಎತ್ತಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ದಲಿತ ಸಮಸ್ಯೆಯನ್ನು ಮೇಲ್‌ಸ್ತರದಲ್ಲಿ ಮಾತ್ರ ಚರ್ಚಿಸಿದಂತಾಗುತ್ತದೆ ಎಂಬ ಲೇಖಕರ ಪ್ರತಿಪಾದನೆಯು ಅತ್ಯಂತ ಸ್ಪಷ್ಟವಾಗಿದೆ.

ಆದರೆ ಸಮಸ್ಯೆಯೆಂದರೆ ಲೇಖಕರು ವರ್ಗ ಹೋರಾಟವನ್ನು ಒಂದು ಪ್ರತ್ಯೇಕ ಧಾರೆಯೆಂಬಂತೆ ಕಲ್ಪಿಸಿಕೊಂಡಿರುವುದು! ಗ್ರಾಮೀಣ ಭಾರತದಲ್ಲಿ ಜಾತಿ ಇಲ್ಲದ ವರ್ಗ ಸ್ಥಿತಿಯನ್ನು ಊಹಿಸಿಕೊಳ್ಳುವುದು ಈಗಲೂ ಅಸಾಧ್ಯವೇ! ಹಸಿರು ಕ್ರಾಂತಿಯು ಭಾರತದ ಕೃಷಿಯಲ್ಲೂ ಬಂಡವಾಳಶಾಹಿ ಅಂಶಗಳನ್ನು ಒಳತೂರಿಸುತ್ತಿರುವುದರಿಂದ ಜೀತಗಾರ ಸಾಯುತ್ತಾ ಕೃಷಿಕೂಲಿಯೊಬ್ಬ ಜನ್ಮತಾಳುತ್ತಿರುವುದು ನಿಜ. ಹಾಗೆಯೇ ಜಾತ್ಯತೀತವಾಗಿ ಬಡರೈತಾಪಿಗಳೆಲ್ಲಾ ಒಂದಾಗಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗುತ್ತಿರುವುದು ನಿಜ. ಆದರೆ ಊಳಿಗಮಾನ್ಯ ಜಾತಿ ಐಡೆಂಟಿಟಿಗಳ ಬದಲಿಗೆ ಜಾತ್ಯತೀತ ಐಡೆಂಟಿಟಿಗಳು ಹುಟ್ಟಿಕೊಳ್ಳುತ್ತಿರುವ ಪ್ರಕ್ರಿಯೆಯಲ್ಲಿ ಮಧ್ಯ ಪ್ರವೇಶಿಸಿ ಆ ಜಾತ್ಯತೀತ ಐಡೆಂಟಿಟಿಗಳನ್ನು ರಾಜಕೀಯವಾಗಿ ಸಂಘಟಿಸಿ ಸದೃಢೀಕರಿಸುವ ಪ್ರಜಾತಾಂತ್ರಿಕ ಶಕ್ತಿಗಳು ಇಲ್ಲದೆ ಭಾರತದ ಹಳ್ಳಿಗಳಲ್ಲಿ ಜಾತಿ ಪ್ರಜ್ಞೆ ತನ್ನಂತೆ ತಾನೆ ನಶಿಸಿ ವರ್ಗ ಪ್ರಜ್ಞೆಮೂಡುವುದಿಲ್ಲ. ಆದರೆ ಅಂಥ ಶಕ್ತಿಗಳು ಎಲ್ಲಿಯೂ ಬಲವಾಗಿಲ್ಲ. ಹೀಗಾಗಿ ಈಗಲೂ ಭಾರತದ ಗ್ರಾಮೀಣ ವರ್ಗಗಳು ಜಾತಿಗುಪ್ತವಾಗಿಯೇ ಮುಂದುವರೆದಿವೆ ಎನ್ನುವುದು ವಾಸ್ತವ. ಹೀಗಾಗಿ ಜಾತಿ ಪ್ರಜ್ಞೆಗೆ ವರ್ಗ ಪ್ರಜ್ಞೆಯ ಕಸಿಯನ್ನೂ, ವರ್ಗ ಪ್ರಜ್ಞೆಗಳಿಗೆ ಜಾತಿ ವಾಸ್ತವದ ಚುಚ್ಚುಮದ್ದನ್ನೂ ಕೊಡುವ ಅಗತ್ಯವಿದೆ ಎಂದಂತೂ ಖಂಡಿತಾ ಹೇಳಬಹುದು.

ಈ ಕಾರಣಕ್ಕಾಗಿಯೂ ನಾ. ದಿವಾಕರರ ಈ ಪುಸ್ತಕ ಜಾತಿ ಪ್ರಶ್ನೆಯನ್ನು ಗಂಭೀರವಾಗಿ ತೆಗೆದುಕೊಂಡಿರುವ ಪ್ರತಿಯೊಬ್ಬರೂ ಓದಲೇಬೇಕಾದ ಪುಸ್ತಕವಾಗಿದೆ

● ಶಿವಸುಂದರ್

ದೇವು ಪತ್ತಾರ




ಬೀದರಿನಲ್ಲಿ 'ಪ್ರಜಾವಾಣಿ' ಪತ್ರಿಕೆಯ ಮುಖ್ಯ ವರದಿಗಾರರಾಗಿರುವ ದೇವು ಪತ್ತಾರ್ ಅವರು, ಹೊಸತಲೆಮಾರಿನ ಲೇಖಕರಲ್ಲಿ ಕೊಂಚ ಅಲಾಯದವಾಗಿ ನಿಲ್ಲುವವರು. ಅವರ ಬರೆಹಗಳು ಕರ್ನಾಟಕ ಸಂಸ್ಕೃತಿ ಮತ್ತು ಚರಿತ್ರೆಯ ಅಧ್ಯಯನ ಮಾಡುವ ಎಲ್ಲರಲ್ಲೂ ಕುತೂಹಲ ಹುಟ್ಟಿಸಬಲ್ಲವು. ಇದಕ್ಕೆ ಕಾರಣ ಅವರ ಬರೆಹದೊಳಗೆ ಇರುವ ಸಂಶೋಧಕ ಗುಣ. ವರದಿಗಾರಿಕೆಯ ಸಾಮಾನ್ಯ ಲಕ್ಷಣವೆಂದರೆ ಹೊಸಹೊಸ ಸುದ್ದಿ ಮತ್ತು ಮಾಹಿತಿಗಳಿಗಾಗಿ ಹಸಿವನ್ನು ತೋರುವುದು; ಅವನ್ನು ವರದಿಯಾಗಿ ಕಳಿಸಿದ ಬಳಿಕ ನಿರಾಳವಾಗುವುದು. ಆಯಾ ದಿನಹುಟ್ಟಿ ಮರುದಿನ ಪ್ರಸ್ತುತತೆ ಕಳೆದುಕೊಳ್ಳುವ ಈ ವರದಿತನದ ಆಚೆಗೂ ಹೋಗಬಲ್ಲ ತ್ರಾಣ ಅನೇಕ ವರದಿಗಾರರಿಗೆ ಇರುವುದಿಲ್ಲ; ಒಂದೊಮ್ಮೆ ಇದ್ದರೂ, ಹಾಗೆ ಹೋಗಲು ದೈನಿಕ ವರದಿತನದ ಒತ್ತಡಗಳು ಬಿಡುವುದಿಲ್ಲ. ಇಂತಹ ಇಕ್ಕಟ್ಟಿನಲ್ಲೇ ದೇವು ಕರ್ನಾಟಕ ಚರಿತ್ರೆಯನ್ನು ಭಿನ್ನವಾಗಿ ಕಟ್ಟುವ ಸಂಶೋಧನಾತ್ಮಕ ಬರೆಹಗಳನ್ನು ಬರೆಯುತ್ತ ಬಂದಿದ್ದಾರೆ. ಭಿನ್ನವೇಕೆಂದರೆ ವಿಶಿಷ್ಟ ಪ್ರತಿಭೆಯನ್ನು ಮೆರೆದ ಅಜ್ಞಾತ ವ್ಯಕ್ತಿಗಳ ವ್ಯಕ್ತಿಚಿತ್ರ ಮತ್ತು ಜೀವನಚಿತ್ರಗಳನ್ನು ರಚಿಸುವುದು. ಉದಾಹರಣೆಗೆ, ಬೀದರಿನ ಅಪರೂಪದ 'ಕ್ಯಾಮರಾ ಎಂಜಿನಿಯರ್ ಗುಲಾಂ ಮುಂತಕಾ' (2008) ಅವರ ಜೀವನಚರಿತ್ರೆ; ಸುರಪುರದಲ್ಲಿ ಬ್ರಿಟಿಷ್ ಪೊಲಿಟಿಕಲ್ ಏಜೆಂಟನಾಗಿದ್ದ ಮೆಡೋಸ್ ಟೇಲರನ ಬಗ್ಗೆ ಸಂಪಾದಿಸಿದ ಪುಸ್ತಕ 'ಮಹಾದೇವ ಬಾಬಾ ಮೆಡೋಸ್ ಟೇಲರ್'. ಈಗ ದೇವು, ಮಹಮೂದ್ ಗವಾನನ ಜೀವನ ಚರಿತ್ರೆಯನ್ನು ಬರೆಯುತ್ತಿದ್ದಾರೆ. ಬಹಮನಿ ರಾಜ್ಯದ ಪ್ರಧಾನಮಂತ್ರಿಯಾಗಿದ್ದ ಗವಾನನು ದೊಡ್ಡ ವಿದ್ವಾಂಸನೂ ದಾರ್ಶನಿಕನೂ ಶಿಕ್ಷಣತಜ್ಞನೂ ಆಗಿದ್ದವನು. ಮಹಾ ಪ್ರಾಮಾಣಿಕ. ದೊರೆಯ ತಪ್ಪು ತಿಳಿವಳಿಕೆ ಕಾರಣದಿಂದ ಕೊಲ್ಲಲ್ಪಟ್ಟವನು.

ದೇವು ಅವರ ಈಗ ಪ್ರಕಟವಾಗುತ್ತಿರುವ 'ಈಗ ಹೀಗಿರುವ ಲೋಕದಲ್ಲಿ' ಕೃತಿಯಂತೂ ಹೈದರಾಬಾದ್ ಸೀಮೆಯ ವಿಶಿಷ್ಟ ವ್ಯಕ್ತಿಚಿತ್ರಗಳ ಸಂಪುಟವೇ ಆಗಿದೆ. ಕನ್ನಡದಲ್ಲಿ ಮೊದಲು ವ್ಯಕ್ತಿಚಿತ್ರಗಳ ಪರಂಪರೆಯನ್ನು ಆರಂಭಿಸಿದವರು ಡಿವಿಜಿ ಎನ್ನಬಹುದು. ಅವರ 'ಜ್ಞಾಪಕ ಚಿತ್ರಶಾಲೆ'ಯ ಸಂಪುಟಗಳು ಕರ್ನಾಟಕದ ರಾಜಕೀಯ ಸಾಮಾಜಿಕ ಚರಿತ್ರೆಯನ್ನು ವ್ಯಕ್ತಿಚಿತ್ರಗಳ ಮೂಲಕ ಕಟ್ಟುವ ಕೆಲಸವನ್ನು ಚೆನ್ನಾಗಿ ಮಾಡುತ್ತವೆ. ನಂತರ ಎ.ಎನ್. ಮೂರ್ತಿ ರಾವ್, ವಿಸೀ ಮುಂತಾದವರು ಈ ಪರಂಪರೆಯನ್ನು ಮುಂದುವರೆಸಿದರು. ಲಂಕೇಶ್ ಕೂಡ ಬಹಳಷ್ಟು ವ್ಯಕ್ತಿಚಿತ್ರಗಳನ್ನು ಪತ್ರಿಕಾಬರೆಹದ ಭಾಗವಾಗಿ ಬರೆದರು. ಈಚೆಗೆ ಈ ಸಾಲಿನಲ್ಲಿ ಬಂದ ಕೃತಿ ಎಸ್.ಆರ್. ವಿಜಯಶಂಕರ್ ಅವರ 'ಒಡನಾಟ'.

ದೇವು ವ್ಯಕ್ತಿಚಿತ್ರಗಳ ವಿಶೇಷವೆಂದರೆ ಅವರ ಲೇಖನಕ್ಕೆ ವಸ್ತುವಾಗಿರುವ ಹೆಚ್ಚಿನವರು ಅಜ್ಞಾತವಾಗಿದ್ದುಕೊಂಡು ಬದುಕಿದವರು; ಪ್ರಧಾನಧಾರೆಯ ಚರಿತ್ರೆಯ ಚೌಕಟ್ಟಿನಾಚೆ ಇರುವ 'ಯಾರೂ ಅರಿಯದ ವೀರ'ರು; ಹಸ್ನುಖಾನ್, ತಾರಾನಾಥ್, ಮಿರಾಜುದ್ದೀನ್, ನರಸಿಂಗರಾವ್, ಮಹಮೂದ್ ಗವಾನ, ಎಂ.ಎಸ್. ಪುಟ್ಟಣ್ಣ, ಮೆಡೋಸ್ ಟೇಲರ್, ಶೆಟ್ಟರ ನಾಗಪ್ಪ, ಶೇಷರಾವ ಕಾಮತೀಕರ್, ನಿಕಿಟನ್, ಸಂಗೀತಗಾರ ರಾಮ, ಗುಲಾಂ ಮುಂತಾಕ, ಷಣ್ಮುಖಪ್ಪ ಆಲಗೂರು ರಾಚಪ್ಪ-ಮುಂತಾದವರು; ಈ ಕೃತಿಯನ್ನು ಸಾಮಾನ್ಯರ ಚರಿತ್ರೆಯ ಸಂಪುಟವೆಂದೂ ಕರೆಯಬಹುದು. ಇಲ್ಲಿನ ಟೇಲರ್ ಹಾಗೂ ಗವಾನರು ಸಾಮಾನ್ಯರಲ್ಲ; ಆದರೆ ಕರ್ನಾಟಕದ ಚರಿತ್ರಕಾರರಿಂದ ಕಡೆಗಣಿಸಲ್ಪಟ್ಟವರು. ಪ್ರಸಿದ್ಧರ ಬೆನ್ನುಹತ್ತಿ ಹೋಗುವ ಸಾಂಪ್ರದಾಯಕ ಚರಿತ್ರೆಯ ಹಾದಿಯನ್ನು ಕೈಬಿಟ್ಟು, ಸ್ಥಳೀಯರಾಗಿದ್ದು ನಾಡಿನ ಬದುಕನ್ನು ವರ್ಣರಂಜಿತವಾಗಿ ಕಟ್ಟಿದ ವ್ಯಕ್ತಿಗಳ ಜೀವನ ಚರಿತ್ರೆಯತ್ತಲೇ ದೇವು ಅವರ ಒಲವಿದೆ.

ಮೇಲಿನ ಪ್ರಕಟಿತ ಹಾಗೂ ಪ್ರಕಟವಾಗುತ್ತಿರುವ ಎಲ್ಲ ಕೃತಿಗಳು ದೇವು ಅವರ ಮುಖ್ಯ ಆಸಕ್ತಿಯ ಕ್ಷೇತ್ರವೊಂದನ್ನು ಸೂಚಿಸುತ್ತಿವೆ. ಅದೆಂದರೆ ಚರಿತ್ರೆ. ಚರಿತ್ರೆ ಬರೆಯುವ ಅವರ ಈ ಸೆಳೆತವು ಮೊದಲಿಂದಲೂ ಅವರ ಒಳಗೇ ಇತ್ತೊ ಅಥವಾ ಹಾದಿ ಬೀದಿಯಲ್ಲಿ ಚರಿತ್ರೆ ಸೂರೆಯಾಡಿರುವ ಬೀದರಿನಂತಹ ಊರಲ್ಲಿ ಇರುವುದರಿಂದ ಚಿಗುರೊಡೆಯಿತೊ ತಿಳಿಯದು. ನಮ್ಮ ದಿನಪತ್ರಿಕೆಗಳು ಕರ್ನಾಟಕದ ಸ್ಥಳೀಯ ವ್ಯಕ್ತಿ ಮತ್ತು ವಿದ್ಯಮಾನಗಳ ಮೇಲೆ ಲೇಖನಗಳನ್ನುಳ್ಳ ವಿಶೇಷ ಪುರವಣಿಗಳನ್ನು ಪ್ರಕಟಮಾಡಲು ಆರಂಭಿಸಿದವಷ್ಟೆ. ಆ ಬಳಿಕ ನಮ್ಮ ಪ್ರಧಾನ ಚರಿತ್ರೆಗೆ ಗೊತ್ತಿಲ್ಲದ ನೂರಾರು ವಿಷಯಗಳು ತಿಳಿದು ಬರತೊಡಗಿದವು. ಮಾತ್ರವಲ್ಲ ಅವನ್ನು ಬರೆಯುವ ಒಂದು ಲೇಖಕರ ಬಳಗವೂ ಕನ್ನಡದಲ್ಲಿ ಸೃಷ್ಟಿಯಾಯಿತು. ಅಂತಹ ಪುರವಣಿಗಳಿಂದ ದೇವು ಅವರ ಮೊದಲ ಘಟ್ಟದ ಬರೆಹಗಳು ರೂಪುಗೊಂಡಂತಿವೆ. ಆದರೆ ಅವು ವಿಶೇಷ ಮಾಹಿತಿ ಸಂಗ್ರಹ ಮತ್ತು ಆಕರ್ಷಕ ಮಂಡನೆಯ ಸೀಮಿತತೆಯನ್ನು ದಾಟಿ, ಗಂಭೀರ ಸಂಶೋಧನ ಲೇಖನಗಳಾಗುವತ್ತ ಚಲಿಸಿದವು. ಅದರಲ್ಲೂ ಸಂಗೀತಗಾರರನ್ನು ಕುರಿತ ದೇವು ಬರೆಹಗಳು ಸಾಂಸ್ಕೃತಿಕವಾಗಿ ಅನನ್ಯವಾಗಿವೆ.



ದೇವು ಬರೆಹಗಳ ಇನ್ನೊಂದು ವಿಶೇಷತೆಯೆಂದರೆ, ಚರಿತ್ರೆಯನ್ನು ಒಣವಿವರಗಳ ಕಂತೆಯಾಗಿಸದೆ ಸ್ವಾರಸ್ಯಕರ ಕತೆಯಾಗಿಸುವುದು; ಅಥವಾ ಕತೆಯ ಕುತೂಹಲಕ್ಕಾಗಿ ಚಾರಿತ್ರಿಕ ಪ್ರಜ್ಞೆಯನ್ನು ಬಲಿಗೊಡದೆ ಇರುವುದು. ಇದೊಂದು ಎಚ್ಚರದ ಸಮತೋಲನ. ಸಣ್ಣಕತೆಗಾರನಂತೆ ಒಂದು ಸಣ್ಣ ಘಟನೆಯನ್ನು ಆಯ್ದುಕೊಂಡು, ಅದರ ಸುತ್ತಮುತ್ತಲಿನ ಸಣ್ಣಪುಟ್ಟ ವಿವರಗಳನ್ನು ಕಲೆಹಾಕಿ, ಒಂದು ಅಚ್ಚುಕಟ್ಟಾದ ಚಿತ್ರವನ್ನು ಬರೆಯುವ ಕುಶಲತೆಯನ್ನು ಅವರು ಹೊಂದಿದ್ದಾರೆ. ಈ ಕಾರಣದಿಂದ ಅವರ ಬರೆಹಗಳನ್ನು ಚರಿತ್ರೆ ಮತ್ತು ಕತೆಗಾರಿಕೆಗಳ ಸಂಕರದ ಫಲಗಳೆನ್ನಬಹುದು.

ತಮ್ಮ ಚಾರಿತ್ರಿಕ ಬರೆಹಗಳಿಗೆ ಬೇಕಾದ ಮಾಹಿತಿಗಾಗಿ ದೇವು ಪಡುವ ಶ್ರಮ ಮತ್ತು ತೋರುವ ಶ್ರದ್ಧೆಗಳು, ಅವನ್ನು ಓದುವ ಯಾರಿಗೂ ಮನವರಿಕೆಯಾಗುತ್ತವೆ. ಟೇಲರ್ ಪುಸ್ತಕಕ್ಕೆ ಬರೆದಿರುವ ಅವರ ಪ್ರಸ್ತಾವನೆ ಇದಕ್ಕೆ ಸಾಕ್ಷಿ. ಅವರೊಮ್ಮೆ ನನಗೆ ಫೋನ್ ಮಾಡಿ, 'ಎಂ.ಎಸ್. ಪುಟ್ಟಣ್ಣನವರು ಮಹಮದ್ ಗವಾನನ ಮೇಲೆ ಬರೆದಿರುವ ಪುಸ್ತಕ ಹುಡುಕುತ್ತಿದ್ದೇನೆ, ನಿಮ್ಮಲ್ಲಿದೆಯೇ?" ಎಂದು ಕೇಳಿದರು. ದುರ್ಲಭವಾದ ಆ ಕೃತಿಯ ಹೆಸರನ್ನು ನಾನು ಕೇಳಿದ್ದೆ. ನನಗದು ಸಿಕ್ಕಿರಲಿಲ್ಲ. ಚರಿತ್ರೆಯ ಕೆಲವು ಅಧ್ಯಾಪಕರಿಗಾದರೂ ಇಂತಹದೊಂದು ಕೃತಿಯಿರುವ ಬಗ್ಗೆ ತಿಳಿದಿದೆಯೊ ಇಲ್ಲವೊ? ಕಡೆಗೊಮ್ಮೆ ದೇವು ಅದನ್ನು ಎಲ್ಲಿಂದಲೊ ಹುಡುಕಿ ಪಡೆದರು. ಹಾಗೆಯೇ ಬಿಜಾಪುರದ ನೆಲದಿಂದ ಮೂಡಿದ ಪ್ರಸಿದ್ಧ ಚರಿತ್ರೆಯ ಗ್ರಂಥ 'ತಾರೀಖಿ ಫೆರಿಸ್ತಾ'ದ ಅನುವಾದವನ್ನು ಅಂತರ್ಜಾಲದಲ್ಲಿ ಹುಡುಕಿ ನನಗೆ ಕಳಿಸಿಕೊಟ್ಟರು. ಬೀದರಿಗೆ ಭೇಟಿಕೊಟ್ಟಿದ್ದ ರಷ್ಯನ್ ಪ್ರವಾಸಿ ನಿಕಿಟನ್ ಕುರಿತು ಅವರು ಮಾಡಿರುವ ಶೋಧವಂತೂ ಅಪರೂಪದ್ದಾಗಿದೆ. ಇವೆಲ್ಲ ದೇವು ಅವರಲ್ಲಿರುವ ಗಂಭೀರ ಸಂಶೋಧಕನ ಕುರುಹುಗಳು.

ದಿನಪತ್ರಿಕೆಯಲ್ಲಿದ್ದೂ ಸಂಶೋಧನ ಪ್ರವೃತ್ತಿಯನ್ನೂ ಚಿಂತನಶೀಲತೆಯನ್ನೂ ಪಡೆದುಕೊಳ್ಳುವ ಸವಾಲನ್ನು ದೇವು, ತಮ್ಮ ಒಳಗಿನ ವಿದ್ವತ್ ಸಹಜ ಸೆಳೆತದಿಂದ ನಿಭಾಯಿಸುತ್ತಿದ್ದಾರೆ. ವಿಶ್ವವಿದ್ಯಾಲಯದ ಎಷ್ಟೋ ಸಂಶೋಧಕರು ಮಾಡಲಾಗದ್ದನ್ನು ಅವರು ಮಾಡುತ್ತಿದ್ದಾರೆ ಎಂದೂ ಹೇಳಬಹುದು. ಅವರ ಸಂಶೋಧನ ಬರೆಹಗಳಲ್ಲಿ ಸಂಶೋಧಕನ ಖಚಿತತೆಯಿದೆ. ನಿರ್ಲಿಪ್ತವಾಗಿ ಬರೆಯುವ ವಸ್ತುನಿಷ್ಠತೆಯಿದೆ. ಅವರ ಲೇಖನಗಳು ಕುತೂಹಲ ಹುಟ್ಟುವಂತೆ ಸ್ವಾರಸ್ಯಕರವಾಗಿರುತ್ತವೆ ಮತ್ತು ಒಂದೇ ಬೈಠಕ್ಕಿನಲ್ಲಿ ಓದಿಸಿಕೊಳ್ಳುತ್ತವೆ. ಕವಿಯೂ ಆಗಿರುವ ದೇವು ಕೆಲವು ಕಡೆ ತನ್ಮಯವಾಗಿ ಕಾವ್ಯದ ಭಾಷೆಯನ್ನು ಬಳಸುವುದುಂಟು. "ರಾಚಪ್ಪ ಸಾಥ್ ನೀಡುವಾಗೆಲ್ಲ ಗಾಯಕನ ಕಣ್ಸನ್ನೆ ಮಾಡಿ ಲಯದ ದಟ್ಟಕಾಡಿನಲ್ಲಿ ಒತ್ತಾಯಪೂರ್ವಕವಾಗಿ ಕರೆದುಕೊಂಡು ಹೋಗುತ್ತಿದ್ದ" ಎಂಬಂತಹ ವಾಕ್ಯಗಳನ್ನು ಇಲ್ಲಿ ಉಲ್ಲೇಖಿಸಬಹುದು.


ಆದರೆ ದೇವು ಬರೆಹದಲ್ಲಿ ಕೆಲವು ಮಿತಿಗಳಿವೆ. ಮೊದಲನೆಯದಾಗಿ, ಅವರಿಗೆ ಪತ್ರಿಕಾ ಬರೆಹದಲ್ಲಿ ಸಾಮಾನ್ಯವಾಗಿರುವ ವರದಿಗಾರಿಕೆಯ ಗುಣದಿಂದ ಕೆಲವೊಮ್ಮೆ ತಪ್ಪಿಸಿಕೊಳ್ಳಲು ಆಗಿಲ್ಲ; ಸ್ವಾರಸ್ಯವನ್ನು ಹುಟ್ಟಿಸಲು ಭಾಷೆಗೆ ಬಣ್ಣವನ್ನು ಅವರು ಬೆರೆಸುವುದೂ ಉಂಟು. "ಬೀದರಿನಲ್ಲಿ ಬರಬಂದರೆ ಮೈಸೂರಲ್ಲಿ ವಡೆ ದುಬಾರಿ" ಎಂಬ ಲೇಖನದ ತಲೆಬರೆಹವು, ಚಂಚಲ ಓದುಗರನ್ನು ಸೆಳೆದುಕೊಳ್ಳಲೆಂದೇ ರೋಚಕಗೊಂಡಂತಿದೆ. ಎರಡನೆಯದಾಗಿ, ದೇವು ಅವರ ವ್ಯಕ್ತಿಚಿತ್ರಗಳಲ್ಲಿ ಹಳಹಳಿಕೆಯ ದನಿಯೊಂದು ಸುಳಿಯುತ್ತದೆ. ಕಳೆದು ಹೋದ ದಿನಗಳು ಸುಂದರವಾಗಿದ್ದವು ಎಂದು ನಂ... ವರ್ತಮಾನದ ಬಗ್ಗೆ ಅವರು ಕೆಲವು ಕಡೆ ಅನಗತ್ಯವಾ... ಕಠೋರವಾಗಿ ಮಾತಾಡುವುದುಂಟು. ಮೂರನೆಯದಾ... ಸಾರ್ಥಕ ಬದುಕನ್ನು ಬದುಕಿದ ಸಾಮಾನ್ಯ ವ್ಯಕ್ತಿಗಳನ್... ದೇವು ವ್ಯಕ್ತಿಚಿತ್ರಕ್ಕೆ ವಸ್ತುವಾಗಿ ಆರಿಸಿಕೊಳ್ಳುತ್ತಾರೆಂ... ನಿಜ. ಆದರೆ ವ್ಯಕ್ತಿಯ ಸದ್ಗುಣಗಳನ್ನೇ ಮುಂದುಮಾ... ಬರೆಯುವ ಸಹೃದಯತೆ ಮತ್ತು ಉದಾರತೆಗಳಿಂ... ವ್ಯಕ್ತಿಚಿತ್ರಗಳಿಗೆ ನಿಷ್ಠುರತೆ ತಪ್ಪಿಹೋಗಿದೆ. ಒಂದು ಬಗೆ... ಡಿಫೆನ್ಸಿವ್ ಗುಣ ಅವರ ಈ ಚಿತ್ರಗಳಲ್ಲಿದ... ವಿಮರ್ಶಾತ್ಮಕತೆಯು ಕಡಿಮೆಗೊಂಡಿದೆ. ಟೇಲರ್ ಕುರಿ... ಲೇಖನಗಳಲ್ಲಿ ಅಮೂಲ್ಯವಾದ ಮಾಹಿತಿಗಳಿವೆ. ಆದ... ಟೇಲರನ ಬಗ್ಗೆ ಭಾವಪಕ್ಷಪಾತದಿಂದ ಬರೆದಿರುವ ಕಾರ... ವಸಾಹತುಶಾಹಿ ಆಡಳಿತೆಯ ಆರ್ಥಿಕ ಹಿತಾಸ... ಗಳನ್ನಾಗಲಿ, ರಾಜಕೀಯ ತಂತ್ರಗಾರಿಕೆಗಳನ್ನಾಗ... ರಾಜಕೀಯ ಪ್ರಜ್ಞೆಯಿಂದ ವಿಶ್ಲೇಷಿಸಲು ಅವರಿಗೆ ಸಾ... ವಾಗಿಲ್ಲ. ಸಮಕಾಲೀನ ರಾಜಕಾರಣಿಗಳನ್ನು ಕುರಿ... ವ್ಯಕ್ತಿಚಿತ್ರಗಳಲ್ಲೂ ರಾಜಕೀಯ ವಿಶ್ಲೇಷಣೆಗಳಲ್ಲೂ ವಿಮರ್ಶಾ...ತ್ಮಕ ಎಳೆಗಳಿರುವುದುಂಟು. ಆದರವು ಕ್ಷೀಣವಾಗಿ... ಲಂಕೇಶ್ ಬರೆಯುವ ವ್ಯಕ್ತಿಚಿತ್ರಗಳು, ತಮ್ಮ ನಿಷ್ಠುರತೆಂ... ಅಲಗಿನ ಕಾರಣದಿಂದಲೇ ಹೆಚ್ಚು ಮಾನುಷವಾಗಿ... ಎಂಬುದನ್ನು ಇಲ್ಲಿ ಉಲ್ಲೇಖಿಸಬೇಕು.

ಕನ್ನಡದ ದೈನಿಕ ಪತ್ರಿಕೆಗಳಲ್ಲಿ ವರದಿಗಾರಿಕೆ ಸಾಕಷ್ಟಿ... ಆದರೆ ಅಲ್ಲಿ ಸೂಕ್ಷ್ಮವೂ ನಿಷ್ಠುರವೂ ಆದ ರಾಜಕೀಯ... ವಿಶ್ಲೇಷಣೆಯ ಪ್ರಬುದ್ಧತೆ ಕಡಿಮೆ. ಅದೂ ಇದೆ ಎಂ... ದಿನೇಶ್ ಅಮೀನ್ ಮಟ್ಟು ಅವರು ಬರೆಯತೊಡಗಿ... ಬಳಿಕ ಗೊತ್ತಾಗುತ್ತಿದೆ; ಕನ್ನಡ ಪತ್ರಿಕೋದ್ಯಮದ... ರಾಜಕೀಯ ಸಾಮಾಜಿಕ ವರದಿಗಾರಿಕೆಯಿದೆ. ಆದ... ಕಲ್ಚರಲ್ ರಿಪೋರ್ಟಿಂಗ್ ಎನ್ನುವುದು ಕಡಿಮೆ. ಅ... ಸಹ ಇದೆ ಎಂದು ದೇವು ತರಹದ ಸಂವೇದನಾಶೀ... ಲೇಖಕರ ಬರೆಹಗಳಿಂದ ಗೊತ್ತಾಗುತ್ತಿದೆ. ಒಂದು ಜಿಲ್... ಕೆಲವು ವರ್ಷಗಳ ಮಟ್ಟಿಗೆ ಹೋಗುವ ವರದಿಗಾ... ಒಬ್ಬರಿಗೆ, ನಿಜವಾಗಿಯೂ ಜನರ ಬಗ್ಗೆ ಪ್ರೀತಿ, ಕಾಳ... ಮತ್ತು ಬದ್ಧತೆಯಿದ್ದರೆ, ಸಂಶೋಧನೆಯ ಕುತೂಹಲವಿದ್... ಆ ಸೀಮೆಯ ಸಾಂಸ್ಕೃತಿಕ ಚರಿತ್ರೆಯನ್ನು ಹೇ... ಕಟ್ಟಿಕೊಡಬಹುದು ಎಂಬುದಕ್ಕೆ ದೇವು ಬರೆಹಗ... ನಿದರ್ಶನವಾಗಿವೆ. ಅವರು ಬೀದರಿಗೆ ಹೋದಮೇ... ಬೀದರಿನ ಚರಿತ್ರೆಯ ಅಜ್ಞಾತ ಅಧ್ಯಾಯವೊಂ... ಓದುಗರ ಮುಂದೆ ತೆರೆದುಕೊಂಡಂತಾಗಿದೆ.

ಮೂಲತಃ ಗುಲಬರ್ಗ ಜಿಲ್ಲೆಯ ಶಹಾಪುರದವರಾ... ದೇವು, ಧಾರವಾಡದಲ್ಲಿ ಇಂಗ್ಲಿಷ್ ಸಾಹಿತ್ಯ ಓದಿದವ... ಆದರೆ ಅವರು ಬರೆಯುತ್ತಿರುವ ಬರೆಹಗಳು, ಅವರ... ಒಬ್ಬ ಗಂಭೀರ ಚರಿತ್ರೆಯ ವಿದ್ವಾಂಸನಾಗು... ಕರೆದೊಯ್ಯುತ್ತಿವೆ. ದೇವು ಬರೆಹಗಳು ಚರಿತ್ರೆ... ಅಪರಿಚಿತ ಲೋಕವನ್ನು ನಮ್ಮ ಅರಿವಿಗೆ ತರು... ಕಾರಣಕ್ಕಾಗಿ ಮಾತ್ರ ಮುಖ್ಯವಾಗಿಲ್ಲ; ತಮ್ಮ ಒಳ... ಲೋಕದೃಷ್ಟಿಗಾಗಿಯೂ ಮುಖ್ಯವಾಗಿವೆ. ಕನ್ನಡ... ಹೊಸತಲೆಮಾರಿನ ಚರಿತ್ರಕಾರರು ದೊಡ್ಡಸಂಖ್ಯೆ... ಪ್ರವೇಶಿಸುತ್ತಿದ್ದಾರೆ. ಆದರೂ ಕರ್ನಾಟಕ ಚರಿತ್ರೆ ಬರೆ... ಮತೀಕರಣದ ನೆರಳಿನಿಂದ ಪೂರಾ ಬಿಡುಗಡೆಗೊಂಡಿ... ಇಂತಹ ಹೊತ್ತಲ್ಲಿ ಕರ್ನಾಟಕದ ರಾಜಕೀಯ ಚರಿತ್ರೆ... ಗದ್ದಲದೊಳಗೆ ಸಂಭವಿಸಿರುವ ಮಾನವೀಯ ದುರ... ಮತ್ತು ಚೈತನ್ಯಶೀಲತೆಯನ್ನು ದೇವು ಹುಡುಕುಹುಡು... ಬರೆಯುತ್ತಿದ್ದಾರೆ. ಬದುಕಿನ ಸಣ್ಣಪುಟ್ಟ ಸಂಗತಿಗಳಿ... ಚರಿತ್ರೆಯಲ್ಲಿ ಮಹತ್ವವಿದೆ ಎಂದು ಅವರ ಬರೆಹಗ... ಓದುವಾಗ ತಿಳಿಯುತ್ತದೆ; ಜೀವನ ಪ್ರೀತಿಯು... ಯಾವುದೇ ವ್ಯಕ್ತಿ ಮಾಡುವ ಕೆಲಸಗಳು ಜಾತಿ ಮತಗಳ... ಹೋಗಿ ಮಾನವೀಯ ನೆಲೆಯಲ್ಲಿ ನಿಲ್ಲುತ್ತವೆ ಎಂ... ಅವು ಸೂಚಿಸುತ್ತವೆ. ಪತ್ರಕರ್ತನೊಬ್ಬ ತಣ್ಣಗೆ ಬರೆಯ... ಜನಾಭಿಪ್ರಾಯವನ್ನು ರೂಪಿಸುವ ಮತ್ತು ಬದಲಿಸ... ಕೆಲಸವನ್ನು ಮಾಡುತ್ತಿರುವ ಈ ಪರಿ, ಗಮನಾರ್ಹವಾ...


ಒಂದೇ ಒಂದು ಮಾತು....

●ಜ್ಯೋತಿ ಗುರುಪ್ರಸಾದ್



ಮಹಾ ಮೌನ ಪ್ರವಾಹವಿದು
ದೇವ ದೇವರನು ತಣಿಸಲಾಗದ
ಉಲ್ಲಂಘಿಸಿ ಉಕ್ಕಿದೆ
ಉನ್ಮತ್ತ ಜಲಧಾರೆ
ಸೊಕ್ಕಿ ಪುಟಿದೇಳುತ್ತಿದೆ
ಹಿಂದೆ ಸರಿಯಲಾಗದೆ
ಮುನ್ನುಗ್ಗಿ ಹರಿಯುತಿದೆ
ಎಂದಿನಂತಾಗುವವರೆಗೆ
ಶಾಂತ ಸಾಗರದ ಅಲೆಗಳು
ನದೀ ಪಾತ್ರ
ಬಂಜೆ ಮೋಡದ ರಚನೆ
ಕಣ್ಣೀರ ಕೋಡಿ
ಇನ್ನೂ ಉಳಿದಿರುವ ಕಣ್ಣಿನಲ್ಲಿ

ಜೀವದಾಸೆಯ ಒಂದೇ ಒಂದು ಕಿರಣ
ಈ ಕಿರಣದ ಸೂತ್ರದಲ್ಲಿ
ಬದುಕ ನೇಯ್ಗೆ ಸಾಗಿದೆ
ನೇಕಾರನ ಕೈಯೊಳಗಿನ ಬೆಳಕು
ಬಾಳ ಬಟ್ಟೆಯ ಗುಟ್ಟು
ಉಗ್ರ ಪ್ರತಾಪದ ಕೋಟೆಯೊಳಗಿ
ಚಂದಿ ಬೆತ್ತಲಾಗಿರುವ
ತತ್ತರಿಸಿರುವ ನೆರೆಗೀಗ
ಹಲವು ಮಾತುಗಳ ತುತ್ತೂರಿ ಬೇಡ
ಮಾರುಕಟ್ಟೆ ಬೇಡ
ಸಲಹುವ ನೆರವಿನ
ಮೌನ ಮುರಿಯುವ
ಒಂದೇ ಒಂದು ಮಾತು ಬೇಕಿದೆ....
ಹೊಸ ಹುಟ್ಟಿನ ಆಸರೆ ಬೇಕಿದೆ.



...ಎಡೂರಪ್ಪನಿಗಿಂತ ರೆಡ್ಡಿನೇ ಬೆಟರ್ ಕಣ್ರೊ

...ಮುವಿಮ್ಮಿಯ ಬಳಿ ಕುತೂಹಲಕರ ...ಯವೊಂದಕ್ಕೆ ವಿವರ ಬೇಕಿತ್ತು. ಅದಕ್ಕಾಗಿ ...ವಳಂತೆ ಉಗ್ರಿ ಬಂದ ಕೂಡಲೇ,

...ಲೇ ಉಗ್ರಿ, ಎಡೂರಪ್ಪ ಚೆಡ್ಡಿ ಇಕ್ಕಂಡು ...ನ್ನಲ್ಲ ಯಾಕ್ಲ?" ಎಂದಳು.

...ಎಲ್ಲಿ ನಿಂತಿದ್ದಾ?"

...ಯ ಲು ಸೀ ಮೆ

...ಕಟ್ಟೆಪುರಾಣ

▸ಬಿ. ಚಂದ್ರೇಗೌಡ

...ಅದೆಲ್ಲೊ ನಿಂತವುನೆ ಕಂಡ್ಯ. ಟೀವಿಲೂ ಬತ್ತಂತೆ, ...ಮ್ಲೊ ಕೊಟ್ಟವುರೆ."

... ಅದಾ, ಅದು ಆರೆಸ್ಸೆಸ್‌ನೋರ್ ಡ್ರಸ್ಸು ...ವರುಸುಕೊಂಡು ಸತಿ ಅವುರ್ಯಲ್ಲ ಸೇರಿಕಂಡು ...ದಾರ ಮೈದಾನದಲ್ಲಿ ಕವಾಯಿತ್ ಮಾಡ್ತರೆ. ... ಸಭಗೆ ಎಡೂರಪ್ಪನೂ ಹೋಗಿದ್ದ."

...ಅಂಗರೆ ಎಡೂರಪ್ಪನೂ ಆರೆಸ್ಸೆ?"

...ಊ. ಅವುನೂ ಆರೆಸೆಸ್ ಗಿರಾಕಿ."

...ಆರೆಸೆಸ್ ಅಂದ್ರೇನ್ಲ?" ಎಂದ ಸೀರ.

...ಅವುರ್ಯಾರು ಅಂತ ಒಂದು ನೂರು ಸತಿ ...ನಪ್ಪ, ತಿರಗ ಕೇಳ್ತಿ ನೀನು."

...ಮರತೋಗ್ನದೆ ಹೇಳ್ಳ."

...ಆರೆಸೆಸ್ ಅಂದ್ರೇ ರಾಷ್ಟ್ರೀಯ ಸ್ವಯಂಸೇವಾ ...ಅಂತ. ಈ ದೇಶಕೆ ಮುಸ್ಲಿಮರು, ಕ್ರಿಶ್ಚಿಯನ್ನು, ...ಗಳು, ಇನ್ನು ಯಾರ್‍ಯಾರೊ ಬಂದು ಹಿಂದೂ ...ವ ಹಾಳು ಮಾಡಿ ಅದ್ವಾನ ಮಾಡಿದ್ದರಂತೆ. ...ಇವುರ್ಯಲ್ಲ ಸೇರಿ ಮದ್ಲಿದ್ದಂಗೆ ಮಾಡನಾ ಅಂತ ...ಅಂಗಿ ಹಾಕ್ಕಂಡು, ಖಾಕಿ ಚೆಡ್ಡಿ ಇಕ್ಕಂಡು, ಕೈಲಿ ... ದ್ವಜ್ಣೆ ಹಿಡಕಂಡು ನಿಂತವುರೆ."

...ಮದ್ಲಿದ್ದಂಗೆ ಮಾಡನ ಅಂದ್ರೇನ್ಲ?" ಎಂದ ...ಾವ.

...ಳ್ಳೆ ಪ್ರಶ್ನೆ ಕೇಳಿದೆ. ಮದಲ್ಯಂಗಿತ್ತು ಅಂದ್ರೇ, ... ದೇವುಸ್ಥಾನದಲ್ಲಿ ಪೂಜೆ ಮಾಡೋನು. ... ಕೊಡಗಿ ಜಮೀನ ಅನುಭವುಸೋನು. ... ವಲ ಊಳೋನು. ಕುರುಬ ...ಮೋನು. ಜಾಡರು ಬಟ್ಟೆ ನೇಯ್ಗ ...ಯರು. ವಲೇರೋನು, ಊರ್ಯಲ್ಲಾರ ಸೇವೇನೂ ...ನು. ಯಲ್ಲಾರು ತಮ್ಮ ತಮ್ಮ ಜಾತಿವಳಗೆ ...ಸುಬ ಮಾಡಿಕೊಂಡು ಸುಖವಾಗಿದ್ರಂತೆ. ...ಲಸ ಬುಟ್ಟು ಯಾರ್‍ಯಾರೋ ಯಾವು ...ದೊ ಕ್ಯಲಸ ಮಾಡಿಕಂಡು ಹಿಂದೂ ಧರಮ ಹಾಳು ಮಾಡಿದ್ದರಂತೆ. ಅದ್ಕೆ ಹಿಂದೂ ಧರಮ ರಕ್ಷಣೆ ಮಾಡಕ್ಕೆ ಹ್ವಂಟವುರೆ."

"ಯಾರ್‍ಯಾರೊ ಯಾವುಯಾವುದೊ ಕ್ಯಲಸ ಮಾಡ್ತರೆ ಅಂದ್ರೇನ್ಲ?" ಎಂದ ಸೀರ.

"ದಲಿತ್ರು ತಮ್ಮ ಕ್ಯಲಸ ಬುಟ್ಟು ಅಧಿಕಾರಿಗಳಾಗಿದ್ದರಂತೆ. ಇದೇ ಈ ಹೋಟ್ಲು ಚಿಕ್ಕಣ್ಣ ಕುರಿಕಾಯದು ಬುಟ್ಟು ಹೋಟ್ಲು ಮಡಗ್ಯವುನೆ. ನಿಜವಾಗ್ಲು ಹೋಟ್ಲು ಮಡಗಬೇಕಾದೋನ್ಯಾರು ಅವುನೇ ಅದ ಮಾಡಬೇಕು ಅನ್ನದು ಅವುರ ಲ್ಯಕ್ಕ."

"ಅವುರ ಕೈಲಾಗೊ ಕ್ಯಲಸವ ಅವುರು ಮಾಡಿಕಂಡೋಯ್ತರಪ್ಪ, ಅದ ಇವುರೇನೇಳಬೇಕು."

"ಅವುರೇಳದೇನು ಅಂದ್ರೇ, ಜಾತಿಗಳು ಜಾತಿ ಕಸುಬು ಮಾಡಿಕಂಡೇ ಹಿಂದೂ ಧರಮವ ಎತ್ತಿಡಿಬೇಕಂತೆ ಕಣಮಾವ."

"ನೀನೇಳದು ಒಂದೂ ಗೊತ್ತಾಗದಿಲ್ಲ ಕಂಡ್ಯ. ಎಡೂರಪ್ಯಾಕೆ ಚೆಡ್ಡಿ ಹಾಯ್ಕಂಡವುನೆ ಅಂತ ಜುಮ್ಮಿ ಕೇಳಿದ್ರೆ ಇನ್ನೇನೊ ಹೇಳ್ತಿ ನೀನು" ಎಂದ ಕಾಳಮಾವ.

"ಅದ್ನೆ ಹೇಳ್ತಿದ್ದೆ ಕಣಮಾವ. ಹಿಂದೂಗಳಿಗೆ ಧರ್ಮ, ದೇವುರು, ಜಾತಿ ಮಾಡಿಕೊಟ್ಟಿರೋನು ಬ್ರಾಹ್ಮಣ. ಅವುನ್ನ ರಕ್ಷಣೆ ಮಾಡಕ್ಕೆ ಅಂತ ಅದೇ ಬ್ರಾಮುಣ್ರು ಹುಡುಗ್ರ ತಯಾರು ಮಾಡಿ ಬುಟ್ಟವುರೆ. ಆ ಹುಡುಗ್ರು ಯಾವು ಜಾತಿನಾರ ಆಗಿರಬವುದು. ಅವುರನ್ನ ಕರಕಂಡೋಗಿ ಚೆಡ್ಡಿ ಹಿಕ್ಕಿ ಲಾಠಿ ಕೊಟ್ಟು ಸಾಬರ ಸಿಕ್ಕಿದ್ರೆ ಸರಿಯಾಗಿ ಮುಟ್ಟುಸು, ದಲಿತ್ರು ಕಂಡ್ರೆ ಉಷಾರಾಗಿರು ಅಂತ ಹೇಳಿ ಕೊಡ್ತರೆ. ಅಂಥೋರ ಕೈಗೆ ಈ ಎಡೂರಪ್ಪ ಬಡುವುರುಡುಗಾಗಿದ್ದಾಗ ಸಿಕ್ಕಿದ. ಅವುನ್ನ ಹಿಡಕಂಡು ಇದನ್ಯಲ್ಲ ಪ್ರಚಾರ ಮಾಡು ಅಂತ ಶಿಕಾರಿಪುರಕ್ಕೆ ಕಳಿಸಿದ್ರು. ಪ್ರಚಾರ ಮಾಡಿಕಂಡೇ ಮುನಿಸಿಪಾಲ್ಟಿಯಿಂದ ಹಿಡುದು ವಿಧಾನಸಭೆವರಿಗೂ ಬಂದ ಎಡೂರಪ್ಪ ಮುಖ್ಯಮಂತ್ರಿಯಾದ್ರೂ ಕೂಡ ಚೆಡ್ಡಿ ಹಿಕ್ಕಂಡು ಲಾಟಿ ಬೀಸಿದನಲ್ಲ, ಅದೇ ಇವತ್ತು ದ್ವಡ್ಡ ಸುದ್ದಿಯಾಗ್ಯದೆ."

"ಮುಖ್ಯಮಂತ್ರಿಯಾದ್ರು ಹಳಿದನ್ಯಲ್ಲ ಮರತಿಲವಲ್ಲ ಹೇಳು" ಎಂದು ಸೀರ ಎಡೂರಪ್ಪನ ಅವತಾರವನ್ನ ಕೊಂಡಾಡಿದ.

"ನೋಡಪ್ಪ ನಮ್ಮ ಚಿಗಪ್ಪನ ಕಾಮೆಂಟು ಎಷ್ಟು ಚನ್ನಾಗ್ಯದೆ" ಎಂದುಕೊಂಡು ವಾಟಿಸ್ಸೆ ಬಂದ.

"ನಾನೇನು ಮಾತಾಡಿದೆ?" ಎಂದು ಸೀರ ಕೊಸರಿದ.


"ಅಲ್ಲಾ ಚಿಗಪ್ಪ, ಎಡೂರಪ್ಪ ಈ ರಾಜ್ಯದ ಮುಖ್ಯಮಂತ್ರಿ. ಅವುನಿಗೆ ಓಟು ಮಾಡಿರೋರು ಬರೀ ಆರೆಸ್ಸಿಸ್ಸಿನೋರಲ್ಲ, ಆದ್ರು ಆ ಡ್ರಸ್ಸಾಯ್ಕಂಡು ಕವಾಯತು ಮಾಡಿ ನಮ್ಮ ಸಂವಿಧಾನಕ್ಕೆ ಅಪಚಾರ ಮಾಡ್ಯವುನೆ. ಕೋಟ್ಯಂತರ ಕನ್ನಡಿಗರಿಗೆ ಅವುಮಾನ ಮಾಡ್ಯವುನೆ. ಇದ್ದಿದ್ರಲೇ ಜನಾರ್ದನ ರೆಡ್ಡಿನೆ ಬೆಟರ್" ಎಂದ ವಾಟಿಸ್ಸೆ.

"ಅವುನೇನು ಮಾಡಿದ? ಗಣಿ ಧೂಳು ಕದ್ದು ಗಡಿನೇ ಬದ್ಲಾಸಿರೊ ರೆಡ್ಡಿ ಬೆಟರ್ ಅಂತಿಯಲ್ಲೊ?"

"ಮಿಸ್ಟರ್ ಉಗ್ರಿ, ಅವುನು ಎಷ್ಟೇ ಗಣಿಧೂಳು ಕದ್ದು ಮಾರಿ ಕೋಟ್ಯಾಧಿಪತಿಯಾದ್ರೂ ನನ್ನಂಗೆ, ನಿನ್ನಂಗೆ ಎರಡೂಟ ಮಾಡಬವುದು. ಒಂದು ತಿಂಡಿ ತಿನ್ನಬವುದು. ವಾರಕೊಂದು ಸತಿ ಅವುನೆಡ್ತಿ ಹತ್ರ ಹೋಗಬವುದು. ಇಲ್ಲ ಅದಕೂ ಬಿಡುವಿಲ್ಲದಂಗೆ ಇರಬವುದು. ಆದ್ರೆ ಎಡೂರಪ್ಪನಿಗೆ ಹೋಲಿಸಿದರೆ ಅವುನೆ ಬೆಟರ್ ಕಣೊ."

"ಅದ್ಯಂಗೊ?"

"ಅವುನು ಆರೆಸೆಸ್ ಸಬಿಗೆ ನೀಲಿ ಅಂಗಿ, ಪ್ಯಾಂಟು ಹಾಯ್ಕಂಡು ಬಂದಿದ್ದ. ಅದೇ ನಮ್ಮ ಸಿ.ಎಂ. ಅವುನೆದ್ರಿಗೆ ಯಂಗಿದ್ದ? ಅದ್ಕೆ ನಾನೇಳಿದ್ದು ಅವನು ಎಡೂರಪ್ಪನಿಗಿಂತ ಬೆಟರ್ರು ಅಂತ.



ಎಡೂರಪ್ಪನಿಗಿಂತ ಸ್ಟ್ರಾಂಗು ಅವನು."

"ಎಡೂರಪ್ಪನಿಗಿಂತ ಸ್ಟ್ರಾಂಗು ಅನ್ನದು ಇಡೀ ದೇಸಕೆ ಗೊತ್ತಾಯ್ತು ಬುಡು. ಏನೂ ಬ್ಯಾಡ, ಎಡೂರಪ್ಪ ವರ್ಗ ಮಾಡಿದ್ನಲ್ಲ ಅಧಿಕಾರಿಗಳ ಅವುರ ಉಳಿಸಿಗಳಕ್ಯಾಗಲಿಲ್ಲ ಅವುನಿಗೆ. ನನ್ನ ಮರಿಯಾದಿಗೋಸ್ಕರ ನಾನು ವರ್ಗ ಮಾಡಿರೋ ಅಧಿಕಾರಿಗಳು ಅಲ್ಲಿರ್ಲಿ ಅಂತ ಹೇಳಕ್ಯಾಗದೆ. ಆಡಗಲು ಬ್ಯಕ್ಲೆ ಆದೋನು ಚೆಡ್ಡಿ ಹಿಕ್ಕಂಡ್ರೇನು, ಕಾಚಾ ಹಿಕ್ಕಂಡ್ರೇನು, ಬುಡೊ ಅತ್ತಗೆ" ಎಂದ.

"ನನ್ನ ಪ್ರಶ್ನೆಗೆ ಉತ್ತರನೆ ಹೇಳ್ಳಿಲ್ಲವಲ್ಲಾ" ಎಂದಳು ಜುಮ್ಮಿ.

"ಏನಕ್ಕ ನಿನ್ನ ಕ್ವಶ್ನೆ?"

"ಎಡೂರಪ್ಯಾಕೆ ಚೆಡ್ಡಿ ಹಾಯ್ಕಂಡಿದ್ದ ಅಂತ?"

"ನೋಡಕ್ಕ, ನಾವು ಕೆಲುವು ಕ್ಯಲಸ ಮಾಡಬೇಕಾದ್ರೆ ಕೆಲುವು ಡ್ರಸ್ ಹಾಕ್ತವಿ. ಪರೆಗ್‌ಜಾಂಪಲ್, ಸ್ಕೂಲಲ್ಲಿ ಮಕ್ಕಳಿಗೇ ಅಂತ ಒಂದು ಯುನಿಫಾರಂ ಮಾಡಿರತರೆ. ಅದೇ ತರ ದೇಶ ಕಟ್ಟಬೇಕಾದ್ರೆ ಒಂದು ಡ್ರಸ್ಸಿರಬೇಕು ಅಂತ ಆರೆಸ್ಸೆಸ್‌ನೋರು ಖಾಕಿ ಚೆಡ್ಡಿ, ಬಳಿ ಅಂಗಿ, ಬಿದುರು ದೊಣ್ಣೆ ಮಾಡ್ಯವುರೆ. ದೇಶ ಕಟ್ಟಬೇಕು ಅಂದ್ರೆ ಸುಮ್ಮನೆ ಆದತೇ? ಅದಕೊಂದು ಡ್ರಸ್ ಬ್ಯಾಡವೆ?"

"ರೆಡ್ಡಿ ಯಾಕೆ ಚೆಡ್ಡಿ ಇಕ್ಕಿರಲಿಲ್ಲ?" ಎಂದ ಸೀರ.

"ಅದೆ ಹೇಳಿದ್ನಲ್ಲ ಚಿಗಪ್ಪ, ಅವುನು ಎಡೂರಪ್ಪನಿಗಿಂತ ಸ್ಟ್ರಾಂಗು. ಅವುರಮ್ಮ ಇನ್ನೂ ಸ್ಟ್ರಾಂಗು."

"ಅವುರಮ್ಯಾರು?"

"ಸುಸುಮ್ಮ ಸ್ವರಾಜ್ ಅಂತ ಚಿಗಪ್ಪ, ಈ ಬಸ್ಟಾಂಡಲ್ಲಿ ಮೇಯ್ಕಂಡು ಅಂಗಡಿಯಿಂದ ಅಂಗಡಿಗೆ ಹೋಗಿ ಬಾಳೆಹಣ್ಣೇಸಗಳೊ ಬೀದಿ ಹಸಿರತವೆ ನೋಡು, ಅಂತ ಗೋಮಾತೆ ತರ ಅವುಳು. ಎಡೂರಪ್ಪನಿಗೆ ಹೆಡತಿ ಇಲ್ಲ, ಅದ್ಕೆ ಶೋಭ ಕರಂದ್ಲಾಜೆ ಜೊತೆ ಇರತನೆ. ಅದೇ ತರ ಈ ರೆಡ್ಡಿಗಳಿಗೆ ಅಮ್ಮ ಇಲವಂತೆ, ಅದ್ಕೆ ಸುಸುಮ ಸ್ವರಾಜನ್ನ ಬಾಡಿಗೆ ತಾಯಿ ಮಾಡಿಕಂಡವಂತೆ. ವರಸಕ್ಕೊ ತಿಂಗಳಿಗೊ ಇಂತಿಷ್ಟು ಅಂತ ಅಮ್ಮನ ಪೀಜ ಕೊಡ್ತವೆ. ಇವತ್ತು ದುಡ್ಡಿದ್ರೆ ಏನು ಸಿಗದಿಲ್ಲ ಹೇಳು? ಅಧಿಕಾರ, ಹಣ, ಅಮ್ಮ, ಹೆಡತಿ ಮತ್ತೆ ಮಕ್ಕಳೂ ಕೂಡ ರಡಿಯಾಯ್ತವೆ."

"ಮಕ್ಕಳ್ಯಂಗೆ ರಡಿಯಾಗಿಬುಟ್ಟವುಲ?" ಎಂದು ಜುಮ್ಮಿ ನಕ್ಕಳು.

"ರಾಧಿಕನಿಗಾಗ್ಲೆ ಇನ್ನೊಂದು ಹೆಣ್ಣುಮಗಾಯ್ತಂತೆ ಕಣಕ್ಕ. ಅಲ್ಲಿಗೆ ಯರಡು ಮಕ್ಕಳಾದ್ವೊ. ಒಂದೂವರ್‍ಯೊರ್ಸಕ್ಕೆ ಯರಡು ಮಕ್ಕಳಾಯ್ತವೆ ಅಂದ್ರೆ, ಆ ಪುಣ್ಯಾತ್ಮ ಯಂಗಿರಬವುದು? ಈ ನ್ಯಲ ಇನ್ನೆಷ್ಟು ಫಲವತ್ತಾಗಿರಬವುದು, ಲ್ಯಕ್ಕ ಹಾಕು!"


"ಅವುಳು ಮಕ್ಕಳೆತ್ರೆ ನಿನಿಗ್ಯಾಕ್ಲ ವಟ್ಟೆಕಿಚ್ಚು?"

"ವಟ್ಟೆ ಕಿಚ್ಚಲ್ಲ ಕಣಕ್ಕ. ಕುತೂಹಲ. ಅದೇನಾದ್ರು ಆಗ್ಲಿ ಅವುಳಿಗೊಂದು ಪೋನು ಮಾಡಿ ಕಂಗ್ರಾಟ್ಸ್ ಹೇಳ್ತೀನಿ" ಎಂದುಕೊಂಡು ವಾಟಿಸ್ಸೆ ಹೋದ ಮೇಲೆ ಕಾಳಮಾವ,

"ಹುಟ್ಟು ಪೋಲಿ ಬಡ್ಡೆತ್ತದ್ದು" ಎಂದ. ●

...ನ್ನಡವೆಂದರೆ ಕುಣಿದಾಡುವುದೆ?

...ನ್ನಡಿಗರಿಗೆ ಏನಾಗಿದೆ ಎಂಬುದನ್ನು, ಇವರಿಗೆ ಯಾವ ಯಾವ ರೀತಿಯ ಪೀಡೆ, ರೋಗ ಹಿಡಿದಿದೆ ...ವನ್ನು ಅನೇಕರು ಅನೇಕ ರೀತಿಯಲ್ಲಿ ವಿವರಿಸುತ್ತಾರೆ. ಅವುಗಳಲ್ಲಿ ನಾನೇ ಮೊನ್ನೆ ಕಂಡ ಒಂದೆರಡು ... ಹೇಳುತ್ತೇನೆ. ಕನ್ನಡಿಗರಿಗೆ ತಮ್ಮ ಭಾಷೆಯ ಬಗ್ಗೆ ಅಭಿಮಾನವಿಲ್ಲ, ಅಂದರೆ ಸ್ವಾಭಿಮಾನವಿಲ್ಲ ...ಮ ಥಿಯರಿ; ಇದು ಖುದ್ದು ಕಂಡುಬಂದಾಗ ವ್ಯಸನವಾಗುತ್ತಿದೆ. ಮೊನ್ನೆ ನಮ್ಮ ಮಿತ್ರರೊಬ್ಬರ ಮನೆಗೆ ...ರಿಪೇರಿ ಮಾಡುವವನೊಬ್ಬ ಬಂದಿದ್ದ. ಆತ ಮೂಲತಃ ತಮಿಳು. ನಾನು ಅವನೊಂದಿಗೆ ಕನ್ನಡದಲ್ಲಿ ...ದೆ. ಆತ ಈಚೆಗೆ ಕಲಿತ ಕನ್ನಡವಾದ್ದರಿಂದ ಆತನ ಭಾಷೆ ಶಿಥಿಲವಾಗಿತ್ತು, ಆದರೂ ಚಿತ್ರವತ್ತಾಗಿ ...ತ್ತು. ಆದರೆ ನನ್ನ ಮಿತ್ರ ಆತನೊಂದಿಗೆ ತನ್ನ ಶಿಥಿಲ ತಮಿಳಿನಲ್ಲೇ ಸಂಭಾಷಣೆ ಶುರುಮಾಡಿದ. ...ೇ ಸದರಿ ಮಿತ್ರ ಈಚೆಗೆ ಕೇರಳದಿಂದ ಚಲನಚಿತ್ರೋತ್ಸವಕ್ಕೆ ಬಂದಿದ್ದ ಕೇರಳದ ಹುಡುಗರೊಂದಿಗೆ ... ಮಲೆಯಾಳಿ ಮಿಶ್ರಣದಲ್ಲಿ ಮಾತಾಡಿದ. ಇಲ್ಲಿಗೆ ಬಂದಿದ್ದ ಮಲೆಯಾಳಿಗಳು ನಮ್ಮ ಭಾಷೆಯ ...ಮಾತನ್ನಾದರೂ ಕಲಿಯಬೇಕಾದ್ದು ಸ್ವಾಭಾವಿಕ. ಆದರೆ ಈತನೇ ಅವರ ಭಾಷೆ ಕಲಿತು ಮಾತಾಡತೊಡಗಿದ್ದ. ... ಸಂದರ್ಭದ ಮೂರ್ಖತನ ಅರಿಯಲು ಕನ್ನಡ ಪ್ರೇಮಿಯೇ ಬೇಕಾಗಿಲ್ಲ, ನಾನು ರೇಗಿದೆ. "ನಿನಗೇನಾದ್ರೂ ... ಮುಂದೆರ್ಯಾಡೆ ಇದೆಯೋನಯ್ಯಾ? ನನ್ನ ಪ್ರಕಾರ ಜಗತ್ತಿನ ಶ್ರೇಷ್ಠ ದೇಶ ಫ್ರಾನ್ಸ್- ಇತಿಹಾಸ, ಸಂಸ್ಕೃತಿ, ...ನ, ಕೃಷಿ, ಆರೋಗ್ಯ ಎಲ್ಲದರ ದೃಷ್ಟಿಯಿಂದ. ಫ್ರಾನ್ಸಿನ ಜನ ಎಷ್ಟು ಸ್ವಾಭಿಮಾನಿಗಳು ಅಂದರೆ ತಮ್ಮ ...ಬಂದವನೊಂದಿಗೆ ತಮ್ಮ ಫ್ರೆಂಚ್‌ನಲ್ಲೇ ಮಾತಾಡುತ್ತಾರೆ. ಇಂಗ್ಲಿಷ್ ಗೊತ್ತಿದ್ದರೂ ಅದನ್ನು ಬಳಸುವುದಿಲ್ಲ, ... ಜರ್ಮನ್ ಭಾಷೆಯನ್ನು ಹೆಚ್ಚು ವಿಷಯ ತಿಳಿಯಲು, ಪುಸ್ತಕ ಓದಲು, ವೀಡಿಯೋ ನೋಡಿ ಜ್ಞಾನ ...ಸಲ್ಲಲು ಬಳಸಿಕೊಳ್ಳುತ್ತಾರೆ.... ನಮ್ಮಲ್ಲಿ ವಿದ್ಯಾವಂತರು ಕೂಡ, ಕನ್ನಡದಿಂದ ಖ್ಯಾತಿ, ಹಣ ಗಳಿಸಿದವರು ...ನ್ನಡ ಬಿಟ್ಟು ಬೇರೆ ಭಾಷೆ ಬಳಸತೊಡಗುತ್ತಾರೆ. ಇದು ನಾಚಿಕೆಗೇಡಿನ ವಿಷಯ" ಅಂದೆ.




"ಅರ್ಥಪೂರ್ಣ ಮನೆ"

ಮಣಿಪಾಲ್‌ನ ವಿಜಯನಾಥ ಶೆಣೈ ಮತ್ತು ಅವರು ರೂಪಿಸಿದ ಮನೆಯ ಬಗ್ಗೆ ನಾವು ಮೊನ್ನೆ ಬರೆದದ್ದು ನಿಮಗೆ ನೆನಪಿರಬಹುದು. ಶೆಣೈ ಅವರು ಸೌಜನ್ಯದ ಪತ್ರ ಬರೆದಿದ್ದಾರೆ. ಅದನ್ನು ಇಲ್ಲಿ ಕೊಡುವ ಅಗತ್ಯವಿಲ್ಲ. ಆದರೆ ಆ ಕಾಗದ ಓದುತ್ತಾ ನಾನು ಮತ್ತು ಶೂದ್ರ ಮರೆತ ಒಂದೆರಡು ವಿಷಯ ನೆನಪಾದವು. ಆರೇಳು ಲಕ್ಷ ಖರ್ಚು ಮಾಡಿ ಶೆಣೈ ಅವರು ರೂಪಿಸಿದ ಮನೆಯ ಬೆಲೆ ಮೂರು ಕೋಟಿಯಾಯಿತು; ಕೊಳ್ಳುವವರು ಪೀಡಿಸತೊಡಗಿದರು. ಆದರೆ ಶೆಣೈ ಮಾರಲಿಲ್ಲ, ಮಣಿಪಾಲದವರು ಅದಕ್ಕಾಗಿ ಒಂದು ಟ್ರಸ್ಟ್ ಮಾಡಿದರು. ಶೆಣೈ ಅವರಿಗೆ ವಾಸಕ್ಕೆ ಬೇರೊಂದು ಮನೆ ಕೊಟ್ಟರು.

ವಿಜಯನಾಥ ಶೆಣೈ ಎಂಥವರೆಂದು ಅವರ ಪತ್ನಿ ಬಲ್ಲರು. ಈ ಹೊಸ ಮನೆಯನ್ನು ಶೆಣೈ ಹಳ್ಳಿಯ ಮನೆಯಂತೆಯೇ ಮಾಡಿಬಿಡುವ ಅಪಾಯ ಅವರಿಗೆ ಗೊತ್ತು. ಆದ್ದರಿಂದ ಪತ್ನಿ ಈ ಟ್ರಸ್ಟ್ ನಿಯಮಗಳಲ್ಲಿ ಸೇರಿದರು. ಅದೇನೆಂದರೆ "ಇನ್ನು ಮುಂದೆ ಹೊಸ ಮನೆಯ ಪೂರ್ಣ ಜವಾಬ್ದಾರಿ ಅವರ ಪತ್ನಿಯದು!"

ಪ್ರತಿಭೆಗೆ ಒಂದು ಬಗೆಯ ತಿಕ್ಕಲುತನ ಇರುತ್ತದೆ; ಇದು ಅವರ ಅಭಿಮಾನಿಗಳಿಗೆ ಚೆಂದ. ಆದರೆ ಹೆಂಡತಿ ನಿತ್ಯ ಗಂಡ, ಮಕ್ಕಳೊಂದಿಗೆ ಮನೆಯಲ್ಲಿ ಬದುಕಬೇಕಾದವಳು. ಅವರ ಅನ್ನ ಬಟ್ಟೆಯ ಜವಾಬ್ದಾರಿ ಆಕೆಯದು. ಶೆಣೈ ಅವರ ಪತ್ನಿ ಮುನ್ನೆಚ್ಚರಿಕೆ ವಹಿಸಿದ್ದು ಎಷ್ಟು ಸಹಜ!

-ಫೆಬ್ರವರಿ 2, 1992




ಯಡ್ಡಿ ಸಂಪುಟಕ್ಕೆ ಗೌಡ ಭೂಷಣಂ

ಛೇ.... ನಾನು ರಾಮಚಂದ್ರೇಗೌಡರನ್ನ..... ಅದೇ ವೈದ್ಯಕೀಯ ಶಿಕ್ಷಣ ಸಚಿವರನ್ನ ಪೆದ್ದು ಮುಂಡೇದು, ಸಮಯ ಸಂದರ್ಭ ತಿಳಿಯದೆ ತುಟ್ಟುಟ್ಟಾಗಿ ಮಾತಾಡುತ್ತೆ ಅಂದುಕೊಂಡಿದ್ದೆ. ಅವರು ಹಂಗಲ್ಲಪ್ಪಾ, ಮಹಾ ಪಂಡಿತರು ಅನ್ನೋದು ಇತ್ತೀಚೆಗೆ ತಿಳೀತು. ಅದು ಯಾವಾಗ ಅಂದ್ರೆ ವಿಶ್ವ ನಾಟಿ ವೈದ್ಯರ ಸಮ್ಮೇಳನ ನಡೀತಲ್ಲಾ ಆವಾಗ. ಅಲ್ಲಿ ಎಂತಹ ಪಂಡಿತ ಸೂಚನೆ, ಸಲಹೆ ನೀಡಿದರು ಅಂತೀರಿ. ಕೇಳೋಕೆ ಎರಡು ಕಿವಿ ಸಾಲದು, ಹೇಳೋಕೆ ಬಾಯಿ ಸಾಲದು. ಆ ಆದಿಶೇಷನ್ನೇ ಕರ್ಕೊಂಬರ್ಬೇಕೇನೋ!

ಅಣಕ

▸ ಎಚ್.ಎಲ್. ಕೇಶವಮೂರ್ತಿ



ನಾವೆಲ್ಲ ವೈದ್ಯಕೀಯ ಕ್ಷೇತ್ರದಲ್ಲಿ ಬಹಳ ಮುಂದುವರಿದಿದ್ದೇವೆ. ಎಂತಹ ಕಾಯಿಲೆಯನ್ನಾದರೂ ಗುಣಪಡಿಸಲಾಗುತ್ತೆ ಅಂದ್ಕಂಡಿದ್ವಲ್ಲ ಇಷ್ಟು ದಿನ. ಮಾತೆತ್ತಿದರೆ ಅಲೋಪತಿ ವೈದ್ಯರ ಹತ್ತಿರ ಓಡ್ತಿದ್ವೇವಲ್ವ... ಎಂತಹ ಪೆದ್ದುಗಳು ನಾವು ಅಂತೀರಿ. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಹಂಗೆಲ್ಲ ಮಾಡಬೇಡ್ರೋ ಮುಂಡೆಮಕ್ಳು ಅಂತ ಸಾರ್ತಾ ಬದ್ದವ್ರೆ. ಯಾಕೆ ಹಿಂಗೆ ಸಾರ್ತಾ ಅವ್ರೆ ಅಂದ್ರೆ ಇಂತಹ ವೈದ್ಯರ ಬಳಿ ಚಿಕಿತ್ಸೆ ಪಡೆದರೆ ಅವರು ನೀಡುವ ಚಿಕಿತ್ಸೆಯಿಂದ ಬಂದಿರೋ ಕಾಯಿಲೆ ಗುಣ ಆಗಬಹುದು. side effects ನಿಂದ ನೂರೆಂಟು ರೋಗಗಳ ಗೂಡಾಗ್ತದೆ ನಿಮ್ಮ ದೇಹ ಅನ್ನೋದು. ಅವರ ಕಳಕಳಿ. ಒಂದು ಕಾಯಿಲೆಗೆ ಔಷಧ ಪಡೆದರೆ ಬೇರಿನ್ನೊಂದು ಕಾಯಿಲೆಯಿಂದ ಸಾಯ್ತಿರಿ. ನಾಟಿ ವೈದ್ಯದಲ್ಲಿ ಹಿಂಗಾಗೋಕೆ ಸಾಧ್ಯವೇ ಇಲ್ಲ. ನೀವು ಯಾವ ರೋಗಕ್ಕೆ ಮದ್ದು ಪಡೀತೀರೋ ಅದೇ ರೋಗದಿಂದ ಸಾಯ್ತೀರಿ! ಯಾವ ಅಡ್ಡ ಪರಿಣಾಮಾನೂ ಇರೋಲ್ಲ ಎಂಬ ಅರ್ಥದ ಮಾತುಗಳನ್ನು ಹೇಳಿದ್ದಾರೆ. ಅದೂ ಅಲ್ಲದೆ ನಾಟಿ ವೈದ್ಯರು ಅಂದ್ರೆ ಯಾರು ಅನ್ಕಂಡಿದೀರಿ. ನೂರಾರು ವೈದ್ಯರನ್ನು ಭಟ್ಟಿ ಇಳಿಸಿದರೆ ಸಿಗ್ತದಲ್ಲ ಗಟ್ಟಿ ವೈದ್ಯರು ಅವರೇ ಇವರು! ಮಾನವ ಜನಾಂಗದ ಸೇವೆಗೆಂದೇ ಜನ್ಮ ತಾಳಿದವರು. ಅಂತಹ ಭಟ್ಟಿ ವೈದ್ಯರನ್ನು ಬಿಟ್ಟು ನೀವೇನಾದರೂ ಅಲೋಪತಿ ವೈದ್ಯರ ಬಳಿಗೆ ಹೋದಿರಿ ಅಂದಿಟ್ಟುಕೊಳ್ಳಿ. ಹಿಂದಿನ ಕಾಲದಲ್ಲಿ ರಾಜರು ಶತ್ರುಗಳನ್ನು ಮೋಸದಿಂದ ಸಾಯಿಸೋಕೆ ಅಂತಾವ ಏನು ಮಾಡುತ್ತಿದ್ದರು.... ದಿನಾ ಸ್ವಲ್ಪಸ್ವಲ್ಪವೇ ವಿಷವನ್ನ ಆಹಾರದಲ್ಲಿ ಬೆರೆಸಿ ಸುಂದರ ಸ್ತ್ರೀಯರನ್ನು ಬೆಳೆಸುತ್ತಾ ಇದ್ದರು. ಅವರ ಅಂದಚಂದ, ಒನಪು ವೈಯ್ಯಾರಗಳಿಗೆ ಶತ್ರುವೇನಾದರೂ ಮರುಳಾಗಿ ಸಂಗ ಮಾಡಿದನೋ ಅಲ್ಲೇ ಫನಾ ಆಗ್ತಿದ್ದ ಅಲ್ವ... ಈ ವಿಷಕನ್ಯೆಯರ ವಿಷಯ ನೆನಪಾಗಿರಬೇಕು ಮಾನ್ಯ ಸಚಿವರಿಗೆ. ಅಲೋಪತಿ ವೈದ್ಯರು ನೀಡೋದು ಮದ್ದಲ್ಲ 'ನಿಧಾನ ವಿಷ' ಎಂದು ಸಾರಿದರು. ಅಂದರೆ ಏನಾಯಿತು, ಅಲೋಪತಿ ಚಿಕಿತ್ಸೆ ಪಡೆದವರು ಕ್ರಮೇಣ 'ವಿಷ್ಯ ಕನ್ಯೆ', 'ವಿಷ ಪುರುಷ' ಆಗ್ತಾರೆ!

ವೈದ್ಯಕೀಯ ಶಿಕ್ಷಣ ಸಚಿವರ ಸಮಯೋಚಿತ ಎಚ್ಚರಿಕೆ ಮಾತನ್ನು ಗಮನಿಸಿದಾಗ ನಮ್ಮ ಯುವಕಯುವತಿಯರನ್ನು ನೋಡಿ ಅಯ್ಯೋ ಅನ್ನಿಸಿತು. ಯಾಕೇಂತೀರಾ ನಮ್ಮ ಕಾಲದಲ್ಲಿ ನಮಗೆ ಇಂತಹ ಸಮಸ್ಯೆಗಳೇ ಇರಲಿಲ್ಲ. ಕಣ್ಣಿಗೆ ಚಂದ ಕಾಣಿಸಿದರೆ ಧೈರ್ಯವಾಗಿ ಮುಂದುವರಿಯಬಹುದಿತ್ತು. ಈಗ ನೋಡಿ. ಕಂಡಾಪಟ್ಟೆ ಸಿಕ್ಕಸಿಕ್ಕಿದವರನ್ನ ಪಟಾಯಿಸೋ ಅಂತಿಲ್ಲ! ಅವರಿಗೆ ಕಾಯಿಲೆಯೇ ಬಂದಿಲ್ಲ, ಬಂದಿದ್ದರೂ ಅಲೋಪತಿ ಚಿಕಿತ್ಸೆ ಪಡೆದಿಲ್ಲ ಅಂತ ಖಾತರಿ ಮಾಡಿಕೋಬೇಕು!

ಇದು ಏನೇ ಇರಲಿ. ಇಂತಹ ಎಚ್ಚರಿಕೆ ನೀಡಿದ ವೈದ್ಯಕೀಯ ಶಿಕ್ಷಣ ಸಚಿವರಿಗೆ ಕರ್ನಾಟಕ ಜನತೆ ಕೃತಜ್ಞತೆ ಅರ್ಪಿಸಲೇಬೇಕು ಅನ್ನಿಸುತ್ತಿದೆ. ರವಿ ಆಕಾಶಕ್ಕೆ ಭೂಷಣಂ ಅಂತಾರಲ್ಲ ಹಂಗೇ 'ಯಡ್ಡಿ ಸಂಪುಟಕ್ಕೆ ರಾಮಚಂದ್ರೇಗೌಡ ಭೂಷಣಂ!'

ಪುಟ್ಟಣ್ಣಯ್ಯ ಚಿಕಿತ್ಸೆ

ಪುಟ್ಟಯ್ಯ ಇದ್ದಾರಲ್ಲ... ಅದೇ ಕೆ.ಎಸ್. ಪುಟ್ಟಣ್ಣಯ್ಯನೋರು... ರೈತ ಸಂಘದ ಖಾಯಂ ಅಧ್ಯಕ್ಷರು... ಅದೇನು 'ಖಾಯಂ' ಅನ್ನೋ ವಿಶೇಷಣ ಬೇರೆ ಇದೆಯಲ್ಲ ಅಂದ್ರೆ.... ಅದು ಇತ್ತೀಚಿಗಿನ ವರಸೆ. ಯಾವುದೇ ಸಂಘಟನೆ ಆಗಲಿ. ಆಂತರಿಕ ಪ್ರಜಾಪ್ರಭುತ್ವ ಅಂದ್ರೆ ಕೇಜಿಗೆಷ್ಟು ಎಂದುಕೇಳೋವೇಯ. ಆದರೂ ಯಾವುದೇ ರಾಜಕೀಯ ಪಕ್ಷದಲ್ಲಿ ಆದಿಲ್ಲ ಅಂತ ಕೂಗಾಡೋದನ್ನ ಬಿಟ್ಟಿಲ್ಲ ಇರಲಿ. ಒಂದು ಸಲ ಪದಾಧಿಕಾರಿ ಆದ ಅಂದ್ರೆ ಮುಗೀತು. ಸಾಯೋವರೆಗೂ ಅವನು ಅಥ್ವ ಸಂಘಟನೆಗೆ- ಆ ಸ್ಥಾನವನ್ನೇ ಅಲಂಕರಿಸಿರುತ್ತಾನೆ. ಯಾವ್ನೋನಾದರೂ ನಾನೇನು ಕಮ್ಮಿ, ನಾನು ಅಧ್ಯಕ್ಷನಾಗ್ತೀನಿ ಎಂದು ಏನಾದರೂ ಕೊಸರಾಡಿದ ಅನ್ನಿ. ಸಂಘಟನೆಯಿಂದಲೇ ಕಿತ್ತು ಬಿಸಾಕ್ತಾರೆ. ಸಂಘಟನೆ ರುಚಿ ಕಂಡೋನು 'ಇಲ್ಲ ಇದ್ದೇ ಇರ್ತೀನಿ' ಅಂದ್ರೆ ಮೊದಲಿದ್ದ ಸ್ಥಾನದಲ್ಲೇ ತೆಪ್ಪನೆ ಬಿದ್ದಿರಬೇಕು. ಇಲ್ಲ ತನ್ನ ಜೊತೆಗೆ ಒಂದಿಷ್ಟು ಜನಾನ ಸಂಘಟನೆಯಿಂದ ಕಿತ್ಕೊಂಡೋಗಿ ಪ್ರತಿ ಸಂಘಟನೆ ಪ್ರಾರಂಭಿಸಬೇಕು. ನಮ್ದೇ ಅಸಲಿ ಸಂಘಟನೆ ಅವರದ್ದು ನಕಲಿ ಅಂತೆಲ್ಲ ಹೇಳಿಕೆ ನೀಡ್ತಾ ಅಧ್ಯಕ್ಷಗಿರಿ ಅನುಭವಿಸಬಹುದು. ಅದ್ಕೇ ಪುಟ್ಟಣ್ಣಯ್ಯವರನ್ನು ಖಾಯಂ ಅಧ್ಯಕ್ಷರು ಅಂದದ್ದು!



ಪುಟ್ಟಣ್ಣಯ್ಯನವರಿಗೆ ಇದ್ದಕ್ಕಿದ್ದಂತೆ ಉಮೇದು ಬಂದುಬಿಡುತ್ತೆ, ಯಾವ ವಿಷಯ ಹೇಳಬೇಕಾದರೂ ಅಂಕಿಅಂಶ ಎಳ್ಕಂಬರ್ತಾರೆ. ರೈತರ ಆತ್ಮಹತ್ಯೆ ಇರಲಿ, ವೈಜ್ಞಾನಿಕ ಬೆಲೆ ಇರಲಿ ಮತ್ತಾವುದೇ ಇರಲಿ. ಅಂಕಿಅಂಶಗಳಿಲ್ಲದೆ ಕಾಲೇ ಕೀಳೋಲ್ಲ. ಒಸಿ ದಿನ ದನಗಳ ಮೂಗುದಾರ ಹಿಡ್ಕಂಡಿದ್ರು. ಈ ದೇಶದಲ್ಲಿ ಬರೀ ಮೂಗುದಾರಕ್ಕೆ ಇಷ್ಟು ಕೋಟಿ ರೂಪಾಯಿಗಳ ಬಂಡವಾಳನ ರೈತ ಹೂಡ್ತಾನೆ ಅಂತ ಹೇಳಿದ್ರು, ಆಮೇಲೆ ಹಗ್ಗ ಹಿಡ್ಕೊಂಡ್ರು, ಅವರು ನೀಡುತ್ತಿದ್ದ ಅಂಕಿ ಅಂಶಗಳನ್ನು ಕೇಳಿ ಬೆರಗಾಗುತ್ತಿದ್ದೆ! ಈಗ ದನಗಳ ಸಗಣಿ ಗಂಜಲ ಹಿಡ್ಕಂಡವ್ರೆ!


ಇತ್ತೀಚಿಗೆ ಯಾರೋ ಸಾಕಿದ ದನ ಎಳ್ಕಂಬಂದು ಪೂಜೆ ಸಲ್ಲಿಸೋ ಜನರು ಗೋ-ಗ್ರಾಮ ಯಾತ್ರೆ ಅಂತ ಮಾಡ್ತಾ ಇದಾರೆ. ಅದೇನೋ ಗೋವುಗಳ, ಗ್ರಾಮಗಳ ಉದ್ಧಾರಕ್ಕಾಗಿ ಈ ಯಾತ್ರೆಯಂತೆ. ಹೀಗೆ ಮಾಡುವುದರಿಂದ ಅದೇಗೆ ಅವು ಉದ್ಧಾರ ಆಗ್ತವೆ ಅನ್ನೋದು ಗೊತ್ತಿಲ್ಲ, ಪ್ರಾಯಶಃ ಭಾರತೀಯ ಜನತಾ ಪಕ್ಷ ಸರ್ಕಾರದ ಅಭಿವೃದ್ಧಿ ಮಂತ್ರ ಪಠಣದಂತೆಯೇ ಇದೂ ಇರಬಹುದೇನೋ. ಇದನ್ನೇ ಪಾಂಡವಪುರ ತಾಲ್ಲೂಕಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಪುಟ್ಟಣ್ಣಯ್ಯನವರು ರಾಜ್ಯ ರೈತ ಸಂಘದ ಅಧ್ಯಕ್ಷರು, ಸಾಲದ್ದಕ್ಕೆ ತಾಲ್ಲೂಕಿನ ಮಾಜಿ ಶಾಸಕರು. ಅದೂ ಅಲ್ಲದೆ ಮನೇಲಿ ದನಕರ ಸಾಕಿ ಅನುಭವ ಇದ್ದೋರು ಅಂತಾನೋ ಏನೋ ಉದ್ಘಾಟನೆಗೆ ಕರೆದಿದ್ರು ಅಂತ ಕಾಣುತ್ತೆ. ಉದ್ಘಾಟನೆ ಅಂತ ಆದಮೇಲೆ ಭಾಷಣ ಅಂತ ಒಂದು ಇರಬೇಕಲ್ಲ. ಆಗ ದನಿನ ತೊಪ್ಪೆ, ಗಂಜಲ ಹಿಡ್ಕಂಡರು. ಅದು ಯಾವ ಪುಸ್ತಕದಲ್ಲಿ ವಿಷಯ ಸಂಗ್ರಹಿಸಿದ್ದಾರೋ ಏನೋ ಕಾಣೆ. 'ನಾಟಿ ಹಸುವಿನ ಗೋಮೂತ್ರ ಮತ್ತು ಸಗಣಿಯಿಂದ ನೂರ ಐವತ್ತಕ್ಕೂ ಹೆಚ್ಚು ಕಾಯಿಲೆಗಳು ವಾಸಿಯಾಗುತ್ತವೆ' ಎಂದು ಸಾರಿದರು!

ನಮ್ಮಂತ ಅಬ್ಬೇಪಾರಿಗಳಿಗೆ ನೂರ ಐವತ್ತು ಬ್ಯಾಡ, ಒಂದು ಐವತ್ತು ಕಾಯಿಲೆ ಹೆಸರು ಹೇಳು ಅಂದ್ರೂ ತಡಬಡಾಯಿಸ್ತೀವಿ. ಶ್ರೀಯುತರು ಕಾಯಿಲೆಗಳನ್ನು ತಲಾಷಿಸಿ ಚಿಕಿತ್ಸೆಯನ್ನೂ ಗುರುತಿಸಿದ್ದರು! ಅವರು ತಮ್ಮ ಹಿಂಬಾಲಕರಿಗೆ, ಸಂಬಂಧಿಗಳಿಗೆ, ಮನೆಮಂದಿಗೆ ಗುರುತಿಸಿರುವ ಕಾಯಿಲೆಗಳು ಬಂದರೆ 'ಗೋಮೂತ್ರ ಚಿಕಿತ್ಸೆ', 'ಸಗಣಿ ಚಿಕಿತ್ಸೆ'ಯನ್ನೇ ಶಿಫಾರಸ್ಸು ಮಾಡಬಹುದೇನೋ!

ಇಂತಹ ಚಿಕಿತ್ಸೆಗೆ 'ಪುಟ್ಟಣ್ಣಯ್ಯ ಚಿಕಿತ್ಸೆ' ಎಂದು ನಾಮಕರಣ ಮಾಡಬಹುದಾ ಅಂತ!

ಅಲ್ಲ Talking to the audience ಅಂತೇನೋ ಹೇಳ್ತಾರಲ್ಲ... ಅದು ಇದೇನಾ..... ●

'ಕ್ರಿಕೆಟ್ ಈ ದೇಶದ ಮತಧರ್ಮ, ಸಚಿನ್ ಕ್ರಿಕೆಟ್‌ನ ದೇವರು' ಎಂಬ ಉನ್ಮಾದ



ಡಿಸೆಂಬರ್ 2 ರ 'ಗೌರಿ ಲಂಕೇಶ್' ಅನೇಕ ಅತ್ಯುತ್ತಮ ಬರೆಹಗಳಿಂದ ಅದ್ಭುತವಾಗಿ ಮೂಡಿ ಬಂದಿದೆ. ಅವುಗಳಲ್ಲಿ ಕುಮಾರ್ ಬುರುಡಿಕಟ್ಟಿಯವರ 'ತೆಂಡೂಲ್ಕರ್ ಮನುಷ್ಯರಾಗಲಿ' ಲೇಖನ ತುಂಬಾ ವಿಶಿಷ್ಟವಾಗಿತ್ತು. ಸಾಮಾಜಿಕ ಹೊಣೆಗಾರಿಕೆಯ ಪ್ರಶ್ನೆ ಬಂದಾಗ ಈ 'ಕ್ರಿಕೆಟ್‌ನ ದೇವರು' ಅದೆಂತಹ ಸ್ವಾರ್ಥಿ ಎನ್ನುವತ್ತ ಅವರು ಬೆಳಕು ಚೆಲ್ಲಿದ್ದಾರೆ. ದೇಶದ ಮಾಧ್ಯಮಗಳೆಲ್ಲ ಆತನನ್ನು ಹಾಡಿಹೊಗಳುತ್ತಾ, ಆತನ ಹುಳುಕುಗಳ ಬಗ್ಗೆ ಮಾತನಾಡುವುದೂ ಮಹಾಪರಾಧ ಎನ್ನುವಂತೆ ವರ್ತಿಸುತ್ತಿರುವಾಗ ಈ ದಿಟ್ಟತನದ ಲೇಖನ ಪ್ರಕಟಿಸಿದ ಪತ್ರಿಕೆಗೆ ಅಭಿನಂದನೆಗಳು ಸಲ್ಲಲೇಬೇಕು.

ಕ್ರಿಕೆಟ್‌ನ ವಿಚಾರದಲ್ಲಿ ದೇಶದ ಬಹುತೇಕ ಮಾಧ್ಯಮಗಳು ಕೇವಲ ವಾಣಿಜ್ಯ ಹಿತಾಸಕ್ತಿಗೆ ಮಣೆಹಾಕುವ ಭರದಲ್ಲಿ ಉದ್ದೇಶಪೂರ್ವಕವಾಗಿಯೇ ಸತ್ಯವನ್ನು ಮರೆಮಾಚುವ ಕೆಲಸ ಮಾಡುತ್ತಿವೆ. 'ಕ್ರಿಕೆಟ್ ಈ ದೇಶದ ಮತಧರ್ಮ, ಸಚಿನ್ ಕ್ರಿಕೆಟ್‌ನ ದೇವರು' ಎಂಬ ಉನ್ಮಾದಗಳನ್ನು ಹಬ್ಬಿಸುವ ಮಟ್ಟಕ್ಕೂ ಅವು ಹೋಗಿವೆಯೆಂದರೆ ಮಾಧ್ಯಮದ ಅಧಃಪತನವನ್ನು ನಾವು ಅಂದಾಜಿಸಬಹುದು.

ಸಚಿನ್ ಆದಿಯಾಗಿ ಈ ಕ್ರಿಕೆಟಿಗರು ಮಾಡುವ ಸಣ್ಣಪುಟ್ಟ ಸಾಧನೆಗಳನ್ನೆಲ್ಲ ವಿಶ್ವದಾಖಲೆಯೆಂದೇ ಅವು ವೈಭವೀಕರಿಸುತ್ತವೆ. ಅದು ವಾಸ್ತವದಲ್ಲಿ ಕ್ರಿಕೆಟ್ ವಿಶ್ವದ ದಾಖಲೆಯೇ ಹೊರತು ವಿಶ್ವ ದಾಖಲೆ ಆಗುವುದು ಹೇಗೆ? ಕ್ರಿಕೆಟನ್ನು ವ್ಯಾಪಕವಾಗಿ ಆಡುವುದು ಕೇವಲ 10 ದೇಶಗಳು. ಈ ಅರ್ಥದಲ್ಲಿ ಕ್ರಿಕೆಟ್‌ನ ವಿಶ್ವ ತೀರಾ ಚಿಕ್ಕದು. ಆದರೂ ಇಲ್ಲಿ ನಡೆಯುವ ದಾಖಲೆಗಳನ್ನು ಅತಿಮಾನವ ಸಾಧನೆಯೆಂಬಂತೆ ಈ ಮಾಧ್ಯಮಗಳು ಬಿಂಬಿಸುತ್ತವೆ.

ಹೊಗಳಿಕೆ ತೆಗಳಿಕೆ

ಕ್ರಿಕೆಟ್‌ನ ಮಟ್ಟಿಗೆ ಸಚಿನ್ ಓರ್ವ ದೈತ್ಯ ಪ್ರತಿಭೆ ಎನ್ನುವುದರಲ್ಲಿ ಅನುಮಾನವಿಲ್ಲ, ಇದು ಆತನ ಒಂದು ಮುಖ. ಆತ ಹೊಣೆಗೇಡಿ ಮತ್ತು ಮಹಾ ಸ್ವಾರ್ಥಿ ಎಂಬುದೂ ಆತನ ಇನ್ನೊಂದು ಮುಖ. ಆದರೆ ಮಾಧ್ಯಮಗಳು ಉದ್ದೇಶಪೂರ್ವಕವಾಗಿ ಆತನ ಇನ್ನೊಂದು ಮುಖವನ್ನು ಮರೆಮಾಚುತ್ತವೆ. ಇಪ್ಪತ್ತು ವರ್ಷ ಆತ ಕ್ರಿಕೆಟ್ ಆಡಿದ್ದನ್ನು ಆತನ ಮಹಾ ಸಾಧನೆ ಎಂದು ಹೇಳಿ ಆತನನ್ನು ಅಟ್ಟಕ್ಕೇರಿಸಲಾಗುತ್ತದೆ. ಸರಿ, ಇದರಿಂದ ಕ್ರಿಕೆಟಿಗಾಗಲಿ ಭಾರತ ತಂಡಕ್ಕಾಗಲಿ ಆದ ಲಾಭವೇನು? ಇಪ್ಪತ್ತು ವರ್ಷಗಳ ಅನುಭವಿ ಆಟಗಾರ ನಾಯಕನಾಗಿ ತಂಡವನ್ನು ಮುನ್ನಡೆಸಬೇಡವೇ? ಆದರೆ ಆತ ಆ ಹೊಣೆ ಹೊರುವುದಿಲ್ಲ. ಯಾಕೆಂದರೆ, ನಾಯಕನ ಪಟ್ಟ ಅಲಂಕರಿಸಿದ ಕೂಡಲೇ ಎರಡು ತೊಂದರೆಗಳು ಎದುರಾಗುತ್ತವೆ. ಮೊದಲನೆಯದಾಗಿ, ತಂಡ ಒಂದು ವೇಳೆ ಸೋತರೆ ಅದರ ಹೊಣೆಯನ್ನು ಹೊರಬೇಕಾಗುತ್ತದೆ ಮತ್ತು ಅದನ್ನು ಹಿಂಬಾಲಿಸಿ ಬರುವ ಟೀಕೆಯನ್ನೂ ಎದುರಿಸಬೇಕಾಗುತ್ತದೆ. ಎರಡನೆಯದಾಗಿ, ವೈಯಕ್ತಿಕ ಸಾಧನೆ, ದಾಖಲೆ ಮಾಡಲು ಕಷ್ಟವಾಗುತ್ತದೆ. ಹಾಗಾಗಿಯೇ ಬುದ್ಧಿವಂತ ಸಚಿನ್ ನಾಯಕಪಟ್ಟ ನಿರಾಕರಿಸುತ್ತಾನೆ.

ದೇಶದಲ್ಲಿ ಅತ್ಯಂತ ಕಳವಳಕಾರಿ ಘಟನೆಗಳು ನಡೆಯುತ್ತಿರುವಾಗ ಸಚಿನ್ ಜನಪರ ಹೋರಾಟಗಳಿಗೆ ಬೆಂಬಲ ನೀಡುವ ಮಾತಂತಿರಲಿ, ಈ ದೇಶದ ಜಾಗೃತ ನಾಗರಿಕನೊಬ್ಬನ ನೆಲೆಯಲ್ಲಿ ಕೂಡಾ ಆತ ಒಂದು ಹೇಳಿಕೆಯನ್ನೂ ನೀಡುವುದಿಲ್ಲ (ಅಮೀರ್ ಖಾನ್, ಶಬನಾ ಆಜ್ಮಿ, ನಂದಿತಾ ದಾಸ್ ಮೊದಲಾದವರು ಈ ವಿಚಾರದಲ್ಲಿ ನಿಜಕ್ಕೂ ದಿಟ್ಟರು). ಇಂತಹ ಚಾಣಾಕ್ಷನನ್ನು ಗವಾಸ್ಕರ್‌ಗೆ ಹೋಲಿಸುವುದಾದರೂ ಹೇಗೆ?

ಅಂದರೆ, ಸಚಿನ್‌ಗೆ ಕ್ರಿಕೆಟ್, ದೇಶ, ದೇಶಪ್ರೇಮ ಎಲ್ಲಕ್ಕಿಂತಲೂ ಮುಖ್ಯ ವೈಯಕ್ತಿಕ ಸಾಧನೆ ಮತ್ತು ಹೇರಳ ಹಣ. ಇಷ್ಟು ವರ್ಷ ಆಡಿದ ಆತನಿಗೆ ಕ್ರಿಕೆಟಿನಿಂದ ಇನ್ನು ಆಗಬೇಕಿರುವುದು ಏನೂ ಇಲ್ಲ. ಆದರೂ ಆತ ಗೂಟ ಹೊಡೆದುಕೊಂಡು ಅಲ್ಲಿರುವುದಕ್ಕೆ ಇದೇ ಕಾರಣ. ಆತನ ಈ ಸ್ವಾರ್ಥದಿಂದಾಗಿ ಅದೆಷ್ಟೋ ಪ್ರತಿಭೆಗಳು ಅವಕಾಶಕ್ಕಾಗಿ ಕಾಯ್ದು ಕಾಯ್ದು ಮುದಿಯಾಗಿ ಹೋದ ಬಗ್ಗೆ ಯಾವ ಮಾಧ್ಯಮಗಳೂ ಚಕಾರವೆತ್ತುವುದಿಲ್ಲ. ಇಂತಹ ಸಚಿನ್‌ಗೆ ಭಾರತರತ್ನ ಕೊಡಬೇಕೆಂದು ಲೋಕಸಭೆಯಲ್ಲಿ ರಾಜಕೀಯ ಪಕ್ಷವೊಂದು ಹಿಂದೊಮ್ಮೆ ಆಗ್ರಹಿಸಿತ್ತು!

-ಶ್ರೀನಿವಾಸ ಕಾರ್ಕಳ, ಮಂಗಳೂರು

(ನಿಮ್ಮ ಅನಿಸಿಕೆ ಅಭಿಪ್ರಾಯಗಳನ್ನು ನುಡಿ/ಬರಹದಲ್ಲಿ lankesh70@rediffmail.comಗೆ ಕಳಿಸಬಹುದು)

ಸಾಕು ನಿಲ್ಲಿಸ್ರಮ್ಮಾ ನಿಮ್ಮ ಸಾಂತ್ವನ



'ಬದುಕು ಜಟಕಾ ಬಂಡಿ', 'ಇದು ಕಥೆಯಲ್ಲ ...ವನ' ಮತ್ತು 'ಇದು ಯಾರು ಬರೆದ ಕಥೆಯೋ' ಈ ಮೂರು ರಿಯಾಲಿಟಿ ಶೋಗಳು ಈಗ ...ಟದ ವಿವಿಧ ಚಾನೆಲ್‌ಗಳಲ್ಲಿ ಪ್ರಸಾರವಾಗುತ್ತಿವೆ. ರಿಯಾಲಿಟಿ ಶೋ ಹೆಸರಿನಲ್ಲಿ ಟೀವಿ ...ನೆಲ್‌ನವರು ಮತ್ತು ಮಾಜಿ ನಾಯಕಿಯರು ...ಂದ ಹೃದಯಗಳಿಗೆ ಸಾಂತ್ವನ ಹೇಳುವ ಬದಲಾಗಿ ...ವೊಮ್ಮೆ ಅವರನ್ನು ಹೆದರಿಸಿ, ಬೆದರಿಸಿ ಮತ್ತೆ ...ವೊಮ್ಮೆ ಗದರಿಸಿ ಟಿಆರ್‌ಪಿ ರೇಟಿಂಗ್‌ಗಳನ್ನು ...ಸಿಕೊಳ್ಳುತ್ತಿದ್ದಾರೆ.

ಚಿತ್ರರಂಗದ ಹಿರಿಯತಾರೆ ಮತ್ತು ಫಿಲಂ ...ಬರ್‌ನ ಅಧ್ಯಕ್ಷೆ ಜಯಮಾಲಾ ಜೊತೆ ಈ ...ಯವನ್ನು ಪ್ರಸ್ತಾಪಿಸಿದಾಗ ಅವರು "ಇಂಥ ...ರ್ಯಕ್ರಮಗಳು ಟೀವಿಯಲ್ಲಿ ಪ್ರಸಾರವಾಗೋದು ಸರಿಯಲ್ಲ, ಅಲ್ಲಿ ನಮ್ಮ ಉದ್ಯಮದ ...ಯರು ನಿರೂಪಕಿಯರಾಗಿ ಕೆಲಸ ಮಾಡದೇ ಇದ್ದಲ್ಲಿ ನಾನು ಆ ಕಾರ್ಯಕ್ರಮಗಳ ...ಪದೋಷದ ಬಗ್ಗೆ ಗಂಟೆಗಟ್ಟಲೆ ಮಾತಾಡುತ್ತಿದ್ದೆ" ಎಂದು ಮುಗುಮ್ಮಾಗಿ ಉತ್ತರಿಸಿದರು.

ವಾಸ್ತವವಾಗಿ ಈ ಕಾರ್ಯಕ್ರಮಗಳಲ್ಲಿ ಪ್ರಜ್ಞಾವಂತರಾಗಲಿ, ವಿದ್ಯಾವಂತರಾಗಲಿ ...ಗಮನಿಸುತ್ತಿಲ್ಲ, ಅವರು ಈ ಕಾರ್ಯಕ್ರಮಗಳನ್ನು ವೀಕ್ಷಿಸಿ ಮೆಚ್ಚುತ್ತಲೂ ಇಲ್ಲ, ಬದಲಾಗಿ ...ಬಣ್ಣದ ರೇಷ್ಮೆ ಸೀರೆಗಳು, ಮುಖಕ್ಕೆ ಒಂದಿಂಚು ಪೌಡರ್, ತುಟಿಗೆ ಲಿಪ್‌ಸ್ಟಿಕ್ ...ಮಕೊಂಡು ಮದುವೆಮನೆಗೆ ಬಂದ ಮದುವಣಗಿತ್ತಿಯರ ಹಾಗೆ ಕೂರುವ ತಾರಾ, ...ವಿಕಾ ಮತ್ತು ಲಕ್ಷ್ಮಿಯಂತಹ ಹಿರಿಯ ಅಭಿನೇತ್ರಿಯರ ಮುಂದೆ ಹಾಜರಾಗುವ ...ದವರೆಲ್ಲಾ ನಮ್ಮ ಸಮಾಜದ ಅತ್ಯಂತ ...ರದ ಕೂಲಿ ಕಾರ್ಮಿಕರು, ಬಡಪಾಯಿಗಳು ...ತಿ ಹೆಚ್ಚಿನ ಸಂದರ್ಭದಲ್ಲಿ ...ಧನಂಬಿಕೆ ಮತ್ತು ಅನೈತಿಕ ಸಂಬಂಧಗಳಿಗೆ ...ಯಾದವರು. ಅಂದರೆ, ಆರ್ಥಿಕವಾಗಿ ಮತ್ತು ...ರಾಜಿಕವಾಗಿ ಅತಿ ಹಿಂದುಳಿದ ವರ್ಗದವರ ...ಸನ ಮತ್ತು ಅನೈತಿಕ ಸಂಬಂಧಗಳನ್ನು ...ಹೀರು ಮಾಡಿ ವ್ಯಾಪಾರ ಮಾಡುವುದು ...ಲ್‌ಗಳ ಕಸುಬಾಗಿದೆ. ಹೋಗಲಿ, ಕನಿಷ್ಠ ...ತಹ ಕುಟುಂಬಗಳಿಗೆ ಇವರೇನು ಸಾಂತ್ವನದ ...ಮಾಡುತ್ತಾರೆಯೇ? ಇಂತಹ ...ರ್ಯಕ್ರಮಗಳಲ್ಲಿ ನಿರೂಪಕಿಯರು ...ಯಾಧೀಶರ ಸ್ಥಾನದಲ್ಲಿ ಕುಳಿತುಕೊಂಡಷ್ಟೇ ...ರಾಗುತ್ತಾರೆ. ಆದರೆ ತಾರಾ ಮತ್ತು ...ವಿಕಾ ಅನೇಕ ಬಾರಿ ಖಾಕಿಧಾರಿ ...ಸರಂತೆ ಜನರಿಗೆ ರೋಷ ತೋರಿಸುತ್ತಾರೆ (ಅಥವಾ ಹಾಗೆ ನಟಿಸುತ್ತಾರೆ.) ಇದೆಲ್ಲಾ ...ವೇ?



...ನ್ನು ಈ ಚಾನೆಲ್‌ಗಳು ಕನಿಷ್ಠ ಬಡವರ, ಶೋಷಿತರ ಬಗ್ಗೆ ಕಾರ್ಯಕ್ರಮ ಮಾಡಿದಾಗ ...ಂದ ಬರುವ ಲಕ್ಷಾಂತರ ರೂಪಾಯಿ ಸಂಭಾವನೆಯಲ್ಲಿ ಒಂದಿಷ್ಟು ಭಾಗವನ್ನಾದರೂ ಆ ...ದ ಹೃದಯಗಳಿಗೆ ಕೊಡುವ ಸಜ್ಜನಿಕೆಯನ್ನು ತೋರಿಸಬೇಕಿತ್ತು, ಜನರ ಕೌಟುಂಬಿಕ ...ಗಳು ಕೊಳೆತು ನಾರಿದಷ್ಟೂ ಚಾನೆಲ್‌ನವರಿಗೆ ಹೆಚ್ಚು ಲಾಭ ಮತ್ತು ಸಂತೋಷ. ...ದಲೇ ಸಮಸ್ಯೆಗಳನ್ನು ಎದುರಿಸುತ್ತಿರುವ ಜನರನ್ನು ಹುಡುಕಲು ಏಜೆಂಟ್‌ಗಳನ್ನು ಕೂಡಾ ...ನವರು ಬಿಟ್ಟಿದ್ದಾರೆ. ಹೀಗೆ ಅತ್ಯಂತ ನಿಕೃಷ್ಟ ಜನರ ಕಥೆ ಪ್ರಸಾರಗೊಂಡರೆ ಮಾತ್ರ ಅವರ ...ಕ್ರಮದ ಟಿಆರ್‌ಪಿ ಏರುತ್ತದೆ ಎಂಬುದು ಅವರಿಗೆ ಗೊತ್ತು.

...ಂದಹಾಗೆ, ನಮ್ಮ ಸಮಾಜದ ವಿದ್ಯಾವಂತರು, ...ವರ್ಗದ ಜನರು ಯಾರೂ ಇಂತಹ ...ಕ್ರಮಕ್ಕೆ ಅತಿಥಿಗಳಾಗಿ ಸಿಗುವುದೇ ಇಲ್ಲವೇ? ... ಈ ವರ್ಗದ ಜನರೆಲ್ಲಾ ಅತ್ಯಂತ ಸಂತೋಷ ...ಆತ್ಮತೃಪ್ತಿಯಿಂದ ಬದುಕುತ್ತಿದ್ದಾರೆಂದು ನಾವು ...ಬೇಕೆ?



...ಾಗೆ ನೋಡಿದರೆ, ನಮ್ಮ ಸಿನಿಮಾ ಉದ್ಯಮ ...ಷ್ಟು ಜನ ಡೈವೋರ್ಸಿಗಳು ಸಿಗುವುದಿಲ್ಲ? ... ಕೌಟುಂಬಿಕ ಕಲಹದಿಂದಾಗಿ ಅತ್ಯಂತ ಸಂದಿಗ್ಧ ...ತಿಯಲ್ಲಿರುವ ಎಷ್ಟು ಕಲಾವಿದರು ನಮ್ಮ ... ಇಲ್ಲ? ಅಂತಹ ನಾಯಕ ನಾಯಕಿಯರನ್ನು ...ಡು ಈ ಚಾನೆಲ್ ಮತ್ತದರ ನಿರೂಪಕಿಯರು ...ಕ್ರಮ ನಡೆಸಿದರೆ, ನಿಜಕ್ಕೂ ಅದು ಅನೇಕ ...ವರನ್ನು ಪರೋಕ್ಷವಾಗಿ ಸಂತೈಸಿದಂತಾಗುತ್ತದೆ. ...ಜನರಿಗೆ ಆ ಕಾಲದಲ್ಲಿ ಪುಟ್ಟಣ್ಣ ಕಣಗಾಲ್ ಮತ್ತು ಆರತಿಯ ಪ್ರೇಮ ಪ್ರಸಂಗದ ...ದಲ್ಲಿ ಪುಟ್ಟಣ್ಣನವರ ಪತ್ನಿ ಯಾವ ಮನೋಸ್ಥಿತಿಯಲ್ಲಿದ್ದರು ಎಂಬುದು ಸಾಮಾನ್ಯ ...ಗೊತ್ತೇ ಇಲ್ಲ, ಹಾಗೆಯೇ ನಟ ರಾಮಕೃಷ್ಣ ಅವರ ಮಗು ಅಪಹರಣ ಪ್ರಕರಣ ಆ ...ಲ್ಲಿ ದಿನಪತ್ರಿಕೆಗಳ ಮುಖಪುಟಕ್ಕೆ ಆಹಾರವಾಗಿತ್ತು, ಆದರೆ ಜನ ಈಗ ಅದನ್ನು ...ದ್ದಾರೆ. ಹೋಗಲಿ ಕೋಟೇಶ್ವರ ರಾಧಿಕಾಳನ್ನಾದರೂ ಕರೆತರಬಹುದಲ್ಲವೇ?

...ತಹ ನೂರಾರು ನೊಂದ ಜೀವಗಳು ನಮ್ಮ ಬಣ್ಣದ ಲೋಕದಲ್ಲೇ ಇವೆ. ಅದು ಬಿಟ್ಟು ...ಮಂತರ ಕ್ಷುಲ್ಲಕ ಜಗಳ, ಅನೈತಿಕ ಸಂಬಂಧ, ಬೀದಿರಂಪವನ್ನೇ ಒಂದು ರಾಷ್ಟ್ರೀಯ ...ದ ರೀತಿ ಬಿಂಬಿಸುವ ಇವರ ವ್ಯಾಪಾರೀ ಮನೋಭಾವವನ್ನು ಜನರೇ ಪ್ರತಿಭಟಿಸಬೇಕಿದೆ; ... ಢೋಂಗಿ ಕಾರ್ಯಕ್ರಮಗಳನ್ನು ಜನರೇ ಬಹಿಷ್ಕಾರ ಮಾಡಬೇಕಿದೆ.

● ಶೆಣೈ

ಹೃದಯಶಿವನ ಕನ್ನಡ ಡಿಂಡಿಮ

ನಾಲ್ಕರ ಮಗ್ಗಿ ಹೇಳಲೂ ಆ ಹುಡುಗ ತಿಣುಕಾಡುತ್ತಿದ್ದನಾದರೂ ಕನ್ನಡದ ಬಗ್ಗೆ ಮಾತ್ರ ಆತನಲ್ಲಿ ಇನ್ನಿಲ್ಲದಷ್ಟು ಆಸಕ್ತಿ. ಆ ಕಾರಣದಿಂದಲೇ ಆತ ಐದನೇ ಕ್ಲಾಸಿನಲ್ಲಿದ್ದಾಗಲೇ ರಾಷ್ಟ್ರಕವಿ ಕುವೆಂಪು ಅವರ 'ರಕ್ತಾಕ್ಷಿ' ನಾಟಕವನ್ನು ಓದಿ, ಅದರ ಒಂದೊಂದು ಪಾತ್ರವನ್ನೂ ಅರೆದು ಕುಡಿದಿದ್ದ. ಆತ ಒಂಭತ್ತನೆ ಕ್ಲಾಸಿಗೆ ಬರುವಷ್ಟರಲ್ಲಿ ತಾನೇ ಒಂದು ನಾಟಕ ರಚಿಸಿ ಅದಕ್ಕೆ 'ಅಡವಿಯ ಬಾಲೆಯರು' ಎಂದು ಹೆಸರಿಟ್ಟಿದ್ದ...

ಹೀಗೆ ಸಣ್ಣ ವಯಸ್ಸಿಗೇ ಅಕ್ಷರ ಗೀಳಿಗೆ ಬಿದ್ದ ಹುಡುಗ ಬೇರೆ ಯಾರೂ ಅಲ್ಲ, ಇವತ್ತಿನ ಬೇಡಿಕೆಯ ಚಿತ್ರ ಸಾಹಿತಿ ಹೃದಯಶಿವ.

ಕನಕಪುರ ಜಿಲ್ಲೆಯ ಕೆಬರೆ ಎಂಬ ಸಣ್ಣ ಹಳ್ಳಿಯಲ್ಲಿ ಹುಟ್ಟಿ ಬೆಳೆದ ಹೃದಯಶಿವನ ಮೂಲ ಹೆಸರು ಕೆ.ಎಂ. ಶಿವಣ್ಣ. ಈತನ ಕನ್ನಡಾಭಿಮಾನ, ಬರವಣಿಗೆ, ಅಕ್ಷರ ವ್ಯಾಮೋಹ ಮತ್ತು ಕುವೆಂಪು ಅವರ ಮೇಲಿನ ಅಭಿಮಾನವನ್ನು ಕಂಡು ಶಿವಣ್ಣನ ಶಾಲಾ ಮೇಷ್ಟ್ರು ಈತನಿಗೆ 'ಹೃದಯಶಿವ' ಎಂಬ ಕಾವ್ಯನಾಮವನ್ನು ಇಟ್ಟರಂತೆ.

ಮೊದಲಿನಿಂದಲೂ ಕವಿತೆಗಳನ್ನು ಬರೆಯುತ್ತಿದ್ದ ಹೃದಯಶಿವ ಕಾಲೇಜು ಓದಲು ಬೆಂಗಳೂರು ಸೇರಿದ ಮೇಲೆ ಆತನಲ್ಲಿ 'ಹೇಗಾದರು ಮಾಡಿ ಸಿನಿಮಾಗೆ ಹಾಡು ಬರೀಬೇಕು' ಎಂಬ ಹೊಸ ಆಸೆ ಶುರುವಾಯಿತಂತೆ. ಸಿನಿಮಾ ಗೀಳು ಹತ್ತಿಸಿಕೊಂಡ ಎಲ್ಲರಂತೆ ಹೃದಯಶಿವ ಕೂಡ ಒಂದು ಕಾಲದಲ್ಲಿ ಗಾಂಧೀನಗರವನ್ನು ಅಲೆದವನೇ. ಗಾಂಧಿನಗರದಲ್ಲೆಲ್ಲೂ ಅವಕಾಶ ಗಿಟ್ಟದಿದ್ದಾಗ ಗಾಂಧಿಬಜಾರಿನ ಕವಿತಾ ಲಂಕೇಶರ ಕಚೇರಿಗೆ ಅಲೆಯಲು ಶುರು ಮಾಡಿದನಂತೆ. ಸಮಯದ ಹೊಂದಾಣಿಕೆ ಸರಿಯಿಲ್ಲದಿದ್ದರಿಂದಲೋ ಏನೋ ಕವಿತಾ ಮೇಡಂರ ದರ್ಶನ ಭಾಗ್ಯ ಹೃದಯಶಿವನಿಗೆ ಸಿಕ್ಕಲಿಲ್ಲವಂತೆ. ಇದರಿಂದ ಬೇಸತ್ತ ಆತ ಗಾಂಧಿ ಬಜಾರಿನಿಂದ ಇನ್ನೂ ಸ್ವಲ್ಪ ಮುಂದೆ ಹೋಗಿ ಪದ್ಮನಾಭನಗರದ 'ಹಾಯ್ ಬೆಂಗಳೂರ್' ಕಚೇರಿ ಮುಂದೆ ನಿಂತು 'ಎಲ್ಲಾದರೂ ಅವಕಾಶ ಕೊಡ್ಸಿ' ಎಂದು ಕೇಳಿದನಂತೆ. ಆದರೆ ಪದ್ಮನಾಭನಗರಕ್ಕೆ ಅದೆಷ್ಟು ದಿನ ಅಲೆದರೂ 'ಬೆಂಗಳೂರ್' ಬಾಗಿಲಲ್ಲಿ ನಿಂತಿದ್ದ ದ್ವಾರಪಾಲಕ ಮಾತ್ರ ಯಾವತ್ತಿಗೂ ಒಳಪ್ರವೇಶಿಸಲು ಅವಕಾಶವನ್ನೇ ನೀಡಿಲ್ಲವಂತೆ...

ಕಡೆಗೆ ಪತ್ರಕರ್ತನಾಗಿ ಒಂದಿಷ್ಟು ದಿನ ಕೆಲಸ ಮಾಡಿದರೆ 'ಹಾಡು ಬರೆಯುವ ಛಾನ್ಸು' ಸಿಗಬಹುದು ಎಂದು ಲೆಕ್ಕ ಹಾಕಿ ಸಣ್ಣ ಪುಟ್ಟ ಪತ್ರಿಕೆಗಳಲ್ಲೆಲ್ಲಾ ವರದಿಗಾರನಾಗಿ ಕೆಲಸ ಮಾಡಿದ. ಅದರಿಂದ ಏನೂ ಗಿಟ್ಟದೇ ಹೋದಾಗ ಹೃದಯಶಿವ ಸಂಗೀತ ನಿರ್ದೇಶಕ ಗುರುಕಿರಣ್ ಅವರ ಬೆನ್ನು ಹತ್ತಿದ. ಸತತ ಮೂರು ವರ್ಷ ಅಲೆದಾಡಿಸಿದ ಗುರುಕಿರಣ್ ಕಡೆಗೂ ಒಂದು ದಿನ ಹೃದಯಶಿವನನ್ನು ಕರೆದು 'ನಮ್ಮಣ್ಣ' ಚಿತ್ರಕ್ಕೆ ಹಾಡು ಬರೆಯಲು ಟ್ಯೂನ್ ಕೊಟ್ಟರಂತೆ. ಇದ್ದಕ್ಕಿದ್ದ ಹಾಗೆ ಬಂದ ಅವಕಾಶದಿಂದ ವಿಚಲಿತನಾದ ಹೃದಯಶಿವನಿಗೆ ಗುರುಕಿರಣ್ ಕೊಟ್ಟ ಟ್ಯೂನ್‌ನ ಮೀಟರ್‌ಗೆ ಹೊಂದುವಂತೆ ಪದಗಳನ್ನು ಪೋಣಿಸಲು ಸಾಧ್ಯವಾಗದೇ ಫೇಲ್ಯೂರ್ ಆಗಿಬಿಟ್ಟನಂತೆ. ಸಿಕ್ಕ ಮೊದಲ ಅವಕಾಶವೇ ಹೀಗಾಗಿಹೋಯ್ತಲ್ಲ ಅನ್ನುವಷ್ಟರಲ್ಲಿ ಅದೇ ಗುರುಕಿರಣ್ ಮತ್ತೆ ಕರೆದು 'ಮಂಡ್ಯ' ಸಿನಿಮಾಕ್ಕೆ ಹಾಡು ಬರೆಯಲು ಆಫರ್ ಕೊಟ್ಟರಂತೆ. 'ಈ ಬಾರಿ ಮಿಸ್ ಮಾಡಿಕೊಂಡರೆ ಇನ್ನೆಂದೂ ಇಂಥ ಅವಕಾಶ ಸಿಗುವುದಿಲ್ಲ' ಎನ್ನುವುದನ್ನು ಮನಗಂಡ ಹೃದಯಶಿವ ಗುರುಕಿರಣ್ ನೀಡಿದ್ದ ಟ್ಯೂನ್‌ಗೆ ಕೆಲವೇ ನಿಮಿಷಗಳಲ್ಲಿ 'ನಲ್ಲ ನಲ್ಲ ಮಂಡ್ಯದ ಬೆಲ್ಲ...' ಎಂಬ ಹಾಡು ಬರೆದೇ ಬಿಟ್ಟ. ಹೀಗೆ ಚಿತ್ರಗೀತೆ ಬರೆಯಲು ಆರಂಭಿಸಿದ ಹೃದಯಶಿವ ಬರೀ ನಾಲ್ಕು ವರ್ಷಗಳಲ್ಲಿ 95 ಸಿನಿಮಾಗಳಿಗೆ 180ಕ್ಕೂ ಹೆಚ್ಚು ಹಾಡುಗಳನ್ನು ಬರೆದಿದ್ದಾನೆ.

'ಮುಂಗಾರು ಮಳೆ' ಚಿತ್ರದ 'ಸುಬ್ಬೀ ಸುಬ್ಬಾಲೀ...' ಮತ್ತು 'ಇವನು ಗೆಳೆಯನಲ್ಲ...' ಹಾಡುಗಳು ಹಿಟ್ ಆದ ನಂತರವಂತೂ ಹೃದಯಶಿವನ ನಸೀಬೇ ಬದಲಾಯಿತು. ಹಿಂದೆ ಈತನಿಗೆ ಹಾಡು ಬರೆಯುವ ಅವಕಾಶ ನೀಡಲು ಹಿಂದುಮುಂದು ನೋಡುತ್ತಿದ್ದರೋ ಇಂದು ಅವರೇ ಈತನ ಹಿಂದೆ ದುಂಬಾಲು ಬೀಳುತ್ತಿದ್ದಾರೆ.


'ಸವಿಸವಿ ನೆನಪು' ಚಿತ್ರಕ್ಕಾಗಿ ಹೃದಯಶಿವ ಬರೆದ 'ಸಾವೇ ಇರದ ಸವಿನೆನಪು..' ಹಾಡಿಗೆ ಎಸ್.ಪಿ. ಬಾಲಸುಬ್ರಮಣ್ಯಂ ದನಿ ನೀಡಿದರು. ಆ ಹಾಡಿಗೆಂದು ಎಸ್ಪಿಗೆ ರಾಜ್ಯ ಪ್ರಶಸ್ತಿ ಕೂಡಾ ಲಭಿಸಿತು. 'ಗಾಳಿಪಟ' ಚಿತ್ರದ 'ಕವಿತೆ ಕವಿತೆ ನೀನೇಕೆ ಪದಗಳಲೀ ಕುಳಿತೆ..', 'ಸಂತ'ದ 'ಢವಢವ ಢವ ಹೃದಯ ಬಡಿತ ಏರುಪೇರು...', 'ಬಡುಬಡುಬಡು ಕದ್ದು ಕದ್ದು ನೋಡೋದನ್ನ...', 'ಸತ್ಯ ಇನ್ ಲವ್' ಚಿತ್ರದ ಟೈಟಲ್ ಸಾಂಗು.... ಹೀಗೆ ಹೃದಯಶಿವನ ಲೇಖನಿಯಿಂದ ಮೂಡಿಬಂದ ಸರಳ ಸಾಲುಗಳು ಯುವಕರ ನಾಲಗೆಯಲ್ಲಿ ಕುಣಿದಾಡಿವೆ...

ಕನ್ನಡದೊಂದಿಗೆ ತಮಿಳು, ಮಲಯಾಳಂ ಮತ್ತು ಹಿಂದಿ ಭಾಷೆಗಳ ಓದು, ಬರೆಹವನ್ನು ಕಲಿತಿರುವ ಹೃದಯಶಿವ ಈಗ ಹಿಂದಿ ಚಿತ್ರರಂಗಕ್ಕೂ ಕಾಲಿಟ್ಟು ಮೂರು ಹಾಡುಗಳನ್ನು ಬರೆದು ಬಂದಿದ್ದಾನೆ. ಅಲ್ಲದೇ ಮಲಯಾಳಂ ಚಿತ್ರವೊಂದನ್ನು ನಿರ್ದೇಶಿಸುವ ತಯಾರಿಯಲ್ಲಿದ್ದಾನೆ. ಚಿತ್ರರಂಗದ ಸಹವಾಸಕ್ಕೆ ಬಿದ್ದ ನಂತರ ಜನ ಸಾಹಿತ್ಯದಿಂದ ದೂರವಾಗುತ್ತಾರೆ. ಆದರೆ ಇದೆಲ್ಲದರ ನಡುವೆಯೂ ಹೃದಯಶಿವ 'ಕನ್ನಡಿ ಮತ್ತು ಹುಡುಗಿ' ಎಂಬ ಕವಿತೆಗಳ ಸಂಕಲನವನ್ನೂ ಹೊರತರುತ್ತಿದ್ದಾನೆ.

ಕನಕಪುರದ ಹುಡುಗ ಹೃದಯಶಿವ ಬಾರಿಸುತ್ತಿರುವ ಕನ್ನಡ ಡಿಂಡಿಮ ಹೀಗೇ ಮುಂದುವರೆಯಲಿ.

●ಅರುಣ್





ಪುರಾಣಿಕನ ಗುರುಕುಲ!

ಮೈಥಾಲಜಿಕಲ್ ಚಿತ್ರಗಳ ನಿರ್ದೇಶನದಿಂದಲೇ ಖ್ಯಾತರಾಗಿದ್ದ ಜಿ.ವಿ. ಅಯ್ಯರ್ ತೀರಿಕೊಂಡ ಮೇಲೆ ಆ ಸ್ಥಾನವನ್ನು ನಿರ್ದೇಶಕ ಸುನಿಲ್ ಪುರಾಣಿಕ್ ಅಲಂಕರಿಸಿರುವಂತಿದೆ.

'ಶಿವಲೀಲಾಮೃತ'ದಂತಹ ಪೌರಾಣಿಕ ಧಾರಾವಾಹಿಗಳನ್ನು ನಿರ್ದೇಶಿಸುತ್ತಿದ್ದ ಸುನಿಲ್ ಪುರಾಣಿಕ್ ಈಗ ಬಡ್ತಿ ಪಡೆದು ಅದೇ ಕೆಲಸವನ್ನು ಹಿರಿತೆರೆಗೆ ಶಿಫ್ಟ್ ಮಾಡಿಕೊಂಡಿದ್ದಾರೆ.

'ಮಹಾಭಾರತ'ವನ್ನು ಆಧರಿಸಿ ಈಗಾಗಲೇ ಹಲವಾರು ಸಿನಿಮಾ, ಸೀರಿಯಲ್ಲುಗಳು ಬಂದುಹೋಗಿವೆ. ಆದರೆ ಕಥೆಗಾರ ಜಿ.ಎಂ. ಪ್ರಹ್ಲಾದ್ ಮತ್ತೆ ಅದೇ ಮಹಾಭಾರತದ ಕಥೆಯನ್ನು ಆಧರಿಸಿ 'ಗುರುಕುಲ'ಕ್ಕೆ ಚಿತ್ರಕತೆ ಬರೆದಿದ್ದಾರೆ. ಅದನು ಪುರಾಣಿಕ್ ನಿರ್ದೇಶಿಸಲಿದ್ದಾರೆ.

ಇನ್ನು ಒಂದು ಕಾಲದ ಫೈನಾನ್ಶಿಯರ್ ಮತ್ತು ನಿರ್ಮಾಪಕ ಬೇಕರಿ ಶ್ರೀನಿವಾಸ್ ಕಮರ್ಷಿಯಲ್ ಚಿತ್ರಗಳಿಗೆ ನಮಸ್ಕಾರ ಹಾಕಿ, ಕಲಾತ್ಮಕ ಚಿತ್ರಗಳಲ್ಲೇ ನೆಟ್ಟಿಕೊಂಡಂತಿದೆ. ಇತ್ತೀಚೆಗಷ್ಟೇ ಅವರು 'ಗುರುನಾದು' ಎಂಬ ಆರ್ಟ್ ಸಿನಿಮಾವನ್ನು ತೆಗೆದು ರಾಜ್ಯ ಪ್ರಶಸ್ತಿ ಗಿಟ್ಟಿಸಿಕೊಂಡಿದ್ದರು. ಈಗ 'ಗುರುಕುಲ'ವನ್ನು ನಿರ್ಮಿಸುವ ಮೂಲಕ ಮತ್ತೊಮ್ಮೆ 'ಪ್ರಶಸ್ತಿಯ ಬೇಟೆ'ಗಿಳಿದಿದ್ದಾರೆ.

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 09-12-2009 RNI No. KARKAN2005/1



ಗೋವರ್ಧನನ ಲಿಫ್ಟು ರೆಡ್ಡಿಯ ಗಿಫ್ಟು!



ನವರಸ ನಾಯಕ ಜಗ್ಗೇಶ್ ಅಭಿನಯದ ಹೊಸ ಚಿತ್ರವೊಂದು ಮೊನ್ನೆ ಸೆಟ್ಟೇರಿದೆ. ಆ ಚಿತ್ರದ ಹೆಸರು 'ಲಿಫ್ಟ್ ಕೊಡ್ಲಾ'. ಅದರ ಜೊತೆಗೆ 'ಸ್ವರ್ಗಕ್ಕೆ ಮೂರೇ ಗೇಣು' ಎಂಬ ಟ್ಯಾಗ್ ಲೈನ್ ಬೇರೆ ಇದೆ.

ವಿಚಿತ್ರವೆಂದರೆ, ಈ ಚಿತ್ರದ ನಿರ್ಮಾಪಕ ಐಪಿಎಸ್ ಅಧಿಕಾರಿ ಕೆ.ಸಿ. ರಾಮಮೂರ್ತಿ ಅವರ ಭಾವ ಮೈದುನ ಶಂಕರ್ ರೆಡ್ಡಿ. ಈತ ಸೈಕೋಪಾತ್ ಗೋವರ್ಧನ ಮೂರ್ತಿಯ ಪಾರ್ಟ್‌ನರ್ ಆಗಿದ್ದವರು. ಗೋವರ್ಧನಮೂರ್ತಿ ವಿನೋದ್ ಎಂಬ ಸಿನಿಮಾ ನಟನನ್ನು ಗುಂಡಿಟ್ಟು ಕೊಂದಾಗ ಅದಕ್ಕೆ ಸಾಕ್ಷಿಯಾಗಿ ಉಳಿದದ್ದು ಕೂಡಾ ಇದೇ ಶಂಕರ ರೆಡ್ಡಿಯೇ. ತನ್ನ ಗೆಣೆಕಾರ ಗೋವರ್ಧನ ಕೊಲೆ ಕೇಸಿನಲ್ಲಿ ಸಿಕ್ಕಿಹಾಕಿಕೊಂಡು ಜೈಲು ಸೇರಿರುವ ಸಂದರ್ಭದಲ್ಲೇ ಈ ರೆಡ್ಡಿ 'ಲಿಫ್ಟ್ ಕೊಡ್ಲಾ- ಸ್ವರ್ಗಕ್ಕೆ ಮೂರೇ ಗೇಣು' ಎಂಬ ಸಿನಿಮಾ ನಿರ್ಮಿಸುತ್ತಿರುವುದರಿಂದ 'ಗೋವರ್ಧನನ ಕತೆಯನ್ನೇ ಸಿನಿಮಾ ಮಾಡುತ್ತಿದ್ದಾರೆ' ಎಂಬ ಗಾಳಿಸುದ್ದಿ ಗಾಂಧಿನಗರದಲ್ಲಿ ಹಬ್ಬಿದೆ.

ಆದರೆ ಯಾರಿಗೂ ತಿಳಿಯದ ನಿಜ ಸಂಗತಿಯೆಂದರೆ ಈ ಚಿತ್ರ ತೆಲುಗು ಚಿತ್ರವೊಂದರ ಶುದ್ಧಾನುಶುದ್ಧ ನಕಲು ಎಂಬುದು!



ಧೂಳ್ ಅಂದ್ರಿತಾ ರೇ

ಒಂಥರಾ ಆತ್ಮ!



"ಉಮಾಶ್ರೀ ಮತ್ತು ರಂಗಾಯಣ ರಘು ಅವರಿಗೆ ಈವರೆಗೆ ಯಾರೂ ನೀಡದ ಪಾತ್ರಗಳನ್ನು ನಾನು ನೀಡಿದ್ದೇನೆ" ಎಂದು ಈಗ ಎಲ್ಲೆಡೆ ಹೇಳಿಕೊಳ್ಳುತ್ತಿರುವುದು 'ಅಂತರಾತ್ಮ' ಚಿತ್ರದ ನಿರ್ದೇಶಕ ಶಂಕರ್. ಶಂಕರ್‌ರ ಈ ಮಾತನ್ನು ಕೇಳುತ್ತಿದ್ದಂತೆ "ಎಂತೆಂಥಾ ಪಾತ್ರಗಳನ್ನೇ ಮಾಡಿಮುಗಿಸಿರುವ ಉಮಾಶ್ರೀ ಮತ್ತು ರಘುಗೇ ಹೊಸ ಪಾತ್ರ ನೀಡಿರುವ ಈ ನಿರ್ದೇಶಕನದ್ದು ಇದೆಂಥಾ ಆತ್ಮ" ಎಂಬ ಕುತೂಹಲ ಆರಂಭವಾಗಿದೆ. ಯಾವುದೋ ಹಾರರ್ ಸಿನಿಮಾದ ಟೈಟಲ್‌ನಂತಿರುವ 'ಅಂತರಾತ್ಮ' ಪಕ್ಕಾ ಕಾಮಿಡಿ ಮತ್ತು ಲವ್ ಸ್ಟೋರಿ ಸಿನಿಮಾವಂತೆ.



ಆದರೆ ಚಿತ್ರದ ಸ್ಟಿಲ್‌ಗಳಲ್ಲಿ ಉಮಾಶ್ರೀ ಮಂಡೆ ಮೇಲೊಂದು ಕೊಂಡೆ, ಹಣೆಯ ಮೇಲೆ ಹೊಸ ಡಿಸೈನ್ ವಿಭೂತಿ, ಬೆರಳಿಗಿಂತ ದೊಡ್ಡ ಉಂಗುರಗಳು, ಚಿತ್ರವಿಚಿತ್ರ ಉಡುಗೆಗಳನ್ನು ತೊಟ್ಟಿದ್ದಾರೆ. ರಂಗಾಯಣ ರಘು ಅವರ ಫೋಟೋಗಳು ಕೂಡಾ ಅಷ್ಟೇ ವಿಚಿತ್ರವಾಗಿವೆ...

ಇದನ್ನೆಲ್ಲಾ ನೋಡಿದರೆ ಇದು 'ಒಂಥರಾ ಸಿನಿಮಾ' ಅನ್ನೋದಂತೂ ಗೊತ್ತಾಗುತ್ತದೆ!

ಮರಳಿ ಮನೆಗೆ ರೈ

ತಮಿಳು ಮತ್ತು ತೆಲುಗು ಚಿತ್ರರಂಗಗಳಲ್ಲಿ ಅತ್ಯಂತ ಬೇಡಿಕೆಯಲ್ಲಿರುವ ನಟ ಪ್ರಕಾಶ್ ರೈ ಸದ್ಯದಲ್ಲೇ ಆ ಚಿತ್ರೋದ್ಯಮಗಳಿಗೆ ಗುಡ್‌ಬೈ ಹೇಳಿ ಮತ್ತೆ ತಾಯ್ನಾಡಿನಲ್ಲಿ ಠಿಕಾಣಿ ಹೂಡುವ ನಿರ್ಧಾರಕ್ಕೆ ಬಂದಿದ್ದಾರಂತೆ. ಮೊನ್ನೆ ಮೊನ್ನೆಯಷ್ಟೇ 'ಕಾಂಜೀವರಮ್' ಚಿತ್ರದ ಅಭಿನಯಕ್ಕಾಗಿ 'ಅತ್ಯುತ್ತಮ ನಟ' ಎಂಬ ರಾಷ್ಟ್ರ ಪ್ರಶಸ್ತಿಯನ್ನು ಪಡೆದ ಪ್ರಕಾಶ್ ರೈ ಇಂತಹ ತೀರ್ಮಾನಕ್ಕೆ ಬರಲು ಕಾರಣವೇನು ಎಂಬುದೇ ಆಶ್ಚರ್ಯ.

ಹಾಗೆ ನೋಡಿದರೆ, ಪ್ರಕಾಶ್ ರೈ ಇಂತಹ ಅನೇಕ ದಿಢೀರ್ ತೀರ್ಮಾನ, ಹುಂಬತನ ಮತ್ತು ಅಧಿಕಪ್ರಸಂಗತನಕ್ಕೆ ವಿಖ್ಯಾತಿ ಗಳಿಸಿದವರು. ಈಗ ಪುರುಸೊತ್ತಿಲ್ಲದಷ್ಟು ಕೈತುಂಬ ಚಿತ್ರಗಳು ರೈ ಕೈಲಿದ್ದರೂ ತಮಿಳು ಮತ್ತು ತಲುಗು ಚಿತ್ರರಂಗಗಳಿಗೆ ವಿದಾಯ ಹೇಳುವ ಅಗತ್ಯವಾದರೂ ಏನು? ಎಂಬುದೇ ನಮ್ಮ ಕುತೂಹಲವಾಗಿತ್ತು.

ಇದರ ಬಗ್ಗೆ ರೈ ಮುಂದೆ ಪ್ರಸ್ತಾಪಿಸಿದಾಗ ಅವರು ಅಡ್ಡಗೋಡೆ ಮೇಲೆ ದೀಪವಿಟ್ಟಂತೆ ಮಾತನಾಡಿದರು. "ಇಲ್ಲ, ಯಾವುದೇ ಚಿತ್ರರಂಗಕ್ಕೆ ವಿದಾಯ ಹೇಳುವ ಪ್ರಶ್ನೆ ಇಲ್ಲ. ಒಂದು ವೇಳೆ ನಾನು ಬೆಂಗಳೂರಿನಲ್ಲಿದ್ದರೆ, ಅವರ ಚಿತ್ರಗಳಿಗೆ ನಾನು ಬೇಕೇಬೇಕಾದರೆ ಹುಡುಕಿಕೊಂಡು ಬರುತ್ತಾರೆ. ಅಷ್ಟೇ ಅಲ್ಲ, ಕೇವಲ ಅರ್ಧ ಗಂಟೆ ಕಾಲಾವಧಿಯಲ್ಲಿ ನಾನು ವಿಮಾನದಲ್ಲಿ ಹಾರಿ ಅಲ್ಲಿಗೆ ಹೋಗಲು ಸಾಧ್ಯವಿಲ್ಲವೇ? ಬೆಂಗಳೂರಿನಲ್ಲೇ ತಾರೆಯರು ಚಿತ್ರೀಕರಣ ಸ್ಥಳಕ್ಕೆ ಹೋಗಬೇಕಾದರೆ ಕನಿಷ್ಠ ಒಂದು, ಒಂದೂವರೆ ಗಂಟೆ ಆಗುವುದಿಲ್ಲವೇ?" ಎಂದರು.

ಆಮೇಲೆ ರೈ ಮತ್ತೆ ತನ್ನ ಮಾತಿನ ಲಹರಿಯನ್ನು ತೇಲಿಬಿಟ್ಟಿದ್ದು ಹೀಗೆ: "ಯಾವುದೇ ಭಾಷೆಯನ್ನು ನೀವು ಎಷ್ಟೇ ಚೆನ್ನಾಗಿ ಕಲಿತು, ಸುಲಲಿತವಾಗಿ ಮಾತನಾಡಿದರೂ ಕೂಡ ನೀವು ಹೊರಗಿನವರು ಎಂಬ ಭಾವನೆ ತೊಲಗುವುದಿಲ್ಲ. ಹಾಗೆಯೇ ಯಾವ ಮನುಷ್ಯನಿಗೆ ತಾನೆ ತನ್ನ ಹುಟ್ಟೂರಿನ, ತನ್ನ ಮಾತೃಭಾಷೆಯ ಸೆಳೆತವಿರುವುದಿಲ್ಲ ಹೇಳಿ?" ಎಂದು ಉತ್ತರ ರೂಪದ ಪ್ರಶ್ನೆಯನ್ನು ಮುಂದಿಟ್ಟರು.

ರೈ ಏನೇ ಹೇಳಲಿ, ನಮಗೆ ತಿಳಿದುಬಂದಿರುವ ಸುದ್ದಿಯ ಪ್ರಕಾರ ಅವರ ಚೊಚ್ಚಲ ನಿರ್ದೇಶನದ 'ನಾನೂ... ನನ್ನ ಕನಸು' ಚಿತ್ರದ ಫಲಿತಾಂಶದ ಮೇಲೆ ಪ್ರಕಾಶ್ ರೈ 'ಮರಳಿ ಮನೆಗೆ' ಬರುವುದು ನಿರ್ಧಾರವಾಗಲಿದೆ. ಆ ಕಾರಣದಿಂದಲೇ ಈ ಚಿತ್ರ ರೈ ಪಾಲಿಗೆ ಒಂದು ರೀತಿಯಲ್ಲಿ ಅಗ್ನಿಪರೀಕ್ಷೆ ಕೂಡಾ ಹೌದು. ಯಾಕೆಂದರೆ, ಪ್ರಕಾಶ್ ರೈ ಈ ರಾಷ್ಟ್ರ ಕಂಡ ಅದ್ಭುತ ಪ್ರತಿಭಾವಂತ ನಟ ಎಂಬುದರಲ್ಲಿ ದೂಸ್ರಾ ಮಾತೇ ಇಲ್ಲ. ಆದರೆ ಆದ್ಯಾಕೋ ಏನೋ ಕನ್ನಡದಲ್ಲಿ ಮಾತ್ರ ಆತ ನಟಿಸಿದ ಚಿತ್ರಗಳು ಬಾಕ್ಸಾಫೀಸ್‌ನಲ್ಲಿ ಜಯಭೇರಿ ಬಾರಿಸಿದ್ದೇ ಬಹಳ ಕಡಿಮೆ. ಅದರಲ್ಲೂ ನಾಯಕನಾಗಿ ಆತ ನಟಿಸಿದ್ದೇ ಒಂದೆರಡು ಚಿತ್ರಗಳಲ್ಲಿ ಮಾತ್ರ. ಹೀಗಾಗಿ ಈ ಚಿತ್ರದಲ್ಲಿ ರೈಯನ್ನು ಕನ್ನಡದ ಪ್ರೇಕ್ಷಕರು ನಾಯಕನಾಗಿ ಮತ್ತು ನಿರ್ದೇಶಕನಾಗಿ ಹೇಗೆ ಸ್ವೀಕರಿಸುತ್ತಾರೋ ಎಂಬುದು ಬಹಳ ಮುಖ್ಯವಾಗುತ್ತದೆ.

ರೈಯ ಅತ್ಯಂತ ಆಪ್ತರು ಹೇಳುವ ಪ್ರಕಾರ ಆತ ಜಯನಗರದಲ್ಲಿ ಮನೆ ಮಾಡಿ ವಾಸ ಮಾಡುವ ತೀರ್ಮಾನಕ್ಕೆ ಬಂದಿದ್ದಾರಂತೆ. ಆತನ ಬೇರುಗಳು ಕರ್ನಾಟಕದಲ್ಲಿ ಇರುವುದರಿಂದ ಮತ್ತು ಇಲ್ಲಿಯ ರಂಗಭೂಮಿ ಚಟುವಟಿಕೆಗಳು, ಕನ್ನಡ ಭಾಷೆ ಮತ್ತು ಸಾಹಿತ್ಯದ ಬಗ್ಗೆ ಅಪಾರ ಆಸಕ್ತಿ ಆತನಿಗಿರುವುದೇ ಆತ ಮರಳಿ ಇಲ್ಲಿಗೆ ಬರಲು ಮುಖ್ಯ ಕಾರಣ.



ವಿಚಿತ್ರ ನೋಡಿ: ಕೆಲ ವರ್ಷಗಳ ಹಿಂದೆ ಒಂದು ಉತ್ತಮ ಅವಕಾಶವನ್ನು ಹುಡುಕಿಕೊಂಡು ರೈ ಮದ್ರಾಸಿಗೆ ಕಾಲಿಟ್ಟಾಗ ಅವನಲ್ಲಿದ್ದದ್ದು ಕೇವಲ ಆತ್ಮ ವಿಶ್ವಾಸ ಎಂಬ ಬಂಡವಾಳ ಮಾತ್ರ. ಆದರೆ ಇವತ್ತು ಸುಮಾರು ಎಂಟು ಕೋಟಿ ರೂಪಾಯಿಗಳಷ್ಟು ವೆಚ್ಚದ ಹೊಸ ಸಿನಿಮಾವನ್ನು ಕೈಗೆತ್ತಿಕೊಳ್ಳುವಷ್ಟು ರೈ ಬಲಿಷ್ಠರಾಗಿದ್ದಾರೆ. ಅಷ್ಟೇ ಅಲ್ಲ, ಅಂದು ಒಬ್ಬ ಮಾಮೂಲಿ ನಟನಾಗಿ ಅವಕಾಶ ಹುಡುಕುತ್ತಾ ಮದ್ರಾಸ್‌ನಲ್ಲಿ ಅಲೆದಾಡಿದ ಈತ ಇಂದು ನಾಲ್ಕು ರಾಷ್ಟ್ರ ಪ್ರಶಸ್ತಿ ಮತ್ತು ಆನೇಕ ರಾಜ್ಯಗಳ ರಾಜ್ಯ ಪ್ರಶಸ್ತಿಗಳನ್ನೂ ತನ್ನ ಬಗಲಿಗೆ ಹಾಕಿಕೊಂಡ ಶ್ರೀಮಂತ ನಟ. ಈ ರಾಷ್ಟ್ರ ಕಂಡ ಪ್ರತಿಭಾವಂತ ನಟರುಗಳಾದ ಕಮಲ್‌ಹಾಸನ್, ಅಮಿತಾಬ್ ಬಚ್ಚನ್ ಮತ್ತು ರಜನಿಕಾಂತ್ ಮೊದಲಾದವರುಗಳಿಂದ ಶಹಬ್ಬಾಸ್‌ಗಿರಿ ಪಡೆದ ನಟನೂ ಹೌದು.

ಇಂತಹ ನಟನನ್ನು ನಾವೆಲ್ಲರೂ ಈಗ ಸ್ವಾಗತಿಸಬೇಕಾದ ಅನಿವಾರ್ಯತೆ ಕೂಡಾ ಇದೆ. ಯಾಕೆ ಗೊತ್ತೆ? ಪ್ರಕಾಶ್ ರೈ ತಮಿಳುನಾಡಿಗೆ ಹೋದಾಗ ಅಲ್ಲಿ ರಘುವರನ್ ಎಂಬ ಮತ್ತೊಬ್ಬ ದೈತ್ಯ ನಟನ ಕಾಲ ಅವಸಾನದ ಅಂಚಿನಲ್ಲಿತ್ತು. ಆಗಲೇ ಅಲ್ಲಿಯ ಉದ್ಯಮದವರು ರೈಯನ್ನು ಅಪ್ಪಿಕೊಂಡರು. ಈಗ ಕನ್ನಡದಲ್ಲಿ ಅಂತಹ ದುಸ್ಥಿತಿ ಎದುರಾಗಿದೆ. ಯಾವುದೇ ಪಾತ್ರವನ್ನು ನಿಭಾಯಿಸಬಲ್ಲ ಸಮರ್ಥ ನಟರು ನಮ್ಮ ನೆಲದಲ್ಲಿ ವಿರಳವಾಗಿದ್ದಾರೆ. ಎಲ್ಲರೂ ಹುಲಿ, ಸಿಂಹ, ಡೈನಾಮಿಕ್, ಛಾಲೆಂಜು, ಗೋಲ್ಡು.... ಮೊದಲಾದ ಇಮೇಜುಗಳಿಗೆ ಅಂಟಿಕೊಂಡು ಒಂದು ವರ್ತುಲದಲ್ಲಿ ಸಿಲುಕಿಕೊಂಡಿದ್ದಾರೆ. ಇಂತಹವರ ಮಧ್ಯೆ ಯಾವುದೇ ಪಾತ್ರವನ್ನು ಕೊಟ್ಟರೂ ಲೀಲಾಜಾಲವಾಗಿ ನಿಭಾಯಿಸುವಂತಹ ರೈಯಂತಹ ನಟನ ಅನಿವಾರ್ಯತೆ ನಮ್ಮ ಚಿತ್ರರಂಗಕ್ಕೆ ಎಂದೆಂದಿಗೂ ಇದ್ದೇ ಇದೆ. ಅದೇ ರೀತಿ ತಮಿಳು, ತೆಲುಗು ಮತ್ತು ಹಿಂದಿಯಲ್ಲಿ ದೊಡ್ಡ ದೊಡ್ಡ ನಿರ್ದೇಶಕರುಗಳ ಜೊತೆ ಕೆಲಸ ಮಾಡಿ ಅಪಾರವಾದ ಜ್ಞಾನವನ್ನು ಪಡೆದಿರುವ ರೈ, ನಿರ್ದೇಶಕನಾಗಿ ನಿಂತ ನೀರಾಗಿರುವ ಕನ್ನಡ ಚಿತ್ರರಂಗಕ್ಕೆ ಹೊಸ ಆಯಾಮ ನೀಡಬೇಕಿದೆ. ಆದ್ದರಿಂದ ರೈ ಆದಷ್ಟು ಬೇಗ 'ಜಯ'ನಗರಕ್ಕೆ ಬರಲಿ ಎಂಬುದು ನಮ್ಮ ಆಹವಾಲು.

● ಶೆಟ್ಟಿ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-4